ಶನಿವಾರ, ಫೆಬ್ರುವರಿ 5, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 36 | ಪುಟ 20

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಪ್ರಸವ ಕಾಲದ ಆನುಪಾಸಿನಲ್ಲಿ ಶುರುವಾಗುವ ಮನೋವ್ಯಾಕುಲತೆಗಳ ಬಗ್ಗೆ ಅರಿವು ಮೂಡಿಸಿಕೊಂಡು ಸಕಾಲದಲ್ಲಿ ಚಿಕಿತ್ಸೆ ಕೊಡಿಸಬೇಕು.



ಚರ್ಚೆ ವಿದ್ಯಾರ್ಥಿಗಳು ಶಾಲೆಗೆ ಹೋಗುವಾಗ ಹಿಜಾಬ್, ಕೇಸರಿ ಶಾಲು ಧರಿಸುವುದು ಸರಿಯೇ? 7

ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ನಿರ್ದೋಷಿ? 4

ಅಂಬೇಡ್ಕರ್ ಭಾವಚಿತ್ರಕ್ಕೆ ಹೈಕೋರ್ಟ್ ಅಸ್ತು? 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,645 ▼	17,516 ▼	₹49,760 (ಬೆಂಗಳೂರು) ▲	₹62,500 (ಬೆಂಗಳೂರು) ▲	74.69 ▲



ಸುದರ್ಶನ್ ಜ್ಯುವೆಲರ್ಸ್
ಚಿನ್ನ • ಬೆಳ್ಳಿ • ಚಿನ್ನದ ಆಭರಣಗಳು
916 Hallmark Gold Rate
₹ 4419 /-gm
ಬೆಳ್ಳಿ ₹ 57,000/- *CA
ಚಿಕ್ಕಪೇಟೆ: 41300355

ಕಾಂಗ್ರೆಸ್–ಬಿಜೆಪಿ ನಾಯಕರ ಮಧ್ಯೆ ವಾಕ್ಸಮರ

ಹಿಜಾಬ್: ರಾಜಕೀಯ ‘ಅಮಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಜಿಲ್ಲೆಗಳಿಗೆ ಸೀಮಿತವಾಗಿದ್ದ ಹಿಜಾಬ್ ಮತ್ತು ಕೇಸರಿ ಶಾಲು ತಿಕ್ಕಾಟ ಈಗ ಇತರ ಜಿಲ್ಲೆಗಳಿಗೂ ವ್ಯಾಪಿಸಿದ್ದು, ಈ ವಿಷಯ ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ವಾಗ್ವಾದಕ್ಕೆ ತಿರುಗಿದ್ದು ರಾಜಕೀಯ ಬಣ್ಣವನ್ನೂ ಪಡೆದುಕೊಂಡಿದೆ.

ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಿದ ಪ್ರಾಂಶುಪಾಲರ ವರ್ತನೆ ಅಮಾನವೀಯ ಎಂದು ಪ್ರತಿಪಾದಿಸಿದ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಸರ್ಕಾರವನ್ನು ಟೀಕಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಬಿಜೆಪಿ ಶಾಸಕರು ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದರು.

ಈ ಬೆಳವಣಿಗೆಯ ಮಧ್ಯೆಯೇ ಉಡುಪಿ, ಕುಂದಾಪುರ ತಾಲ್ಲೂಕಿಗೆ ಸೀಮಿತವಾಗಿದ್ದ ಕೇಸರಿ ಶಾಲು ರಾಜಕೀಯ ಬೆಳಗಾವಿಗೂ ಪಸರಿಸಿದೆ. ಈ ವಿವಾದ ದಿನದಿಂದ ದಿನಕ್ಕೆ ಬಿಗಡಾಯಿಸುತ್ತಿರುವ ಬೆನ್ನಲ್ಲೇ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಅಧಿಕಾರಿಗಳ ಜತೆ ಶುಕ್ರವಾರ ಮಾತುಕತೆ ನಡೆಸಿದರು. ಆ ಬಳಿಕ ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಎನ್.ಕೆ. ಷಫಿ ಸಾ–ಆದಿ ಅವರ ಜತೆಗೂ ಪ್ರತ್ಯೇಕ ಸಭೆ ನಡೆಸಿದರು.


8ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 8



ಕುಂದಾಪುರದ ಸರ್ಕಾರಿ ಜೂನಿಯರ್ ಪದವಿಪೂರ್ವ ಕಾಲೇಜು ಆವರಣದಲ್ಲಿ ಹಿಜಾಬ್ ಹಾಗೂ ಕೇಸರಿ ಶಾಲು ಧರಿಸಿದ್ದ ವಿದ್ಯಾರ್ಥಿಗಳು

‘ಹಿಜಾಬ್–ಶಾಲು ಧರಿಸಿದವರಿಗೆ ಅವಕಾಶ ಇಲ್ಲ’



‘ಹಿಜಾಬ್ ಅಥವಾ ಕೇಸರಿ ಶಾಲು ಧರಿಸಿಕೊಂಡು ತರಗತಿಗೆ ಬರಲು ಅವಕಾಶವಿಲ್ಲ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

8ನೇ ಪುಟ ನೋಡಿ

‘ಹಿಜಾಬ್ ನಿಷೇಧ ಮೂಲಭೂತ ಹಕ್ಕಿನ ಉಲ್ಲಂಘನೆ’

ಬೆಂಗಳೂರು: ಹಿಜಾಬ್ ಧರಿಸಿದ ಮುಸ್ಲಿಂ ವಿದ್ಯಾರ್ಥಿನಿಯರು ಶಾಲಾ, ಕಾಲೇಜುಗಳ ತರಗತಿಗಳಿಗೆ ಪ್ರವೇಶಿಸಬಾರದು ಎಂಬ ನಿಷೇಧ ಹೇರುವುದು ಮೂಲಭೂತ ಹಕ್ಕಿನ ಉಲ್ಲಂಘನೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು. 8

ಹಿಜಾಬ್–ಕೇಸರಿ ಶಾಲು ವಿವಾದ ಪರಿಹಾರ

ಚಿಕ್ಕಮಗಳೂರು: ಜಿಲ್ಲೆಯ ಕೊಪ್ಪ ತಾಲ್ಲೂಕು ಕೇಂದ್ರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎದ್ದಿದ್ದ ‘ಹಿಜಾಬ್’ ಮತ್ತು ‘ಕೇಸರಿ ಶಾಲು’ ವಿವಾದವನ್ನು ಮಾತುಕತೆಯ ಮೂಲಕ ತಾತ್ಕಾಲಿಕವಾಗಿ ಬಗೆಹರಿಸುವಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯವರು ಮತ್ತು ಜನಪ್ರತಿನಿಧಿಗಳು ಯಶಸ್ವಿಯಾಗಿದ್ದಾರೆ. 8

ಯುಜಿಸಿ ಅಧ್ಯಕ್ಷರಾಗಿ ಜಗದೀಶ್ ಕುಮಾರ್ ನೇಮಕ 3

ಚಿನಕುರಳಿ

ಪ್ರಕಾಶ್ ಶೆಟ್ಟಿ



ಚಿತ್ರಮಂದಿರ ಭರ್ತಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಚಲನಚಿತ್ರ ಮಂದಿರಗಳಲ್ಲಿ ಶನಿವಾರದಿಂದಲೇ (ಫೆ.5) ಶೇ 100 ರಷ್ಟು ಆಸನಗಳ ಭರ್ತಿಗೆ ಅನುಮತಿ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸಭೆಯ ಬಳಿಕ ಸುದ್ದಿಗಾರರಿಗೆ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.


ಚಿತ್ರಮಂದಿರಗಳಲ್ಲದೇ, ಜಿಮ್, ಈಜುಕೊಳ, ಯೋಗ ಕೇಂದ್ರಗಳನ್ನೂ ಪೂರ್ಣ ಪ್ರಮಾಣದಲ್ಲಿ ಆರಂಭಿಸಲು ಅವಕಾಶ ನೀಡಲಾಗಿದೆ ಎಂದರು.

ಅನುಮತಿ ನೀಡಿದ್ದರೂ, ಮುನ್ನೆಚ್ಚರಿಕೆ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು. ಚಿತ್ರ ವೀಕ್ಷಿಸುವವರು ಕಡ್ಡಾಯವಾಗಿ ಎನ್–95 ದರ್ಜೆಯ ಮಾಸ್ಕ್ ಧರಿಸಬೇಕು. ಚಿತ್ರಮಂದಿರದ ಒಳಗೆ ಆಹಾರ ಮತ್ತು ಪಾನೀಯ ಸೇವಿಸಲು ಅವಕಾಶವಿಲ್ಲ ಎಂದರು.

3ನೇ ಪುಟ ನೋಡಿ

ಗಾರ್ಮೆಂಟ್ಸ್: ತುಟ್ಟಿಭತ್ಯೆ ನೀಡಲು ಒಪ್ಪಿಗೆ

ಬೆಂಗಳೂರು: ‘ಗಾರ್ಮೆಂಟ್ಸ್ ಕಾರ್ಖಾನೆಗಳ 4 ಲಕ್ಷಕ್ಕೂ ಹೆಚ್ಚು ಕಾರ್ಮಿಕರಿಗೆ ಹೆಚ್ಚಳವಾಗಬೇಕಿದ್ದ ತುಟ್ಟಿಭತ್ಯೆ ನೀಡಲು ಕಾರ್ಖಾನೆಗಳ ಮಾಲೀಕರು ಒಪ್ಪಿಕೊಂಡಿದ್ದು, ಹೋರಾಟಕ್ಕೆ ಜಯ ದೊರೆತಿದೆ’ ಎಂದು ಗಾರ್ಮೆಂಟ್ಸ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ತಿಳಿಸಿದೆ. 3







ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 30/2021 ದಿನಾಂಕ : 01-02-2022

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು, ಕೆಳಗಿನ ಐಟಂಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮೂಲಕ ಮಾತ್ರ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್ ಮುಕ್ತಾಯದ ಸಮಯ : 14.00 ಗಂಟೆಗಳು

ಕ್ರ.	ಟೆಂಡರ್ ಸಂಖ್ಯೆ	ಸಂಕ್ಷಿಪ್ತ ವಿವರಣೆ	ಪ್ರಮಾಣ	ಟೆಂಡರ್ ಮುಕ್ತಾಯದ ದಿನಾಂಕ
1	65215008ಎ	ಆಟೋಮೇಟೆಡ್ ಸರಬರಾಜು, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವುದು	02 ಸಂಖ್ಯೆಗಳು	14-02-2022
2	17211039	ಜರ್ನಲ್ ಬೇರಿಂಗ್ ಅಸೆಂಬ್ಲಿಯ ಖರೀದಿ	144 ಸಂಖ್ಯೆಗಳು	28-02-2022
3	38211579ಸಿ	ಅಡಾಪ್ಟರ್ (ನ್ಯಾರೋ ಜಾ) ಕ್ಲಾಸ್ ಇ 6 x 11	5489 ಸಂಖ್ಯೆಗಳು	14-03-2022
4	30211311ಎ	ಪಾಲಿಮರ್ ಬಫರ್ ಸ್ಪ್ರಿಂಗ್	800 ಸೆಟ್‌ಗಳು	23-02-2022
5	33221034	ಆಕ್ಸೆಲ್ ಬಾಕ್ಸ್ ಪಿವೊಟ್ ಬುಷ್	4200 ಸಂಖ್ಯೆಗಳು	21-02-2022
6	33221069	ನಾನ್ ಆಸ್‌ಬೆಸ್ಟಾಸ್ ಬೇಸ್ಡ್ ಆರ್ಗಾನಿಕ್ ಬ್ರೇಕ್ ಪ್ಯಾಡ್	1500 ಸೆಟ್‌ಗಳು	28-02-2022
7	33221041	ಸೆಕೆಂಡರಿ ಸಸ್ಪೆನ್ಷನ್‌ಗಾಗಿ ಪ್ಯಾಡ್	1900 ಸಂಖ್ಯೆಗಳು	01-03-2022

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/403/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021-22 — ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways | sw_rly | SWRRLY | southwesternrailway | SWRRLY

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಜ.5ರಂದು ಬೆಳಿಗ್ಗೆ 10ರಿಂದ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಚಂದಾಪುರ ವಿಭಾಗ ವ್ಯಾಪ್ತಿಯಲ್ಲಿನ ಕಮ್ಮಸಂದ್ರ, ಅನಂತನಗರ ಹಂತ-1, ವಿನಾಯಕ ನಗರ, ಮೀನಾಕ್ಷಿ ಬಡಾವಣೆ, ರೂಸ್ಟ್ ಬಡಾವಣೆ ಹಾಗೂ ಪಶ್ಚಿಮ ವೃತ್ತ ವ್ಯಾಪ್ತಿಯಲ್ಲಿನ ಬಸವನಗುಡಿ, ಕೆ.ಆರ್. ರಸ್ತೆ, ಟಾಟಾ ಸಿಲ್ಕ್ ಫಾರಂ, ಸುರಾನ ನಗರ, ಸಪ್ತಗಿರಿ ಬಡಾವಣೆ, ತುಂಗಾನಗರ, ಸನ್‌ಸಿಟಿ, ಬಿ.ಡಿ. ಕಾಲೋನಿ, ರೈಲ್ವೆ ನಿಲ್ದಾಣ ರಸ್ತೆ, ಅಂಚೆ ಕಚೇರಿ ರಸ್ತೆ, ಗಾಂಧಿ ನಗರ, ಉಲ್ಲಾಳನಗರ, ಮಾರುತಿ ನಗರ, ಭುವನೇಶ್ವರಿ ನಗರ, ದೊಡ್ಡ ಬಸ್ತಿ ಮುಖ್ಯ ರಸ್ತೆ, ಕಲ್ಯಾಣಿ ಬಡಾವಣೆ, ಆರ್.ಆರ್. ಬಡಾವಣೆ, ಉಪಕಾರ ಬಡಾವಣೆ, ಆರ್.ಆರ್. ರೆಸಿಡೆನ್ಸಿ, ಮಲ್ಲತ್ತಹಳ್ಳಿ ಬಡಾವಣೆ, ಭವಾನಿ ನಗರ ಸುತ್ತಮುತ್ತ ಪ್ರದೇಶಗಳು.

ಅಧಿಕಾರಿಗಳ ನಡೆಗೆ ಟಿ.ಎಸ್. ನಾಗಾಭರಣ ಅಸಮಾಧಾನ

‘ಅರಣ್ಯ ಇಲಾಖೆಯಲ್ಲಿ ಕನ್ನಡ ಕಡೆಗಣನೆ’


ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಇಲಾಖೆಯ ವೆಬ್ ಪೋರ್ಟಲ್, ಸಾಮಾಜಿಕ ಜಾಲತಾಣ ಮತ್ತು ಕಡತಗಳಲ್ಲಿ ಇಂಗ್ಲಿಷ್ ಭಾಷೆ ಬಳಕೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ, ‘ಜನರಿಗೆ ಅರ್ಥವಾಗದ ಭಾಷೆಯಲ್ಲಿ ಮಾಹಿತಿಗಳನ್ನು ನೀಡುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥ) ಕಾರ್ಯಾಲಯದಲ್ಲಿ ಶುಕ್ರವಾರ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ‘ಕನ್ನಡ ಭಾಷೆಯು ರಾಜ್ಯದ ಆಡಳಿತ ಭಾಷೆಯಾಗಿ ಹಲವು ದಶಕಗಳೇ ಕಳೆದಿವೆ. ಇನ್ನೂ ಆಂಗ್ಲ ಭಾಷೆಯಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು ವ್ಯವಹಾರ ನಡೆಸುತ್ತಿರುವುದು ಆಡಳಿತದಲ್ಲಿ ಕನ್ನಡ ಅನುಷ್ಠಾನದ ಲೋಪವೆಸಗಿದಂತೆ. ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳ ಸಹಿ ಮತ್ತು ಮೊಹರು ಇರುವ ನಡವಳಿಗಳೂ ಆಂಗ್ಲಭಾಷೆಯಲ್ಲಿವೆ. ಇದರಿಂದಾಗಿ ರಾಜ್ಯದ ರೈತರು ಹಾಗೂ ಗ್ರಾಮೀಣ ಭಾಗದ ಜನರಿಗೆ ಸೂಕ್ತ ಮಾಹಿತಿ ತಲುಪುವುದಿಲ್ಲ’ ಎಂದು ಅವರು ತಿಳಿಸಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥ) ಸಂಜಯ್ ಮೋಹನ್, ‘ಆಡಳಿತದ ಎಲ್ಲ ಹಂತಗಳಲ್ಲಿಯೂ ಒಂದು ತಿಂಗಳ ಒಳಗೆ ಸಮರ್ಪಕವಾಗಿ ಕನ್ನಡವನ್ನು ಅನುಷ್ಠಾನ ಮಾಡಲಾಗುವುದು’ ಎಂದು ತಿಳಿಸಿದರು.

ಸಭೆಯಲ್ಲಿ ಕನ್ನಡಪರ ಚಿಂತಕ ರಾ.ನಂ.ಚಂದ್ರಶೇಖರ, ಮುಖ್ಯಮಂತ್ರಿ ಸಲಹೆಗಾರ (ಇ-ಆಡಳಿತ) ಬೇಳೂರು ಸುದರ್ಶನ, ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ನಿವೃತ್ತ ಐಎಎಸ್ ಅಧಿಕಾರಿ ಕೆ. ಅಮರನಾರಾಯಣ, ಅರಣ್ಯ ಇಲಾಖೆ ಅಧಿಕಾರಿಗಳಾದ ರಂಗರಾವ್, ಅನಿಲ್ ಕುಮಾರ್ ರತನ್, ಆರ್.ಕೆ.ಸಿಂಗ್ ಇದ್ದರು.



PUBLIC NOTICE

Notice is hereby given that **SRI. SANDEEP SAGAR**, son of Sri.Suryanarayan, has agreed to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me, with documentary evidence at my Office, situated at, **DOOR NO.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002**, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Residential Property bearing Corporation Door No.2713/5 D-7 (Old Site No.19), situated at Adipampa Road, V.V.Mohalla, Mysore City with building thereon, site measuring East to West: 82 Feet and North to South: 100 Feet, totally measuring 8200 Square Feet and bounded on: East: Site bearing No.18, West: Site bearing No.20, North: AdipampaRoad and South: Conversancy.

Date : 03.02.2022
Place : Mysore

Dhirendra Kumar R. Mehta
Advocate
KEY-ANS LAW SOLUTIONS

के आई ओ सी एल लिमिटेड
KIOCL LIMITED
KUDREMUKH
(A Government of India Enterprise)
CIN - L13100KA1976GOI002974
Tel. & Fax No.080-25531525, E-mail: cs@kioclltd.in,
website: www.kioclltd.in

UNAUDITED FINANCIAL RESULTS FOR THE QUARTER AND NINE MONTHS ENDED 31ST DECEMBER, 2021

(₹ in Lakhs except EPS)

Particulars	Quarter ended			Nine Months ended	
	31.12.2021	30.09.2021	31.12.2020	31.12.2021	31.12.2020
	(Un-Audited)	(Un-Audited)	(Un-Audited)	(Un-Audited)	(Un-Audited)
1	2	3	4	5	6
Total Income from Operations	36,412	46,333	54,628	186,950	144,390
Net Profit / (Loss) for the period (before tax, Exceptional and/or Extraordinary items)	(8668)	(3850)	8607	17,004	14,720
Net Profit / (Loss) for the period before tax (after Exceptional and/or Extraordinary items)	(8668)	(3850)	8607	17,004	14,720
Net Profit / (Loss) for the period after tax (after Exceptional and/or Extraordinary items)	(6613)	(3033)	6382	11,946	10,716
Total Comprehensive Income for the period [(Comprising Profit / (Loss) for the period (after tax) and Other Comprehensive Income (after tax)]	(6613)	(3033)	6382	11,946	10,716
Equity Share Capital	60,775	60,775	60,775	60,775	60,775
Reserves (excluding Revaluation Reserve) as shown in the Audited Balance Sheet of the previous year.	-	-	-	-	-
Earnings Per Share (of Rs. 10/- each) (for continuing and discontinued operations) Basic & Diluted	(1.09)	(0.50)	1.02	1.97	1.72

Note:
1. The above is an extract of the detailed Un-audited Financial Results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the Financial Results for the quarter and Nine months ended December 31, 2021 are available on the Stock Exchange(s) website **www.nseindia.com**, **www.bseindia.com**, **www.msei.in** and on Company website at **www.kioclltd.in**.
2. The above results of the Company have been reviewed by the Audit Committee and approved by Board of Directors at their Meeting held on **04.02.2022**.

By order of the Board
for KIOCL Limited
Sd/-
(S.K. GORAI)
Director (Finance)
(DIN: 07223221)

Place: Bengaluru
Date: 04.02.2022

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪಾಲಿಕೆಯ ಕಛೇರಿಗಳು, ಎನ್.ಆರ್. ವೃತ್ತ, ಬೆಂಗಳೂರು – 560002

ಸಾರ್ವಜನಿಕ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಫ್ಲೆಕ್ಸ್, ಬ್ಯಾನರ್ಸ್, ಬಂಟಿಂಗ್ಸ್, ಭಿತ್ತಿಪತ್ರಗಳು, ಇನ್ನಿತರೇ ಮುದ್ರಣ ಪ್ರಕಟಣೆ / ಜಾಹೀರಾತು ಹಾಗೂ ಖಾಸಗೀ ಸ್ವತ್ತುಗಳಲ್ಲಿ ಅಳವಡಿಸಿರುವ ವಾಣಿಜ್ಯ ಜಾಹೀರಾತುಗಳು, ಬೃಹತ್ ಎಲ್.ಇ.ಡಿ. ಜಾಹೀರಾತುಗಳು, ಸೈಕಲ್ ಜಾಹೀರಾತುಗಳು, ವಾಹನ ಜಾಹೀರಾತುಗಳನ್ನು ಮುಕ್ತಗೊಳಿಸುವ ಅಭಿಯಾನದೊಂದಿಗೆ ಕೈ ಜೋಡಿಸಲು ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ಸ್ / ಸರ್ಕಾರೇತರ ಸಂಸ್ಥೆಗಳು ಹಾಗೂ ನಾಗರಿಕರಲ್ಲಿ ಮನವಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ **"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶದ ಉಪವಿಧಿಗಳು–2018"**ರಲ್ಲಿ ಅಂಗಡಿ ಮುಂಗಟ್ಟು ಜಾಹೀರಾತುಗಳು, ವಾಹನ ಸ್ವ–ಜಾಹೀರಾತು ಇನ್ನಿತರೇ ಸಣ್ಣಪುಟ್ಟ ಜಾಹೀರಾತುಗಳನ್ನು ಸೀಮಿತ ಅವಧಿಗೆ ಮತ್ತು ಸೀಮಿತ ಅಳತೆಗೆ (ಪಿಪಿಪಿ ಯೋಜನೆಗಳು ಸೇರಿದಂತೆ) ಅನುಮತಿಸಲು ಮಾತ್ರ, ಅವಕಾಶವಿರುತ್ತದೆ. ಇವುಗಳನ್ನು ಹೊರತುಪಡಿಸಿ ಇತರೆ ಯಾವುದೇ ವಸತಿ ಪ್ರದೇಶಗಳಲ್ಲಿ, ಖಾಸಗಿ ಸ್ವತ್ತುಗಳಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಿ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸುವುದನ್ನು, ಎಲ್.ಇ.ಡಿ. ಜಾಹೀರಾತುಗಳನ್ನು ಪ್ರದರ್ಶಿಸುವುದನ್ನು ಹಾಗೂ ಸಾರ್ವಜನಿಕ ಮತ್ತು ವೈಯಕ್ತಿಕ ಜಾಹೀರಾತುಗಳು, ಶುಭಾಶಯಗಳು, ಸಭೆ ಸಮಾರಂಭಗಳು ಕುರಿತ ಜಾಹೀರಾತು / ಪ್ರಕಟಣೆಗಳ ಫ್ಲೆಕ್ಸ್, ಬ್ಯಾನರ್ಸ್, ಬಂಟಿಂಗ್ಸ್, ಭಿತ್ತಿಪತ್ರ, ಬಾವುಟಗಳು ಇತ್ಯಾದಿ ಅಳವಡಿಸುವುದನ್ನು ನಿಷೇಧಿಸಲಾಗಿದ್ದರೂ ಸಹ ಮತ್ತೆ ಮತ್ತೆ ಅಳವಡಿಸುತ್ತಿರುವುದರಿಂದ ಸಾರ್ವಜನಿಕ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿರುವುದು ಅಲ್ಲದೇ ನಗರದ ಸೌಂದರ್ಯ ಹಾಳಾಗುತ್ತಿದೆ ಮತ್ತು ಪರಿಸರಕ್ಕೆ ಮಾರಕವಾಗಿರುತ್ತದೆ.

ಘನ ಸರ್ಕಾರವು ಪರಿಸರ (ಸಂರಕ್ಷಣೆ) ಕಾಯಿದೆ 1986ರ ಸೆಕ್ಷೆನ್ 5ರ ಅಡಿಯಲ್ಲಿ ಅಧಿಕಾರ ಚಲಾಯಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012 ಬೆಂಗಳೂರು ದಿನಾಂಕ: 11.03.2016ರಂತೆ ಪ್ಲಾಸ್ಟಿಕ್ ಬಳಸುವುದನ್ನು ನಿಷೇಧಿಸಲಾಗಿದೆ.

ಆದ್ದರಿಂದ ನಗರದ ವಸತಿ ಪ್ರದೇಶಗಳಲ್ಲಿ, ಖಾಸಗಿ ಸ್ವತ್ತುಗಳಲ್ಲಿ, ಅನಧಿಕೃತ ವಾಣಿಜ್ಯ ಜಾಹೀರಾತುಗಳು, ಫ್ಲೆಕ್ಸ್, ಬ್ಯಾನರ್ಸ್, ಬಂಟಿಂಗ್ಸ್, ಭಿತ್ತಿಪತ್ರಗಳು, ಇನ್ನಿತರೇ ಮುದ್ರಣ ಪ್ರಕಟಣೆ / ಜಾಹೀರಾತು ಹಾಗೂ ಖಾಸಗೀ ಸ್ವತ್ತುಗಳಲ್ಲಿ ಅಳವಡಿಸಿರುವ ವಾಣಿಜ್ಯ ಜಾಹೀರಾತುಗಳು, ಬೃಹತ್ ಎಲ್.ಇ.ಡಿ. ಜಾಹೀರಾತುಗಳು, ಸೈಕಲ್ ಜಾಹೀರಾತುಗಳು, ವಾಹನ ಜಾಹೀರಾತುಗಳು ಇತರೇ ಜಾಹೀರಾತುಗಳು ಕಂಡು ಬಂದಲ್ಲಿ, ಅದರ ಬಗ್ಗೆ ಮಾಹಿತಿಯನ್ನು ಈ ಕೆಳಗೆ ನಮೂದಿಸಲಾಗಿರುವ ವಲಯ ಕಛೇರಿಗಳಿಗೆ ನೀಡಲು ನಗರದ ನಾಗರಿಕರಲ್ಲಿ ಬಿಬಿಎಂಪಿಯ ಮನವಿ.

ನಿಮ್ಮ ದೂರುಗಳನ್ನು ನೋಂದಾಯಿಸಲು ದಯವಿಟ್ಟು ಈ ಕೆಳಕಂಡ ದೂರವಾಣಿ ಸಂಖ್ಯೆ ಸಂಪರ್ಕಿಸಿ:

ಕೇಂದ್ರ ಕಛೇರಿ	22221188 / 22100031 / 32 / 33 / 34 / 35 / 22975595	ರಾಜರಾಜೇಶ್ವರಿ ನಗರ ನಿಯಂತ್ರಣ ಕೊಠಡಿ	28600954 / 28601851
ನಿಯಂತ್ರಣ ಕೊಠಡಿ ಐಪಿಪಿ	22660000	ಬೊಮ್ಮನಹಳ್ಳಿ ನಿಯಂತ್ರಣ ಕೊಠಡಿ	25735642 / 25732447
ಪೂರ್ವ ನಿಯಂತ್ರಣ ಕೊಠಡಿ	22975803	ಮಹದೇವಪುರ ನಿಯಂತ್ರಣ ಕೊಠಡಿ	28512300 / 28512301
ಪಶ್ಚಿಮ ನಿಯಂತ್ರಣ ಕೊಠಡಿ	23561692 / 23463366	ಯಲಹಂಕ ನಿಯಂತ್ರಣ ಕೊಠಡಿ	23636671 / 22975936
ದಕ್ಷಿಣ ನಿಯಂತ್ರಣ ಕೊಠಡಿ	26566362	ದಾಸರಹಳ್ಳಿ ನಿಯಂತ್ರಣ ಕೊಠಡಿ	28394909 /28393688

ಮಾಹಿತಿ ನೀಡಿದ ಅಂತಹ ಸ್ಥಳದಲ್ಲಿನ ಯಾವುದೇ ಅನಧಿಕೃತ ಜಾಹೀರಾತು ಪ್ರದರ್ಶನ ಮತ್ತು ಜಾಹೀರಾತು ಫಲಕಗಳನ್ನು ಬಿಬಿಎಂಪಿಯು ಸಂಬಂಧಪಟ್ಟವರಿಗೆ ದಂಡ ವಿಧಿಸಿ ತಕ್ಷಣವೇ ತೆರವುಗೊಳಿಸುವುದು. ಅಲ್ಲದೇ, ಇದಕ್ಕೆ ಸಂಬಂಧಿಸಿ ಅಪರಾಧ ಎಸಗಿರುವವರಿಗೆ ಕರ್ನಾಟಕ ಮುಕ್ತ ಸ್ಥಳಗಳ (ವಿರೂಪಗೊಳಿಸುವಿಕೆ ತಡೆ) ಕಾಯ್ದೆ 1981ರ ಅಡಿಯಲ್ಲಿ ಸದರಿಯವರ ವಿರುದ್ಧ ಎಫ್.ಐ.ಆರ್. ದಾಖಲು ಮಾಡಿ, ಕಾನೂನು ರೀತಿಯ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು. ಬಿಬಿಎಂಪಿಯ ಅನಧಿಕೃತ ವಿವಿಧ ಜಾಹೀರಾತುಗಳನ್ನು ನಿಯಂತ್ರಿಸುವ ಮುಕ್ತ ಅಭಿಯಾನಕ್ಕೆ ಕೈ ಜೋಡಿಸಿ ಬೆಂಬಲಿಸಿ.

ಸಹಿ/–,
ಮುಖ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸ್ನಾತಕೋತ್ತರ ಪದವಿ: ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳಲ್ಲಿ ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕಲಾ ವಿಭಾಗದಲ್ಲಿ ಮಾಧ್ಯಮ ಅಧ್ಯಯನ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಜಾಹೀರಾತು, ವಿಜ್ಞಾನ ವಿಭಾಗದಲ್ಲಿ ಫಿಲ್ಮ್ ಮೇಕಿಂಗ್, ಗ್ರಾಫಿಕ್ಸ್ ಮತ್ತು ಅನಿಮೇಷನ್, ನೈಸರ್ಗಿಕ ವಿಪತ್ತು ನಿರ್ವಹಣೆ ಮತ್ತು ಘನತ್ಯಾಜ್ಯ ನಿರ್ವಹಣೆ ಹಾಗೂ ವಾಣಿಜ್ಯ ವಿಭಾಗದಲ್ಲಿ ಎಂ.ಕಾಂ (ಎಫ್‌ಎ), ಎಂ.ಕಾಂ (ಐಬಿ) ಮತ್ತು ಎಂಟಿಟಿಎಂ ಅವಕಾಶಗಳಿವೆ ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸಕ್ತರು ಫೆ.7ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಖಾಲಿ ಉಳಿದಿರುವ ಸ್ಥಾನಗಳು ಸ್ವಂತ ವೆಚ್ಚದಲ್ಲಿ ಅಧ್ಯಯನ ಮಾಡುವ ಕೋರ್ಸ್‌ಗಳಾಗಿವೆ.

ಮಾಹಿತಿಗೆ www.bangaloreuniversity.ac.in ವೀಕ್ಷಿಸಬಹುದು.

ಅಪರಾಧ ಸುದ್ದಿ

ಜೂಜಾಟ: ಸಿಸಿಬಿ ದಾಳಿ, ₹ 20 ಲಕ್ಷ ಜಪ್ತಿ

ಬೆಂಗಳೂರು: ಹೈಗ್ರೌಂಡ್ಸ್ ಠಾಣೆ ವ್ಯಾಪ್ತಿಯ ಹೋಟೆಲೊಂದರ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ₹ 20.71 ಲಕ್ಷ ನಗದು ಜಪ್ತಿ ಮಾಡಿದ್ದಾರೆ.

‘ರೇಸ್‌ಕೋರ್ಸ್ ರಸ್ತೆಯಲ್ಲಿರುವ ಪಂಚತಾರಾ ಹೋಟೆಲೊಂದರ ಕೊಠಡಿಯಲ್ಲಿ ಅಕ್ರಮವಾಗಿ ಜೂಜು ಆಡುತ್ತಿದ್ದ ಮಾಹಿತಿ ಬಂದಿತ್ತು. ಹೋಟೆಲ್ ಮೇಲೆ ದಾಳಿ ಮಾಡಿ, ಆರು ಮಂದಿಯನ್ನು ಬಂಧಿಸಲಾಗಿದೆ. ನಗದು, ಜೂಜಾಟಕ್ಕೆ ಬಳಸುತ್ತಿದ್ದ ವಸ್ತುಗಳು ಹಾಗೂ ನೋಟು ಎಣಿಕೆ ಯಂತ್ರ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಉದಯ್ ಶೆಟ್ಟಿ, ನಟರಾಜ್, ಸುರೇಶ್, ರಾಮಕೃಷ್ಣ, ಕೃಷ್ಣಗೌಡ ಹಾಗೂ ಶಂಕರ್ ಬಂಧಿತರು. ಅವರೆಲ್ಲರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದರು.


₹ 1 ಕೋಟಿ ಮೊತ್ತದ ನಕಲಿ ಉತ್ಪನ್ನ ಜಪ್ತಿ

ಬೆಂಗಳೂರು: ಎಸ್.ಜೆ.ಪಾರ್ಕ್ ಠಾಣೆ ವ್ಯಾಪ್ತಿಯಲ್ಲಿರುವ ‘ಪ್ರಕಾಶ್ ಟೆಲಿಕಾಂ’ ಗೋದಾಮು ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ₹ 1 ಕೋಟಿ ಮೊತ್ತದ ನಕಲಿ ಮೊಬೈಲ್ ಬಿಡಿಭಾಗ ಹಾಗೂ ಎಲೆಕ್ಟ್ರಿಕ್ ಉತ್ಪನ್ನಗಳನ್ನು ಜಪ್ತಿ ಮಾಡಿದ್ದಾರೆ.

‘ನಗರದಲ್ಲಿ ವ್ಯವಸ್ಥಿತ ಜಾಲ ರೂಪಿಸಿಕೊಂಡು ನಕಲಿ ವಸ್ತುಗಳನ್ನು ಮಾರುತ್ತಿದ್ದ ಮಾಹಿತಿ ಸಿಕ್ಕಿತ್ತು. ಅದರನ್ವಯ ಗೋದಾಮ ಮೇಲೆ ದಾಳಿ ಮಾಡಲಾಗಿದೆ. ಕೆಲವರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಲಾಗುತ್ತಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಆ್ಯಪಲ್, ಸ್ಯಾಮಸಂಗ್, ವಿವೊ, ಒಪ್ಪೊ, ರಿಯಲ್‌ಮೀ ಹಾಗೂ ಇತರೆ ಕಂಪನಿಗಳ ನಕಲಿ ಉತ್ಪನ್ನಗಳು ಗೋದಾಮಿನಲ್ಲಿ ಸಿಕ್ಕಿವೆ. ಅವುಗಳನ್ನೇ ಅಸಲಿ ಎಂಬುದಾಗಿ ಹೇಳಿ ಮಾರಲಾಗುತ್ತಿತ್ತು. ಇಂಥ ನಕಲಿ ಉತ್ಪನ್ನಗಳನ್ನು ಯಾರು ತಯಾರಿಸುತ್ತಿದ್ದರೆಂಬುದನ್ನು ತಿಳಿಯಲು ತನಿಖೆ ಮುಂದುವರಿದಿದೆ’ ಎಂದೂ ತಿಳಿಸಿದರು.

ಗ್ಯಾಸ್ ರೀಫಿಲ್ಲಿಂಗ್ ಆರೋಪಿ ಬಂಧನ



ಬೆಂಗಳೂರು: ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ಗ್ಯಾಸ್ ರೀಫಿಲ್ಲಿಂಗ್ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದು, ಆತನಿಂದ 20 ಸಿಲಿಂಡರ್ ಜಪ್ತಿ ಮಾಡಿದ್ದಾರೆ.

‘ಗೃಹ ಬಳಕೆ ಸಿಲಿಂಡರ್‌ಗಳನ್ನು ಖರೀದಿಸುತ್ತಿದ್ದ ಆರೋಪಿ, ಅಡುಗೆ ಅನಿಲವನ್ನು ಚಿಕ್ಕ ಸಿಲಿಂಡರ್‌ಗಳಿಗೆ ಅಕ್ರಮವಾಗಿ ರೀಫಿಲ್ಲಿಂಗ್ ಮಾಡುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದರು.



ರಾಜ್ಯ ವಿಪತ್ತು ಸ್ಪಂದನಾ ಪಡೆಯ ನೂತನ ವಾಹನಗಳಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಚಾಲನೆ ನೀಡಿದರು ಪ್ರಜಾವಾಣಿ ಚಿತ್ರ

ನೇತಾಜಿ ಹೆಸರಿನಲ್ಲಿ ತರಬೇತಿ ಅಕಾಡೆಮಿ: ಆರಗ ಜ್ಞಾನೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 125ನೇ ಜಯಂತಿ ಹಿನ್ನೆಲೆಯಲ್ಲಿ, ಅವರ ಹೆಸರಿನಲ್ಲಿ ದೊಡ್ಡಬಳ್ಳಾಪುರದಲ್ಲಿರುವ ಅಗ್ನಿಶಾಮಕ ಪಡೆಯ 20 ಎಕರೆ ಜಾಗದಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆಯ ಕೇಂದ್ರೀಯ ತರಬೇತಿ ಅಕಾಡೆಮಿ ನಿರ್ಮಿಸಲು ಉದ್ದೇಶಿಸಲಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನಸೌಧದ ಮುಂಭಾಗದಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆಯ ಆಂಬುಲೆನ್ಸ್, ಜೀಪು, ಸರಕು ಸಾಗಣೆ ವಾಹನ, ಜನರೇಟರ್ ಒಳಗೊಂಡ ಟ್ರಕ್ ವಾಹನಗಳಿಗೆ ಅವರು ಚಾಲನೆ ನೀಡಿ ಮಾತನಾಡಿದರು.

'ನೇತಾಜಿ ಅವರ 125ನೇ ಜಯಂತಿ ಸಂದರ್ಭದಲ್ಲಿ ಮುಂದಿನ ತಲೆಮಾರಿಗೆ ಅವರ ಆದರ್ಶಗಳನ್ನು ನೆನಪಿಸುವಂಥ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು' ಎಂದರು.

'ದಿನದ 24 ಗಂಟೆ ನೆರವಿಗೆ ಧಾವಿಸಲು ಸ್ಪಂದನಾ ಪಡೆಗೆ ₹ 20 ಕೋಟಿ ವೆಚ್ಚದಲ್ಲಿ ಹೊಸ ವಾಹನಗಳನ್ನು ಖರೀದಿಸಲಾಗಿದೆ. ಬೆಂಗಳೂರಿನಲ್ಲಿ ಹೆಚ್ಚುವರಿಯಾಗಿ ಇನ್ನೂ ಮೂರು ರಾಜ್ಯ ವಿಪತ್ತು ಸ್ಪಂದನಾ ಪಡೆಯ ತುಕಡಿಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ. ಮೊದಲ ಹಂತದಲ್ಲಿ ಶೋಧನಾ ಮತ್ತು ರಕ್ಷಣಾ ಉಪಕರಣ ಖರೀದಿಗೆ ₹ 9.65 ಕೋಟಿಯ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದರು.

ಅಗ್ನಿಶಾಮಕ ತುರ್ತು ಸೇವೆಗಳ ಪೊಲೀಸ್ ಮಹಾನಿರ್ದೇಶಕ ಅಮರ್‌ಕುಮಾರ್ ಪಾಂಡೆ, ಒಳಾಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಾಲಿನಿ ಕೃಷ್ಣಮೂರ್ತಿ, ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಪ್ರತಾಪ್ ರೆಡ್ಡಿ, ವಿಧಾನಪರಿಷತ್ ಸದಸ್ಯ ಎಚ್.ಎಂ. ರಮೇಶ್‌ಗೌಡ ಇದ್ದರು.

ಸೊಪ್ಪುಗಳು ಅಗ್ಗ • ಹಣ್ಣಿನ ದರಗಳು ಯಥಾಸ್ಥಿತಿ

ತರಕಾರಿ ದರ ಏರಿಳಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವಾರದಿಂದ ತರಕಾರಿ ದರಗಳಲ್ಲಿ ಏರಿಳಿತ ಕಂಡು ಬಂದಿದ್ದು, ಕ್ಯಾರೆಟ್, ಎಲೆಕೋಸು, ಸೋರೆಕಾಯಿ, ಕುಂಬಳಕಾಯಿ ಸೇರಿದಂತೆ ಕೆಲವು ತರಕಾರಿಗಳ ದರ ಹೆಚ್ಚಾಗಿದೆ.

ಕಳೆದ ವರ್ಷದಲ್ಲಿ ಸುರಿದಿದ್ದ ಭಾರಿ ಮಳೆಯಿಂದಾಗಿ ಬಹುತೇಕ ಎಲ್ಲ ತರಕಾರಿಗಳ ದರ ಹೆಚ್ಚಾಗಿ ₹100 ಗಡಿ ದಾಟಿದ್ದವು. ಆದರೆ, ಜನವರಿ ಕೊನೆಯ ವಾರದಲ್ಲಿ ದರಗಳು ಕ್ರಮೇಣವಾಗಿ ತಗ್ಗಿದ್ದವು.

ಈಗ ಕೆಲವು ತರಕಾರಿಗಳು ದುಬಾರಿಯಾಗಿವೆ. ಕ್ಯಾರೆಟ್, ಹಸಿ ಮೆಣಸಿನಕಾಯಿ ದರ ಮತ್ತೆ ಗಣನೀಯವಾಗಿ ಏರುತ್ತಿದ್ದು, ಕೆ.ಜಿ.ಗೆ ತಲಾ ₹80ರಂತೆ ಮಾರಾಟ ಆಗುತ್ತಿವೆ.

'ಮಳೆಯ ಹೊಡೆತದಿಂದ ಬೆಳೆಗಳೆಲ್ಲ ಹಾಳಾಗಿದ್ದರಿಂದ ಹೊಸ ಬೆಳೆಗಳ ಫಸಲು ಮಾರುಕಟ್ಟೆಗೆ ಬರಲು ಸಾಕಷ್ಟು ಸಮಯ ಬೇಕಾಯಿತು. ಹಾಗಾಗಿ, ಬೆಲೆ ಏರಿಕೆ ಬಿಸಿ ತಟ್ಟಿತ್ತು. ಎರಡು ವಾರಗಳಿಂದ ಹಲವಾರು ತರಕಾರಿಗಳ ದರ ತಗ್ಗಿದೆ. ಇದೇ ವೇಳೆ ಒಂದೆರಡು ಉತ್ಪನ್ನಗಳ ಬೆಲೆಯೂ ಏರಿದೆ' ಎಂದು ಕೆ.ಆರ್.ಮಾರುಕಟ್ಟೆಯ ತರಕಾರಿ ವ್ಯಾಪಾರಿ ವೆಂಕಟೇಶ್ ಹೇಳಿದರು.

'ಟೊಮೊಟೊ, ಬದನೆ, ಬೆಂಡೆಕಾಯಿ, ಆಲೂಗಡ್ಡೆ, ಈರುಳ್ಳಿ, ಹಾಗಲಕಾಯಿ ದರಗಳು ಜನವರಿಯಲ್ಲಿ ಭಾರಿ ಏರಿಕೆ ಕಂಡಿದ್ದವು. ಇವು ಈಗ ಸಾಮಾನ್ಯ ದರಕ್ಕೆ ಬಂದು ನಿಂತಿವೆ. ಟೊಮೆಟೊ ಕೆ.ಜಿ.ಗೆ ₹10ರಿಂದ ₹20ರವರೆಗೆ ಮಾರಾಟವಾಗುತ್ತಿದೆ. ₹15ರಂತೆ ಮಾರಾಟವಾಗುತ್ತಿದ್ದ ಸೋರೆಕಾಯಿ ₹50ರವರೆಗೆ ಏರಿದೆ' ಎಂದು ವಿವರಿಸಿದರು.

'ಮಳೆಗಾಲದಲ್ಲಿ ಕೆಲವು ತರಕಾರಿಗಳು ಹಾನಿಯಾದರೆ, ಚಳಿಗಾಲದ ವಾತಾವರಣಕ್ಕೆ ಕೆಲವು ತರಕಾರಿ ಬೆಳೆಗಳು ಕುಂಠಿತವಾಗುತ್ತವೆ. ಈ ಕಾರಣದಿಂದಲೇ ದರಗಳು ಹೆಚ್ಚಾಗಿವೆ. ಉಳಿದ ಉತ್ಪನ್ನಗಳ ದರ ಸದ್ಯಕ್ಕೆ ಇದೇ ಸ್ಥಿತಿಯಲ್ಲಿರಲಿದೆ. ಶಿವರಾತ್ರಿ ಸಮಯಕ್ಕೆ ದರಗಳು ಏರಿಕೆಯಾಗಲಿವೆ' ಎಂದು ಹೇಳಿದರು.

ತಗ್ಗಿದ ಸೊಪ್ಪಿನ ದರ: ಸೊಪ್ಪಿನ ದರಗಳೆಲ್ಲ ಕಳೆದ ತಿಂಗಳು ಹೆಚ್ಚಾಗಿದ್ದವು. ಈಗ ಎಲ್ಲ ಸೊಪ್ಪಿನ ದರ ದಿಢೀರ್ ಕುಸಿದಿದ್ದು, ಪ್ರತಿ ಕಟ್ಟಿಗೆ ₹8ರಿಂದ ₹10ರವರೆಗೆ ಮಾರಾಟ ಆಗುತ್ತಿವೆ. ಹಣ್ಣಿನ ದರಗಳೆಲ್ಲ ಯಥಾಸ್ಥಿತಿಯಲ್ಲಿವೆ.

ಕುಂಬಳಕ್ಕೆ ಬೇಡಿಕೆ: 'ಸಾಂಬಾರು ತಯಾರಿಗೆ ಕುಂಬಳಕಾಯಿ ಪ್ರಧಾನವಾಗಿ ಬಳಸುತ್ತಾರೆ. ಮೊದಲೆಲ್ಲ ಕುಂಬಳಕಾಯಿ ಹೇರಳವಾಗಿ ಮಾರುಕಟ್ಟೆಯಲ್ಲಿ ಸಿಗುತ್ತಿತ್ತು. ಬೇಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಆಗುತ್ತಿತ್ತು. ಆದರೆ, ಒಂದು ತಿಂಗಳಿನಿಂದ ಕುಂಬಳಕಾಯಿ ಆವಕ ಪ್ರಮಾಣ ಕಡಿಮೆಯಾಗಿದೆ. ಇದರಿಂದ ಬೇಡಿಕೆಯೂ ಹೆಚ್ಚಾಗಿದೆ' ಎಂದು ಯಲಹಂಕದ ತರಕಾರಿ ಚಿಲ್ಲರೆ ವ್ಯಾಪಾರಿ ಸಂತೋಷ್ ಕುಮಾರ್ ಮಾಹಿತಿ ನೀಡಿದರು.

'ಮೊದಲು ಕುಂಬಳಕಾಯಿ ಹೆಚ್ಚೆಂದರೆ ಕೆ.ಜಿ.ಗೆ ₹10ರಿಂದ ₹15ರಂತೆ ಮಾರಾಟ ಮಾಡುತ್ತಿದ್ದೆವು. ಈಗ ಕೆ.ಜಿ.ಗೆ ₹40ರಿಂದ ₹50ರವರೆಗೆ ದರ ಏರಿದೆ. ಸಗಟು ಮಾರುಕಟ್ಟೆಯಲ್ಲೂ ಉತ್ತಮಡವಾದ ಕುಂಬಳ ಸಿಗುತ್ತಿಲ್ಲ' ಎಂದರು.

ದರಪಟ್ಟಿ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ತರಕಾರಿ	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ಕ್ಯಾರೆಟ್	80	96
ಮೆಣಸಿನಕಾಯಿ	80	94
ಬೆಳ್ಳುಳ್ಳಿ	60	88
ಬೀಟ್‌ರೂಟ್	60	62
ಬೆಂಡೆಕಾಯಿ	45	58
ಬೀನ್ಸ್	40	40
ಬದನೆ	40	50
ಶುಂಠಿ	40	38
ಎಲೆಕೋಸು	35	50
ಈರುಳ್ಳಿ	30	43
ಆಲೂಗಡ್ಡೆ	30	30
ಹೂಕೋಸು	20	26
ಟೊಮೆಟೊ	20	24
ಮೂಲಂಗಿ	20	22

ಸೊಪ್ಪು	ಚಿಲ್ಲರೆ (ಕಟ್ಟಿಗೆ)	ಹಾಪ್‌ಕಾಮ್ಸ್ (ಕೆ.ಜಿ.ಗೆ)
ಮೆಂತ್ಯೆ	10	37
ಕೊತ್ತಂಬರಿ	10	34
ಸಬ್ಬಕ್ಕಿ	10	42
ಪಾಲಕ್	10	38
ದಂಟು	10	42

ಹಣ್ಣು	ಚಿಲ್ಲರೆ ದರ	ಹಾಪ್‌ಕಾಮ್ಸ್ ದರ
ದಾಳಿಂಬೆ	180	208
ಸೇಬು	130	140
ದ್ರಾಕ್ಷಿ	80	160
ಕಿತ್ತಳೆ	60	78
ಸೀಬೆ	50	72
ಮೂಸಂಬಿ	50	86
ಸಪೋಟ	40	44



ಪ್ರತಿಭಟನೆ

ರಾಜ್ಯದಲ್ಲಿ ಅಂಗವಿಕಲರ ಮೇಲೆ ಪೊಲೀಸರ ದೌರ್ಜನ್ಯ ಖಂಡಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಕಾರ್ಯಕರ್ತರು ಹಾಗೂ ಬೆಂಬಲಿಗರು ನಗರದ ಕೊಳಗೇರಿ ಅಭಿವೃದ್ಧಿ ಮಂಡಳಿ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಗಾರ್ಮೆಂಟ್ಸ್: ತುಟ್ಟಿಭತ್ಯೆ ನೀಡಲು ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾರ್ಮೆಂಟ್ಸ್ ಕಾರ್ಖಾನೆಗಳ 4 ಲಕ್ಷಕ್ಕೂ ಹೆಚ್ಚು ಕಾರ್ಮಿಕರಿಗೆ ಹೆಚ್ಚಳವಾಗಬೇಕಿದ್ದ ತುಟ್ಟಿಭತ್ಯೆ ನೀಡಲು ಕಾರ್ಖಾನೆಗಳ ಮಾಲೀಕರು ಒಪ್ಪಿಕೊಂಡಿದ್ದು, ಹೋರಾಟಕ್ಕೆ ಜಯ ದೊರೆತಿದೆ' ಎಂದು ಗಾರ್ಮೆಂಟ್ಸ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ತಿಳಿಸಿದೆ.

2020–21ರ ಗ್ರಾಹಕ ಸೂಚ್ಯಂಕ ದರ (ಸಿಪಿಐ) ಪರಿಷ್ಕರಣೆ ಪ್ರಕಾರ, ಗಾರ್ಮೆಂಟ್ಸ್ ಕಾರ್ಖಾನೆ ಕಾರ್ಮಿಕರ ತುಟ್ಟಿಭತ್ಯೆ(ಡಿ.ಎ) 2020ರ ಏಪ್ರಿಲ್‌ನಿಂದಲೇ ದಿನಕ್ಕೆ ₹16.06ರಂತೆ ಏರಿಕೆಯಾಗಬೇಕಿತ್ತು. ಕೋವಿಡ್ ಲಾಕ್‌ಡೌನ್ ಕಾರಣ ನೀಡಿ ತುಟ್ಟಿಭತ್ಯೆ ಏರಿಕೆ ಮುಂದೂಡುವಂತೆ ಕಾರ್ಖಾನೆಗಳ ಮಾಲೀಕರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಅದರಂತೆ, 2020ರ ಜುಲೈ 7ರಂದು ಆದೇಶ ಹೊರಡಿಸಿದ ಸರ್ಕಾರ, 2021ರ ಮಾ.31ರವರೆಗೆ ತುಟ್ಟಿಭತ್ಯೆ ಏರಿಕೆಯನ್ನೂ ಮುಂದೂಡಿತ್ತು. ಇದನ್ನು ಪ್ರಶ್ನಿಸಿ ಕಾರ್ಮಿಕ ಸಂಘಟನೆಗಳು ಹೈಕೋರ್ಟ್ ಮೆಟ್ಟಿಲೇರಿದ್ದವು.ಸರ್ಕಾರದ ಆದೇಶಕ್ಕೆ 2020ರ ಸೆ.11ರಂದು ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು.

'ಆದರೂ, ಹೆಚ್ಚುವರಿ ತುಟ್ಟಿಭತ್ಯೆ ಪಾವತಿಸದೆ ₹350 ಕೋಟಿ ಹಿಂಬಾಕಿಯನ್ನು ಕಾರ್ಖಾನೆಗಳು ಉಳಿಸಿಕೊಂಡಿದ್ದವು. ಸರ್ಕಾರದ ಮೇಲೆ ಒತ್ತಡ ಹೇರಲು ನಡೆಸಿದ ಹೋರಾಟಗಳಿಗೆ ಕಾರ್ಖಾನೆಗಳ ಮಾಲೀಕರು ಜಗ್ಗಿರಲಿಲ್ಲ. ಬಳಿಕ ಅಂತರರಾಷ್ಟ್ರೀಯ ಸಂಘಟನೆಗಳ ಜತೆಗೂಡಿ ಆಂದೋಲನ ಸಂಘಟಿಸಲಾಯಿತು. ಸಿದ್ಧ ಉಡುಪು ಬ್ರ್ಯಾಂಡ್ ಕಂಪನಿಗಳಿಗೆ ಪತ್ರ ಬರೆದು ಒತ್ತಡ ಹೇರಲಾಯಿತು' ಎಂದು ಯೂನಿಯನ್‌ನ ಸಲಹೆಗಾರ ಕೆ.ಆರ್. ಜಯರಾಂ ಹೇಳಿದ್ದಾರೆ.

'ಪರಿಣಾಮವಾಗಿ2020ಏಪ್ರಿಲ್‌ನಿಂದ ತಿಂಗಳಿಗೆ ₹417 ನಂತೆ ಜಾರಿಗೊಳಿಸಬೇಕಿದ್ದ ಮೊತ್ತವನ್ನು 2022ರ ಫೆಬ್ರುವರಿ ವೇತನದಲ್ಲಿ ಸೇರಿಸಲು ಮಾಲೀಕರು ಒಪ್ಪಿಕೊಂಡಿದ್ದಾರೆ' ಎಂದು ವಿವರಿಸಿದ್ದಾರೆ.

'ತುಟ್ಟಿಭತ್ಯೆ ಬಾಕಿ ಉಳಿಸಿಕೊಂಡಿರುವ ಬಗ್ಗೆ 'ಪ್ರಜಾವಾಣಿ'ಯು 2021ರ ಅಕ್ಟೋಬರ್ 7ರಂದು ವರದಿ ಪ್ರಕಟಿಸಿತ್ತು. 8ರಂದು ಇದೇ ವಿಷಯದ ಮೇಲೆ ಸಂಪಾದಕೀಯವನ್ನೂ ಬರೆದಿತ್ತು. ಕಾರ್ಮಿಕರಿಗೆ ನ್ಯಾಯ ದೊರಕಿಸಿಕೊಡಲು ಇವು ಮಹತ್ವದ ಪಾತ್ರ ವಹಿಸಿದವು' ಎಂದು ಅವರು ಸ್ಮರಿಸಿದ್ದಾರೆ.

ಚಿತ್ರಮಂದಿರ ಭರ್ತಿಗೆ ಅವಕಾಶ

ಒಂದನೇ ಪುಟದಿಂದ

ಮಧ್ಯಂತರದ ವೇಳೆ ಹೊರಗೆ ಹೋಗಿ ಆಹಾರ ಸೇವಿಸಬಹುದು. ಈ ನಿಯಮಗಳ ಕಟ್ಟುನಿಟ್ಟಿನ ಪಾಲನೆಗಾಗಿ ಅಧಿಕಾರಿಗಳು ಯಾವುದೇ ವೇಳೆಯಲ್ಲಿ ಪರಿಶೀಲನೆ ಮಾಡುತ್ತಾರೆ. ಈ ನಿಯಮಗಳನ್ನು ಪಾಲಿಸದಿದ್ದರೆ ಚಿತ್ರಮಂದಿರಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಯಾವುದೇ ವ್ಯಕ್ತಿ ಈ ಸ್ಥಳಗಳಿಗೆ ಪ್ರವೇಶಿಸುವ ಮುನ್ನ ಕೋವಿಡ್‌ನ ಎರಡೂ ಲಸಿಕೆಗಳನ್ನು ಪಡೆದಿರಬೇಕು. ಅಂತಹವರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ನೀಡಬೇಕು ಎಂದು ಸುಧಾಕರ್ ತಿಳಿಸಿದರು.

ಡಿಸೆಂಬರ್ ಕೊನೆ ವಾರದಲ್ಲಿ ಕೊರೊನಾ ವೈರಾಣು ಹರಡುವಿಕೆ ಹೆಚ್ಚಾದ ಬಳಿಕ ಕೆಲ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಕೋವಿಡ್ ಸ್ಥಿತಿಗತಿ, ಆಸ್ಪತ್ರೆಗಳಲ್ಲಿನ ದಾಖಲಾತಿ ಅವಲೋಕಿಸಿ ಮಾರ್ಗಸೂಚಿ ಬಿಡುಗಡೆ ಮಾಡಲಾಗಿತ್ತು. ಜನವರಿ 15 ರಿಂದ ಕೆಲವು ರಿಯಾಯ್ತಿಗಳನ್ನು ನೀಡಲು ಆರಂಭಿಸಲಾಯಿತು. ಆಗ ಚಿತ್ರಮಂದಿರ, ಜಿಮ್, ಯೋಗ ಕೇಂದ್ರ, ಈಜುಕೊಳಗಳಲ್ಲಿ ಶೇ 50 ರಷ್ಟು ಜನರಿಗೆ ಅವಕಾಶ ನೀಡಲಾಗಿತ್ತು ಎಂದು ಹೇಳಿದರು.



ಸರ್ಕಾರ ನಿಯಮ ಹಿಂಪಡೆಯುತ್ತಿದೆ ಎಂದಾಕ್ಷಣ ಸಾರ್ವಜನಿಕರು ಮೈಮರೆಯಬಾರದು. ಮುಂದೆಯೂ ಮುನ್ನೆಚ್ಚರಿಕೆ ಕ್ರಮಗಳನ್ನು ತಪ್ಪದೇ ಪಾಲಿಸಬೇಕು

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

ಶೇ 2ಕ್ಕೆ ಇಳಿಕೆ: ಜನವರಿಯಲ್ಲಿ ಕೋವಿಡ್‌ನಿಂದ ಆಸ್ಪತ್ರೆಗೆ ಸೇರುವವರ ಪ್ರಮಾಣ ಶೇ 5 ರಿಂದ ಶೇ 6 ಇತ್ತು. ಈಗ ಅದು ಶೇ 2 ಕ್ಕೆ ಇಳಿಕೆಯಾಗಿದೆ. ಈ ನಿಯಮ ಹೇರಿದ್ದರಿಂದ ಚಿತ್ರಮಂದಿರಗಳ ಮಾಲೀಕರು, ನಿರ್ಮಾಪಕರು ಹಾಗೂ ಈ ಉದ್ಯಮಗಳಲ್ಲಿ ಇರುವವರಿಗೆ ನಷ್ಟವಾಗಿದೆ. ಇವರ ನಿರೀಕ್ಷೆಯನ್ನು ಗಮನದಲ್ಲಿರಿಸಿಕೊಂಡು ಈ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ ಎಂದು ಅವರು ಹೇಳಿದರು.

ಅರಣ್ಯವಾಸಿಗಳಿಗೆ ಕಿರುಕುಳ: ಗೃಹ ಸಚಿವರಿಗೆ ಅಹವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಹೊಳೆ ಅರಣ್ಯವಾಸಿಗಳಿಗೆ ಅರಣ್ಯ ಇಲಾಖೆ ಅಧಿಕಾರಿಗಳಿಂದ ಆಗುತ್ತಿರುವ ಕಿರುಕುಳ ತಪ್ಪಿಸುವಂತೆ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ನಿರ್ದೇಶನ ನೀಡಿದ್ದಾರೆ.

ಗುರುವಾರ ತಮ್ಮನ್ನು ಭೇಟಿ ಮಾಡಿದ ಜೇನು ಕುರುಬ ಸಮುದಾಯದ ಸುಶೀಲಾ ಮತ್ತು ಶಿವು ಅವರು ಅರಣ್ಯಾಧಿಕಾರಿಗಳಿಂದ ಆಗುತ್ತಿರುವ ಕಿರುಕುಳದ ಬಗ್ಗೆ ವಿವರಿಸಿದರು.

ಯಾರ ರಕ್ಷಣೆಯೂ ಇಲ್ಲದೇ, ಅತ್ಯಂತ ದಯನೀಯ ಪರಿಸ್ಥಿತಿಯಲ್ಲಿ ಬದುಕು ಕಟ್ಟಿ ಕೊಂಡಿರುವ ಅರಣ್ಯವಾಸಿಗಳಿಗೆ ಎಲ್ಲ ರೀತಿಯ ರಕ್ಷಣೆ ಒದಗಿಸಬೇಕು ಎಂದು ಜ್ಞಾನೇಂದ್ರ ಸೂಚನೆ ನೀಡಿದರು.

'ಸದ್ಯವೇ ನಾಗರಹೊಳೆ ಪ್ರದೇಶಕ್ಕೆ ಭೇಟಿ ನೀಡಿ, ಅರಣ್ಯವಾಸಿಗಳಿಂದ ಅಹವಾಲುಗಳನ್ನು ಸ್ವೀಕರಿಸುತ್ತೇನೆ' ಎಂದು ಅವರು ಭರವಸೆ ನೀಡಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಶಾಂತರಾಮ್ ಸಿದ್ದಿ ಅವರು ಇದ್ದರು.



ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ನಾಗರಹೊಳೆ ಅರಣ್ಯವಾಸಿಗಳು ಮನವಿ ಸಲ್ಲಿಸಿದರು. ವಿಧಾನಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಇದ್ದರು

ಯುಜಿಸಿ ಅಧ್ಯಕ್ಷರಾಗಿ ಜಗದೀಶ್ ಕುಮಾರ್ ನೇಮಕ

ನವದೆಹಲಿ (ಪಿಟಿಐ): ಜವಾಹರ ಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಕುಲಪತಿ ಎಂ.ಜಗದೀಶ್ ಕುಮಾರ್ ಅವರನ್ನು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷರನ್ನಾಗಿ ಶುಕ್ರವಾರ ನೇಮಕ ಮಾಡಲಾಗಿದೆ.



ಎಂ.ಜಗದೀಶ್ ಕುಮಾರ್

ಅವರ ಅಧಿಕಾರಾವಧಿ ಐದು ವರ್ಷಗಳು ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ. ಯುಜಿಸಿ ಅಧ್ಯಕ್ಷರಾಗಿದ್ದ ಪ್ರೊ. ಡಿ.ಪಿ.ಸಿಂಗ್ ಅವರು ಕಳೆದ ಡಿಸೆಂಬರ್ 7ರಂದು ರಾಜೀನಾಮೆ ನೀಡಿದ್ದರಿಂದ ಈ ಸ್ಥಾನ ತೆರವಾಗಿತ್ತು.

60 ವರ್ಷದ ಜಗದೀಶ್ ಕುಮಾರ್ ಅವರು ಸದ್ಯ ಜೆಎನ್‌ಯುನ ಹಂಗಾಮಿ ಕುಲಪತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಳೆದ ವರ್ಷ ಅವರ ಅಧಿಕಾರಾವಧಿ ಮುಕ್ತಾಯವಾಗಿತ್ತು. ಅವರ ಅಧಿಕಾರಾವಧಿಯಲ್ಲಿ ಹಲವು ವಿವಾದಗಳಿಂದಾಗಿ ಜೆಎನ್‌ಯು ಸುದ್ದಿಯಲ್ಲಿತ್ತು.

ಎಲೆಕ್ಟ್ರಾನಿಕ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಹೊಂದಿರುವ ವಿದ್ವತ್‌ನಿಂದಾಗಿ ಜಗದೀಶ್ ಕುಮಾರ್ ಅವರು ಅಪಾರ ಮನ್ನಣೆಗೆ ಪಾತ್ರರಾಗಿದ್ದಾರೆ. ಐಐಟಿ–ಮದ್ರಾಸ್‌ನಿಂದ ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್‌ನಲ್ಲಿ (ಇಇ) ಎಂ.ಎಸ್ ಹಾಗೂ ಪಿಎಚ್.ಡಿ ಪದವಿ ಗಳಿಸಿದ್ದಾರೆ. ಐಐಟಿ–ಖರಗ್‌ಪುರದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ, ಐಐಟಿ–ದೆಹಲಿಯಲ್ಲಿ ಸಹ ಪ್ರಾಧ್ಯಾಪಕರಾಗಿಯೂ ಅವರು ಕಾರ್ಯನಿರ್ವಹಿಸಿದ್ದಾರೆ.

ಆಕ್ಷೇಪ: ಎಂ.ಜಗದೀಶ್ ಕುಮಾರ್ ಅವರನ್ನು ಯುಜಿಸಿ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಜೆಎನ್‌ಯು ವಿದ್ಯಾರ್ಥಿಗಳ ಸಂಘ ಮತ್ತು ಬೋಧಕರ ಸಂಘ ಪ್ರಶ್ನಿಸಿವೆ. 'ಕೇಂದ್ರ ಸರ್ಕಾರದ ಕಾರ್ಯಸೂಚಿಯನ್ನು ಜಾರಿಗೊಳಿಸಿದ್ದಕ್ಕಾಗಿ ಬಹುಮಾನವಾಗಿ ಅವರಿಗೆ ಈ ಸ್ಥಾನ ನೀಡಲಾಗಿದೆ' ಎಂದು ಈ ಸಂಘಟನೆಗಳು ಟೀಕಿಸಿವೆ.

ದಿನೇಶ್ ಸಕ್ಲಾನಿ ಎನ್‌ಸಿಇಆರ್‌ಟಿ ನಿರ್ದೇಶಕ

ನವದೆಹಲಿ (ಪಿಟಿಐ): ಉತ್ತರಾಖಂಡದ ಹೇಮವತಿನಂದನ್ ಬಹುಗುಣ ಗಢವಾಲ್ ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕ ದಿನೇಶಪ್ರಸಾದ್ ಸಕ್ಲಾನಿ ಅವರನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್ತಿನ (ಎನ್‌ಸಿಇಆರ್‌ಟಿ) ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಶಿಕ್ಷಣ ಸಚಿವಾಲಯ ಮೂಲಗಳು ಶುಕ್ರವಾರ ತಿಳಿಸಿವೆ.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ A Government of India Undertaking
ಸಿಂಡಿಕೇಟ್ Syndicate

ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಛೇರಿ,
ನಂ. 86, ಎಂ.ಜಿ.ರಸ್ತೆ, ಬೆಂಗಳೂರು–560001. ದೂ.: 25310039/25310038

ಟೆಂಡರ್‌ಗಳಿಗಾಗಿ ಆಹ್ವಾನ

ಕೆನರಾ ಬ್ಯಾಂಕ್, ತನ್ನ ಸ್ವಂತ ಕಟ್ಟಡವಾದ ಶಾಂತಿಪಾರ್ಕ್ ಅಪಾರ್ಟ್‌ಮೆಂಟ್ಸ್, ಜಯನಗರ 9ನೇ ಬ್ಲಾಕ್, ಬೆಂಗಳೂರು, ಇಲ್ಲಿ 11 ಫ್ಲಾಟ್‌ಗಳ ಉದ್ದೇಶಿತ ಒಳಾಂಗಣ ನವೀಕರಣಕ್ಕಾಗಿ ಆನ್‌ಲೈನ್‌ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.
ವಿವರಗಳಿಗಾಗಿ ಬ್ಯಾಂಕ್‌ನ ವೆಬ್‌ಸೈಟ್ www.canarabank.com ಸಿಪಿಪಿ ಪೋರ್ಟಲ್ www.eprocure.gov.in ಮತ್ತು ಇ–ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್ ಪೋರ್ಟಲ್ https://canarabank.abcprocure.com ಗಳಿಗೆ ಭೇಟಿ ನೀಡಿ.
ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 07–03–2022ರಂದು ಸಂಜೆ 3.00 ಗಂಟೆಯವರೆಗೆ.
ಮಾರ್ಪಾಡುಗಳನ್ನು ಒಳಗೊಂಡು ಸೇರ್ಪಡೆಗಳು / ತಿದ್ದುಪಡಿಗಳು ಇದ್ದಲ್ಲಿ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ದಿನಾಂಕ : 05–02–2022 ಸಹಾಯಕ ಮಹಾ ಪ್ರಬಂಧಕರು

ಮಿಡಿ ಬಸ್ ಕಾರ್ಯಾಚರಣೆ ಸ್ಥಗಿತ ಬಿಎಂಟಿಸಿ ಚಾಲಕರಿಗೆ ತರಬೇತಿ

ಬೆಂಗಳೂರು: ಎರಡು ಅಗ್ನಿ ಅವಘಡಗಳ ಕಾರಣದಿಂದ 186 ಮಿಡಿ ಬಸ್‌ಗಳ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುವ ಬಿಎಂಟಿಸಿ, ವಾಹನಗಳ ಸುರಕ್ಷತೆ ಬಗ್ಗೆ ವರದಿ ನಿರೀಕ್ಷಿಸುವ ಜೊತೆಗೆ ಚಾಲಕರಿಗೂ ಅಗ್ನಿ ಸುರಕ್ಷತೆಯ ಕುರಿತು ತರಬೇತಿ ಆರಂಭಿಸಿದೆ.

186 ಮಿಡಿ ಬಸ್‌ಗಳನ್ನು 2014-15ರಲ್ಲಿ ಅಶೋಕ್ ಲೇಲ್ಯಾಂಡ್ ಕಂಪನಿಯಿಂದ ಖರೀದಿಸಲಾಗಿದೆ. ಅವುಗಳಲ್ಲಿ ಎರಡು ಬಸ್‌ಗಳಲ್ಲಿ ಬೆಂಕಿ ಅವಘಡ(ಜನವರಿ 21 ಮತ್ತು ಫೆಬ್ರವರಿ 1 ರಂದು) ಸಂಭವಿಸಿದೆ. ಬಿಎಂಟಿಸಿಯ ಹಿರಿಯ ಅಧಿಕಾರಿಗಳು ಮತ್ತು ಕಂಪನಿಯ ತಜ್ಞರು ಪ್ರತಿದಿನ 20 ರಿಂದ 30 ಬಸ್‌ಗಳನ್ನು ಪರಿಶೀಲಿಸುತ್ತಿದ್ದಾರೆ.

'ಬಸ್‌ಗಳಲ್ಲಿ ಇರುವ ಲೋಪದ ಬಗ್ಗೆ ಪರಿಶೀಲನೆ ನಡೆಯುತ್ತಿದ್ದು, ಬಸ್‌ನಲ್ಲಿ ಇದ್ದ ಅಗ್ನಿಶಾಮಕಗಳನ್ನು ಚಾಲಕ ಅಥವಾ ನಿರ್ವಾಹಕರು ಏಕೆ ಬಳಸಿಲ್ಲ ಎಂಬುದನ್ನೂ ವಿಚಾರಿಸುತ್ತಿದ್ದೇವೆ. ಇನ್ನೆರಡು ದಿನಗಳಲ್ಲಿ ವರದಿ ಸಲ್ಲಿಸಲಾಗುವುದು' ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ತಿಳಿಸಿದರು.

'ಬಸ್‌ಗಳನ್ನು ಸಂಪೂರ್ಣವಾಗಿ ತಪಾಸಣೆ ನಡೆಸಿದ ಬಳಿಕವೇ ರಸ್ತೆಗೆ ಇಳಿಸಲಾಗುವುದು. ಎಲ್ಲಾ ಬಸ್‌ಗಳಲ್ಲೂ ಅಗ್ನಿ ನಂದಿಸುವ ಸಾಧನಗಳು ಸುಸ್ಥಿತಿಯಲ್ಲಿವೆ' ಎಂದು ಅವರು ಹೇಳಿದರು.

ತುರ್ತು ಪರಿಸ್ಥಿತಿಯಲ್ಲಿ ಅಗ್ನಿಶಾಮಕ ಸಾಧನವನ್ನು ಹೇಗೆ ಬಳಸಬೇಕು ಎಂಬುದು ಸಿಬ್ಬಂದಿಗೆ ತಿಳಿದಿಲ್ಲ ಎಂಬುದು ಪ್ರಾಥಮಿಕ ವಿಚಾರಣೆ ವೇಳೆ ಗೊತ್ತಾಗಿದೆ. ಆದ್ದರಿಂದ ಚಾಲಕರಿಗೆ ತರಬೇತಿ ಕೊಡುವ ಕಾರ್ಯವನ್ನು ಶುಕ್ರವಾರದಿಂದ ಬಿಎಂಟಿಸಿ ಆರಂಭಿಸಿದೆ.

ಇಂದಿರಾ ಕ್ಯಾಂಟೀನ್ ಗುಣಮಟ್ಟ ಸುಧಾರಣೆಗೆ ಕ್ರಮ: ಗೌರವ್ ಗುಪ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದಿರಾ ಕ್ಯಾಂಟೀನ್‌ನಲ್ಲಿ ಊಟ ಮತ್ತು ಉಪಾಹಾರಕ್ಕೆ ಬೇಡಿಕೆ ಕಡಿಮೆಯಾಗಿದ್ದು, ಇದಕ್ಕೆ ಕಾರಣ ಏನು ಎಂಬುದನ್ನು ಪರಿಶೀಲಿಸಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ಪ್ರತಿ ವಾರ್ಡ್‌ಗೆ ಒಂದರಂತೆ ಇಂದಿರಾ ಕ್ಯಾಂಟೀನ್‌ಗಳಿವೆ. ಹಲವು ಸಂಘ–ಸಂಸ್ಥೆಗಳು ಊಟ–ಉಪಾಹಾರ ಪೂರೈಸುತ್ತಿವೆ. ಕ್ಯಾಂಟೀನ್‌ಗೆ ಬರುವ ಜನರ ಸಂಖ್ಯೆ ಕಡಿಮೆಯಾಗಿದೆ ಎಂಬ ಮಾಹಿತಿ ಇದೆ. ಯಾವ ಕಾರಣಕ್ಕೆ ಬೇಡಿಕೆ ಕಡಿಮೆಯಾಗಿದೆ ಎಂಬುದನ್ನು ಪರಿಶೀಲಿಸಲಾಗುವುದು. ಬೇಡಿಕೆ ಪ್ರಮಾಣ ಎಷ್ಟು ಕುಸಿದಿದೆ ಎಂಬುದನ್ನು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳುತ್ತೇನೆ. ಗುಣಮಟ್ಟ ಸುಧಾರಣೆಗೆ ಏನು ಮಾಡಬೇಕು ಎಂಬುದನ್ನು ಪರಿಶೀಲಿಸಿ ಮುಂದುವರಿಯಲಾಗುವುದು' ಎಂದರು.

ರಸ್ತೆ ಅಗೆದರೆ ಎಫ್‌ಐಆರ್: ಬಿಬಿಎಂಪಿ ಅನುಮತಿ ಪಡೆಯದೆ ರಸ್ತೆ ಅಗೆದರೆ ಎಫ್‌ಐಆರ್ ದಾಖಲಿಸಲು ಕ್ರಮ ಕೈಗೊಳ್ಳಲಾಗಿದೆ. ಹಿಂದಿನಿಂದಲೂ ಈ ರೀತಿ ಕ್ರಮವನ್ನು ಪಾಲಿಕೆ ಮಾಡಿಕೊಂಡು ಬಂದಿದೆ. ಎಫ್‌ಐಆರ್ ದಾಖಲಿಸಲು ಪೊಲೀಸ್ ಅಧಿಕಾರಿಗಳ ಸಹಕಾರ ಕೋರಿ ನಗರ ಪೊಲೀಸ್ ಕಮಿಷನರ್ ಅವರಿಗೂ ಪತ್ರ ಬರೆಯಲಾಗಿದೆ ಎಂದು ಹೇಳಿದರು.

ಬಿಬಿಎಂಪಿ ಬಜೆಟ್ ಸಿದ್ಧಪಡಿಸಲು ತಯಾರಿ ಆರಂಭಿಸಲಾಗುತ್ತಿದೆ. ಬೆಂಗಳೂರು ನಗರದ ಉಸ್ತುವಾರಿ ಮುಖ್ಯಮಂತ್ರಿ ಅವರ ಬಳಿಯೇ ಇದ್ದು, ಹೊಸ ಯೋಜನೆಗಳ ಬಗ್ಗೆ ಅವರೊಂದಿಗೆ ಚರ್ಚಿಸಲಾಗುವುದು. ಉಳಿದ ಜನಪ್ರತಿನಿಧಿಗಳ ಅಭಿಪ್ರಾಯವನ್ನೂ ಸಂಗ್ರಹಿಸಿ ಬಜೆಟ್ ಸಿದ್ಧಪಡಿಸಲಾಗುವುದು ಎಂದು ಗೌರವ್ ಗುಪ್ತ ಸ್ಪಷ್ಟಪಡಿಸಿದರು.

60 ಸಾವಿರ ಲಸಿಕೆ: ಪ್ರತಿನಿತ್ಯ 60 ಸಾವಿರ ತನಕ ಲಸಿಕೆ ನೀಡಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ವಿಶೇಷ ಶಿಬಿರಗಳನ್ನು ಏರ್ಪಡಿಸಿ ಲಸಿಕೆ ನೀಡಲಾಗುತ್ತಿದೆ ಎಂದರು.

ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯ ಮೀನಮೇಷ

ಪರೀಕ್ಷೆಗಳಿಲ್ಲದೇ ವಿದ್ಯಾರ್ಥಿಗಳ ಪದವಿ ಕನಸು ಭಗ್ನ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾಲಯ ದೂರ ಶಿಕ್ಷಣ ನಿರ್ದೇಶನಾಲಯ 2019–20ನೇ ಸಾಲಿನ ಪರೀಕ್ಷೆಗಳನ್ನು ನಡೆಸಲು ಮೀನಮೇಷ ಎಣಿಸುತ್ತಿರುವ ಪರಿಣಾಮ 17 ಸಾವಿರ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿದೆ.

ಕೋವಿಡ್ ಕಾರಣಕ್ಕೆ 2020ರಲ್ಲಿ ಮುಂದೂಡಲಾಗಿದ್ದ ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ಎರಡು ವರ್ಷಗಳು ಕಳೆದರೂ ನಡೆಸಲು ವಿಶ್ವವಿದ್ಯಾಲಯ ಸಿದ್ಧತೆಗಳನ್ನೇ ಮಾಡಿಕೊಂಡಿಲ್ಲ. ಕೋವಿಡ್ ಲಾಕ್‌ಡೌನ್ ತೆರವಿನ ನಂತರ ಒಂದು ಸೆಮಿಸ್ಟರ್‌ನ ಪರೀಕ್ಷೆಗಳನ್ನು ನಡೆಸದೇ ಎಲ್ಲ ವಿದ್ಯಾರ್ಥಿಗಳನ್ನೂ ತೇರ್ಗಡೆಗೊಳಿಸಲು ನಿರ್ಧಾರ ತೆಗೆದುಕೊಳ್ಳಲಾಗಿತ್ತು. ವಿಶ್ವವಿದ್ಯಾಲಯದ ಈ ನಿರ್ಧಾರವನ್ನು ಸಿಂಡಿಕೇಟ್ ಸದಸ್ಯರು, ಪ್ರಾಧ್ಯಾಪಕರ ಒಕ್ಕೂಟದವರು ವಿರೋಧಿಸಿದ್ದರು.

ಶಿಕ್ಷಣದ ಗುಣಮಟ್ಟ, ವಿದ್ಯಾರ್ಥಿಗಳ ಹಿತ ಗಮನದಲ್ಲಿಟ್ಟುಕೊಂಡು ದೂರ ಶಿಕ್ಷಣ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವುದರ ಮೂಲಕ ಫಲಿತಾಂಶ ಪ್ರಕಟಿಸಬೇಕು ಎಂದು 2021ರ ನವೆಂಬರ್‌ನಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ಒಮ್ಮತದ ನಿರ್ಣಯ ಕೈಗೊಳ್ಳಲಾಗಿತ್ತು. ಸೆಮಿಸ್ಟರ್ ಬದಲು ಕ್ಯಾರಿ ಓವರ್ ಪದ್ಧತಿ ಜಾರಿಗೆ ತಂದು ಎಲ್ಲ ವಿದ್ಯಾರ್ಥಿಗಳಿಗೂ ಎರಡನೇ ಹಾಗೂ ಮೂರನೇ ವರ್ಷದ ತರಗತಿಗಳಿಗೆ ಪ್ರವೇಶ ನೀಡಬೇಕು. ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ತಕ್ಷಣ ಪರೀಕ್ಷೆ ನಡೆಸಿ ಪದವಿ ಪ್ರದಾನ ಮಾಡಬೇಕು ಎಂದು ನಿರ್ಧಾರ ತೆಗೆದುಕೊಳ್ಳಲಾಗಿತ್ತು.

ಸಿಂಡಿಕೇಟ್ ನಿರ್ಣಯದಂತೆ ಜ.3 ರಿಂದ 19ರ ವರೆಗೆ ಪರೀಕ್ಷೆ ನಡೆಸಲು ವೇಳಾಪಟ್ಟಿಯನ್ನೂ ಪ್ರಕಟಿಸಲಾಗಿತ್ತು. ಸಮಯ ನೀಡದೆ ತರಾತುರಿಯಲ್ಲಿ ಪರೀಕ್ಷೆಗಳ ದಿನಾಂಕ ಪ್ರಕಟಿಸಿದ್ದಾರೆ ಎಂದು ಕೆಲವು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು. ನಂತರ ವಿದ್ಯಾರ್ಥಿಗಳಿಗೆ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಕನಿಷ್ಠ 20 ದಿನವಾದರೂ ಪರೀಕ್ಷೆ ಮುಂದೂಡುವ ಭರವಸೆ ನೀಡಲಾಗಿತ್ತು. ಭರವಸೆಯಂತೆ ಪರೀಕ್ಷೆ ಮುಂದೂಡಿದರೂ ಇದುವರೆಗೂ ವೇಳಾಪಟ್ಟಿ ಪ್ರಕಟಿಸಿಲ್ಲ.

ಈ ಮಧ್ಯೆ ಕೆಲವು ವಿದ್ಯಾರ್ಥಿಗಳು ಪರೀಕ್ಷೆ ನಡೆಸದೇ ಫಲಿತಾಂಶ ಪ್ರಕಟಿಸಬೇಕು ಎಂದು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಕೋರ್ಟ್ ಯಾವುದೇ ನಿರ್ಧಾರ ಪ್ರಕಟಿಸಿಲ್ಲ. ಆದರೂ, ಕುವೆಂಪು ವಿಶ್ವವಿದ್ಯಾಲಯ ಪರೀಕ್ಷೆಗಳನ್ನು ನಡೆಸುವ ಕುರಿತು ವಿಶೇಷ ಸಿಂಡಿಕೇಟ್ ಸಭೆ ಕರೆದಿದೆ. ಇದು ಅನುಮಾನಗಳಿಗೆ ಕಾರಣವಾಗಿದೆ.

'ಕೋವಿಡ್ ನಂತರ ದೂರ ಶಿಕ್ಷಣದ ಎಂ.ಲಿಬ್, ಬಿ.ಲಿಬ್, ಎಂಬಿಎ ಸೇರಿ ಇತರೆ ಕೋರ್ಸ್‌ಗಳಿಗೆ ಪರೀಕ್ಷೆಗಳನ್ನು ನಡೆಸಿ, ಫಲಿತಾಂಶ ಪ್ರಕಟಿಸಲಾಗಿದೆ. ಉಳಿದ ವಿಷಯಗಳಿಗೆ ಪರೀಕ್ಷೆ ನಡೆಸದೆ ತೇರ್ಗಡೆ ಮಾಡಿದರೆ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಅಲ್ಲಿ ಅನುತ್ತೀರ್ಣರಾದವರು ಕೋರ್ಟ್ ಮೆಟ್ಟಿಲೇರುವ ಸಾಧ್ಯತೆ ಇದೆ. ಹಾಗಾಗಿ, ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಬೇಕು. ಪರೀಕ್ಷೆ ವಿರೋಧಿಸುತ್ತಿರುವ ವಿದ್ಯಾರ್ಥಿಗಳನ್ನು ಕರೆದು ಮನವರಿಕೆ ಮಾಡಿಕೊಡಬೇಕು' ಎಂದು ಆಗ್ರಹಿಸುತ್ತಾರೆ ಸಿಂಡಿಕೇಟ್ ಸದಸ್ಯರಾದ ಧರ್ಮ ಪ್ರಸಾದ್, ಮಂಜುನಾಥ್.



ಕೊರೊನಾ ಸಂಕಷ್ಟದ ಕಾರಣ ಪರೀಕ್ಷೆಗಳಿಗೆ ವಿಘ್ನ ಎದುರಾಗಿತ್ತು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೀಘ್ರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು

ಪ್ರೊ.ಬಿ.ಪಿ. ವೀರಭದ್ರಪ್ಪ
ಕುಲಪತಿ, ಕುವೆಂಪು ವಿಶ್ವವಿದ್ಯಾಲಯ



ಧರ್ಮ ಪ್ರಸಾದ್

2019–20ರ ಸಾಲಿಗೆ ಕೊನೆಯ ಪ್ರವೇಶ

ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯ ಹೊರತುಪಡಿಸಿದರೆ ರಾಜ್ಯದ ಇತರ ವಿಶ್ವವಿದ್ಯಾಲಯಗಳು ದೂರ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ನೀಡಬಾರದು ಎಂದು 2020ರಲ್ಲೇ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ. ಹಾಗಾಗಿ, 2019–20ರಲ್ಲಿ ನೀಡಿದ ಪ್ರವೇಶವೇ ಕೊನೆ. ಈ ಕಾರಣಕ್ಕೇ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೆ ತೇರ್ಗಡೆ ಮಾಡುವ ಹಠಕ್ಕೆ ಕೆಲವರು ಬಿದ್ದಿದ್ದಾರೆ ಎನ್ನುತ್ತವೆ ವಿಶ್ವ ವಿದ್ಯಾಲಯದ ಮೂಲಗಳು.

ನಕ್ಸಲ್ ನಿಗ್ರಹ ಪಡೆ: ಭತ್ಯೆ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕ್ಸಲ್ ನಿಗ್ರಹದಳದ ಯೋಧರು-(ಎಟಿಎಸ್) ಮತ್ತು ಆಂತರಿಕ ಭದ್ರತಾ ವಿಭಾಗದ ಪ್ರಶಿಕ್ಷಣಾರ್ಥಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗೆ ನೀಡುತ್ತಿರುವ ವಿಶೇಷ ಆಹಾರ ಭತ್ಯೆಯನ್ನು ₹130 ರಿಂದ ₹300 ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಆಂತರಿಕ ಭದ್ರತಾ ವಿಭಾಗ ಸರ್ಕಾರಕ್ಕೆ ಸಲ್ಲಿಸಿದ್ದ ಕೋರಿಕೆಯನ್ನು ಪುರಸ್ಕರಿಸಿ ಆಹಾರ ಭತ್ಯೆಯನ್ನು ಪರಿಷ್ಕರಿಸಲಾಗಿದೆ. ಸಿಸಿಟಿ ಮತ್ತು ಗರುಡ ಪಡೆಯ ಸಿಬ್ಬಂದಿಗೂ ಇದು ಅನ್ವಯವಾಗುತ್ತದೆ ಎಂದು ಆದೇಶ ತಿಳಿಸಿದೆ.

ನಿಮ್ಹಾನ್ಸ್ ಸೇರಿ ವಿವಿಧ ಆಸ್ಪತ್ರೆಗಳ ಆಹಾರ ತಜ್ಞರು ನಿಗದಿಪಡಿಸಿದ 5,600 ಕ್ಯಾಲೊರಿ ಪೌಷ್ಟಿಕ ಆಹಾರವನ್ನು ಭದ್ರತಾ ಪಡೆಗಳಿಗೆ ಒದಗಿಸಲು ಸಹಾಯಕವಾಗುತ್ತದೆ ಎಂದು ಹೇಳಿದೆ.



ಮನೋರೋಗಕ್ಕೆ 'ಟಿ-ಮನಸ್'

ಬೆಂಗಳೂರು: ವಿವಿಧ ರಾಜ್ಯಗಳ ಮನೋರೋಗಿಗಳ ಜತೆಗೆ ಟೆಲಿ ಸಮಾಲೋಚನೆ ನಡೆಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) 'ಟಿ-ಮನಸ್' ಯೋಜನೆ ರೂಪಿಸಿದೆ. ಈ ಯೋಜನೆಯಡಿ ತಜ್ಞರು ಅಗತ್ಯ ಮಾರ್ಗದರ್ಶನ ನೀಡಲಿದ್ದಾರೆ.

ಈ ಯೋಜನೆಗೆ ಕೇಂದ್ರ ಆರೋಗ್ಯ ಸಚಿವಾಲಯ ಅನುಮೋದನೆ ನೀಡಿದೆ. 'ದೇಶದಲ್ಲಿ ಸುಮಾರು 20 ಕೋಟಿ ಜನರು ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸದ್ಯ ಈ ರೀತಿ ಸಮಸ್ಯೆ ಎದುರಿಸುತ್ತಿರುವವರಲ್ಲಿ ಒಬ್ಬರು ಮಾತ್ರ ಚಿಕಿತ್ಸೆ ಒಳಪಡುತ್ತಿದ್ದಾರೆ. ಈ ಅಂತರವನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರವು ವಿವಿಧ ಕ್ರಮಗಳನ್ನು ಕೈಗೊಂಡಿದೆ. ಈಗ ಹೊಸದಾಗಿ 'ಟಿ-ಮನಸ್' ಸೇವೆ ಪ್ರಾರಂಭಿಸಲಾಗುತ್ತಿದೆ. ದೇಶದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಾರದ ಎಲ್ಲ ದಿನ 24 ಗಂಟೆಗಳು ಟೆಲಿ ಮಾನಸಿಕ ಆರೋಗ್ಯ ಸೇವೆಯನ್ನು ನೀಡಲಾಗುತ್ತದೆ' ಎಂದು ಸಂಸ್ಥೆ ತಿಳಿಸಿದೆ.

'ಈ ಸೇವೆಗೆ ವೈದ್ಯಕೀಯ ಕಾಲೇಜುಗಳು ಹಾಗೂ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಗಳನ್ನೂ ಸೇರ್ಪಡೆ ಮಾಡಲಾಗುವುದು. ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ಕೂಡ ಒಳಪಡಲಿವೆ. ಸಂಸ್ಥೆಯು ನೋಡಲ್ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ' ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಕೋರ್ಟ್: ಕೋವಿಡ್ ಮಾರ್ಗಸೂಚಿ ಸಡಿಲಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸೋಂಕು ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೈಕೋರ್ಟ್ ಕಲಾಪಕ್ಕೆ ಸಂಬಂಧಿಸಿದಂತೆ ವಿಧಿಸಿದ್ದ ನಿರ್ಬಂಧಗಳನ್ನು ಸಡಿಲಿಸಲಾಗಿದ್ದು, ಹೊಸ ಎಸ್‌ಒಪಿ ಮಾರ್ಗಸೂಚಿಗಳು ಇದೇ 7ರಿಂದ ಜಾರಿಯಾಗಲಿವೆ.

ಈ ಕುರಿತಂತೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಟಿ.ಜಿ. ಶಿವಶಂಕರೇಗೌಡ ಅವರು ಅಧಿಸೂಚನೆ ಹೊರಡಿಸಿದ್ದಾರೆ. ನಿಯಮಗಳು ಇದೇ 7ರಿಂದ ಮುಂದಿನ ಆದೇಶದವರೆಗೆ ಜಾರಿಯಲ್ಲಿರಲಿವೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಹೆಚ್ಚಿನ ವಿವರಗಳನ್ನು ಹೈಕೋರ್ಟ್‌ನ ಅಧಿಕೃತ https://karantakajudiciary.kar.nic.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ವಾಹನಗಳಿಗೆ ಸ್ವಯಂಚಾಲಿತ ಫಿಟ್ನೆಸ್ ಪರೀಕ್ಷೆ ಕಡ್ಡಾಯ?

ನವದೆಹಲಿ (ಪಿಟಿಐ): ಮುಂದಿನ ವರ್ಷದ ಏಪ್ರಿಲ್‌ನಿಂದ ಜಾರಿಗೆ ಬರುವಂತೆ ವಾಹನಗಳ ಫಿಟ್ನೆಸ್ ಪರೀಕ್ಷೆಯನ್ನು ಸ್ವಯಂಚಾಲಿತ ಫಿಟ್ನೆಸ್ ಕೇಂದ್ರಗಳ ಮೂಲಕ ಪರೀಕ್ಷೆ ಮಾಡಿಸುವುದನ್ನು ಹಂತ ಹಂತವಾಗಿ ಕಡ್ಡಾಯಗೊಳಿಸುವ ಆಲೋಚನೆಯನ್ನು ಕೇಂದ್ರ ಸರ್ಕಾರ ಹೊಂದಿದೆ.

ಸ್ವಯಂಚಾಲಿತ ಫಿಟ್ನೆಸ್ ಕೇಂದ್ರಗಳ ಮೂಲಕ ಪರೀಕ್ಷೆಯನ್ನು ಕಡ್ಡಾಯಗೊಳಿಸುವುದಕ್ಕೆ ಸಂಬಂಧಿಸಿದಂತೆ ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸಾರ್ವಜನಿಕರ ಅಭಿಪ್ರಾಯ ತಿಳಿಸುವಂತೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಪ್ರಾಧಿಕಾರವು ಶುಕ್ರವಾರ ಹೇಳಿದೆ.

ಕರಡು ಅಧಿಸೂಚನೆಯ ಪ್ರಕಾರ, ಸರಕು ಸಾಗಣೆಗೆ ಬಳಸುವ ಭಾರಿ ವಾಹನಗಳಿಗೆ ಹಾಗೂ ಪ್ರಯಾಣಿಕರ ಬಳಕೆಯ ಭಾರಿ ವಾಹನಗಳಿಗೆ ಸ್ವಯಂಚಾಲಿತ ಫಿಟ್ನೆಸ್ ಕೇಂದ್ರಗಳ ಮೂಲಕ ಪರೀಕ್ಷೆಯು 2023ರ ಏಪ್ರಿಲ್ 1ರಿಂದ ಕಡ್ಡಾಯವಾಗಲಿದೆ. ಮಧ್ಯಮ ಪ್ರಮಾಣದ ಸರಕು ಸಾಗಣೆ ವಾಹನಗಳಿಗೆ ಹಾಗೂ ಮಧ್ಯಮ ಪ್ರಮಾಣದ ಪ್ರಯಾಣಿಕ ವಾಹನಗಳಿಗೆ ಮತ್ತು ಸರಕು ಸಾಗಣೆಯ ಲಘು ವಾಹನಗಳಿಗೆ ಇದು 2024ರ ಜೂನ್ 1ರಿಂದ ಅನ್ವಯವಾಗಲಿದೆ. ವಾಣಿಜ್ಯ ಹಾಗೂ ವೈಯಕ್ತಿಕ ಬಳಕೆಯ ವಾಹನಗಳಿಗೆ ಸ್ವಯಂಚಾಲಿತ ಫಿಟ್ನೆಸ್ ಕೇಂದ್ರಗಳಿಂದ ಫಿಟ್ನೆಸ್ ಪ್ರಮಾಣಪತ್ರ ಪಡೆಯುವುದನ್ನು ಮುಂದಿನ ದಿನಗಳಲ್ಲಿ ಕಡ್ಡಾಯಗೊಳಿಸಲಾಗುತ್ತದೆ ಎಂದು ಸಾರಿಗೆ ಮತ್ತು ಹೆದ್ದಾರಿ ಕಾರ್ಯದರ್ಶಿ ಗಿರಿಧರ ಅರಮನೆ ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸೈಟುಗಳು ಮಾರಾಟಕ್ಕಿವೆ
ನೆಲಮಂಗಲ To **ದೊಡ್ಡಬಳ್ಳಾಪುರ ರಸ್ತೆ**
DC Converted 20X30 Site ರೂ. 3 ಲಕ್ಷಕ್ಕೆ
Ready for Registration & Construction
Call: 88840 00161

REAL ESTATE SELLING

Sites

Anjanapura

ANJANAPURA BDA Site 3rd A Block 40x60 North 40 feet Road Near Royal Park Mangalya. JP.Nagar 9th Phase 40x30: 9845286583

SALE BDA 40x60 Anjanapura 2nd block commercial 80feet Road Rate 1.35Cr also 8th Block North facing 95 lakh Negotiable. 9620041313/ 9945373839

SALE BDA 30x40 Anjanapura 12 Block near Banneragatta Road, East facing 7500/-, also 20x30 2nd block 30 lakh. 9880708049/ 9620041313

Banashankari

"BANASHANKARI 6TH Stage BDA Site's 50x80, 40x60, 30x40, 20x30 Selling and Buying Contact: 9845146725/ 9741466369"

BANASHANKARI 6TH Stage, Anjanapura, Vishweswaraiah Layout, BDA/A Katha 20x30, 30x40, 40x60, 50x80, BUYING/ SELLING, IMMEDIATE SETTLEMENT. SHIVARAJU: 9845390290, 9591369367.

SALE BDA 30x40 BSK 6th stage 9th Block west facing Rate 64 lakh also 20x30 south facing 30feet Road 39 lakh. 9945373839/ 9620041313

AVAILABLE/ WANTED BDA Sites, Banashankari 6th Stage, Anjanapura 20x30, 30x40, 40x60, 50x80, Buyers/ Sellers: 9901033573

AVAILABLEBDA SITES Banashankari 6th Stage,7th Block, 50x80, East/ 4th H'Block,20x30, North: 9845051646

BANASHANKARI 6TH Stage 2nd Block North 40x60 Allotti Site, Opposite 40 Feet Road, 9972720488/ 9880448478.

BANASHANKARI 6TH Stage, 4th T'Block 40x60, East Site Sale, Near Talagattapura Metro Station:9663393533

COMMERCIAL BUILDING For Sale or Rent
at Opp Metro cash & carry, RV Engineering College, Mysore Road, Highway
25000 sqft Carpet area 21000 Build up area also can be extended up to 20000 sft
Ideal for Car Showroom, Hospitals, Garments, MNCs , IT Companies, Supermarket etc.



8884822277 / 9972679666

AVAILABLE WANTED Banashankari 6th stage BDA/BDA Approved Sites Commercial and Residential 30x40, 40x60, 50x80, Jayanagar Housing society 30x60,40x60, 'Buyers/Sellers' Asset marketZ Manoj: 9686201071 Pramod 9845388803

BANASHANKARI 6TH Stage, BDA SITES 50X80, 40X60, 30X40, 20X30 Buying/ Selling, Immediate Settlement. 9845675290, 8660546182.

BANASHANKARI 6TH Stage 9th Block North 50x80 Commercial, First Allotti, 100 Feet Road, 9972720488/ 9880448478.

Hennur

ARKAVATI LAYOUT 20th Block: 50x80 West Facing Site for sale. Very Good Location. Contact: 9916788892

Jayanagar

JAYANAGAR 3RD Block 40x60, ResidentialSite,East Rs.26000/-Nr NMKRV College, JPNagar 5th Phase 30x40,East 2BHK, 3units Rs.2.10cr Nr Nandini Hotel: 9845600007 /9845704509,

Kumaraswamy Layout

"COMMERCIAL SITE Sale Kumaraswamy Layout 30x40 North Top Location 14250/- P.sft 'Sri_Ganesh_Estates'- 9845286505"

EXCELLENT BUSINESS OPPORTUNITY
For Retired, Housewives, CA's, Doctors, MLM, Real Estate Consultant, Lecturers/ Professor's, Banking Financial & Services, Chit Fund/ Mutual Fund Agents, VRS, NRI'S Self Employed, Business Owners, Professionals etc.
India's Most trusted, Leading 153 Year old MNC Company offers service oriented DISTRIBUTION with Zero investment
Address: Beside Indiranagar Metro Station 2nd Floor, Above RBL Bank, Bengaluru-38
Ph : 9916588854 / 8919491856

Kanakapura Road

SITE FOR Sale Harohalli to Bidadi main road Industrial area first phase. Contact No. 9148979877

BANASHANKARI 6TH Stage, 4th TBlock, 40x60, W/F, And 50x100, E/F, Narayananagar, Sites Sale 8884707773/ 9513004587.

Magadi Road

SITES FOR SALE
@ Tavarekere Town BMRDA 'A' Katha
Sites Available
Ready for Registration & Construction
Bank loan Available...
Contact
9535311817 / 7650076571

Manyata Tech Park

MANYATA RESIDENCY Hebbal 80x120 site east facing sale 11,500 psqftNegotiable. Contact. Malnad. 9844092859/ 9632377775

Nagarabhavi

30X50 WEST Facing, BDA Site SALE, Nagarabhavi 2nd Stage, 9th Block, 10,500/- PSqft. Direct Allottee. Brokers Excuse. OWNER: 7483814977, 9742845807.

40X60 W/F, Rajajinagar Co-Opertative Society, Near D Group, Nagarabhavi, 40 Feet Road, 8,500/- PSqft. 9980409820.

SALE NAGARBAVI, ITI, Chandra Layout BDA 30x40 Ground Parking, Lift, Room 1st, 2nd, 3rd, Triplex 4 BHK Fully Furnished, Italian Marble: 9663746333/ 9449812176

"RAILWAY LAYOUT (Bhavaninagar) 2nd Stage 30x40 East BDA Site Opp. RTO Office, Immediate Registration. 9448432633"

Nelamangala

BMRDA APPROVED 1000 SITES SALE NELAMANGALA. 1 KMS FROM NH4 PRIZE 1500/ SQFT: 9535555699/ 9986170790

SALE: 40X60 Site at BEL Layout Near BGS International School, Nelamangala. Call: 9845048051/ 9916922404

Out-Station

MANDYA:PRIME RESIDENTIAL SITE 100x60ft for sale in BandiGowda Layout, Mandya. Contact 8861131536

Ramanagar

RESIDENTIAL CONVERTED Site For Sale Near Ramanagar, 0.5km from Highway, 10890 Sqft, 1350/- P.Sq.ft. Clear Title. Owner- 9900115519.

Sarjapur Road

SARJAPUR TOWN, Re-sale 40x60 Villa Sites, Well planned Vast Cosmopolitan Gated Community with amenities, Fastest Growing Residential Area,very close to up-coming Tech-Centers, BMRDA Approved, E-Khatha, Rs.1800/-per.sft. Bank Loans Available. Contact RAANA JI - 8880 393939

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BUY 30X40/ 40x60 SITES. Just Pay 1 Lakh Remaining From Bank Loan. Good Appreciation. Approved Layout. Best Investment Opportunity: 9606037596

Uttarahalli

"30X72 NORTH Facing A Khatha Site for Sale Near Shanthi Sagar Uttarahalli Main Road. 9019533999"

Vishweshwariah Layout

AVAILABLE BDA Vishveswaraya Layout 2nd Block 30x40. North Facing 6th Block 20x30 South Facing Full Development Place: 9481703468

AVAILABLE BDA 2 Sites Vishweshwariah Layout 1st Block 40X60 EF, 50X80 West 60feet Road Genuine Buyers: 9743381719

SITE SALE in Railway Layout 1st Stage, 30x40 Site Sale WF, Site #440 & Railway Layout 2nd Stage, House Sale Very Good Location Opposite Park: 8310003509

BDA, VISHWESHWARAIAH Layout, 1st Block, 30x40, EF, 5500/- Negotiable, 4th Block, 30x40, NF, 5100/- Negotiable. 9945266212

Flat

Banashankari

BANASHANKARI 2ND Stage, Ready to Move 3 BHK Deluxe Flat, Full Interiors, 2200 Sqft. Marble Flooring, 2 Car-parking. SALE. 9448018340, 9620249988.

Bommasandra

LOOKING FOR BUILDERS/ INVESTORS For Bulk Booking in Eletronic City Bommsandra, 80% Project Completed in Prime Location Surrounded in 600 Companies & Metro Station with RERA & BMRDA Approved, A Katha with 1/ 2/ 3 BHK Apartment with Assured Profit. Contact: 9108910278/ 9741832215

Hebbal

AMRUTHNAGAR FLAT for Sale 2 BHK with Carparking, First Floor, 54,00,000/- Negotiable. Mail: durga824@gmail.com

Kanakapura Road

3-BHK FLAT Sale:- 1575 Sq.ft, Fully Furnished 68,00,000/- Off Kanakpura Road, Konankunte, Near Junior Delhi Public School- 9611144096/ 9343722162.

WANTED
Industrial Converted Land Building on Mysore Road
Garment equipment manufacturing company is looking for a 1 to 2 Acre KIADB/ Industrial converted land with power and wide roads for heavy vehicle movement for outright purchase or on Long term land Lease.
Interested parties with clear land titles can get in touch with us: Call: 99011-11077
Mail: Gururaj@gokaldaslifestyle.com

Malleshwaram

"2&3BHK FLATS for sale at Malleshwaram Link Road, Ready to Occupy for more details Contact: 9901556699/ 9902333355"

SALE 3BHK apartment 1750sft Renaissance Park-3, MalleshwaramWest. 2 Crores negotiable. Contact:9342139450

Marathahalli

PRESTIGE JADE PAVILION, Semi furnished unit, 3 BHK, Area- 1933 sft for resale with all amenities. For details call:- Mr. Jibran- 9945039194

Ombr Layout

3 BHK, 1825 sqft, First Floor, North facing, OMBR Layout, semifurnished, excellent woodwork, stone clad wall, bore and cauvery water, ready to move, contact: 9845188990

ಸೈಟುಗಳು ಮಾರಾಟಕ್ಕಿವೆ
ಹೆಸರಘಟ್ಟ
20x30 ಕೇವಲ 3 ಲಕ್ಷಕ್ಕೆ
8880660099

Sadashiva Nagar

3 & 4 BHK Premium Luxury Flat, Sale, Built-up, 3000 to 4000sqft , 9945939049/ 7899356649

Wilson Garden

WILSON GARDEN 7th Cross, 3BHK Luxury flat for sale, 1650 sftwith high-end interior, With 2 carpark 500 mtrs from Metro station, 2.40 Crores. Call: 8884855000.

DH DECCAN HERALD ಪ್ರಜಾವಾಣಿ

BOOK YOUR REAL ESTATE



Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

House

Jakkur

SALE 4BHK Triplex on 30x50 North Facing site 40' Road, JAKKUR PLANTATION 2,75,00,000/-. 9590893080

Jayanagar

SALE, JAYANAGAR 9th Block,30x40, Semi-commercial South facing, 3 floors building, 60'Road, excellent location, 3,50,00,000/- Genuine buyers Call.,Owner Kumar- 9980056670.

40X54 SITE With Old HOUSE SALE, Jayanagar 8th Block, Near R.V. Metro Station. 40,000/- PSqft. Brokers Excuse. OWNER: 9449115237, 080-22442063.

JAYANAGAR 9TH block 30x50, West, old house- 20,000/-, 3rd Block 40x50, West -23,000/- residential- 9845144365.

SALE 40X40 South West Corner Excellent Location 5th Block Jayanagar 60feet Road: 9611844667 8123515830

SALE 40X60 Jayanagar 4th T.Block East,Facing With old House on,40fet Road Excellent Location 9066399102 9844134068

Kengeri

HOUSE FOR Sale 25x40, BDA, West Facing,25 Square,1BHK & 4BHK,House at Kengeri Satellite town Near Metro Station Mysore Road. Rs.1.60Cr Negotiable Contact Nagalinga: 7019009272, 9743378744 Shivakumar: 9845875555

Kumaraswamy Layout

NEW BUILDING for sale, BDA Kumarswamy layout. 25x40 GF 1 BHK, First and Second 2 BHK 3rd Floor 3 BHK Duplex with lift Contact: 9035279845 Price- 2.70CR

Kanakapura Road

INDEPENDENT 20X31, BKhata 3BHK,Triplex, 20Square, 90L, /500sft , BDA,N/W Corner 3BHK,Triplex 95L, 2200Sft,3BHK, 4th Floor,Floorwise Flat,1.50cr: Yalechenahalli Metro: 9845251715

Nagarabhavi

SALE NEW 5 BHK Duplex House Built on 40x60 Site East Facing, 5 Car-Parking with office Room, Servent Room, Landscaped Garden, Full Teak, Good Interiors, Atteched NGEF Layout, Mallathhalli Nagarbhavi Price 3.5 Cr Negotiable: 9606323666

R T Nagar

SALE 18 sqrs, 3 Floor Building, Prime Location Ex-Servicemen Colony, R.T. Nagar. A- Khata Corporation. Monthly Rent 42,000/-. Contact Genuine Buyers, Brokers Excuse- 8151913535 /9972677520

Vishweshwariah Layout

SALE: NEAR AMMA ASHRAM NAGADEVANAHALLI 20X42 BBMP 'A'-KHATHA EF INDIPENDENT & DUPLEX HOUSE- 9845021795/ 9980733501

NEWLY CONSTRUCTED Architect designed triplex house for sale in BDA site VishveshwariahLayout 3rd Block contact: 9880745310

Industrial & Factory

Rajajinagar

FOR SALE EAST facing Industrial land measuring 1289-sq.ft. at KSSIDC, Indl. Estate, Rajajinagar 6th Block available for sale. Interested parties may contact 9845055775

Residential/ Commercial

Out-Station

B.C.ROAD,BANTWAL CLOSE to KSRTC bus stop and NH,newly built 5 Units of 2BHK apartments built on 9 cents land. Ideal for service apartments/Guest House/Hostel. 9945333814.

Villas/Bunglows

Sahakarnagar

FOR SALE PROPERTY WITH FABULOUS HOUSE SAHAKAR NAGAR BANGALORE SITE 1596 12Th MAIN B BLOCK 2KM FROM BRIGADE OPUS MAIN AIRPORT ROAD 40X60 PLOT SOUTH FACING ABOUT 4100 Sft BUILT UP BANGALOW THREE FLOORS FULLY FURNISHED CONTACT AGENT KRISHNA MURTHY 8277305783 BROKERS PLEASE EXCUSE.

PUBLIC NOTICE

NITTE EDUCATION TRUST
NITTE MEENAKSHI INSTITUTE OF TECHNOLOGY
Yelahanka, Bengaluru - 560064.
Tenders are invited for the College Canteen Services from parties who have experience in educational institutions. Compliance to statutory requirements is expected.
Applications may be sent to : principal@nmit.ac.in within 10 days
PRINCIPAL

PUBLIC NOTICE

Notice is hereby given to the general public that my client is negotiating to purchase all that immovable property described in the Schedule hereunderfrom its present owners (1) Mr. Shafi Ullah Khan, son of late Mr. Abdul Sattar Khan, residing at No.13, Garden Layout 26th Cross, 24 Main, HSR Layout Sector 2, Bangalore-560102, (2) Mr. Rafiulla Khan, son of late Mr. Abdul Sattar Khan, residing at No 226, 8th E Main,Kalyan Nagar, 1" Block, HRBR Layout,Bangalore-560043, (3) Mrs. Farkunda Akthar, wife of late Mr. Ahmed Ulla Khan,(4) Mr. Aleem Ulla Khan son of late Mr. Ahmed Ulla Khan and (5) Mr. Rayhan Ullah Khan, son of late Mr. Ahmed Ulla Khan, Serial Nos (3) to (4) are residing at No.1006/D, 17" E Cross, Indiranagar 2nd Stage, Bangalore-560038,who are representing that they are the absolute joint owners of the Schedule property and other than themselves no other person's have any right, title, interest orcharge over the Schedule property.

Any person's having any claims, right, title, interest by way of inheritance, sale,mortgage, transfer, lease, tenancy, lien, charge, maintenance, easement, gift, exchange, possession of encumbrances objection or otherwise in whatsoever manner may intimate/lodge his/her/their/objections with relevant documentary proof to the under signed at the address given below within **TEN DAYS** from the date of publication of this notice, failing which any claims from any party's shall be waived of for all legal purposes and will be presumed that no other person's has got any claim, right, title, interest or charge over the schedule property andmy client will proceed to complete the Sale transaction

SCHEDULE

All that piece and parcel of the immovable property being land with building bearing site No.1006/D, Present Municipal Corporation No.1006/D, PID No **82-24-1006/D,** formed by the Bangalore Development Authority, situated at Binnamangala 2nd Stage, in the Corporation Ward No.82, New Ward No.80Bangalore and bounded on the
East by: Site bearing No.1005/D);
West by: Site bearing No.1007/D;
North by: Site bearing No.1006/C; and
South by: Road
measuring East to West, 30 Feet Northto South 40 feet, in all measuring a totalExtent of 1200 square feet, together with a Ground Floor, First Floor and Second Floor residential building having a total built up are of about 2650 square feet.

Bangalore **A. NAGARAJA.**
Dated -05/02/2022. **Advocate,**
No. 6, KHB Buildings. II Block
13th Cross,Indiranagar II Stage
Bangalore-560038
Ph.9448067511.

MORE Classifieds IN SUPPLEMENT

AADITYA GARDEN
Only Few Sites are Available
BBMP 'A' Khata Sites
Anjanapura
Few Mins. Drive from B.G Road & Kanakapura Road
Best Offer Price ₹4250/-Per Sqft Negotiable
Within BBMP Limits with DC Conversion
All Class Amenities, Ready to Construct
Plot Sizes : 30x45, 30x50 & 60x40
98455 55547 / 99866 55668

JOB OPPORTUNITIES

Advertising Agency

WANTED OFFICE Boys (Field Work), for advt. agency near Hanumathnagar- 41618530, 9243402739

General

WANTED WELL-EDUCATED COMPUTER OPERATORS and DRIVERS for Car/ Water Tankers in Bangalore. Contact:- 9448171416.

1) DIPLOMA civil ENGINEERS for SITE ENGINEER. 2) PLUMBING SUPERVISORS in and around Bangalore (SSLC minimum with experience) 'HINDUSTAN VENTURES' Phone: 080- 26635458/ 080- 48521742


Multiple Vacancy

REQ, TEAM-LEADER, Telecaller, Backend & Field executive for For Banking Loan collection (salary upto 20,000 to 25,000). direct recruitment to company Contact:- 9620206756, 9620200756.

Teachers/ Professors

ST SOPHIA Convent School (CBSE) Nagarabhavi requires trained experienced Female Nursery teachers, Academic Coordinators and Teachers for the academic year 2022-23 to teach Mathematics, Science, Social science, English, and Hindi for primary and High school. Walk-in interview scheduled on Saturday 19th February 2022 principal@stsophiaconvent.org 9243031872

HOUSE FOR SALE
Sale east facing 50 x 60 ideal homes Society BBMP Site with 3BHK Duplex house Build-up area 4000sqft at 551, 2nd stage, near bank of baroda road, ideal homes layout, RR nagar



Price 11000 per sqft Brokers excuse
8884822277 / 9972679666

Manager

WANTED FRESHERS/ Managers, Looking for passionate people to work for Real Estate with attractive Incentives. Requirements: Driver and 2 Languages. Contact: 9148077694

Marketing & Sales

REQUIRED SALESMEN to work in FMCG food products MNC. Intermediate/graduate having 6 months to 2 years sales experience & good communication skills. Two wheeler, driving license required. Minimum wages, PF ESI + daily allowance and reimbursement of TA. Send resume to svrr@hrchambers.com, 9100917172

NEWLEARNING LADDERS International School. (Near Ramamurthy Nagar Flyover) Requires Staff (Nurto Grade12) NTT, Eng, Kan, Hin, Sanskrit, Math, Sci, SSc,Com, PET, Art & Craft, Music, Lib, Dance, Karate, Admin Good Communication. Bed must & Exp:2-5yrs. Freshers with relevant qualifications can apply. Salary 10k To 30k Per Month Post your resume to: nllis.jobs@gmail.com Ph:080-41158722/622 Mob:9148336658 Walk-ins :-12/02/22

MATRIMONIAL

Brides Wanted

English

HANDSOME PUNJABI 33yr 6' 40L+ seeks alliance from tall educated girl of reputed families: bride480@gmail.com

SALE From 5th to 12th Feb 2022
ANAND JOHNSON The entire world of lingerie..
VESTS-BRIEF-BRA-PANTY-SLIPS-TOWELS
Wallets, Ladies Fancy Bags & Clutches
FLAT 25% OFF
Only @ BRIGHTWAYS WHOLESALERS Since 1957
AVENUE ROAD Ph: 080-22237504 Mob: 9742202223
Shop Online @ www.brightways.in
OPEN ON SUNDAY ALSO

ಕಾಶಿ ವಿಶ್ವನಾಥ ದೇವಸ್ಥಾನದ ಮಾದರಿ ಅಭಿವೃದ್ಧಿಗೆ 'ದೈವ ಸಂಕಲ್ಪ'

'25 ದೇವಾಲಯ ಅಭಿವೃದ್ಧಿಗೆ ₹ 1,140 ಕೋಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರವು 'ದೈವ ಸಂಕಲ್ಪ' ಯೋಜನೆಯಡಿ 'ಎ' ಶ್ರೇಣಿಯ 25 ದೇವಾಲಯಗಳ ಅಭಿವೃದ್ಧಿಗೆ ಯೋಜನೆ ರೂಪಿಸಿದ್ದು, ಇದಕ್ಕಾಗಿ ₹ 1,140 ಕೋಟಿ ವೆಚ್ಚ ಮಾಡಲಾಗುವುದು ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಕಾಶಿ ವಿಶ್ವನಾಥ ದೇವಸ್ಥಾನದ ಮಾದರಿಯಲ್ಲಿ ರಾಜ್ಯದ 25 ದೇವಸ್ಥಾನಗಳನ್ನು ಅಭಿವೃದ್ಧಿಪಡಿಸಲಾಗುವುದು. ಕನಿಷ್ಠ 10 ಎಕರೆ ಜಮೀನು ಹೊಂದಿರುವ ದೇವಸ್ಥಾನಗಳನ್ನು ಈ ಯೋಜನೆಗೆ ಆಯ್ಕೆ ಮಾಡಲಾಗಿದೆ. ಅಲ್ಲಿ ಪಾರಂಪರಿಕ ಶೈಲಿಯ ಕಟ್ಟಡಗಳನ್ನು ನಿರ್ಮಿಸಲಾಗುವುದು' ಎಂದರು.



ಶಶಿಕಲಾ ಜೊಲ್ಲೆ

ಭಕ್ತರಿಗೆ ವಸತಿ ಸೌಕರ್ಯ, ಒಳ ಚರಂಡಿ ವ್ಯವಸ್ಥೆ, ಘನ ತ್ಯಾಜ್ಯ ವಿಲೇವಾರಿ ಘಟಕ, ಬಹುಮಹಡಿ ವಾಹನ ನಿಲ್ದಾಣ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ಘಟಕಗಳು ಸೇರಿದಂತೆ ಹಲವು ಸೌಲಭ್ಯಗಳನ್ನು ಈ ದೇವಾಲಯಗಳಲ್ಲಿ ಕಲ್ಪಿಸಲಾಗುವುದು. ದೇವಸ್ಥಾನಗಳಲ್ಲಿ ಸಂಗ್ರಹವಾಗುವ ವರಮಾನ ಬಳಸಿಕೊಂಡೇ ಈ ಯೋಜನೆ ಅನುಷ್ಠಾನ ಮಾಡಲಾಗುವುದು. ಸರ್ಕಾರದ ಹಣ ಬಳಸುವುದಿಲ್ಲ ಎಂದು ವಿವರಿಸಿದರು.

ದಾನಿಗಳ ನೆರವಿನಲ್ಲಿ ಪ್ರತಿ ಜಿಲ್ಲೆಯಲ್ಲೂ ತಲಾ 10 'ಸಿ' ಶ್ರೇಣಿಯ ದೇವಾಲಯಗಳನ್ನೂ ಅಭಿವೃದ್ಧಿಪಡಿಸಲಾಗುವುದು. ಪ್ರತಿ ವರ್ಷವೂ 1,000 'ಸಿ' ಶ್ರೇಣಿಯ ದೇವಸ್ಥಾನಗಳ ಅಭಿವೃದ್ಧಿಗೆ ನಿರ್ಧರಿಸಲಾಗಿದೆ. ಇದಕ್ಕಾಗಿ ಎಲ್ಲ ಜಿಲ್ಲೆಗಳಲ್ಲೂ ಇರುವ ದೇವಸ್ಥಾನಗಳ ಪಟ್ಟಿಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಉತ್ತರ ಕರ್ನಾಟಕ ಭಾಗದ ಭಕ್ತರ ಬೇಡಿಕೆಯಂತೆ ಆಂಧ್ರಪ್ರದೇಶದ ಶ್ರೀಶೈಲದಲ್ಲಿ ಕೆಲವು ಸೌಲಭ್ಯ ಒದಗಿಸುವ ಯೋಜನೆಯನ್ನು ರಾಜ್ಯ ಸರ್ಕಾರ ಕೈಗೆತ್ತಿಕೊಂಡಿದೆ. ರಾಜ್ಯ ಸರ್ಕಾರವು ಅಲ್ಲಿ ಹೊಂದಿರುವ ಜಮೀನಿನಲ್ಲಿ ₹ 85 ಕೋಟಿ ವೆಚ್ಚದಲ್ಲಿ ಯಾತ್ರಿ ನಿವಾಸ ನಿರ್ಮಿಸಲಾಗುವುದು. ಇದಕ್ಕಾಗಿ ಮೊದಲ ಕಂತಿನಲ್ಲಿ ₹ 45 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು. ಕಾಶಿಯಲ್ಲಿ ರಾಜ್ಯದ ಭಕ್ತರಿಗಾಗಿ ಕೆಲವು ಸೌಲಭ್ಯ ಒದಗಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದಕ್ಕಾಗಿ ಕಾಶಿ ದೇವಾಲಯದ ಸಮೀಪದಲ್ಲೇ ಜಮೀನು ಮಂಜೂರು ಮಾಡುವಂತೆ ಉತ್ತರ ಪ್ರದೇಶ ಸರ್ಕಾರವನ್ನು ಕೋರಲಾಗಿದೆ. ಜಮೀನು ಮಂಜೂರು ಮಾಡಿದ ಬಳಿಕ ಕಾಮಗಾರಿ ಆರಂಭಿಸಲಾಗುವುದು. ಅಯೋಧ್ಯೆಯಲ್ಲೂ ಅಂತಹ ವ್ಯವಸ್ಥೆ ಕಲ್ಪಿಸುವ ಚಿಂತನೆ ನಡೆದಿದೆ. ವಿಧಾನಮಂಡಲ ಅಧಿವೇಶನದ ಬಳಿಕ ಉತ್ತರ ಪ್ರದೇಶ ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ಅಲ್ಲಿಗೆ ಖುದ್ದಾಗಿ ಭೇಟಿನೀಡಿ ಚರ್ಚಿಸಲಾಗುವುದು ಎಂದು ತಿಳಿಸಿದರು.

ರಾಜ್ಯದಿಂದ 12 ಜ್ಯೋತಿರ್ಲಿಂಗಗಳ ಯಾತ್ರೆ ಕೈಗೊಳ್ಳುವವರಿಗೆ ಆರ್ಥಿಕ ನೆರವು ನೀಡುವ ಪ್ರಸ್ತಾವ ಸರ್ಕಾರದ ಮುಂದಿದೆ. ಚಾರ್‌ಧಾಮ್ ಮತ್ತು ಮಾನಸ ಸರೋವರ ಯಾತ್ರೆ ಕೈಗೊಳ್ಳುವವರಿಗೆ ನೆರವು ನೀಡುತ್ತಿರುವ ರೀತಿಯಲ್ಲೇ ಜ್ಯೋತಿರ್ಲಿಂಗಗಳ ಯಾತ್ರಿಕರಿಗೂ ನೆರವು ನೀಡುವ ಚಿಂತನೆ ಇದೆ ಎಂದರು.

'ನೊಂದವರಿಗೆ ನೆರವಾದ ನೆಮ್ಮದಿ ಇದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಸಮಯದಲ್ಲಿ ಪತ್ರಕರ್ತರ ಸಂಕಷ್ಟಗಳಿಗೆ ಸ್ಪಂದಿಸಿದ್ದೇನೆ. ಮೃತರ ಹಲವು ಕುಟುಂಬಗಳಿಗೆ ನೆರವಾದ ನೆಮ್ಮದಿ ಇದೆ' ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಅವರು ತಿಳಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಶಿವಾನಂದ ತಗಡೂರು ಹೇಳಿದ ಕೋವಿಡ್ ಕಥೆಗಳು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, 'ವಿಜಯವಾಣಿ' ಪತ್ರಿಕೆ ಸಂಪಾದಕ ಕೆ.ಎನ್.ಚನ್ನೇಗೌಡ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ವಾರ್ತಾ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಎಚ್.ಬಿ.ದಿನೇಶ್, ಬಹುರೂಪಿ ಪ್ರಕಾಶನದ ಜಿ.ಎನ್.ಮೋಹನ್ ಇದ್ದರು.



ಬಿ.ಎಸ್.ಯಡಿಯೂರಪ್ಪ ಅವರು ಪುಸ್ತಕ ಬಿಡುಗಡೆ ಮಾಡಿದರು. (ಎಡದಿಂದ) 'ವಿಶ್ವವಾಣಿ' ಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್, 'ಕನ್ನಡ ಪ್ರಭ' ಮತ್ತು 'ಸುವರ್ಣ ನ್ಯೂಸ್' ಸಂಪಾದಕ ರವಿ ಹೆಗಡೆ, ಕೃತಿಯ ಲೇಖಕ ಶಿವಾನಂದ ತಗಡೂರು, ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಹಾಗೂ ನಟಿ ಸೋನುಗೌಡ ಇದ್ದಾರೆ

ಆದಿಜಾಂಬವ ಮಠದ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ

'ದಕ್ಕಲಿಗರೊಂದಿಗೆ ವೈವಾಹಿಕ ಸಂಬಂಧ ಬೆಳೆಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾದಿಗರು ದಕ್ಕಲಿಗರೊಂದಿಗೆ ವೈವಾಹಿಕ ಸಂಬಂಧ ಬೆಳೆಸಬೇಕು. ಆ ಮೂಲಕ ಸಾಮಾಜಿಕ ಸಮಾನತೆಯತ್ತ ಹೆಜ್ಜೆ ಇಡಬೇಕು. ಇದಕ್ಕಾಗಿ ಮುಂದಿನ ದಿನಗಳಲ್ಲಿ ದಕ್ಕಲಿಗರ ಹಟ್ಟಿಗಳಿಗೆ ಭೇಟಿ ನೀಡಿ ಜನರಲ್ಲಿ ಪರಿವರ್ತನೆ ತರಲು ಪ್ರಯತ್ನಿಸಲಾಗುವುದು' ಎಂದು ಹಿರಿಯೂರಿನ ಕೋಡಿಹಳ್ಳಿ ಆದಿಜಾಂಬವ ಮಠದ ಷಡಕ್ಷರಮುನಿ ದೇಶಿಕೇಂದ್ರ ಸ್ವಾಮೀಜಿ ಅವರು ತಿಳಿಸಿದರು.

'ದಕ್ಕಲಿಗ ಸಮುದಾಯದ ಸಮಸ್ಯೆಗಳು ಮತ್ತು ಪರಿಹಾರ' ಕುರಿತು ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಸಂವಾದದಲ್ಲಿ ಅವರು ಮಾತನಾಡಿದರು.

'ದಕ್ಕಲಿಗರು ಕೀಳರಿಮೆ ತೊರೆದು ಸುಸ್ಥಿರ ಬದುಕು ಕಟ್ಟಿಕೊಳ್ಳಬೇಕು. ದಕ್ಕಲಿಗರು ಆಹ್ವಾನಿಸಿದರೆ ಅವರ ಕೇರಿಗಳಿಗೆ ಆದಿಜಾಂಬವ ಮಠಾಧೀಶರು ಭೇಟಿ ನೀಡಲಿದ್ದಾರೆ. ಅವರು ಕೂಡ ಮಾದಿಗರ ಕಾಲೊನಿಗೆ ಬರಲಿ' ಅವರು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಎಚ್.ಆಂಜನೇಯ, 'ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ದಕ್ಕಲಿಗರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನಿಸಲಾಗಿತ್ತು. 2018ರಲ್ಲಿ ಒಟ್ಟು 290 ಕುಟುಂಬಗಳನ್ನು ಗುರುತಿಸಲಾಗಿತ್ತು. ಈ ಪೈಕಿ 268ಕ್ಕೂ ಹೆಚ್ಚು ಕುಟುಂಬಗಳಿಗೆ ವೈಯಕ್ತಿಕ ಸಾಲ ಸೌಲಭ್ಯ ನೀಡಲಾಗಿತ್ತು' ಎಂದು ಹೇಳಿದರು.

'ನಾನು ಸಮಾಜ ಕಲ್ಯಾಣ ಸಚಿವನಾಗಿದ್ದಾಗ ದಕ್ಕಲಿಗರಿಗಾಗಿ ಭೂ ಒಡೆತನ ಯೋಜನೆ ಜಾರಿಗೊಳಿಸಲು ಶ್ರಮಿಸಿದ್ದೆ. ಇದಕ್ಕಾಗಿ 235 ಎಕರೆ ಜಮೀನನ್ನೂ ಗುರುತಿಸಲಾಗಿತ್ತು. ಭೂ ಖರೀದಿ ಹಾಗೂ ಹಸ್ತಾಂತರ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಈ ಪ್ರಕ್ರಿಯೆ ಹಾಗೂ ಕಡತ ವಿಲೇವಾರಿಯನ್ನು ಈಗಿನ ಸರ್ಕಾರ ಪೂರ್ಣಗೊಳಿಸಬೇಕು' ಎಂದು ಅವರು ಆಗ್ರಹಿಸಿದರು.

ಆರ್‌ಎಸ್‌ಎಸ್‌ನ ಸಾಮರಸ್ಯ ವೇದಿಕೆಯ ಸಂಚಾಲಕ ವಾದಿರಾಜ್, 'ದಕ್ಕಲಿಗರ ಅಭಿವೃದ್ಧಿಗಾಗಿ ಪಕ್ಷ ಬೇಧ ಮರೆತು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಈ ಸಮುದಾಯದ ಮೂರು ಮಂದಿ ಮಾತ್ರ ಸರ್ಕಾರಿ ಕೆಲಸ ಪಡೆದಿದ್ದಾರೆ. 12 ಮಂದಿಯಷ್ಟೇ ಎಸ್ಸೆಸ್ಸೆಲ್ಸಿ ಪೂರ್ಣಗೊಳಿಸಿದ್ದಾರೆ. ಪಿಯುಸಿ ಮುಗಿಸಿದವರು ಒಂಬತ್ತು ಜನ ಮಾತ್ರ. ವೇದಿಕೆಯು ನಡೆಸಿದ ಸಮೀಕ್ಷೆಯಿಂದ ಇದು ಗೊತ್ತಾಗಿದೆ. ಇದನ್ನು ಸರ್ಕಾರದ ಗಮನಕ್ಕೆ ತರಲಾಗುವುದು' ಎಂದು ತಿಳಿಸಿದರು.

ಹಂಪಿಯ ಮಾತಂಗ ಮಠದ ಮಾತಂಗಮುನಿ, ಕೋಡಿಹಳ್ಳಿ ಆದಿಜಾಂಬವ ಮಠದ ಗುರುಪ್ರಕಾಶ್ ಮುನಿ, ಮಾಗಡಿಯ ಪಾಲನಹಳ್ಳಿ ಮಠದ ಸಿದ್ದರಾಜು ಸ್ವಾಮೀಜಿ, ಎಚ್.ಆರ್.ತೇಗನೂರ್, ಕೆಪಿಎಸ್‌ಸಿ ಮಾಜಿ ಸದಸ್ಯ ದುಗ್ಗಪ್ಪ, ಹೆಣ್ಣೂರು ಲಕ್ಷ್ಮಿನಾರಾಯಣ, ದಾವಣಗೆರೆ ರಾಮಣ್ಣ, ಶಂಕರಪ್ಪ, ಹುಚ್ಚಪ್ಪ, ಕೊಡಿಗೆಹಳ್ಳಿ ನಾಗರಾಜ್, ಸುಬ್ಬರಾಜ್ ಮುಂತಾದವರು ಇದ್ದರು.

'ನದಿ ಜೋಡಣೆ: ತಮಿಳುನಾಡಿಗೆ ಲಾಭ'

ಬೆಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಘೋಷಿಸಿರುವ ನದಿ ಜೋಡಣೆ ಯೋಜನೆಯಿಂದ ಕರ್ನಾಟಕಕ್ಕೆ ಲಾಭವಿಲ್ಲ. ತಮಿಳುನಾಡಿಗೆ ಹೆಚ್ಚಿನ ನೀರು ಹರಿದುಹೋಗಿ ರಾಜ್ಯವೇ ನಷ್ಟವೇ ಆಗಲಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶುಕ್ರವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಕೃಷ್ಣಾ, ಗೋದಾವರಿ, ಪೆನ್ನಾರ್ ಮತ್ತು ಕಾವೇರಿ ನದಿಗಳ ಜೋಡಣೆ ಪ್ರಸ್ತಾವವಿದೆ. ಇದರಿಂದ 347 ಟಿಎಂಸಿ ಅಡಿ ನೀರು ಬಳಕೆಗೆ ಸಿಗಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ತಮಿಳುನಾಡಿಗೆ ಹೆಚ್ಚಿನ ನೀರು ಹರಿದುಹೋಗಿ ಕರ್ನಾಟಕಕ್ಕೆ ಅನ್ಯಾಯವಾಗುತ್ತದೆ. ಯಾವ ನದಿಯಲ್ಲಿ ಎಷ್ಟು ನೀರು ಸಿಗುತ್ತದೆ ಎಂಬ ಮಾಹಿತಿಯನ್ನು ಕೇಂದ್ರ ಸರ್ಕಾರವು ರಾಜ್ಯಗಳ ಜತೆ ಹಂಚಿಕೊಳ್ಳಬೇಕು ಎಂದು ಆಗ್ರಹಿಸಿದರು. 'ಕೇಂದ್ರ ಸರ್ಕಾರವು ಏಕಪಕ್ಷೀಯ ನಿರ್ಧಾರ ಮಾಡಿ, ಅದನ್ನು ರಾಜ್ಯಗಳ ಮೇಲೆ ಹೇರುತ್ತಿದೆ. ಈ ಪ್ರಯತ್ನವನ್ನು ನಾನು ಖಂಡಿಸುತ್ತೇನೆ.

ದಯಾನಂದ ಸಾಗರ ಕಾಲೇಜಿನಿಂದ ವಿವಿಧ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಯಾನಂದ ಸಾಗರ ಪದವಿ ಪೂರ್ವ ಕಾಲೇಜು ವತಿಯಿಂದ 'ಚಂದ್ರಮ್ಮ ಮತ್ತು ಆರ್.ದಯಾನಂದ ಸಾಗರ ಸ್ಮಾರಕ ಪ್ರಶಸ್ತಿ'ಗಳನ್ನು ನೀಡಲು ಹೊಸ ಆವಿಷ್ಕಾರ ಮತ್ತು ಘೋಷವಾಕ್ಯ ರಚಿಸುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ಎಲ್ಲ ಸ್ಪರ್ಧೆಗಳು ಕಿರಿಯರು (9 ಮತ್ತು 10ನೇ ತರಗತಿ) ಹಾಗೂ ಹಿರಿಯರ (ಪ್ರಥಮ ಮತ್ತು ದ್ವಿತೀಯ ಪಿಯು) ವಿಭಾಗಗಳಲ್ಲಿ ನಡೆಯಲಿವೆ.

ಹೊಸ ಆವಿಷ್ಕಾರ ಸ್ಪರ್ಧೆಯಲ್ಲಿ ಭಾಗವಹಿಸುವವರು ಯಾವುದೇ ವಿಷಯದ ಕುರಿತು ವಿಡಿಯೊ ಮಾಡಿ ಕಳುಹಿಸಬಹುದು. ಈ ಸ್ಪರ್ಧೆಯಲ್ಲಿ ತಂಡಗಳಾಗಿಯೂ ಭಾಗವಹಿಸಲು ಅವಕಾಶವಿದೆ.

ಘೋಷವಾಕ್ಯ ರಚನಾ ಸ್ಪರ್ಧೆಯಲ್ಲಿ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳು 'ಬೆಂಗಳೂರಿನ ವೃಷಭಾವತಿ ನದಿಯನ್ನು ಮಾಲಿನ್ಯದಿಂದ ರಕ್ಷಿಸಿ' ಹಾಗೂ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು 'ಪರಿಸರವನ್ನು ಪ್ಲಾಸ್ಟಿಕ್ ಮಾಲಿನ್ಯದಿಂದ ರಕ್ಷಿಸಿ' ವಿಷಯ ಕುರಿತಾಗಿ ಆಕರ್ಷಕ ಘೋಷವಾಕ್ಯಗಳನ್ನು ರಚಿಸಬೇಕು.

ಸ್ಪರ್ಧೆಗಳ ಎಲ್ಲ ವಿಭಾಗಗಳ ವಿಜೇತರಿಗೆ ತಲಾ ₹15 ಸಾವಿರ (ಪ್ರಥಮ), ₹12 ಸಾವಿರ (ದ್ವಿತೀಯ) ಹಾಗೂ ₹10 ಸಾವಿರ (ತೃತೀಯ) ನಗದು ಬಹುಮಾನ ನೀಡಲಾಗುವುದು.

ಸ್ಪರ್ಧಿಗಳು ವಿಡಿಯೊ ಮತ್ತು ಘೋಷವಾಕ್ಯಗಳನ್ನು ಇಮೇಲ್ info-puc@dayanandasgar.edu ವಿಳಾಸಕ್ಕೆ ಫೆಬ್ರುವರಿ 28ರೊಳಗೆ ಕಳುಹಿಸಬೇಕು.

'ಪ್ರಶಸ್ತಿಗೆ ಆಯ್ಕೆಯಾದ ಆವಿಷ್ಕಾರಗಳು ಮತ್ತು ಘೋಷವಾಕ್ಯಗಳನ್ನು ಮಾರ್ಚ್ 22ರಂದು ವಿಶ್ವವಿದ್ಯಾಲಯದಲ್ಲಿ ಪ್ರದರ್ಶಿಸಲಾಗುವುದು. ಅದೇ ದಿನ ಬಹುಮಾನ ವಿತರಣೆಯೂ ನಡೆಯಲಿದೆ' ಎಂದು ದಯಾನಂದ ಸಾಗರ ಪದವಿ ಪೂರ್ವ ಕಾಲೇಜಿನ ನಿರ್ದೇಶಕ ಎಚ್.ಕುಮಾರ್ ಅವರು ತಿಳಿಸಿದ್ದಾರೆ.

ನೋಂದಣಿಗೆ: 9620038938, 9538641740

ಏ. 1ರಿಂದ ಜಿಯೊ ಟ್ಯಾಗ್ ಕಡ್ಡಾಯ

ರಾಮನಗರ: ಗಣಿ ಉತ್ಪನ್ನಗಳನ್ನು ಸಾಗಿಸುವ ವಾಹನಗಳಿಗೆ ಏ.1ರಿಂದ ಜಿಯೊ ಟ್ಯಾಗ್, ಜಿಪಿಎಸ್ ಕಡ್ಡಾಯ ಮಾಡಲಾಗುತ್ತಿದೆ ಎಂದು ಗಣಿ, ಭೂ ವಿಜ್ಞಾನ, ಮಹಿಳಾ, ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ಹೇಳಿದರು.

ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ
ಟಿ.ಬಿ. ವೃತ್ತ ಹತ್ತಿರ, ಚಿಕ್ಕಬಳ್ಳಾಪುರ ರಸ್ತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂರವಾಣಿ ಸಂಖ್ಯೆ: 27622141 ಇ-ಮೇಲ್: amodbpura@gmail.com

ಸಂಖ್ಯೆ:ಸಾ.ಆ.ಡಿಬಿಪಿ/ಹೊ.ಗು.ಗ್ರೂಪ್.ಡಿಟೆಂಡರ್/01/2021-22 ದಿನಾಂಕ: 03-02-2022

ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ ಇಲ್ಲಿಗೆ **2022-23ನೇ ಸಾಲಿಗೆ ನಾನ್‌ಕ್ಲಿನಿಕಲ್ ಮತ್ತು ಗ್ರೂಪ್ 'ಡಿ' ನೌಕರರನ್ನು** ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯುವ ಸಂಬಂಧ ಅಧಿಕೃತ ಸಂಸ್ಥೆದಾರರಿಂದ ಕಾರ್ಯಗತ ಮಾಡಲು ದ್ವಿ-ಲಕೋಟೆ ಪದ್ಧತಿ ಅನ್ವಯ ಕರ್ನಾಟಕ ಪಾರದರ್ಶಕ ನಿಯಮ 1999-2000 ರಂತೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಸಂಸ್ಥೆಗಳು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: **03-02-2022ರ ಸಂಜೆ 4.00 ಗಂಟೆಯಿಂದ** ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **05-03-2022ರಂದು ಸಂಜೆ 4.00 ಗಂಟೆವರೆಗೆ**. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **09-03-2022ರಂದು ಬೆಳಿಗ್ಗೆ 11.00 ಗಂಟೆಗೆ** ಮತ್ತು ಆರ್ಥಿಕ ಲಕೋಟೆ ತೆರೆಯುವ ದಿನಾಂಕ: **11-03-2022ರಂದು ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **www.eproc.karnataka.gov.in** ರ ಮೂಲಕ ಅಥವಾ ಆಸ್ಪತ್ರೆಯ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಸಾಸಂಇ/ಉನಿಕ/ಬೆಂಗ್ರಾಜಿ/406/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 41/2021-22
ದಿನಾಂಕ: 01.02.2022

(ರಸ್ತೆಗಳ ಕಾಮಗಾರಿಗಾಗಿ-ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1ರಂತೆ ಏಕ ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಏಕ-ಲಕೋಟೆ ಪದ್ಧತಿಯಲ್ಲಿ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಸ್.ಸಿ.ಪಿ/ಟಿ.ಎಸ್.ಪಿ ಲೆಕ್ಕ ಶೀರ್ಷಿಕೆಯ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ **2000** ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವವರು ದಿನಾಂಕ: **04.02.2022 ರಿಂದ 14.02.2022ರ ಸಂಜೆ 4.00 ಘಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.

(1) ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕಡೆಯ **ದಿನಾಂಕ: 05.02.2022 (ಸಂಜೆ 3.00 ಘಂಟೆಗೆ ಕಛೇರಿ ವೇಳೆಯಲ್ಲಿ)** (2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 14.02.2022 (ಸಂಜೆ 4.00 ಘಂಟೆಯವರೆಗೆ)** (3) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ : 16.02.2022 (ಬೆಳಿಗ್ಗೆ 11.00 ಘಂಟೆಗೆ).** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಶ್ರೀ.ತಿಮ್ಮರಾಯಪ್ಪ.ಬಿ, ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 350/ಎಂ.ಸಿ.ಎ/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಫಿಪ್ರೋಲ®
ದಿ ಮೀಟ್ ಸೂಪರ್‌ಸ್ಟೋರ್

ಒಂದು ಅತ್ಯುತ್ತಮ ಮೀಟ್
ಸೂಪರ್‌ಸ್ಟೋರ್!
ಈಗ
ನಮ್ಮ ಬೆಂಗಳೂರಿನಲ್ಲಿ!



ಮಟನ್
~~₹789/-~~
₹699/-
ಪ್ರತಿ ಕೆಜಿ



ಚಿಕನ್
~~₹199/-~~
₹169/-
ಪ್ರತಿ ಕೆಜಿ



ಸೀಫುಡ್
ಫ್ಲಾಟ್
20% ಆಫ್



ಮ್ಯಾರಿನೇಡ್ ಮಾಂಸಗಳು
ಫ್ಲಾಟ್
50% ಆಫ್

* ನಿಯಮಗಳು & ಷರತ್ತುಗಳು ಅನ್ವಯವಾಗುತ್ತವೆ.

ತಾಜಾ. ಫ್ರೋಜನ್ ಅಲ್ಲ | ನೀವು ಆರ್ಡರ್ ಮಾಡಿದ ನಂತರ
ಆಗಷ್ಟೇ ಕತ್ತರಿಸಲಾಗುವುದು | ಆ್ಯಂಟಿಬಯೋಟಿಕ್ ಮತ್ತು
ಪ್ರಿಸರ್ವೇಟಿವ್ ಮುಕ್ತ ಮಾಂಸ | ಬೆಂಗಳೂರಿನಾದ್ಯಂತ 90 ನಿಮಿಷಗಳಲ್ಲಿ ಡೆಲಿವರಿ

90 ನಿಮಿಷಗಳು ಡೆಲಿವರಿ | Halal | 26 ಅಂಗಡಿಗಳು ಬೆಂಗಳೂರಿನಾದ್ಯಂತ! | ಡೆಲಿವರಿ ಶುಲ್ಕಗಳಿಲ್ಲ

ಚಿಕನ್, ಮಟನ್, ಸೀಫುಡ್, ಮ್ಯಾರಿನೇಟೆಡ್ ಮಾಂಸಗಳು, ರೆಡಿ-ಟು-ಫ್ರೈ, ಪರ್ಯಾಯ ಮಾಂಸಗಳು.

ಫಿಪೋಲಾ ಅಂಗಡಿಗಳು: ಎಇಸಿಎಸ್ ಲೇಔಟ್ | ಬನಶಂಕರಿ | ಬಿಟಿಎಂ ಲೇಔಟ್ | ಎಲೆಕ್ಟ್ರಾನಿಕ್ ನಗರ | ಹೆಚ್‌ಎಸ್‌ಆರ್ ಲೈಔಟ್ | ಇಂದಿರಾ ನಗರ್ | ಕೆ.ಆರ್ ಪುರಂ | ವರ್ತೂರ್ ರೋಡ್ | ಯಲಹಂಕ/ ಯಶವಂತಪುರ | ಫ್ರೇಜರ್ ಟೌನ್ | ಕಮ್ಮನಹಳ್ಳಿ | ಜಯನಗರ್ | ರಾಜರಾಜೇಶ್ವರಿ ನಗರ್

ಶೀಘ್ರದಲ್ಲೇ ತೆರೆಯಲಿರುವುದು: ಬನ್ನೇರಘಟ್ಟ ರೋಡ್ | ಬೇಗೂರ್ ಮುಖ್ಯ ರಸ್ತೆ | ಚಂದ್ರ ಲೇಔಟ್ | ಹೆಣ್ಣೂರು ಮುಖ್ಯ ರಸ್ತೆ | ಜೆ.ಪಿ.ನಗರ್ | ಕಗ್ಗದಾಸಪುರ | ನಾಗರಬಾವಿ | ಆರ್‌ಟಿ ನಗರ | ಶಿವಾಜಿ ನಗರ್ | ಸರ್ಜಾಪುರ್ ರೋಡ್ | ವೈಟ್‌ಫೀಲ್ಡ್

ಫಿಪೋಲ ಎಕ್ಸ್‌ಕ್ಲೂಸೀವ್ ಸ್ಟೋರ್: ಕೋರಮಂಗಲದಲ್ಲಿ ಶೀಘ್ರದಲ್ಲೇ ತೆರೆಯಲಾಗುತ್ತದೆ

ಚೆನ್ನೈ | ಕೊಯಂಬತ್ತೂರು | ಪುದುಚೇರಿ | ವೆಲ್ಲೂರು | ತಿರುಪುರ್ | ಹೈದರಾಬಾದ್
ಕೊಚಿನ್, ತಿರುವನಂತಪುರಂ ಮತ್ತು ಪುಣೆಯಲ್ಲಿ ಶೀಘ್ರದಲ್ಲೇ ತೆರೆಯಲಾಗುತ್ತದೆ


WWW.FIPOLA.IN
ಈ ವಿಳಾಸಕ್ಕೆ ಆನ್‌ಲೈನ್ ಮೂಲಕ ಆರ್ಡರ್ ಮಾಡಿ

ದಕ್ಷಿಣ ಭಾರತದಾದ್ಯಂತ 60 ಅಂಗಡಿಗಳು

ನಮ್ಮ ಆಪ್ ಡೌನ್‌ಲೋಡ್ ಮಾಡಿ ಕೊಳ್ಳಿ

ಈಗಲೇ ಆರ್ಡರ್ ಮಾಡಿ DUNZO SWIGGY ಕರೆ ಮಾಡಿ ಅಥವಾ 76672 76672

‘ಸಮವಸ್ತ್ರ ನೀತಿ ಪಾಲಿಸಲೇಬೇಕು’



ಎನ್‌. ರವಿಕುಮಾರ್

ಬೆಂಗಳೂರು: ಶಾಲೆ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀತಿ ಇದೆ. ಅದನ್ನು ಎಲ್ಲರೂ ಪಾಲಿಸಲೇಬೇಕು ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎನ್‌. ರವಿಕುಮಾರ್ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಯಾವುದೇ ಸಮುದಾಯದ ವಿದ್ಯಾರ್ಥಿಗಳಾದರೂ ಸರಿ. ನಿಯಮದ ಪ್ರಕಾರ ಸಮವಸ್ತ್ರ ಧರಿಸಿ ತರಗತಿಗಳಿಗೆ ಬರಬೇಕು. ಸಮವಸ್ತ್ರ ನೀತಿಯಲ್ಲಿ ಯಾವ ಧರ್ಮದವರನ್ನೂ ಅವಹೇಳನ ಮಾಡುವ ವಿಷಯವಿಲ್ಲ. ಎಲ್ಲವನ್ನೂ ಸಮಚಿತ್ತದಿಂದ ನೋಡಬೇಕು’ ಎಂದರು.

‘ಹಿಜಾಬ್ ಧರಿಸಿ ತರಗತಿಗೆ ಬರಲು ಅವಕಾಶ ನೀಡಬೇಕೆಂಬ ಬೇಡಿಕೆ ಇಟ್ಟಿರುವ ವಿದ್ಯಾರ್ಥಿನಿಯರನ್ನು ಕೆಲವರು ಪ್ರಚೋದಿಸುತ್ತಿದ್ದಾರೆ. ವಿದ್ಯಾರ್ಥಿನಿಯರು ಮತ್ತು ಅವರ ಹಿಂದೆ ಇರುವವರಿಗೆ ಸ್ಪಷ್ಟವಾಗಿ ಹೇಳುತ್ತೇನೆ, ಈ ರೀತಿ ವರ್ತನೆ ಸರಿಯಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಸಿದ್ದರಾಮಯ್ಯ ಈಗ ಏನು ಬೇಕಾದರೂ ಹೇಳಬಹುದು. ಅವರು ಮುಖ್ಯಮಂತ್ರಿ ಆಗಿದ್ದಾಗಲೂ ಸಮವಸ್ತ್ರ ನೀತಿ ಇತ್ತು. ಬಿ.ಎಸ್‌. ಯಡಿಯೂರಪ್ಪ ಇದ್ದಾಗಲೂ ಇತ್ತು, ಬಸವರಾಜ ಬೊಮ್ಮಾಯಿ ಅವಧಿಯಲ್ಲೂ ಇದೆ. ಅದನ್ನು ಪಾಲನೆ ಮಾಡಲೇಬೇಕು’ ಎಂದರು.

ಮಾರುಕಟ್ಟೆಗಳಲ್ಲಿ ಬೇಡಿಕೆ ಕುಸಿತ • ವ್ಯಾಪಾರವಾಗದೆ ಕೊಳೆಯುತ್ತಿರುವ ಹೂವು

ಹೂವಾಡಿಗರ ಬದುಕು ಬಾಡಿಸಿದ ಕೋವಿಡ್

• ಶಿವರಾಜ ರಾಮನಾಳ

ಬೆಂಗಳೂರು: ‘ಕೋವಿಡ್ ಬಂದ ದಿನದಿಂದಲೇ ನಮ್ಮ ಬದುಕು ಬೀದಿಗೆ ಬಿದ್ದಂತಾಗಿದೆ. ಲಾಕ್‌ಡೌನ್ ಹೇರಿದ ಮೇಲೆ ಉಂಟಾದ ಪರಿಸ್ಥಿತಿ ಈಗಲೂ ಮುಂದುವರೆದಿದ್ದು, ಒಂದು ಹೊತ್ತಿನ ಅನ್ನಕ್ಕೂ ಕಷ್ಟವಾಗುತ್ತಿದೆ...’

ಇದು ಯಶವಂತಪುರದಲ್ಲಿ ಕಳೆದ 20 ವರ್ಷಗಳಿಂದ ಹೂವು ಮಾರುತ್ತಿರುವ ಹನುಮಕ್ಕ ಅವರ ನೋವಿನ ಮಾತು.

ದೇವರ ಗುಡಿ ಸೇರಲು ತವಕಿಸುತ್ತಿರುವ ಮಲ್ಲಿಗೆ, ಸುಗಂಧರಾಜ, ಸಂಪಿಗೆ, ಹೆಂಗಳೆಯರ ಮುಡಿ ಸೇರಲು ಹಾತೊರೆಯುತ್ತಿರುವ ಗುಲಾಬಿ, ಇತರ ಅಲಂಕಾರಕ್ಕೆ ಸಜ್ಜುಗೊಂಡಿರುವ ಚೆಂಡು, ಇನ್ನಿತರ ಹೂವುಗಳ ಮಾಲೆ.. ಇಂದು ಕೊಳ್ಳುವವರಿಲ್ಲದೆ ಕಸ ಸೇರುತ್ತಿರುವ ನೋವಿನಿಂದ ಪರಿತಪಿಸುತ್ತಿವೆ.

ನೀರು ಸಿಂಪಡಿಸಿದ ಹೂವುಗಳ ರಾಶಿ ಒಂದೆಡೆಯಾದರೆ, ಪೈಪೋಟಿಗೆ ಬಿದ್ದಂತೆ ಮಾಲೆ ಕಟ್ಟುವಲ್ಲಿ ನಿರತರಾಗಿರುವವರು ಇನ್ನೊಂದು ಕಡೆ. ಇವು ಬಹುತೇಕ ಹೂವು ಮಾರುಕಟ್ಟೆಗಳಲ್ಲಿ ಕಂಡು ಬರುವ ದೃಶ್ಯ. ಆದರೆ, ಇಲ್ಲಿ ಮೊದಲಿನ ಜೀವಂತಿಕೆ ಇಲ್ಲ.

ಸದಾ ಜನಜಂಗುಳಿಯಿಂದ ಕೂಡಿರುತ್ತಿದ್ದ ನಗರದ ಹೂವು ಮಾರುಕಟ್ಟೆಗಳು ಈಗ ಜನರ ಸುಳಿದಾಟ ಇಲ್ಲದೆ ಬಿಕೋ ಎನ್ನುತ್ತಿವೆ.



ಕೆ.ಆರ್‌.ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ಎದುರು ನೋಡುತ್ತ ಹೂ ಕಟ್ಟುವಲ್ಲಿ ನಿರತರಾಗಿರುವ ವ್ಯಾಪಾರಸ್ಥರು –ಪ್ರಜಾವಾಣಿ ಚಿತ್ರ/ ಅನೂಪ್ ರಾಘ ಟಿ.

ಆದರೆ, ವ್ಯಾಪಾರಿಗಳು ಇಂದಿಗೂ ಪ್ರತಿ ದಿನ ನಸುಕಿನ ಜಾವ ಎದ್ದು ಕೆ.ಆರ್. ಮಾರುಕಟ್ಟೆಗೆ ಹೋಗಿ ಮಣಗಟ್ಟಲೆ ಹೂವು ತಂದು ಮಾಲೆ ಕಟ್ಟುತ್ತಾರೆ. ಹೂವು ತರುವ ಖರ್ಚಿನ ಅರ್ಧದಷ್ಟು ಹಣವೂ ವ್ಯಾಪಾರಿಗಳ ಕೈಸೇರುತ್ತಿಲ್ಲ.

ಸೇವಂತಿಗೆ, ಮಲ್ಲಿಗೆ, ಕನಕಾಂಬರ, ಜಾಜಿ, ಕಾಕಡ, ಗುಲಾಬಿ, ಚೆಂಡು ಮೊದಲಾದ ಹೂವುಗಳನ್ನು ತಂದು ಪೋಣಿಸಿ ಅವುಗಳ ವ್ಯಾಪಾರಕ್ಕೆ ಅಣಿಯಾಗುತ್ತಿದ್ದ ಹೂವು ವ್ಯಾಪಾರಸ್ಥರ ಮೊಗದಲ್ಲಿ ಈಗ ಉತ್ಸಾಹವಿಲ್ಲ. ಬಹುತೇಕ ಸಾರ್ವಜನಿಕರು ಈಗ ಮಾರುಕಟ್ಟೆಗಳಿಗೆ ಹೋಗದೆ ಆನ್‌ಲೈನ್ ಮೊರೆ ಹೋಗಿರುವುದು ಕೂಡ ಹೂವಾಡಿಗರ ಸಂಕಷ್ಟಕ್ಕೆ ಕಾರಣ ಎನ್ನಲಾಗಿದೆ.

ಕೆ.ಆರ್‌.ಮಾರುಕಟ್ಟೆ, ಮಲ್ಲೇಶ್ವರ, ಯಶವಂತಪುರ, ರಾಜರಾಜೇಶ್ವರಿ ನಗರ, ಬಸವನಗುಡಿ, ಗಾಂಧಿ ಬಜಾರ್, ಜಯನಗರ, ಹನುಮಂತನಗರ, ಮೆಜೆಸ್ಟಿಕ್, ರಾಜಾಜಿನಗರ, ಜೆ.ಪಿ. ನಗರ, ಬನಶಂಕರಿ, ಜೆ.ಸಿ. ನಗರ ಮೊದಲಾದ ಪ್ರದೇಶಗಳಲ್ಲಿ ಹೂವು ಮಾರುವವರ ಬೀದಿ ಈಗ ಮೌನ ತಾಳಿದೆ. ದಿನವೆಲ್ಲಾ ಕಾದರೂ ಹೂವು ಖರೀದಿಸುವವರ ಸಂಖ್ಯೆ ಮಾತ್ರ ಬೆರಳೆಣಿಕೆಯಷ್ಟು. ಹೂವು ಮಾರಾಟವಾಗದಿದ್ದರೆ ಎರಡು ದಿನದಲ್ಲಿ ಬಾಡುತ್ತದೆ. ಮರುದಿನ ಮಾರಾಟಕ್ಕೆ ಹೊಸ ಹೂವು ಕೊಂಡು ತರಬೇಕು. ಎಲ್ಲಿಂದ ಹಣ ತರುವುದು? ತುತ್ತಿನ ಚೀಲ ತುಂಬುವುದೂ ಕಷ್ಟವಾಗಿದೆ ಎಂದು ಹೂವು ಮಾರುವವರು ಅಳಲು ತೋಡಿಕೊಳ್ಳುತ್ತಾರೆ.

ಜನರ ಬಳಿ ದುಡ್ಡಿಲ್ಲ. ಅವರೂ ಮಾರುಕಟ್ಟೆಗಳತ್ತ ಬರುತ್ತಿಲ್ಲ. ಈಗ ಬಡ್ಡಿ ಕಟ್ಟಲೂ ಹಣ ದೊರೆಯುತ್ತಿಲ್ಲ. ಬಿಡಲೂ ಕಷ್ಟ, ಮಾಡದೇ ಇರಲೂ ಕಷ್ಟವಾಗಿದೆ. ದಿನದ ಖರ್ಚು, ಬಡ್ಡಿ ಹಣ ಎರಡನ್ನೂ ತೂಗಿಸುವುದು ಕಷ್ಟವಾಗಿದೆ. ಮೊದಲನೇ ಲಾಕ್‌ಡೌನ್‌ಗಿಂತ ಎರಡನೇ ಲಾಕ್‌ಡೌನ್ ಬಹಳ ದೊಡ್ಡ ಹೊಡೆತ ನೀಡಿದೆ ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ ಹೂವು ವ್ಯಾಪಾರಿ ಉಮಾ.

ಮನೆ ಬಾಡಿಗೆ ಕಟ್ಟಬೇಕು. ಮಕ್ಕಳ ಓದು ನಿಭಾಯಿಸಬೇಕು. ಈ ಮೊದಲು ಜೀವನ ನಿರ್ವಹಣೆಗೆ ಆಗುವಷ್ಟು ವ್ಯಾಪಾರವಾಗುತ್ತಿತ್ತು. ಈಗ ಎಲ್ಲವೂ ಕಷ್ಟವಾಗಿದ್ದು ಸಾಲ ಮಾಡಿ ಜೀವನ ನಡೆಸುವಂತಾಗಿದೆ ಎನ್ನುವಾಗ ಉಮಾ ಅವರ ಕಣ್ಣಂಚಲ್ಲಿ ನೀರು ತುಂಬಿತ್ತು.

ಐದು ಸಾವಿರಕ್ಕೆ ಹೂವು ತಂದರೆ ಒಂದು ಸಾವಿರದಷ್ಟು ವ್ಯಾಪಾರ ಆದರೆ ಹೆಚ್ಚು ಎನ್ನುತ್ತಾರೆ ಮಲ್ಲೇಶ್ವರ ಹೂವು ಮಾರುಕಟ್ಟೆಯ ವ್ಯಾಪಾರಿ ಗೋವಿಂದರಾಜು.

ಕೋವಿಡ್ ಬದುಕು ಪ್ರಯಾಸ

ಬದುಕಿಗೆ ಇದೊಂದೇ ಆಸರೆ

‘ರಾತ್ರಿ 9 ಗಂಟೆ ವರೆಗೆ ಇದ್ದರೂ ಅರ್ಧದಷ್ಟು ಹೂವು ವ್ಯಾಪಾರವಾಗದೆ ಹಾಳಾಗುತ್ತಿದೆ. ಒಂದು ದಿನ ತಂದ ಹೂವನ್ನು ಮೂರು ದಿನ ತಾಜಾತನದಿಂದ ಇರುವಂತೆ ನೋಡಿಕೊಂಡು ವ್ಯಾಪಾರ ಮಾಡುವಂತಾಗಿದೆ. ಸಾಲ ಮಾಡಿ ಹೂವು ತರುತ್ತಿದ್ದೇವೆ. ಆದರೆ ಲಾಭ ಎಂಬುದು ಮರೀಚಿಕೆಯಾಗಿದೆ. ಬದುಕಿಗೆ ಇದೊಂದೇ ಆಸರೆ’ ಎಂದು ಯಶವಂತಪುರದ ಹೂವು ವ್ಯಾಪಾರಿ ಮಂಜುಳ ನೋವಿನಿಂದ ಹೇಳಿದರು.

ಜನರು ಹೊರಗಡೆ ಬರಲು ಹೆದರುತ್ತಿದ್ದಾರೆ. ಹೂವು ಮಾರುಕಟ್ಟೆಗಳಲ್ಲೂ ಬೆಲೆ ಹೆಚ್ಚು ಮಾಡಿದ್ದಾರೆ. ಅದನ್ನು ಇಲ್ಲಿ ಮಾರಲು ಹೋದರೆ ಜನರು ಕೊಳ್ಳುತ್ತಿಲ್ಲ. ನಮ್ಮ ಬದುಕು ದಿಕ್ಕುಕಾಣದಂತಾಗಿದೆ

ಗೌರಮ್ಮ, ಬೀದಿ ಬದಿಯ ಹೂವು ವ್ಯಾಪಾರಿ, ಕೆಂಗೇರಿ

ಲಾಕ್‌ಡೌನ್ ಮುಗಿದ ನಂತರವೂ ನಿರೀಕ್ಷಿಸಿದಷ್ಟು ಹೂವಿನ ವ್ಯಾಪಾರವಾಗುತ್ತಿಲ್ಲ. ಮದುವೆಗಳು, ಇತರ ಕಾರ್ಯಕ್ರಮಗಳ ಮೇಲೆ ನಿರ್ಬಂಧಗಳಿರುವುದರಿಂದ ಹೂವುಗಳ ಬೇಡಿಕೆ ಕುಸಿದಿದೆ

ಶ್ರೀಕಾಂತ್, ಹೂವು ಬೆಳೆಗಾರ, ದೊಡ್ಡಬಳ್ಳಾಪುರ

ಸುದ್ದಿ 2 ನಿಮಿಷ


‘ಎಲ್ಲ ರಂಗಗಳಲ್ಲೂ ಮೌಲ್ಯ ಕುಸಿತ’

ಬೆಂಗಳೂರು: ಮೌಲ್ಯಗಳು ಮತ್ತು ನೈತಿಕತೆಯ ಕುಸಿತ ರಾಜಕೀಯ ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ನ್ಯಾಯಾಂಗ, ಕಾರ್ಯಾಂಗ ಸೇರಿದಂತೆ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿಕೊಂಡಿದೆ ಎಂದು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ನೂತನವಾಗಿ ಆಯ್ಕೆಯಾಗಿರುವ ಶಾಸಕರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಶುಕ್ರವಾರ ಭಾಗವಹಿಸಿ ಮಾತನಾಡಿದ ಅವರು, ‘ಚುನಾಯಿತ ಪ್ರತಿನಿಧಿಗಳು ಸಮಾಜದಲ್ಲಿ ಅಭಿಪ್ರಾಯ ರೂಪಿಸುವವರು. ನಾವು ಈಗ ಕೈಕಟ್ಟಿ ಕೂರಬಾರದು. ನೈತಿಕ ಮೌಲ್ಯಗಳ ಕುಸಿತ ತಡೆಗೆ ಪ್ರಯತ್ನ ಮಾಡಬೇಕು’ ಎಂ‘ಸದ್ಯದ ರಾಜಕೀಯ ಸನ್ನಿವೇಶ ಮತ್ತು ಚುನಾವಣಾ ಸುಧಾರಣೆಗಳ ಕುರಿತು ಆತ್ಮಾವಲೋಕನ ಅಗತ್ಯವಿದೆ. ಇದೇ 14ರಿಂದ ಆರಂಭವಾಗುವ ವಿಧಾನಮಂಡಲ ಅಧಿವೇಶದಲ್ಲಿ ಈ ಕುರಿತು ಎರಡು ದಿನಗಳ ಕಾಲ ಚರ್ಚೆಗೆ ಅವಕಾಶ ಕಲ್ಪಿಸುವ ಯೋಚನೆ ಇದೆ’ ಎಂದು ಅವರು ಹೇಳಿದರು.

ಎಲ್ಲೆಡೆಯೂ ಮೌಲ್ಯಗಳ ಕುಸಿತ ಮುಂದುವರಿದರೆ ಸಮಾಜ ಅಧಃಪತನದತ್ತ ಸಾಗುತ್ತದೆ. ಅರಾಜಕತೆಯು ಸಮಾಜವನ್ನು ಆವರಿಸುವ ಅಪಾಯವಿದೆ. ನೈತಿಕ ಮೌಲ್ಯಗಳ ಕುಸಿತದ ಕುರಿತು ಶಾಸಕಾಂಗದ ಒಳಗೆ ಮತ್ತು ಹೊರಗೆ ಗಂಭೀರ ಚರ್ಚೆ ನಡೆಯಬೇಕಿದೆ ಎಂದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದರು.



ಖಾಸಗಿ ವಾಹಿನಿ ಜೊತೆ ಕೃಷಿ ವಿಶ್ವವಿದ್ಯಾಲಯ ಒಪ್ಪಂದ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಕೃಷಿ ತಂತ್ರಜ್ಞಾನಗಳ ಮಾಹಿತಿಯನ್ನು ಶೀಘ್ರವಾಗಿ ರೈತರಿಗೆ ತಲುಪಿಸಲು ಶ್ರಮಜೀವಿ ವಾಹಿನಿ ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಜಿಕೆವಿಕೆ ಆವರಣದಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

‘ಈ ವಿನೂತನ ಪ್ರಯತ್ನದಿಂದ ಅತ್ಯುತ್ತಮ ಕಾರ್ಯಕ್ರಮಗಳು ರೂಪುಗೊಂಡು, ಕೃಷಿ ತಂತ್ರಜ್ಞಾನಗಳು ಸಕಾಲಕ್ಕೆ ರೈತರಿಗೆ ತಲುಪಲಿವೆ’ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ರಾಜೇಂದ್ರ ಪ್ರಸಾದ್ ಹೇಳಿದರು.

ಶ್ರಮಜೀವಿ ವಾಹಿನಿ ಮುಖ್ಯಸ್ಥ ವೆಂಕಟರಮಣ ಹೆಗಡೆ,‘ ಶ್ರಮಜೀವಿ ಟಿ.ವಿ. ಯು ಒಂದು ಒಟಿಟಿ ಮಾಧ್ಯಮ. ‘ಫಾರ್ಮ್ ಟಿ.ವಿ’ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲಿ ಕೃಷಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಉಚಿತವಾಗಿ ವೀಕ್ಷಿಸಬಹುದು’ ಎಂದರು.

ವಿಸ್ತರಣಾ ನಿರ್ದೇಶಕ ಎನ್‌.ದೇವಕುಮಾರ್, ಸಂಶೋಧನಾ ನಿರ್ದೇಶಕ ವೈ.ಜಿ. ಷಡಕ್ಷರಿ, ಕುಲಸಚಿವ ಬಸವೇಗೌಡ ಮತ್ತು ವಾರ್ತಾ ತಜ್ಞ ಕೆ.ಶಿವರಾಮು ಭಾಗವಹಿಸಿದ್ದರು.

ಶಿಫಾರಸು ಆಧಾರದಲ್ಲಿ ಕೋವಿಡ್ ಪೀಡಿತರ ಚಿಕಿತ್ಸೆಗೆ ಶೇ 50ರಷ್ಟು ಹಾಸಿಗೆ ಗುರುತು

ಹಾಸಿಗೆ ಖಾಲಿ: ಗೊಂದಲದಲ್ಲಿ ಖಾಸಗಿ ಆಸ್ಪತ್ರೆಗಳು

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ಕೋವಿಡ್ ಪೀಡಿತರ ಆಸ್ಪತ್ರೆ ದಾಖಲಾತಿ ಶೇ 5 ರಷ್ಟು ಮಾತ್ರ ಇರುವುದರಿಂದ ಸೋಂಕಿತರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ಒದಗಿಸಲಾಗುತ್ತಿದೆ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರಿ ವ್ಯವಸ್ಥೆಯಡಿ ಮೀಸಲಿರಿಸಲಾದ 5000ಕ್ಕೂ ಅಧಿಕ ಹಾಸಿಗೆಗಳು ಖಾಲಿ ಉಳಿದಿದ್ದು, ಅವನ್ನು ಕೋವಿಡೇತರ ಚಿಕಿತ್ಸೆಗಳಿಗೂ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಕೆಲ ದಿನಗಳಿಂದ ಕೋವಿಡ್ ಹೊಸ ಪ್ರಕರಣಗಳ ಜತೆಗೆ ಆಸ್ಪತ್ರೆ ದಾಖಲಾತಿಯೂ ಇಳಿಕೆ ಕಂಡಿದೆ. ನಗರದಲ್ಲಿ 50 ಸಾವಿರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿದ್ದರೂ 356 ಮಂದಿ ಮಾತ್ರ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಮೀಸಲಿಟ್ಟ ಹಾಸಿಗೆಗಳಲ್ಲಿ ಶೇ 7 ರಷ್ಟು ಹಾಸಿಗೆಗಳು ಮಾತ್ರ ಭರ್ತಿಯಾಗಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಗುರುತಿಸಲಾದ 1,133 ಹಾಸಿಗೆಗಳಲ್ಲಿ 1,031 ಹಾಸಿಗೆಗಳು ಖಾಲಿ ಉಳಿದಿವೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿನ 435 ಹಾಸಿಗೆಗಳಲ್ಲಿ 353 ಹಾಸಿಗೆಗಳು ಲಭ್ಯವಿವೆ. ಹೀಗಾಗಿ, ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಸೋಂಕಿತರಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಜನವರಿ ಮೊದಲ ವಾರದ ಬಳಿಕ ಏರಿಕೆ ಕಂಡಿದ್ದರಿಂದ ಸರ್ಕಾರವು ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಸೋಂಕಿತರಿಗೆ ಚಿಕಿತ್ಸೆ ಒದಗಿಸುವ ವ್ಯವಸ್ಥೆ ರೂಪಿಸಿತ್ತು. ಸರ್ಕಾರಿ ಕೋಟಾದಡಿ ಶಿಫಾರಸು ಆಧಾರದಲ್ಲಿ ಚಿಕಿತ್ಸೆ ನೀಡಲು ಶೇ 50 ರಷ್ಟು ಹಾಸಿಗೆಗಳನ್ನು ಮೀಸಲಿಡುವಂತೆ ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿ, ಆದೇಶ ಹೊರಡಿಸಿತ್ತು. ಇದರಿಂದಾಗಿ ಕೋವಿಡ್ ಚಿಕಿತ್ಸೆಗೆ ನಗರದಲ್ಲಿ 5 ಸಾವಿರಕ್ಕೂ ಅಧಿಕ ಹಾಸಿಗೆಗಳು ದೊರೆತಿದ್ದವು. ಸೋಂಕಿನ ತೀವ್ರತೆ ಕಡಿಮೆಯಿದ್ದ ಕಾರಣ ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆ ಹಾಗೂ ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ ಈ ಬಾರಿ ಸಮಸ್ಯೆಯಾಗಲಿಲ್ಲ. ಕೋವಿಡ್ ಎರಡನೇ ಅಲೆಯಲ್ಲಿ ಈ ಹಾಸಿಗೆಗಳ ಸಮಸ್ಯೆಯಿಂದ ಅಧಿಕ ಮಂದಿ ಮೃತಪಟ್ಟಿದ್ದರು.



ಕೋವಿಡ್ ಚಿಕಿತ್ಸೆಗೆ ಮೀಸಲಿರಿಸಲಾದ ಹಾಸಿಗೆಗಳನ್ನು ಅನ್ಯ ಕಾಯಿಲೆಗಳ ಚಿಕಿತ್ಸೆಗೆ ಬಳಸಿಕೊಳ್ಳುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ಮೀಸಲು ಹಾಸಿಗೆಗಳನ್ನು ಶೇ 25 ರಷ್ಟಕ್ಕಾದರೂ ಇಳಿಸಬೇಕು.

ಡಾ. ಪ್ರಸನ್ನ ಎಚ್‌.ಎಂ., ಫನಾ ಅಧ್ಯಕ್ಷ

ಅನ್ಯ ಕಾಯಿಲೆಗಳ ಚಿಕಿತ್ಸೆ ಸಮಸ್ಯೆ: ಅನ್ಯ ಕಾಯಿಲೆ ಹಾಗೂ ತುರ್ತು ಚಿಕಿತ್ಸೆಗಳ ಸಂಬಂಧ ಖಾಸಗಿ ಆಸ್ಪತ್ರೆಗಳಿಗೆ ದಾಖಲಾದವರಿಗೆ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ. ಸೋಂಕು ದೃಢಪಟ್ಟವರಿಗೆ ಅಲ್ಲಿಯೇ ಕೋವಿಡ್ ಚಿಕಿತ್ಸೆಯನ್ನೂ ಮುಂದುವರಿಸಲಾಗುತ್ತಿದೆ. ಒಂದು ವಾರದಲ್ಲಿ 292 ಮಂದಿ ಕೋವಿಡ್ ಪೀಡಿತರು ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ. ಬಹುತೇಕರಿಗೆ ಬೌರಿಂಗ್ ಸೇರಿದಂತೆ ವಿವಿಧ ಸರ್ಕಾರಿ ವೈದ್ಯಕೀಯ ಸಂಸ್ಥೆ ಹಾಗೂ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ನೀಡಲಾಗಿದೆ. ಹೀಗಾಗಿ, ಖಾಸಗಿ ಆಸ್ಪತ್ರೆಗಳು ಗುರುತಿಸಲಾಗಿರುವ ಹಾಸಿಗೆಗಳನ್ನು ಕೋವಿಡೇತರ ಸೇವೆಗೆ ಬಳಸಿಕೊಳ್ಳಲು ಮುಂದಾಗಿದ್ದು, ಸರ್ಕಾರದ ಅನುಮತಿಗೆ ಎದುರು ನೋಡುತ್ತಿವೆ.

‘ಕೋವಿಡ್ ಮೂರನೇ ಅಲೆಯಲ್ಲಿ ಸೋಂಕಿತರಲ್ಲಿ ಹೆಚ್ಚಿನವರಿಗೆ ಆಸ್ಪತ್ರೆ ಚಿಕಿತ್ಸೆ ಬೇಕಾಗುತ್ತಿಲ್ಲ. ಸರ್ಕಾರದ ಆದೇಶದಂತೆ ಶೇ 50 ರಷ್ಟು ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆ ಮೀಸಲಿಟ್ಟಿದ್ದೇವೆ. ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಅಗತ್ಯ ಪ್ರಮಾಣದಲ್ಲಿ ಹಾಸಿಗೆಗಳು ಖಾಲಿಯಿರುವುದರಿಂದ ಸೋಂಕಿತರನ್ನು ಶಿಫಾರಸು ಮಾಡುತ್ತಿಲ್ಲ. ಇದೇ ವೇಳೆ ಅನ್ಯ ಕಾಯಿಲೆಗಳ ಚಿಕಿತ್ಸೆಗೆ ಬರುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಹಾಸಿಗೆಗಳು ಲಭ್ಯವಿದ್ದರೂ ಅವರನ್ನು ದಾಖಲಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ’ ಎಂದು ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್‌.ಎಂ. ಅವರು ತಿಳಿಸಿದರು.

ಸರ್ಕಾರಿ, ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ಹಂಚಿಕೆ

ವಿಧ	ಒಟ್ಟು ಹಾಸಿಗೆ	ದಾಖಲಾತಿ	ಖಾಲಿ
ಸರ್ಕಾರಿ ವೈದ್ಯಕೀಯ ಕಾಲೇಜು	435	79	353
ಖಾಸಗಿ ಆಸ್ಪತ್ರೆ	229	45	182
ಸರ್ಕಾರಿ ಆಸ್ಪತ್ರೆ	1,133	100	1,031
ಖಾಸಗಿ ವೈದ್ಯಕೀಯ ಕಾಲೇಜು	466	132	331

ಕೋವಿಡ್‌ಗೆ ಮೀಸಲಿಟ್ಟ ಹಾಸಿಗೆಗಳ ವಿವರ (ಸರ್ಕಾರಿ ಕೋಟಾ)

ವಿಧ	ಮೀಸಲು	ದಾಖಲು	ಬ್ಲಾಕ್	ಖಾಲಿ
ಸಾಮಾನ್ಯ ಹಾಸಿಗೆ	1,060	100	02	958
ಐಸಿಯು ಹಾಸಿಗೆ	223	97	01	125
ಎಚ್‌ಡಿಯು ಹಾಸಿಗೆ	759	103	05	651
ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ	219	56	00	163

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

17,49,104 ಒಟ್ಟು ಪ್ರಕರಣಗಳು (17,43,065 ನಿನ್ನೆಯ ವಿವರ)

51,645 ಸಕ್ರಿಯ ಪ್ರಕರಣ | 16,80,814 ಗುಣಮುಖ ಆದವರು | 16,644 ಒಟ್ಟು ಸಾವು

ದಿನದ ಏರಿಕೆ: ಹೊಸ ಪ್ರಕರಣ 6,039 | ಗುಣಮುಖ 25,904 | ಸಾವು 15

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್



ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿಯಲ್ಲಿ ಕ್ಯಾನ್‌ಫಿನ್ ಹೋಮ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಗಿರೀಶ್ ಕೌಸಗಿ ಅವರು ಆಂಬುಲೆನ್ಸ್ ಅನ್ನು ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ನಿರ್ದೇಶಕ ಡಾ.ಎಚ್‌.ಎಸ್‌. ಚಂದ್ರಶೇಖರ್ ಅವರಿಗೆ ಹಸ್ತಾಂತರಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್‌19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	38.97 ಕೋಟಿ	4.19 ಕೋಟಿ
ಸಕ್ರಿಯ ಪ್ರಕರಣ	7.52 ಕೋಟಿ	14.35 ಲಕ್ಷ
ಗುಣಮುಖ	30.89 ಕೋಟಿ	4.00 ಕೋಟಿ
ಸಾವು	57.34 ಲಕ್ಷ	5.00 ಲಕ್ಷ
ದಿನದ ಮಾಹಿತಿ — ಹೊಸ ಪ್ರಕರಣ	31.11 ಲಕ್ಷ	1.49 ಲಕ್ಷ
ದಿನದ ಮಾಹಿತಿ — ಗುಣಮುಖ	33.62 ಲಕ್ಷ	2.46 ಲಕ್ಷ
ದಿನದ ಮಾಹಿತಿ — ಸಾವು	12,245	1,072

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 88,171 ಬ್ರಿಟನ್ | 2.55 ಲಕ್ಷ ಅಮೆರಿಕ | 2.74 ಲಕ್ಷ ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು: 2.89 ಕೋಟಿ ಅಮೆರಿಕ | 65.77 ಲಕ್ಷ ಫ್ರಾನ್ಸ್ | 26.18 ಲಕ್ಷ ಬ್ರಿಟನ್

ಎಲ್ಲಿ ಹೆಚ್ಚು ಸಾವು (ಒಟ್ಟು): 1.42 ಲಕ್ಷ ಮಹಾರಾಷ್ಟ್ರ | 56,701 ಕೇರಳ | 37,666 ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 77.68 ಮಹಾರಾಷ್ಟ್ರ | 61.72 ಕೇರಳ | 33.87 ತಮಿಳುನಾಡು

ಭಾರತದ ಕೋವಿಡ್ ಸಂಖ್ಯೆ ವಿವರ: ಶುಕ್ರವಾರ ಬೆಳಿಗ್ಗೆ 8ರವರೆಗಿನ ಮಾಹಿತಿ

ಪ್ರಜಾವಾಣಿ ಗ್ರಾಫಿಕ್ಸ್

ಹಾಸನ ಎಸ್ಪಿ ಮುಖಾಂತರ ನೋಟಿಸ್ ಜಾರಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಆಯ್ಕೆ ಅಸಿಂಧು ಕೋರಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಪ್ರಕರಣದ ಐದನೇ ಪ್ರತಿವಾದಿ ಆರ್‌.ಜಿ.ಸತೀಶ್ (ಕಣದಲ್ಲಿದ್ದ ಪರಾಜಿತ ಅಭ್ಯರ್ಥಿ) ಖುದ್ದು ಸಮನ್ಸ್ ಪಡೆಯಲು ನಿರಾಕರಿಸಿದ್ದಾರೆ.

ಈ ಕುರಿತಂತೆ ಪರಾಜಿತ ಅಭ್ಯರ್ಥಿ ಎ. ಮಂಜು ಪರ ವಕೀಲ ಎಂ.ಆರ್‌.ವಿಜಯಕುಮಾರ್, ಈ ಚುನಾವಣಾ ತಕರಾರು ಅರ್ಜಿ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠಕ್ಕೆ ಶುಕ್ರವಾರ ಪ್ರಮಾಣ ಪತ್ರ ಸಲ್ಲಿಸಿದ್ದಾರೆ. ಇದನ್ನು ಪರಿಶೀಲಿಸಿದ ನ್ಯಾಯಪೀಠ, ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುಖಾಂತರ ನೋಟಿಸ್ ಜಾರಿಗೆ ಆದೇಶಿಸಿ ಇದೇ 14ಕ್ಕೆ ವಿಚಾರಣೆ ಮುಂದೂಡಿದೆ.

ಪ್ರಕರಣದ ಹಿನ್ನೆಲೆ: ’2019ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿ ಸಂಸದರಾಗಿ ಆಯ್ಕೆಯಾಗಿರುವ ಪ್ರಜ್ವಲ್ ರೇವಣ್ಣ ಚುನಾವಣಾ ಅಕ್ರಮ ಎಸಗಿದ್ದಾರೆ. ನಾಮಪತ್ರ ಸಲ್ಲಿಸುವ ವೇಳೆ ತಮ್ಮ ಆಸ್ತಿಯ ಕುರಿತು ನಿಖರ ಮಾಹಿತಿ ನೀಡಿಲ್ಲ. ಆದ್ದರಿಂದ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು‘ ಎಂದು ಕೋರಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಎ.ಮಂಜು ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ’ಅರ್ಜಿ ದೋಷಪೂರಿತವಾಗಿದೆ. ಇದರಲ್ಲಿನ ಲೋಪಗಳನ್ನು ಸರಿಪಡಿಸಲು ಕಾಲಾವಕಾಶ ನೀಡಿದ ನಂತರವೂ ಕಾಲಮಿತಿಯಲ್ಲಿ ಅವುಗಳನ್ನು ಸರಿಪಡಿಸಿಲ್ಲ‘ ಎಂಬ ಅಭಿಪ್ರಾಯದೊಂದಿಗೆ ವಜಾಗೊಳಿಸಿತ್ತು.

ಇದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು. ಈ ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ’ಅರ್ಜಿಯಲ್ಲಿನ ಲೋಪ ಸರಿಪಡಿಸಿ ಅರ್ಜಿದಾರರು ನಿಗದಿತ ನಮೂನೆಯಲ್ಲಿ ಪ್ರಮಾಣಪತ್ರ ಸಲ್ಲಿಸಬೇಕು. ಹೈಕೋರ್ಟ್ ಅದನ್ನು ಪರಿಗಣಿಸಿ ಮರು ವಿಚಾರಣೆ ನಡೆಸಿ ಸೂಕ್ತ ಆದೇಶ ಹೊರಡಿಸಬೇಕು‘ ಎಂದು 2020ರ ಡಿಸೆಂಬರ್ 13ರಂದು ನಿರ್ದೇಶಿಸಿತ್ತು.

‘ಆ್ಯಪ್’ನಲ್ಲಿ ಯುವತಿಯರ ಸ್ನೇಹ: ಬ್ಲ್ಯಾಕ್‌ಮೇಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮಾಧ್ಯಮಗಳ ಮೂಲಕ ಯುವತಿಯರನ್ನು ಪರಿಚಯಿಸಿಕೊಂಡು, ಅವರ ಖಾಸಗಿ ಫೋಟೊ ಹಾಗೂ ವಿಡಿಯೊ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದಡಿ ಅಭಿಷೇಕ್ ಅಲಿಯಾಸ್ ಸುಶಾಂತ್ ಜೈನ್ ಎಂಬಾತನನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಉತ್ತರ ಭಾರತದ ಅಭಿಷೇಕ್, ಆ್ಯಪ್ ಮೂಲಕ ಕೊಡಿಗೇಹಳ್ಳಿ ಯುವತಿಯೊಬ್ಬರನ್ನು ಪರಿಚಯ ಮಾಡಿಕೊಂಡಿದ್ದ. ಅವರ ಖಾಸಗಿ ಫೋಟೊ ಹಾಗೂ ವಿಡಿಯೊ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ಯುವತಿ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.



ಅಭಿಷೇಕ್

‘ಆ್ಯಪ್ ಒಂದರಲ್ಲಿ ಆರೋಪಿ ಖಾತೆ ತೆರೆಯುತ್ತಿದ್ದ. ಅದರ ಮೂಲಕ ಯುವತಿಯರ ಖಾತೆಗಳಿಗೆ ಸ್ನೇಹದ ರಿಕ್ವೆಸ್ಟ್ ಕಳುಹಿಸುತ್ತಿದ್ದ. ಅದನ್ನು ಸ್ವೀಕರಿಸುತ್ತಿದ್ದ ಯುವತಿಯರ ಜೊತೆ ಚಾಟಿಂಗ್ ಮಾಡಲಾರಂಭಿಸುತ್ತಿದ್ದ. ತಾನೊಬ್ಬ ಶ್ರೀಮಂತನೆಂದು ಹೇಳಿಕೊಳ್ಳುತ್ತಿದ್ದ.’

‘ಯುವತಿಯರ ಜೊತೆ ಸಲುಗೆಯಿಂದ ಮಾತನಾಡಲು ಆರಂಭಿಸುತ್ತಿದ್ದ ಆರೋಪಿ, ವೈಯಕ್ತಿಕವಾಗಿ ಭೇಟಿಯಾಗಲು ಕೋರುತ್ತಿದ್ದ. ಹೋಟೆಲ್ ಹಾಗೂ ಮನೆಗಳಲ್ಲಿ ಯುವತಿಯರನ್ನು ಭೇಟಿಯಾಗುತ್ತಿದ್ದ. ಅದೇ ಸಂದರ್ಭದಲ್ಲೇ ಸಲುಗೆಯಿಂದ ವರ್ತಿಸಿ, ಯುವತಿಯರ ವಿಡಿಯೊ ಚಿತ್ರೀಕರಿಸಿಕೊಳ್ಳುತ್ತಿದ್ದ.’

‘ಕೆಲ ದಿನ ಬಿಟ್ಟು ಯುವತಿಯರಿಗೆ ಕರೆ ಮಾಡುತ್ತಿದ್ದ ಆರೋಪಿ, ‘ನಿಮ್ಮ ಫೋಟೊ ಹಾಗೂ ವಿಡಿಯೊ ನನ್ನ ಬಳಿ ಇದೆ. ಕೇಳಿದಷ್ಟು ಹಣ ಕೊಡಬೇಕು. ಇಲ್ಲದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ’ ಎಂದು ಬ್ಲ್ಯಾಕ್‌ಮೇಲ್ ಮಾಡಲಾರಂಭಿಸುತ್ತಿದ್ದ. ಅದಕ್ಕೆ ಹೆದರಿ ಕೆಲ ಯುವತಿಯರು, ಹಣ ನೀಡಿರುವ ಮಾಹಿತಿ ಇದೆ’ ಎಂದೂ ಪೊಲೀಸರು ತಿಳಿಸಿದರು.

‘ಈ ಸಂಬಂಧ ಕೊಡಿಗೇಹಳ್ಳಿ ಯುವತಿ, ಪುರಾವೆ ಸಮೇತ ದೂರು ನೀಡಿದ್ದರು. ಎಚ್‌ಎಸ್‌ಆರ್ ಲೇಔಟ್‌ನಲ್ಲೇ ಆರೋಪಿಯನ್ನು ಬಂಧಿಸಲಾಗಿದೆ. ಆತನಿಂದ ₹ 3.60 ಲಕ್ಷ ನಗದು ಹಾಗೂ ಮೂರು ಮೊಬೈಲ್ ಜಪ್ತಿ ಮಾಡಲಾಗಿದೆ. 10ಕ್ಕೂ ಹೆಚ್ಚು ಯುವತಿಯರಿಗೆ ಆತ ವಂಚಿಸಿರುವ ಮಾಹಿತಿಯೂ ಇದ್ದು, ತನಿಖೆ ಮುಂದುವರಿದಿದೆ’ ಎಂದರು.

ಎಲ್‌ಒಸಿ ವಿವರ ಸಲ್ಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ’ಹ್ಯಾಕರ್ ಶ್ರೀಕಿ ಅಲಿಯಾಸ್ ಶ್ರೀಕೃಷ್ಣ ಅವರ ಸಹೋದರ ಸುದರ್ಶನ್ ರಮೇಶ್ ವಿರುದ್ಧ ಹೊರಡಿಸಲಾಗಿರುವ ‘ಲುಕ್‌ಔಟ್ ಸರ್ಕ್ಯೂಲರ್’ಗೆ (ಎಲ್‌ಒಸಿ) ಸಂಬಂಧಿಸಿದ ಮೂಲ ದಾಖಲೆಗಳನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿ‘ ಎಂದು ಹೈಕೋರ್ಟ್, ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ.

’ನನ್ನ ವಿದೇಶ ಪ್ರವಾಸಕ್ಕೆ ಜಾರಿ ನಿರ್ದೇಶನಾಲಯ (ಇ.ಡಿ) ನಿರ್ಬಂಧ ಹೇರಿರುವುದನ್ನು ರದ್ದುಪಡಿಸಬೇಕು’ ಎಂದು ಕೋರಿ ಸುದರ್ಶನ್ ರಮೇಶ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಿರಿಯ ವಕೀಲ ವಿಕ್ರಂ ಹುಯಿಲಗೋಳ, ’ಲುಕ್ ಔಟ್ ಸರ್ಕ್ಯೂಲರ್ ಗೋಪ್ಯ ದಾಖಲೆಯಾಗಿದ್ದು ನಮಗೆ ಇದರ ವಿವರಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಇದೇ 12ರೊಳಗೆ ನಮ್ಮ ಕಕ್ಷಿದಾರರು ನೆದರ್‌ಲ್ಯಾಂಡ್‌ಗೆ ಹೋಗದಿದ್ದರೆ ಉದ್ಯೋಗ ಕಳೆದುಕೊಳ್ಳಬೇಕಾಗುತ್ತದೆ‘ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ನ್ಯಾಯಪೀಠ, ಕೇಂದ್ರದ ಪರ ವಕೀಲ ಆದಿತ್ಯ ಸಿಂಗ್ ಅವರಿಗೆ, ’ಲುಕ್‌ಔಟ್ ಸರ್ಕ್ಯೂಲರ್ ಮಾಹಿತಿ, ಅರ್ಜಿದಾರರ ಪರ ವಕೀಲರಿಗೆ ಇಲ್ಲವಾದರೆ ಅವರು ಅದನ್ನು ಪ್ರಶ್ನಿಸುವುದಾದರೂ ಹೇಗೆ. ಎಲ್‌ಒಸಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿ‘ ಎಂದು ನಿರ್ದೇಶಿಸಿ ಇದೇ 16ಕ್ಕೆ ವಿಚಾರಣೆ ಮುಂದೂಡಿತು. ಜಾರಿ ನಿರ್ದೇಶನಾಲಯದ ಪರ ವಕೀಲ ಪಿ. ಪ್ರಸನ್ನಕುಮಾರ್ ವಾದ ಮಂಡಿಸಿದರು.

ಮುಖ್ಯಮಂತ್ರಿಗೆ ಹೋಟೆಲ್ ಸಂಘದ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಕಾರಣಕ್ಕೂ ವಿದ್ಯುತ್ ಮತ್ತು ನೀರಿನ ದರ ಹೆಚ್ಚಿಸಬಾರದು ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದೆ.

ಸುಲಲಿತ ವ್ಯಾಪಾರದ ಅಡಿಯಲ್ಲಿ ಎಲ್ಲ ಟ್ರೇಡ್ ಲೈಸನ್ಸ್, ಅಂಗಡಿ ಲೈಸನ್ಸ್ ಮತ್ತು ಎಫ್‌ಎಸ್‌ಎಸ್‌ಎಐ ಲೈಸನ್ಸ್ ಅನ್ನು ಒಂದೇ ಬಾರಿ ಮಾಡಬೇಕು. ಇದರಿಂದ ಪ್ರತಿ ವರ್ಷ ಲೈಸನ್ಸ್ ನವೀಕರಿಸಬೇಕಾದ ಅಗತ್ಯ ಇರುವುದಿಲ್ಲ ಎಂದು ಅಧ್ಯಕ್ಷ ಪಿ.ಸಿ. ರಾವ್ ಮತ್ತು ಗೌರವ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್ ತಿಳಿಸಿದ್ದಾರೆ.

₹ 100 ವಸೂಲಿಗೆ ಮುಂದಾಗಿದ್ದ ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಐಎಸ್‌ಐ ಗುರುತಿಲ್ಲದ ಹೆಲ್ಮೆಟ್ ಧರಿಸಿದ್ದ ಕಾರಣಕ್ಕೆ ಬೈಕ್ ಸವಾರನಿಂದ ₹100 ವಸೂಲಿ ಮಾಡಲು ಮುಂದಾಗಿದ್ದ ಸಂಚಾರ ಕಾನ್‌ಸ್ಟೆಬಲ್ ಪವನ್ ದ್ಯಾಮಣ್ಣನವರ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಈ ಬಗ್ಗೆ ಆದೇಶ ಹೊರಡಿಸಿರುವ ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, ‘ಕಾನ್‌ಸ್ಟೆಬಲ್ ಪವನ್, ಅಧಿಕಾರ ದುರುಪಯೋಗಪಡಿಸಿಕೊಂಡು ದುರ್ನಡತೆ ತೋರಿ ಕರ್ತವ್ಯ ಲೋಪ ಎಸಗಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಇಲಾಖೆ ವಿಚಾರಣೆ ಕಾಯ್ದಿರಿಸಿ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ' ಎಂದಿದ್ದಾರೆ.

ಎಚ್‌ಎಎಲ್ ಏರ್‌ಪೋರ್ಟ್ ಸಂಚಾರ ಠಾಣೆಯ ಕಾನ್‌ಸ್ಟೆಬಲ್ ಪವನ್ ಅವರನ್ನು ಪೋಸ್ಟ್ ಆಫೀಸ್ ವೃತ್ತದಲ್ಲಿ ಶುಕ್ರವಾರ (ಫೆ. 2) ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಬೈಕ್ ಸವಾರನನ್ನು ತಡೆದಿದ್ದ ಪವನ್, 'ಐಎಸ್‌ಐ ಗುರುತಿಲ್ಲದ ಅರ್ಧ ಹೆಲ್ಮೆಟ್ ಹಾಕಿದ್ದಿಯಾ. ಇದಕ್ಕೆ ದಂಡ ಕಟ್ಟಬೇಕು. ಇಲ್ಲದಿದ್ದರೆ, ಬೈಕ್ ಜಪ್ತಿ ಮಾಡುತ್ತೇನೆ' ಎಂದು ಬೆದರಿಸಿದ್ದರು. ನಂತರ, ಸವಾರನಿಂದ ₹100 ಪಡೆದುಕೊಂಡಿದ್ದರು.

ಈ ದೃಶ್ಯವನ್ನು ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿಕೊಂಡಿದ್ದ ಸ್ಥಳೀಯರೊಬ್ಬರು, 'ದಂಡ ಸಂಗ್ರಹಿಸುವ ಅಧಿಕಾರ ಕಾನ್‌ಸ್ಟೆಬಲ್‌ಗೆ ಇಲ್ಲ. ದಂಡ ಏಕೆ ತೆಗೆದುಕೊಂಡಿದ್ದು ?. ಜೊತೆಗೆ, ಐಎಸ್‌ಐ ಗುರುತಿನ ಹೆಲ್ಮೆಟ್ ಕಡ್ಡಾಯ ಬಗ್ಗೆ ಪೊಲೀಸರು ಜಾಗೃತಿ ಮೂಡಿಸುತ್ತಿದ್ದಾರೆ. ಎಲ್ಲಿಯೂ ದಂಡ ಆಗುತ್ತಿಲ್ಲ. ನೀವು ಏಕೆ ₹ 100 ಪಡೆದಿದ್ದು' ಎಂದು ಪ್ರಶ್ನಿಸಿದ್ದರು. ಆಗ ಕಾನ್‌ಸ್ಟೆಬಲ್ ಪವನ್, ಬೈಕ್ ಸವಾರನಿಗೆ ₹100 ವಾಪಸು ಕೊಟ್ಟು ಕಳುಹಿಸಿದ್ದರು.

ಇದೇ ವಿಡಿಯೊವನ್ನು ಸ್ಥಳೀಯರು, ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದರು. ಅದೇ ವಿಡಿಯೊ ಹಂಚಿಕೊಂಡಿದ್ದ ಜನ, ಕಾನ್‌ಸ್ಟೆಬಲ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು.

ವಿಡಿಯೊ ಆಧರಿಸಿ ಕ್ರಮ ಕೈಗೊಂಡಿರುವ ರವಿಕಾಂತೇಗೌಡ, 'ಸ್ಥಳದಲ್ಲೇ ದಂಡ ವಿಧಿಸುವ ಅಧಿಕಾರ ಎಎಸ್‌ಐ ಹಾಗೂ ಅದರ ಮೇಲಿನ ಅಧಿಕಾರಿಗಳಿಗೆ ಮಾತ್ರ ಇದೆ. ಕಾನ್‌ಸ್ಟೆಬಲ್ ಹಾಗೂ ಹೆಡ್ ಕಾನ್‌ಸ್ಟೆಬಲ್‌ಗೆ ಆ ಅಧಿಕಾರವಿಲ್ಲ. ಜೊತೆಗೆ, ಐಎಸ್‌ಐ ಗುರುತಿನ ಹೆಲ್ಮೆಟ್ ಬಗ್ಗೆ ಜಾಗೃತಿ ಮಾತ್ರ ಮೂಡಿಸಲಾಗುತ್ತಿದೆ. ದಂಡ ವಿಧಿಸಲು ಯಾವುದೇ ಆದೇಶ ನೀಡಿಲ್ಲ' ಎಂದಿದ್ದಾರೆ.

ಕೆಲಸಕ್ಕಿದ್ದ ಅಂಗಡಿಯಲ್ಲೇ ₹ 30 ಲಕ್ಷ ಕದ್ದಿದ್ದ

ಬೆಂಗಳೂರು: ಕೆಲಸಕ್ಕಿದ್ದ ಅಂಗಡಿಯಲ್ಲೇ ಹಣ ಕಳವು ಮಾಡಿ ಪರಾರಿಯಾಗಿದ್ದ ಆರೋಪಿ ಗಣೇಶ್ ವರ್ಮಾ ಎಂಬಾತನನ್ನು ಸಿಟಿ ಮಾರ್ಕೆಟ್ ಪೊಲೀಸರು ಬಂಧಿಸಿದ್ದಾರೆ.

‘ರಾಜಸ್ಥಾನದ ಗಣೇಶ್, ಕೆಲ ತಿಂಗಳ ಹಿಂದಷ್ಟೇ ನಗರಕ್ಕೆ ಬಂದಿದ್ದ. ಬಿ.ಕೆ. ಅಯ್ಯಂಗಾರ್ ರಸ್ತೆಯಲ್ಲಿರುವ ಎಲೆಕ್ಟ್ರಿಕಲ್ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಅದೇ ಅಂಗಡಿಯಲ್ಲೇ ₹ 30 ಲಕ್ಷ ಕದ್ದು ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

‘ಎಲೆಕ್ಟ್ರಿಕಲ್ ಅಂಗಡಿ ಮಾಲೀಕ, ಗಣೇಶ್ ಮೇಲೆ ಹೆಚ್ಚು ನಂಬಿಕೆ ಹೊಂದಿದ್ದರು. ಆತನನ್ನು ಒಬ್ಬನೇ ಅಂಗಡಿಯಲ್ಲಿ ಬಿಟ್ಟು ಹೋಗುತ್ತಿದ್ದರು. ಮಾಲೀಕರು ಇಲ್ಲದ ವೇಳೆಯಲ್ಲಿ ಆರೋಪಿ, ಅಂಗಡಿಯಲ್ಲಿದ್ದ ಹಣ ಕಳ್ಳತನ ಮಾಡಿದ್ದ. ಈ ಬಗ್ಗೆ ಮಾಲೀಕ ದೂರು ನೀಡಿದ್ದರು.’

’ಕದ್ದ ಹಣದ ಸಮೇತ ರಾಜಸ್ಥಾನಕ್ಕೆ ಹೋಗಿದ್ದ ಆರೋಪಿ, ಕುಟುಂಬದವರು ಮಾಡಿದ್ದ ಸಾಲ ತೀರಿಸಿದ್ದ. ವ್ಯಾಪಾರವೊಂದನ್ನು ಆರಂಭಿಸಲು ತಯಾರಿ ನಡೆಸುತ್ತಿದ್ದ. ಆತನ ಬಗ್ಗೆ ಮಾಹಿತಿ ಕಲೆಹಾಕಿದ್ದ ಪೊಲೀಸರ ತಂಡ, ರಾಜಸ್ಥಾನಕ್ಕೆ ತೆರಳಿತ್ತು. ಅಲ್ಲಿಯೇ ಆತನನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ಆತನಿಂದ ₹ 27 ಲಕ್ಷ ಜಪ್ತಿ ಮಾಡಲಾಗಿದೆ’ ಎಂದೂ ಪೊಲೀಸರು ತಿಳಿಸಿದರು.



ಆರೋಪಿಯಿಂದ ಜಪ್ತಿ ಮಾಡಲಾದ ನಗದು

ವಿಶ್ವ ಕ್ಯಾನ್ಸರ್ ಜಾಗೃತಿ ದಿನ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಅಗ್ಗದ ದರದಲ್ಲಿ 'ಪೆಟ್ ಸ್ಕ್ಯಾನ್' ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕ್ಯಾನ್ಸರ್ ಪತ್ತೆಗೆ ನೆರವಾಗುವ 'ಪೆಟ್ ಸ್ಕ್ಯಾನ್' ಪರೀಕ್ಷೆಯನ್ನು ಎಲ್ಲರೂ ಅಗ್ಗದ ದರದಲ್ಲಿ ಮಾಡಿಸಿಕೊಳ್ಳಬೇಕು. ಈ ಉದ್ದೇಶದಿಂದ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಎರಡು 'ಪೆಟ್ ಸ್ಕ್ಯಾನ್' ಯಂತ್ರ ಒದಗಿಸಲಾಗುತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಶ್ವ ಕ್ಯಾನ್ಸರ್ ಜಾಗೃತಿ ದಿನದ ಪ್ರಯುಕ್ತ ಆರೋಗ್ಯ ಇಲಾಖೆ ಹಮ್ಮಿಕೊಂಡಿದ್ದ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಶುಕ್ರವಾರ ಮಾತನಾಡಿದರು.

'ಖಾಸಗಿ ಆಸ್ಪತ್ರೆಯಲ್ಲಿ ಒಮ್ಮೆ ಪೆಟ್ ಸ್ಕ್ಯಾನ್ ಮಾಡಿಸಿಕೊಳ್ಳಬೇಕಾದರೆ ಕನಿಷ್ಠ ₹25 ಸಾವಿರ ಶುಲ್ಕ ಪಾವತಿಸಬೇಕು. ಬಡರೋಗಿಗಳು ಇಷ್ಟು ಮೊತ್ತ ಹೊಂದಿಸುವುದು ಕಷ್ಟ. ಇನ್ನು ಮುಂದೆ ಅವರು ₹8 ಸಾವಿರದಿಂದ ₹10 ಸಾವಿರ ಶುಲ್ಕ ನೀಡಿ ಪರೀಕ್ಷೆಗೆ ಒಳಪಡಬಹುದು. ಪ್ರಾಥಮಿಕ ಹಂತದಲ್ಲೇ ರೋಗಲಕ್ಷಣ ಗುರುತಿಸಿ ಸೂಕ್ತ ಚಿಕಿತ್ಸೆ ನೀಡಿದರೆ ಕ್ಯಾನ್ಸರ್ ಅನ್ನು ಸುಲಭವಾಗಿ ಗುಣಪಡಿಸಬಹುದು. ಹೀಗಾಗಿ ಯಾರೂ ಎದೆಗುಂದಬಾರದು' ಎಂದರು.

'ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಮಾದರಿಯಲ್ಲೇ ಪ್ರಾದೇಶಿಕವಾರು ಕ್ಯಾನ್ಸರ್ ಆಸ್ಪತ್ರೆ ಆರಂಭಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಕ್ಯಾನ್ಸರ್ ಪೀಡಿತರು ಔಷಧ ವೆಚ್ಚ ಭರಿಸಲು ಪರದಾಡುವ ಪರಿಸ್ಥಿತಿ ಇದೆ. ಅವರಿಗೆ ಕೈಗೆಟಕುವ ದರದಲ್ಲಿ ಔಷಧಗಳು ಸಿಗುವಂತಾಗಬೇಕು. ಇದಕ್ಕಾಗಿ ಸೊಸೈಟಿಯೊಂದನ್ನು ಸ್ಥಾಪಿಸಲು ಚಿಂತಿಸಲಾಗಿದೆ. ಈ ಸಂಬಂಧ ಕೇಂದ್ರ ಸರ್ಕಾರ ಹಾಗೂ ಔಷಧ ತಯಾರಿಕಾ ಸಂಸ್ಥೆಗಳ ಜೊತೆ ಚರ್ಚಿಸಲಾಗುವುದು' ಎಂದು ತಿಳಿಸಿದರು.

'ಜನೌಷಧಿ ಕೇಂದ್ರಗಳಲ್ಲಿ ಕ್ಯಾನ್ಸರ್ ಔಷಧಗಳು ಕಡಿಮೆ ದರದಲ್ಲಿ ಸಿಗುವಂತಾಗಬೇಕು. ಇದಕ್ಕಾಗಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ತಾಲ್ಲೂಕು ಮಟ್ಟದಿಂದಲೇ ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಮೂಲಕ ಆರೋಗ್ಯ ಕರ್ನಾಟಕ ನಿರ್ಮಿಸುವುದಕ್ಕೆ ಸರ್ಕಾರ ಬದ್ಧವಾಗಿದೆ' ಎಂದು ಹೇಳಿದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕ್ಯಾನ್ಸರ್ ಜನಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಭಿತ್ತಿಪತ್ರ ಬಿಡುಗಡೆ ಮಾಡಿದರು. (ಎಡದಿಂದ) ಸಚಿವ ಡಾ.ಕೆ.ಸುಧಾಕರ್, ಕಂದಾಯ ಸಚಿವ ಆರ್.ಅಶೋಕ, ಶಾಸಕ ಎಂ.ಕೃಷ್ಣಪ್ಪ ಹಾಗೂ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ.ರಾಮಚಂದ್ರ ಇದ್ದಾರೆ–ಪ್ರಜಾವಾಣಿ ಚಿತ್ರ

ಖಾಸಗಿ ಆಸ್ಪತ್ರೆಗಳಲ್ಲಿ ₹25 ಸಾವಿರದಿಂದ ₹28 ಸಾವಿರ ದರ

'ಖಾಸಗಿ ಆಸ್ಪತ್ರೆಯಲ್ಲಿ ಒಮ್ಮೆ ಪೆಟ್‌ಸ್ಕ್ಯಾನ್ ಮಾಡಿಸಿಕೊಳ್ಳಬೇಕಾದರೆ ₹25 ಸಾವಿರದಿಂದ ₹28 ಸಾವಿರದವರೆಗೆ ಶುಲ್ಕ ಪಾವತಿಸಬೇಕು' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಸಿ.ರಾಮಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

'ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದ (ಪಿಪಿಪಿ) ಅಡಿಯಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ₹8 ಸಾವಿರದಿಂದ ₹9 ಸಾವಿರ, ಬಿಪಿಎಲ್ ಕಾರ್ಡ್ ಇಲ್ಲದವರಿಗೆ ಇದಕ್ಕಿಂತಲೂ ₹1 ಸಾವಿರ ಹೆಚ್ಚು ದರ ನಿಗದಿ ಮಾಡಲು ಸರ್ಕಾರ ನಿರ್ಧರಿಸಿದೆ. ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆಯ ಅಡಿ ಸೇರಿಸಿ ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತವಾಗಿ ಪೆಟ್‌ಸ್ಕ್ಯಾನ್ ಸೌಕರ್ಯ ಒದಗಿಸುವ ಚಿಂತನೆಯೂ ಇದೆ' ಎಂದರು.

ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಅಭಿಯಾನ

'ಮಹಿಳೆಯರಲ್ಲಿ ಕಾಣಿಸಿಕೊಳ್ಳುವ ಸ್ತನ ಕ್ಯಾನ್ಸರ್ ಕುರಿತು ವರ್ಷವಿಡೀ ವಿಶೇಷ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ತಾಲ್ಲೂಕು ಮಟ್ಟದಿಂದಲೇ ಅಭಿಯಾನ ಆರಂಭಿಸಿ ಅದನ್ನು ಪರಿಣಾಮಕಾರಿಗೊಳಿಸಬೇಕು. ಸ್ತನ ಕ್ಯಾನ್ಸರ್ ನಿವಾರಣೆ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸಬೇಕು. ಕ್ಯಾನ್ಸರ್ ಚಿಕಿತ್ಸೆಯ ನಂತರವೂ ಆರೋಗ್ಯಕರ ಜೀವನ ನಡೆಸಬಹುದು ಎಂಬುದನ್ನು ಅವರಿಗೆ ಮನದಟ್ಟು ಮಾಡಿಸಬೇಕು' ಎಂದು ತಿಳಿಸಿದರು.

ಬಡತನ ರೇಖೆಗಿಂತ ಕೆಳಗಿರುವವರಿಗಾಗಿ ಸರ್ಕಾರದ ವತಿಯಿಂದ ಕ್ಯಾನ್ಸರ್ ಶಿಬಿರ ಹಮ್ಮಿಕೊಳ್ಳಲಾಗುವುದು. ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವುದು ಶಿಬಿರದ ಉದ್ದೇಶ. ಕಿದ್ವಾಯಿ ಸೇರಿ ಹಲವು ಸಂಸ್ಥೆಗಳು ಇದಕ್ಕೆ ಕೈಜೋಡಿಸಲಿವೆ.

ಡಾ.ಕೆ.ಸುಧಾಕರ್, ಆರೋಗ್ಯ ಸಚಿವ

ಏನಿದು 'ಪೆಟ್ ಸ್ಕ್ಯಾನ್'?

ಪೊಸಿಟ್ರಾನ್ ಎಮಿಷನ್ ಟೊಮೊಗ್ರಫಿ ಎಂಬುದು ಪೆಟ್‌ನ ವಿಸ್ತೃತ ರೂಪ. ಕ್ಯಾನ್ಸರ್ ಕೋಶಗಳು ದೇಹದ ಯಾವೆಲ್ಲಾ ಭಾಗಗಳಲ್ಲಿ ಹರಡಿಕೊಂಡಿವೆ. ಯಾವ ಭಾಗದಲ್ಲಿ ಹೆಚ್ಚು ಕ್ರಿಯಾಶೀಲವಾಗಿವೆ ಎಂಬುದನ್ನು ಪತ್ತೆಹಚ್ಚಲು ಪೆಟ್‌ಸ್ಕ್ಯಾನ್ ಸಹಕಾರಿ. ಖಾಲಿಹೊಟ್ಟೆಯಲ್ಲಿ ರೋಗಿಗೆ ರೇಡಿಯೊ ಆ್ಯಕ್ಟಿವ್ (ರೇಡಿಯೊಟ್ರೇಸರ್) ಚುಚ್ಚುಮದ್ದು ನೀಡಿ ಪೆಟ್‌ಸ್ಕ್ಯಾನ್‌ಗೆ ಒಳಪಡಿಸಲಾಗುತ್ತದೆ. 45 ರಿಂದ 60 ನಿಮಿಷದಲ್ಲಿ ಇಡೀ ದೇಹವನ್ನು ಸ್ಕ್ಯಾನ್ ಮಾಡಲಾಗುತ್ತದೆ. ಕ್ಯಾನ್ಸರ್ ಯಾವ ಹಂತದಲ್ಲಿದೆ ಎಂಬುದನ್ನು ಗುರುತಿಸಲು ಇದು ಸಹಾಯಕ. ಪ್ರಮುಖ ಕ್ಯಾನ್ಸರ್ ಆಸ್ಪತ್ರೆಗಳಲ್ಲಷ್ಟೇ ಈ ಯಂತ್ರ ಬಳಸಲಾಗುತ್ತದೆ.

'ಐಬ್ಯಾಬ್' –ಎಚ್‌ಸಿಜಿ ಸಹಯೋಗದಲ್ಲಿ ಸಂಶೋಧನೆ

ಕ್ಯಾನ್ಸರ್ ವಂಶವಾಹಿ ರೂಪಾಂತರ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಯಿ ಕ್ಯಾನ್ಸರ್‌ಗೆ ಕಾರಣವಾಗುವ 114 ವಂಶವಾಹಿ ರೂಪಾಂತರಗಳನ್ನು ತಜ್ಞರು ಪತ್ತೆ ಮಾಡಿದ್ದು, ಇದರಿಂದಾಗಿ ನಿರ್ದಿಷ್ಟ ಜೀವಕೋಶ ಕೇಂದ್ರಿತ ಚಿಕಿತ್ಸೆ ನೀಡಲು ಸಾಧ್ಯವಾಗಲಿದೆ.

ಎಚ್‌ಸಿಜಿ ತಜ್ಞ ವೈದ್ಯರ ಸಹಯೋಗದಲ್ಲಿ ಸರ್ಕಾರದ 'ಐಬ್ಯಾಬ್' (ಇನ್‌ಸ್ಟಿಟ್ಯೂಟ್ ಆಫ್ ಬಯೊಇನ್‌ಫಾರ್ಮಾಟಿಕ್ಸ್ ಆಂಡ್ ಅಪ್ಲೈಡ್ ಬಯೊಟೆಕ್ನಾಲಜಿ–ಐಬಿಎಬಿ) ಸಂಸ್ಥೆಯು ಈ ಮಹತ್ವದ ಸಂಶೋಧನೆ ಕೈಗೊಂಡು ರೂಪಾಂತರಗಳನ್ನು ಪತ್ತೆ ಮಾಡಿದೆ.

ಕ್ಯಾನ್ಸರ್‌ನಿಂದ ಬದುಕುಳಿಯುವ ಸಾಧ್ಯತೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಪ್ರಮುಖ ವಂಶವಾಹಿಗಳನ್ನು ಸಹ ಈ ಸಂಶೋಧನೆಯಲ್ಲಿ ಗುರುತಿಸಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ವಿವರ ನೀಡಿದ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ, 'ವಂಶವಾಹಿ ಅನುಕ್ರಮಣಿಕೆ ವಿಶ್ಲೇಷಣೆ ಆಧಾರಿತವಾಗಿ ನಡೆದಿರುವ ಈ ಸಂಶೋಧನೆಯು ಬಾಯಿ ಕ್ಯಾನ್ಸರ್ ಚಿಕಿತ್ಸೆಗೆ ಸಂಬಂಧಪಟ್ಟಂತೆ ಹೊಸ ಆಶಾಕಿರಣ ಮೂಡಿಸಿದ್ದು, ಜನರ ಜೀವ ಉಳಿಸಲು ಸಹಕಾರಿಯಾಗಲಿದೆ' ಎಂದರು.

'ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯಿಂದ ಸ್ಥಾಪಿತವಾಗಿರುವ ಐಬ್ಯಾಬ್ ಸಂಸ್ಥೆಯು, ಅತ್ಯಾಧುನಿಕ ಜಿನೊಮಿಕ್ಸ್ ವ್ಯವಸ್ಥೆ ಬಳಸಿ ನಡೆಸಿದ ಸಂಶೋಧನೆ ಇದಾಗಿದೆ. ಜತೆಗೆ, ಸುಧಾರಿತ ಮೆಷಿನ್ ಲರ್ನಿಂಗ್ ಮತ್ತು ಬಯೊಇನ್‌ಫಾರ್ಮ್ಯಾಟಿಕ್ಸ್ ಉಪಯೋಗಿಸಿಕೊಂಡು ಈ ಅಧ್ಯಯನ ನಡೆಸಲಾಗಿದೆ' ಎಂದು ಸಚಿವರು ವಿವರಿಸಿದರು.

'ದೇಶದಲ್ಲಿ ಕ್ಯಾನ್ಸರ್ ಪ್ರಕರಣಗಳಲ್ಲಿ ಶೇ 40ರಷ್ಟು ಬಾಯಿ ಕ್ಯಾನ್ಸರ್ ರೋಗಿಗಳಿದ್ದಾರೆ. ಭಾರತದ ರೋಗಿಗಳನ್ನೇ ಆಯ್ಕೆ ಮಾಡಿಕೊಂಡು ನಡೆಸಲಾಗಿರುವ ಮೊತ್ತಮೊದಲ ವಿಸ್ತೃತ ಅಧ್ಯಯನ ಇದಾಗಿದೆ. ಈ ಅಧ್ಯಯನದ ದತ್ತಾಂಶಗಳನ್ನು ಪಾಶ್ಚಿಮಾತ್ಯ ವಂಶವಾಹಿ ಅಧ್ಯಯನಗಳ ಜತೆಗೂ ಹೋಲಿಕೆ ಮಾಡಿ ವಿಶ್ಲೇಷಿಸಲಾಗಿದೆ' ಎಂದು ಅವರು ವಿವರಿಸಿದರು.

'ಬಾಯಿ ಕ್ಯಾನ್ಸರ್‌ಗೆ ಕಾರಣವಾಗುವ 114 ವಂಶವಾಹಿ ರೂಪಾಂತರಗಳ ಪೈಕಿ 35 ರೂಪಾಂತರಗಳು ಆಂಕೋಜೀನ್‌ಗಳಾದರೆ, 11 ಟ್ಯೂಮರ್ ಸಪ್ರೆಸರ್‌ಗಳಾಗಿದ್ದು, 2 ಡಿಎನ್‌ಎ ದುರಸ್ತಿ ವಂಶವಾಹಿಗಳಾಗಿವೆ ಎಂಬುದನ್ನು ಗುರುತಿಸಲಾಗಿದೆ' ಎಂದರು.

'ಇಂಗ್ಲೆಂಡ್‌ನ ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ಸೇರಿದಂತೆ ಹಲವಾರು ಅಂತರರಾಷ್ಟ್ರೀಯ ಸಂಸ್ಥೆಗಳು ಈ ಸಂಶೋಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿವೆ. ಪ್ರತಿಷ್ಠಿತ ವೈದ್ಯಕೀಯ ನಿಯತಕಾಲಿಕೆಗಳಲ್ಲಿ ಈ ಕುರಿತು ಅಧ್ಯಯನ ವರದಿ ಪ್ರಕಟಗೊಂಡಿದೆ' ಎಂದು ತಿಳಿಸಿದರು.

ಎಚ್‌ಸಿಜಿ ಕ್ಯಾನ್ಸರ್ ಕೇಂದ್ರದ ಡೀನ್ ಡಾ.ವಿಶಾಲ್ ರಾವ್, 'ರಾಜ್ಯ ಸರ್ಕಾರವು ಚಿಕಿತ್ಸಕರು ಹಾಗೂ ಸಂಶೋಧಕರು ಒಂದೆಡೆ ಸೇರಿ ಅಧ್ಯಯನದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿದ್ದರಿಂದ ಸಂಶೋಧನೆ ಸಾಧ್ಯವಾಗಿದೆ' ಎಂದರು.

'ಇದುವರೆಗೆ ಬಾಯಿ ಕ್ಯಾನ್ಸರ್‌ಗೆ ಉತ್ತಮ ಚಿಕಿತ್ಸೆ ನೀಡಿದರೂ ಶೇ 50ರಷ್ಟು ಪ್ರಕರಣಗಳಲ್ಲಿ ರೋಗ ಮರುಕಳಿಸುತ್ತಿತ್ತು. ಆದರೆ, ಈ ಸಂಶೋಧನೆಯು ರೋಗ ಮರುಕಳಿಸದಂತೆ ಚಿಕಿತ್ಸೆ ನೀಡಲು ಸಹಕಾರಿಯಾಗಲಿದೆ' ಎಂದು ಐಬ್ಯಾಬ್ ಪ್ರಾಧ್ಯಾಪಕರಾದ ವಿಭಾ ಚೌಧರಿ ವಿವರಿಸಿದರು.

ಮೇ 21ರಂದು 'ನೀಟ್–ಪಿಜಿ' ಪರೀಕ್ಷೆ

ನವದೆಹಲಿ (ಪಿಟಿಐ): ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಯನ್ನು (ನೀಟ್–ಪಿಜಿ) ಮೇ 21ರಂದು ನಡೆಸಲಾಗುವುದು ಎಂದು ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಪರೀಕ್ಷಾ ಮಂಡಳಿ (ಎನ್‌ಬಿಇಎಂಎಸ್) ಶುಕ್ರವಾರ ಘೋಷಿಸಿದೆ.

ಈ ಪರೀಕ್ಷೆಯನ್ನು 6–8 ವಾರಗಳವರೆಗೆ ಮುಂದೂಡುವಂತೆ ಕೋರಿ ಕೇಂದ್ರ ಆರೋಗ್ಯ ಸಚಿವಾಲಯವು ಎನ್‌ಬಿಇಎಂಎಸ್‌ಗೆ ಗುರುವಾರ ಪತ್ರ ಬರೆದಿತ್ತು. ಇದರ ಬೆನ್ನಲ್ಲೇ, ಪರೀಕ್ಷಾ ಮಂಡಳಿಯಿಂದ ಈ ಪ್ರಕಟಣೆ ಹೊರ ಬಿದ್ದಿದೆ.

ಈ ಮೊದಲು, ಮಾರ್ಚ್ 12ರಂದು ಪರೀಕ್ಷೆ ನಿಗದಿ ಮಾಡಿ ಅಧಿಸೂಚನೆ ಹೊರಡಿಸಲಾಗಿತ್ತು. ಪರಿಷ್ಕೃತ ಅಧಿಸೂಚನೆಯಂತೆ ಈ ಪರೀಕ್ಷೆಯು ಮೇ 21ರಂದು ಬೆಳಿಗ್ಗೆ 9ರಿಂದ 12.30ರ ವರೆಗೆ ನಡೆಯಲಿದೆ ಎಂದು ಎನ್‌ಬಿಇಎಂಎಸ್ ತಿಳಿಸಿದೆ.

ಅದೇ ರೀತಿ, ನೀಟ್–ಪಿಜಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಮಾರ್ಚ್ 25ರವರೆಗೆ ವಿಸ್ತರಿಸಲಾಗಿದೆ. ಅನೇಕ ಎಂಬಿಬಿಎಸ್ ಪದವೀಧರರು ಕಡ್ಡಾಯ ಇಂಟರ್ನ್‌ಶಿಪ್ ಅವಧಿಯನ್ನು ಪೂರ್ಣಗೊಳಿಸದ ಕಾರಣ ನೀಟ್– ಪಿಜಿ ಬರೆಯಲು ಸಾಧ್ಯವಾಗುವುದಿಲ್ಲ. ಹಾಗಾಗಿ ಪರೀಕ್ಷೆಯನ್ನು ಮುಂದೂಡಬೇಕು ಎಂದು ಕೋರಿ ಆರು ಮಂದಿ ಎಂಬಿಬಿಎಸ್ ಪದವೀಧರರು ಜನವರಿ 25ರಂದು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

'ಸಂಘಟನೆಯಲ್ಲಿ ಯಶಸ್ವಿಯಾದವರಿಗೆ ಅವಕಾಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತಗಟ್ಟೆ ಹಂತದಲ್ಲಿ ಹೆಚ್ಚಿನ ಸದಸ್ಯರನ್ನು ಪಕ್ಷಕ್ಕೆ ನೋಂದಣಿ ಮಾಡಿಸಿ, ಯಶಸ್ಸು ಸಾಧಿಸುವವರಿಗೆ ಮೇಲಿನ ಹಂತದಲ್ಲಿ ಅವಕಾಶಗಳು ದೊರೆಯುತ್ತವೆ. ಉಳಿದವರಿಗೆ ಅಂತಹ ಅವಕಾಶಗಳು ದೊರೆಯುವುದಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.



ಡಿ.ಕೆ. ಶಿವಕುಮಾರ್

ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ನಡೆದ ಕೆಪಿಸಿಸಿ ಸದಸ್ಯತ್ವ ನೋಂದಣಿ ತರಬೇತಿ ಶಿಬಿರದಲ್ಲಿ ಮಾತನಾಡಿದ ಅವರು, 'ಪಕ್ಷದ ಎಲ್ಲ ಘಟಕಗಳು ಮತ್ತು ಎಲ್ಲ ಹಂತಗಳ ಸದಸ್ಯರಿಗೂ ಸದಸ್ಯತ್ವ ನೋಂದಣಿ ಅವಕಾಶ ನೀಡಲಾಗಿದೆ. ಪ್ರತಿ ಮತಗಟ್ಟೆ ಹಂತದಲ್ಲೂ ನಡೆಯುವ ಸದಸ್ಯತ್ವ ನೋಂದಣಿ ಮೇಲೆ ನಿಗಾ ಇಡಲಾಗುವುದು' ಎಂದರು. ಆರ್.ವಿ. ವೆಂಟಕೇಶ್ ನೇತೃತ್ವದಲ್ಲಿ ಸದಸ್ಯತ್ವ ನೋಂದಣಿ ಸಮಿತಿ ಮತ್ತು ರಘುನಂದನ್ ರಾಮಣ್ಣ ನೇತೃತ್ವದಲ್ಲಿ ಡಿಜಿಟಲ್ ಸದಸ್ಯತ್ವ ನೋಂದಣಿ ಸಮಿತಿ ರಚಿಸಲಾಗಿದೆ. ಮುಖ್ಯ ನೋಂದಣಿದಾರರಾಗಿ ಕೆಲಸ ಮಾಡಲು ಅವಕಾಶ ಕೋರಿ 7,000 ಮಂದಿ ಅರ್ಜಿ ಸಲ್ಲಿಸಿದ್ದಾರೆ. 5,548 ಮಂದಿಯ ನೇಮಕಾತಿ ಆಗಿದೆ. 1,405 ಮಂದಿಯ ನೇಮಕ ಬಾಕಿ ಇದೆ ಎಂದು ವಿವರಿಸಿದರು.

ಸದಸ್ಯತ್ವ ನೋಂದಣಿಗೆ ವಿವಿಧ ಹಂತಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಪಕ್ಷದಲ್ಲಿ ಮೇಲಿನ ಸ್ಥಾನಮಾನ ಪಡೆಯಲು ಬಯಸುವವರು ಮತಗಟ್ಟೆ ಹಂತಗಳಲ್ಲಿ ಹೆಚ್ಚು ಸದಸ್ಯರನ್ನು ನೋಂದಾಯಿಸಿ ಸಾಮರ್ಥ್ಯ ಪ್ರದರ್ಶಿಸಬೇಕು ಎಂದರು.

ಸದಸ್ಯತ್ವ ನೋಂದಣಿಯಲ್ಲಿ ಗುಂಪುಗಾರಿಕೆಗೆ ಅವಕಾಶವಿಲ್ಲ. ಅದು ಎಲ್ಲ ಸದಸ್ಯರ ಹಕ್ಕು. ಹೆಚ್ಚು ಸದಸ್ಯರನ್ನು ನೋಂದಣಿ ಮಾಡಿದವರು ಪಕ್ಷದಲ್ಲಿ ಬಲಶಾಲಿ ಆಗುತ್ತಾರೆ. ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಆಯ್ಕೆ, ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆಯಲ್ಲೂ ಇಂತಹ ಮುಖಂಡರ ಮಾತಿಗೆ ಮನ್ನಣೆ ಇರುತ್ತದೆ ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಡಿಜಿಟಲ್ ಸದಸ್ಯತ್ವ ನೋಂದಣಿ ಉಸ್ತುವಾರಿ ರಾಜು, ಸದಸ್ಯತ್ವ ನೋಂದಣಿಯ ಪ್ರದೇಶ ನೋಂದಣಿ ಅಧಿಕಾರಿ ಸುದರ್ಶನ್ ನಾಚಿಯಪ್ಪನ್, ಸಹ ಅಧಿಕಾರಿಗಳಾದ ಜಾನ್ಸನ್ ಅಬ್ರಹಾಂ, ಮೋತಿಲಾಲ್ ದೇವಗನ್, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಸಲೀಂ ಅಹ್ಮದ್, ಆರ್. ಧ್ರುವನಾರಾಯಣ, ಈಶ್ವರ ಖಂಡ್ರೆ, ರಘುನಂದನ್ ರಾಮಣ್ಣ, ಆರ್.ವಿ. ವೆಂಕಟೇಶ್, ಮುಖಂಡರಾದ ಕೆ.ಎಚ್. ಮುನಿಯಪ್ಪ, ಅಲ್ಲಂ ವೀರಭದ್ರಪ್ಪ, ಎಚ್. ಆಂಜನೇಯ, ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಪುಷ್ಪಾ ಅಮರನಾಥ್ ಇದ್ದರು.

'ಪದವೀಧರ ಕ್ಷೇತ್ರ: ಎಲ್ಲರ ಅಭಿಪ್ರಾಯ ಪಡೆದು ಆಯ್ಕೆ'

ಬೆಂಗಳೂರು: ವಿಧಾನ ಪರಿಷತ್‌ನ ತಲಾ ನಾಲ್ಕು ಶಿಕ್ಷಕರು ಮತ್ತು ಪದವೀಧರರ ಕ್ಷೇತ್ರಗಳಿಗೆ ಪಕ್ಷದ ಎಲ್ಲ ಪ್ರಮುಖ ನಾಯಕರ ಅಭಿಪ್ರಾಯ ಪಡೆದು, ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪರಿಷತ್ ಚುನಾವಣೆಗೆ ಅಭ್ಯರ್ಥಿ ಆಯ್ಕೆ ಸಂಬಂಧ ಶುಕ್ರವಾರ ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಕೆಲವು ನಾಯಕರ ಜತೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಧು ಮಾದೇಗೌಡ ಮತ್ತು ಬಸವರಾಜ ಗುರಿಕಾರ ಅವರನ್ನು ಕಾಂಗ್ರೆಸ್ ಅಭ್ಯರ್ಥಿಗಳೆಂದು ಈಗಾಗಲೇ ಘೋಷಿಸಲಾಗಿದೆ. ಉಳಿದ ತಲಾ ಒಂದು ಶಿಕ್ಷಕರು ಮತ್ತು ಪದವೀಧರ ಕ್ಷೇತ್ರಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಿದೆ' ಎಂದರು.

ಪದವೀಧರ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶ ಕೋರಿ ಆರು ಮಂದಿ ಅರ್ಜಿ ಸಲ್ಲಿಸಿದ್ದಾರೆ. ಶಿಕ್ಷಕರ ಕ್ಷೇತ್ರಗಳಲ್ಲಿ 15ಕ್ಕೂ ಹೆಚ್ಚು ಆಕಾಂಕ್ಷಿಗಳಿದ್ದಾರೆ. ಎಲ್ಲ ನಾಯಕರೂ ಒಟ್ಟಾಗಿ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಿದೆ. ಈಗ ಕೆಲವರು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಕೆಲವು ನಾಯಕರು ಗೋವಾ ರಾಜ್ಯದ ಚುನಾವಣಾ ಪ್ರಚಾರದಲ್ಲಿದ್ದಾರೆ. ಅವರು ಮರಳಿದ ತಕ್ಷಣ ಈ ಕುರಿತು ಚರ್ಚಿಸಲಾಗುವುದು ಎಂದು ಹೇಳಿದರು. ಎಲ್ಲ ನಾಯಕರ ಅಭಿಪ್ರಾಯ ಸಂಗ್ರಹಿಸಿದ ಬಳಿಕ ಎಐಸಿಸಿಗೆ ಶಿಫಾರಸು ಕಳುಹಿಸಲಾಗುವುದು. ಪಕ್ಷದ ವರಿಷ್ಠರು ಅಂತಿಮವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಿದ್ದಾರೆ ಎಂದರು.

ಅರಣ್ಯೇತರ ಉದ್ದೇಶಕ್ಕೆ ಭೂಮಿ; ಭಾರಿ ವಿರೋಧ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಅರಣ್ಯ ವ್ಯಾಪ್ತಿಯ ಗೋಮಾಳ, ಕಂದಾಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ನೀಡಬಾರದು ಎಂದು ವಿವಿಧ ಸಂಘ, ಸಂಸ್ಥೆಗಳು, ಸಂಘಟನೆಗಳ ಮುಖಂಡರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ ವ್ಯಾಪ್ತಿಯ ಗೋಮಾಳ, ಸೊಪ್ಪಿನ ಬೆಟ್ಟ, ಕಾನು, ಹುಲ್ಲು ಬನ್ನಿ ಇತ್ಯಾದಿ ಗ್ರಾಮ ಸಾಮೂಹಿಕ ಭೂಮಿಯನ್ನು ಖಾಸಗಿ ಸಂಸ್ಥೆಗಳಿಗೆ ನೀಡುವ ಕುರಿತು ಪರಿಶೀಲಿಸಲು ಕ್ಯಾಬಿನೆಟ್ ಉಪಸಮಿತಿ ರಚಿಸಿದೆ. ಸರ್ಕಾರ ಈ ನಡೆ ವಿರೋಧಿಸಿ ಜೀವ ವೈವಿಧ್ಯ ಮಂಡಳಿಯ ನಿಕಟ ಪೂರ್ವ ಅಧ್ಯಕ್ಷ ಅನಂತ ಹೆಗಡೆ ಅಶೀಸರ, ಪಶ್ಚಿಮ ಘಟ್ಟ ಉಳಿಸಿ ಆಂದೋಲನದ ಪ್ರೊ.ಬಿ.ಎಂ. ಕುಮಾರಸ್ವಾಮಿ, ಮಲೆನಾಡು ಗಿಡ್ಡ ಗೋವು ಸಂವರ್ಧನಾ ಸಂಘದ ಎಂ.ಜಿ ರಾಮಚಂದ್ರ, ವೃಕ್ಷ ಲಕ್ಷ ಆಂದೋಲನದ ಕೆ.ವೆಂಕಟೇಶ್, ಹೊಸನಗರ, ವೃಕ್ಷ ಜಾಗೃತಿ ವೇದಿಕೆಯ ಹನಿಯ ರವಿ, ಹುಂಚ ಗ್ರಾಮಭೂಮಿ ಸಂರಕ್ಷಣಾ ಸಮಿತಿಯ ನಾಗೇಂದ್ರ, ಗ್ರಾಮ ಅರಣ್ಯ ಸಮಿತಿಯ ರಾಘವೇಂದ್ರ, ಗರ್ತಿಕೆರೆ, ಉಡುಪಿಯ ಗೋ ಸೇವಾ ಸಮಿತಿಯ ವಾಸುದೇವ, ಕುಮಾರಧಾರಾ ಪರಿಸರ ಸಮಿತಿಯ ಕರುಣಕರ ಗೋಗಟೆ, ಸೊರಬ ಪರಿಸರ ವೇದಿಕೆಯ ಎಂ. ಆರ್. ಪಾಟೀಲ, ಉ.ಕ. ಜಿಲ್ಲಾ ಪರಿಸರ ಸಮಿತಿಯ ಶ್ರೀಮತಿ ವಾಸತಿ ಹೆಗಡೆ, ಭದ್ರಾ ಪರಿಸರ ಸಮಿತಿಯ ಗಜೇಂದ್ರ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಕಂದಾಯ ಅರಣ್ಯಗಳ (ಡೀಮ್ಡ್) ಸಂರಕ್ಷಣೆಗೆ ವಿಶೇಷ ಯೋಜನೆ ಪ್ರಕಟಿಸಬೇಕು. ಗೋಮಾಳ, ಬೆಟ್ಟ, ಭೂಮಿಗಳನ್ನು ಖಾಸಗಿಯವರಿಗೆ ವಿತರಿಸುವ ಕ್ರಮಕ್ಕೆ ಮುಂದಾಗಬಾರದು. ಗೋಮಾಳ, ಅಮೃತಮಹಲ್ ಕಾವಲ್, ಹುಲ್ಲು ಬನ್ನಿ, ಸೊಪ್ಪಿನ ಬೆಟ್ಟ, ಜಾನುವಾರು ಮುಫತ್ತು ಮೊದಲಾದ ಕಂದಾಯ ಭೂಮಿ ರಾಜ್ಯದ ಹಳ್ಳಿಗಳ ಸಾಮೂಹಿಕ ನೈಸರ್ಗಿಕ ಸಂಪತ್ತು. ಇಲ್ಲಿ ಗ್ರಾಮ ಕಾಡು, ಕೆರೆಗಳು ಇವೆ. ಗ್ರಾಮೀಣರು ತಮ್ಮ ಕೃಷಿ ಉಪಕರಣ, ಸೊಪ್ಪು, ಕಟ್ಟಿಗೆ, ಅರಣ್ಯ ಉಪ ಉತ್ಪನ್ನ ಸಂಗ್ರಹ, ಔಷಧ ಮೂಲಿಕೆಗಳ ಸಲುವಾಗಿ ನೂರಾರು ವರ್ಷಗಳಿಂದ ರಕ್ಷಣೆ ಮಾಡಿಕೊಂಡು ಬಂದಿದ್ದಾರೆ. ಈ ಪ್ರದೇಶದಲ್ಲಿ ಜಾನುವಾರು ಮೇಯಲು ಅವಕಾಶ ಕಲ್ಪಿಸಲು ಪಾರಂಪರಿಕವಾಗಿ ಗೋಮಾಳ ಮೀಸಲಿರಿಸಲಾಗಿದೆ. ಸುಪ್ರಿಂಕೋರ್ಟ್ ಆದೇಶದಂತೆ ರಾಜ್ಯ ಸರ್ಕಾರ ಕಂದಾಯ ಅರಣ್ಯಗಳನ್ನು ಗುರುತಿಸಿದೆ. ಪ್ರತಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ಅರಣ್ಯಾಧಿಕಾರಿಗಳು ಜಂಟಿಯಾಗಿ ಡೀಮ್ಡ್ ಅರಣ್ಯಗಳ ಸಮೀಕ್ಷೆ ಮಾಡಿಪಟ್ಟಿ ತಯಾರಿಸಿದ್ದಾರೆ. ಇಂತಹ ಭೂಮಿ ಖಾಸಗಿ ಪಾಲು ಮಾಡಬಾರದು ಎಂದು ಕೋರಿದ್ದಾರೆ.

ಅಂತಿಮವಾಗಿ ರಾಜ್ಯ ಸರ್ಕಾರ 3.30 ಲಕ್ಷ ಹೆಕ್ಟೇರ್ ಡೀಮ್ಡ್ ಅರಣ್ಯ ಭೂಮಿ ಗುರುತಿಸಿದೆ. ಗೋಮಾಳ ಸೇರಿದಂತೆ ಗ್ರಾಮ ಸಾಮೂಹಿಕ ಭೂಮಿ ಅಪಾರ ನೈಸರ್ಗಿಕ ಸಂಪನ್ಮೂಲ ಹೊಂದಿದೆ. ಜಾನುವಾರು ಮೇಯಲು ಗೋಮಾಳ ಬೇಕು. ಗ್ರಾಮ ಅರಣ್ಯಗಳ ಸಂರಕ್ಷಣೆ ಆಗಬೇಕು. ಕಂದಾಯ ಅರಣ್ಯ ಕಾಯ್ದೆ, ಪಂಚಾಯತ್ ರಾಜ್ ಕಾಯ್ದೆ, ವನ್ಯ ಜೀವಿ ಕಾಯ್ದೆ, ಜೀವ ವೈವಿಧ್ಯ ಕಾಯ್ದೆಗಳ ಉಲ್ಲಂಘನೆಗೆ ಸರ್ಕಾರ ಅವಕಾಶ ನೀಡಬಾರದು ಎಂದು ಒತ್ತಾಯಿಸಿದ್ದಾರೆ.

1980ರ ದಶಕದಲ್ಲಿ ಕರ್ನಾಟಕದ ಮಲೆನಾಡು ಪ್ರದೇಶದಲ್ಲಿ ಗ್ರಾಮ ಅರಣ್ಯ ಖಾಸಗಿ, ಕೈಗಾರಿಕೆಗಳಿಗೆ ನೀಡಬಾರದು ಎಂದು ಆಗ್ರಹಿಸಿ ಜನಾಂದೋಲನ ನಡೆದಿತ್ತು. ಶಿವರಾಂ ಕಾರಂತ ಅವರು ಚಳವಳಿಯಲ್ಲಿ ಭಾಗವಹಿಸಿದ್ದರು ಎಂದು ಸ್ಮರಿಸಿದ್ದಾರೆ.



ಹೆಬ್ಬಾಳ ಶಾಸಕ ಬೈರತಿ ಸುರೇಶ್ ಹಾಗೂ ಪತ್ನಿ ಪದ್ಮಾವತಿ ಸುರೇಶ್ ಅವರು ಸ್ವಗ್ರಾಮ ಬೈರತಿಯ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶುಕ್ರವಾರ ವಿಶೇಷ ಪೂಜೆ ಸಲ್ಲಿಸಿ ಆಂಜನೇಯ ಮೂರ್ತಿಗೆ 11.ಕೆ.ಜಿ. ತೂಕದ ಬೆಳ್ಳಿ ಕವಚಗಳನ್ನು ಅರ್ಪಿಸಿದರು..

ಬಮೂಲ್ ನೇಮಕಾತಿಯಲ್ಲಿ ಅಕ್ರಮ: ತನಿಖಾಧಿಕಾರಿ ನೇಮಕ

ಮೈಸೂರು: 'ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ (ಬಮೂಲ್) ವಿವಿಧ ಹುದ್ದೆಗಳ ನೇಮಕಾತಿಗಾಗಿ ಡಿಸೆಂಬರ್‌ನಲ್ಲಿ ನಡೆಸಿದ್ದ ಲಿಖಿತ ಪರೀಕ್ಷೆಯಲ್ಲಿ ಅಕ್ರಮ ನಡೆದಿದ್ದು, ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಸಂಸದ ಡಿ.ಕೆ. ಸುರೇಶ್ ಅವರು ಸಹಕಾರ ಸಚಿವ ಎಸ್.ಟಿ.ಸೋಮಸೇಖರ್ ಅವರಿಗೆ ಪತ್ರ ಬರೆದಿದ್ದಾರೆ' ಎಂದು ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಕೆ.ಮಹದೇವ್ ತಿಳಿಸಿದರು.



ಡಾ.ಕೆ. ಮಹದೇವ್

'ಪತ್ರವನ್ನು ಆಧರಿಸಿ ಸಹಕಾರ ಸಂಘಗಳ ಜಂಟಿ ನಿಬಂಧಕ ಪ್ರಸಾದ್ ರೆಡ್ಡಿ ಅವರನ್ನು ಜ.27ರಂದು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಕೂಡಲೇ ನೇಮಕಾತಿಯನ್ನು ರದ್ದುಪಡಿಸಬೇಕು. ಪರೀಕ್ಷೆ ನಡೆಸಿರುವ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿದ್ಯಾಶಂಕರ್ ಅವರನ್ನು ಸೇವೆಯಿಂದ ವಜಾ ಮಾಡಬೇಕು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಮುಕ್ತ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸದಸ್ಯ ಅಡಗೂರು ಎಚ್. ವಿಶ್ವನಾಥ್ ಸರ್ಕಾರದ ಮೇಲೆ ಒತ್ತಡ ಹೇರಬೇಕು' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಅವರಿಗೆ ಕರೆ ಮಾಡಿದರೂ ಪ್ರತಿಕ್ರಿಯೆಗೆ ಸಿಗಲಿಲ್ಲ.

ಉತ್ತರ ಕನ್ನಡ: 101 ಮಂದಿ ಕಾಂಗ್ರೆಸ್‌ಗೆ ಸೇರ್ಪಡೆ

ಬೆಂಗಳೂರು: ಉತ್ತರ ಕನ್ನಡ ಜಿಲ್ಲೆಯ ವಿವಿಧ ಪಕ್ಷಗಳ 101 ಮುಖಂಡರು ಶುಕ್ರವಾರ ಕಾಂಗ್ರೆಸ್ ಪಕ್ಷ ಸೇರಿದರು. ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರನ್ನು ಕಾಂಗ್ರೆಸ್‌ಗೆ ಸ್ವಾಗತಿಸಲಾಯಿತು.

ಭಾಸ್ಕರ ಪಟಗಾರ್, ಶಂಕರ್ ಗೌಡ, ಅಶೋಕ್ ಗೌಡ, ಕೃಷ್ಣ ಗೌಡ, ರಾಜೇಶ್ ಗೌಡ, ಮುಕುಂದ ಗೌಡ, ಬಲೀಂದ್ರ ಗೌಡ, ಸುಕ್ರು ಗೌಡ, ಬೊಮ್ಮಣ್ಣ ಪಡಿಗಾರ್, ಜಗದೀಶ್ ನಾಯ್ಕ, ನಾಗು ಹಳ್ಳೇರ ಮತ್ತು ಉದಯ ಮಕ್ಕಿ ಶುಕ್ರವಾರ ಕಾಂಗ್ರೆಸ್ ಸೇರಿದವರಲ್ಲಿ ಪ್ರಮುಖರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪಕ್ಷ ಸೇರ್ಪಡೆ ಅರ್ಜಿಗಳ ಪರಿಶೀಲನಾ ಸಮಿತಿ ಮುಖ್ಯಸ್ಥರೂ ಆಗಿರುವ ವಿಧಾನ ಪರಿಷತ್ ಸದಸ್ಯ ಅಲ್ಲಂ ವೀರಭದ್ರಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹಮ್ಮದ್, ಆರ್. ಧ್ರುವನಾರಾಯಣ, ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಭೀಮಣ್ಣ ನಾಯ್ಕ, ಮುಖಂಡ ಪ್ರಶಾಂತ್ ದೇಶಪಾಂಡೆ ಉಪಸ್ಥಿತರಿದ್ದರು. ವಿವಿಧ ಪಕ್ಷಗಳ ಮುಖಂಡರನ್ನು ಕಾಂಗ್ರೆಸ್‌ಗೆ ಸ್ವಾಗತಿಸಿ ಮಾತನಾಡಿದ ಶಿವಕುಮಾರ್, 'ಕಾಂಗ್ರೆಸ್ ಸೇರಲು ಉತ್ಸುಕರಾಗಿರುವವರ ದೊಡ್ಡ ಪಟ್ಟಿಯೇ ಇದೆ. ಅಲ್ಲಂ ವೀರಭದ್ರಪ್ಪ ನೇತೃತ್ವದ ಸಮಿತಿ ಎಲ್ಲವನ್ನೂ ಪರಿಶೀಲಿಸಿ, ತೀರ್ಮಾನ ಕೈಗೊಳ್ಳುತ್ತದೆ. ಪಕ್ಷಕ್ಕೆ ಸೇರಿದವರು ತಮ್ಮ ಜಿಲ್ಲೆಗಳಲ್ಲಿ ಕಾಂಗ್ರೆಸ್‌ಗೆ ಬಲ ತುಂಬಬೇಕು' ಎಂದರು.

ಸದ್ಯ ರಾಜ್ಯದ ಜನರು ಕಾಂಗ್ರೆಸ್ ಪಕ್ಷದ ಪರವಾಗಿ ಇರುವುದು ಕಾಣಿಸುತ್ತಿದೆ. ಇಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎಂಬುದನ್ನು ಅವರ ಪಕ್ಷದವರೇ ಹೇಳುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯದಲ್ಲಿನ ಬಿಜೆಪಿ ಸರ್ಕಾರಗಳ ವೈಫಲ್ಯಗಳನ್ನು ಜನರಿಗೆ ತಿಳಿಸಿ, ಅವರನ್ನು ಕಾಂಗ್ರೆಸ್‌ನತ್ತ ಕರೆತರುವ ಕೆಲಸ ಮಾಡಬೇಕು ಎಂದರು.

'ಕೆಎಸ್‌ಎಂಡಿಎಂಸಿ'ಯಿಂದ ಶೀಘ್ರದಲ್ಲೇ ಬೆಳೆಗಾರರು–ವ್ಯಾಪಾರಿಗಳ ಸಭೆ

ಮಾವು: ಹೊರ ರಾಜ್ಯಗಳಲ್ಲೂ ಮಾರುಕಟ್ಟೆ


• ಮನೋಹರ್ ಎಂ.

ಬೆಂಗಳೂರು: ರಾಜ್ಯದ ಮಾವು ಬೆಳೆಗಾರರಿಗೆ ಈ ಬಾರಿ ಹೊರ ರಾಜ್ಯಗಳಲ್ಲೂ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ಕೆಎಸ್‌ಎಂಡಿಎಂಸಿ) ಚಿಂತನೆ ನಡೆಸಿದೆ.

ಇದಕ್ಕಾಗಿ ದೆಹಲಿ, ಮುಂಬೈ, ಕೋಲ್ಕತ್ತ ಸೇರಿದಂತೆ ದೇಶದ ಪ್ರಮುಖ ನಗರಗಳಲ್ಲಿನ ಮಾವು ವ್ಯಾಪಾರಿಗಳನ್ನು ಬೆಂಗಳೂರಿಗೆ ಕರೆಸಿ, ಅವರೊಂದಿಗೆ ಸಭೆ ನಡೆಸಲು ನಿಗಮ ಮುಂದಾಗಿದೆ.

ಕೋವಿಡ್ ಕಾರಣದಿಂದಾಗಿ ಮಾವು ಬೆಳೆಗಾರರಿಗೆ ಎರಡು ವರ್ಷಗಳಿಂದ ನಿರೀಕ್ಷಿತ ಮಟ್ಟದ ಮಾರುಕಟ್ಟೆ ಲಭ್ಯವಾಗಿರಲಿಲ್ಲ. ಇದನ್ನು ಮನಗಂಡು ಅಂಚೆ ಮೂಲಕ ಮನೆ ಬಾಗಿಲಿಗೆ ಮಾವು ತಲುಪಿಸುವ ಆನ್‌ಲೈನ್ ಸೇವೆಯನ್ನು ನಿಗಮ ಆರಂಭಿಸಿತ್ತು. ಸುಮಾರು 300 ಟನ್‌ಗಳಷ್ಟು ಮಾವು ಅಂಚೆ ಮೂಲಕವೇ ಬಿಕರಿಯಾಗಿತ್ತು.

ಮಾವು ಕೊಯಿಲಿನ ಸಮಯ ಸಮೀಪಿಸುತ್ತಿರುವುದರಿಂದ ಈ ಬಾರಿ ರಾಜ್ಯದಲ್ಲಿ ಮಾತ್ರವಲ್ಲದೆ, ಹೊರ ರಾಜ್ಯದ ಜನರಿಗೂ ಮಾವಿನ ರುಚಿ ಉಣಬಡಿಸಲು ನಿಗಮ ಯೋಜನೆ ರೂಪಿಸಿದೆ. ಇದಕ್ಕಾಗಿ ಅಲ್ಲಿನ ಪ್ರಮುಖ ಮಾವು ವ್ಯಾಪಾರಿಗಳು ಹಾಗೂ ರಾಜ್ಯದ ಮಾವು ಬೆಳೆಗಾರರನ್ನು ಒಂದೆಡೆ ಸೇರಿಸಿ ವ್ಯಾಪಾರ ಸುಗಮಗೊಳಿಸುವ ಬಗ್ಗೆ ಸಮಾಲೋಚನೆ ನಡೆಸಲಿದೆ.



ಕೋವಿಡ್ ಪರಿಸ್ಥಿತಿ ನೋಡಿಕೊಂಡು ನಿಗಮದ ವತಿಯಿಂದ ಈ ಬಾರಿ ಜಿಲ್ಲಾವಾರು 'ಮಾವು ಮೇಳ' ಆಯೋಜಿಸಲಾಗುವುದು.

ಕೆ.ವಿ.ನಾಗರಾಜು, ಕೆಎಸ್‌ಎಂಡಿಎಂಸಿ ಅಧ್ಯಕ್ಷ



'ಮಾವಿನ ತೋಟಗಳೆಲ್ಲ ಹೂವಿನಿಂದ ತುಂಬಿಕೊಂಡಿದ್ದು, ಮಾವು ಋತುವಿನ ಸ್ವಾಗತಕ್ಕೆ ಸಮಯ ಪಕ್ವವಾಗಿದೆ. ಎರಡು ವರ್ಷಗಳಿಂದ ಸಂಕಷ್ಟ ಎದುರಿಸಿದ್ದ ಮಾವು ಬೆಳೆಗಾರರಿಗೆ ಈ ಸಲ ರಾಷ್ಟ್ರಮಟ್ಟದಲ್ಲಿ ಮಾರುಕಟ್ಟೆ ವಿಸ್ತರಿಸುವ ಉದ್ದೇಶದಿಂದ ಫೆಬ್ರುವರಿಯಲ್ಲಿ ಸಭೆ ಆಯೋಜಿಸಲಿದ್ದೇವೆ' ಎಂದು ಕೆಎಸ್‌ಎಂಡಿಎಂಸಿ ಅಧ್ಯಕ್ಷ ಕೆ.ವಿ. ನಾಗರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಜಾವಾಣಿ ವಿಶೇಷ

'ಬೇರೆ ರಾಜ್ಯಗಳ ಮಾವು ಮಾರುಕಟ್ಟೆಗಳ ವ್ಯಾಪಾರಿಗಳನ್ನು ಸಭೆಗೆ ಆಹ್ವಾನಿಸಿದ್ದೇವೆ. ಮಾವು ಬೆಳೆಗಾರರ ಸಂಸ್ಥೆಗಳು ಹಾಗೂ ರೈತರೂ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮಾವು ಫಸಲಿನ ಬಗ್ಗೆ ಅವರೊಂದಿಗೆ ಚರ್ಚಿಸಿ, ಬೇರೆ ರಾಜ್ಯಗಳಿಗೆ ಮಾವು ಪೂರೈಸುವ ಒಪ್ಪಂದಗಳನ್ನು ಮಾಡಿಕೊಳ್ಳಲಿದ್ದೇವೆ. ಬೆಳೆಗಾರರು ಮತ್ತು ವ್ಯಾಪಾರಿಗಳ ನಡುವೆ ನಿಗಮವು ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ' ಎಂದರು.

'ಭಾರಿ ಮಳೆಯಿಂದಾಗಿ ಈ ವರ್ಷದ ಮಾವು ಇಳುವರಿ ಕುಂಠಿತವಾಗುವ ಸಾಧ್ಯತೆ ಇದೆ. ಮಾರುಕಟ್ಟೆಗೆ ಮಾವು ಬರುವುದೂ ತಡವಾಗಲಿದೆ. ಆದರೆ, ಮಾವು ಬೆಳೆಗಾರರಿಗೆ ಯಾವುದೇ ಸಮಸ್ಯೆಯಾಗದಂತೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು ನಿಗಮದ ಉದ್ದೇಶ. ಕಳೆದ ವರ್ಷದಂತೆ ಈ ಬಾರಿಯೂ ಮಾವಿನ ಹಣ್ಣನ್ನು ಅಂಚೆ ಮೂಲಕ ಮನೆ ಮನೆಗೆ ತಲುಪಿಸುವ ವ್ಯವಸ್ಥೆ ಮುಂದುವರಿಯಲಿದೆ' ಎಂದರು.

₹100 ಕೋಟಿ ಅನುದಾನಕ್ಕೆ ಬೇಡಿಕೆ

'ಮಾವು ಬೆಳೆಗಾರರಿಗೆ ನೆರವು, ಪರಿಕರಗಳ ವಿತರಣೆ, ಮಾವು ಮೇಳ ಆಯೋಜನೆ ಸೇರಿದಂತೆ ನಿಗಮದ ಉದ್ದೇಶಗಳನ್ನು ಯಶಸ್ವಿಗೊಳಿಸಲು ಈ ಬಜೆಟ್‌ನಲ್ಲಿ ₹100 ಕೋಟಿ ಅನುದಾನ ನೀಡಲು ಸರ್ಕಾರಕ್ಕೆ ಬೇಡಿಕೆ ಇಟ್ಟಿದ್ದೇವೆ. ತೋಟಗಾರಿಕೆ ಸಚಿವ ಮುನಿರತ್ನ, ನಿಗಮದ ಅಧಿಕಾರಿಗಳೊಂದಿಗೆ ತೆರಳಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಲಿದ್ದೇವೆ' ಎಂದು ಕೆ.ವಿ.ನಾಗರಾಜು ಮಾಹಿತಿ ನೀಡಿದರು.


'ಹಾವೇರಿ, ಕೋಲಾರ ಜಿಲ್ಲೆಯಲ್ಲಿ ತಲಾ ಒಂದು ಮಾವು ಸಂಸ್ಕರಣಾ ಘಟಕ ತೆರೆಯಲು ಉದ್ದೇಶಿಸಲಾಗಿದೆ. ಮಾವನ್ನು ಪ್ಯಾಕಿಂಗ್ ಮಾಡಲು ಸಣ್ಣ ಗೋದಾಮುಗಳನ್ನು ನಿರ್ಮಿಸುವುದು. ಬುಟ್ಟಿಗಳು, ಮಾವು ಕಟಾವು ಪರಿಕರಗಳನ್ನು ವಿತರಿಸುವ ಚಿಂತನೆ ಇದೆ. ಬಜೆಟ್‌ನಲ್ಲಿ ನಿರೀಕ್ಷಿತ ಅನುದಾನ ಸಿಕ್ಕರೆ, ಈ ಕಾರ್ಯಕ್ರಮಗಳು ಕಾರ್ಯರೂಪಕ್ಕೆ ಬರಲಿವೆ' ಎಂದರು.

'ಚೀನಾದಿಂದ 38 ಸಾವಿರ ಚ.ಕಿ.ಮೀ. ಅತಿಕ್ರಮಣ'

ನವದೆಹಲಿ (ಪಿಟಿಐ): 'ಭಾರತದ 38,000 ಚದರ ಕಿ.ಮೀ.ನಷ್ಟು ಭೂಪ್ರದೇಶವನ್ನು ಕಳೆದ ಆರು ದಶಕಗಳಿಂದಲೂ ಚೀನಾ ಅತಿಕ್ರಮಿಸಿಕೊಂಡಿದೆ' ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ಶುಕ್ರವಾರ ತಿಳಿಸಿದೆ.

ಪ್ರಶ್ನೋತ್ತರ ವೇಳೆ ಸದನಕ್ಕೆ ಈ ಮಾಹಿತಿ ನೀಡಿದ ವಿದೇಶಾಂಗ ವ್ಯವಹಾರಗಳ ಖಾತೆಯ ರಾಜ್ಯ ಸಚಿವ ವಿ.ಮುರಳೀಧರನ್ ಅವರು, 'ಪಾಕಿಸ್ತಾನವು 1963ರಲ್ಲಿ ಶಕ್ಸಗಂ ಕಣಿವೆಯಲ್ಲಿ ತಾನು ಅತಿಕ್ರಮಿಸಿದ್ದ ಭಾರತದ 5,180 ಚದರ ಕಿ.ಮೀ.ನಷ್ಟು ಪ್ರದೇಶವನ್ನು ಚೀನಾಕ್ಕೆ ಬಿಟ್ಟುಕೊಟ್ಟಿದೆ' ಎಂದು ತಿಳಿಸಿದರು.

'5,180 ಚದರ ಕಿ.ಮೀ. ಪ್ರದೇಶವನ್ನು ಅಕ್ರಮವಾಗಿ ಬಿಟ್ಟುಕೊಟ್ಟಿರುವುದಕ್ಕೆ ಸಂಬಂಧಿಸಿ ಪಾಕಿಸ್ತಾನ ಮತ್ತು ಚೀನಾ ನಡುವೆ 1963ರಲ್ಲಿ 'ಗಡಿ ಒಪ್ಪಂದ' ಏರ್ಪಟ್ಟಿದೆ. ಆದರೆ, ಈ ಒಪ್ಪಂದಕ್ಕೆ ಭಾರತ ಮಾನ್ಯತೆ ನೀಡಿಲ್ಲ. ಈ ಒಪ್ಪಂದ ಕಾನೂನುಬಾಹಿರ ಹಾಗೂ ಅಸಿಂಧು ಎಂಬುದಾಗಿ ಭಾರತ ಪ್ರತಿಪಾದಿಸುತ್ತಲೇ ಇದೆ' ಎಂದೂ ಹೇಳಿದರು.



ವಿ.ಮುರಳೀಧರನ್

ಗಡಿ ಕುರಿತ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಅವರು, ಪ್ಯಾಂಗಾಂಗ್ ಸರೋವರ ಬಳಿ ಚೀನಾ ನಿರ್ಮಿಸುತ್ತಿರುವ ಸೇತುವೆಯು ಆ ದೇಶವು 1962ರಿಂದಲೂ ಅಕ್ರಮವಾಗಿ ವಶಪಡಿಸಿಕೊಂಡಿರುವ ಪ್ರದೇಶದಲ್ಲಿದೆ' ಎಂದು ಹೇಳಿದರು.

ತೀರ್ಥಹಳ್ಳಿ: ಬಾಲಕಿ ಮೇಲೆ ಅತ್ಯಾಚಾರ

ತೀರ್ಥಹಳ್ಳಿ: ಮದುವೆ ಆಗುವುದಾಗಿ ನಂಬಿಸಿ 17 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿರುವ ಘಟನೆ ತಾಲ್ಲೂಕಿನಲ್ಲಿ ನಡೆದಿದೆ.

ಬಾಲಕಿಗೆ ಮನೆಯ ಸಮೀಪ ಗಾರೆ ಕೆಲಸಕ್ಕೆ ಬಂದಿದ್ದ ಹುಡುಗನೊಂದಿಗೆ ಸ್ನೇಹ ಬೆಳೆದಿದೆ. ಬಾಲಕಿಯೊಂದಿಗೆ ಪ್ರೀತಿಯ ನಾಟಕವಾಡಿದ ಆರೋಪಿ ಯುವಕ ಬೈಕ್‌ನಲ್ಲಿ ಹಲವು ಕಡೆ ಸುತ್ತಾಡಿಸಿದ್ದಾನೆ. ಮದುವೆಯಾಗುವ ಭರವಸೆ ನೀಡಿ ಲೈಂಗಿಕವಾಗಿ ಬಳಸಿಕೊಂಡಿದ್ದಾನೆ. ಗರ್ಭವತಿಯಾದ ಬಾಲಕಿ ತಾಯಿಗೆ ಮಾಹಿತಿ ನೀಡಿದ ನಂತರ ಪ್ರಕರಣ ಬೆಳಕಿಗೆ ಬಂದಿದೆ. ತೀರ್ಥಹಳ್ಳಿ ಠಾಣೆಯಲ್ಲಿ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.



ಲೈಂಗಿಕ ಸಿ.ಡಿ ಪ್ರಕರಣ: ಬಿ ರಿಪೋರ್ಟ್ ಸಲ್ಲಿಸಿದ ಎಸ್‌ಐಟಿ

ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ನಿರ್ದೋಷಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ), 'ಮಾಜಿ ಸಚಿವ ರಮೇಶ ಜಾರಕಿಹೊಳಿ ಮೇಲಿನ ಆರೋಪಗಳನ್ನು ಸಾಬೀತುಪಡಿಸಲು ಯಾವುದೇ ಪುರಾವೆಗಳು ಲಭ್ಯವಾಗಿಲ್ಲ. ಅವರು ನಿರ್ದೋಷಿ' ಎಂಬುದಾಗಿ ಅಭಿಪ್ರಾಯಪಟ್ಟು, ನ್ಯಾಯಾಲಯಕ್ಕೆ 'ಬಿ ರಿಪೋರ್ಟ್' ಸಲ್ಲಿಸಿದೆ.

'ಕೆಲಸದ ಆಮಿಷವೊಡ್ಡಿದ್ದ ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ' ಎಂದು ಆರೋಪಿಸಿ ಯುವತಿಯೊಬ್ಬರು ಕಬ್ಬನ್ ಪಾರ್ಕ್ ಠಾಣೆಗೆ ದೂರು ನೀಡಿದ್ದರು. ಪ್ರಕರಣದ ತನಿಖಾಧಿಕಾರಿಯೂ ಆದ ಎಸಿಪಿ ಎಂ.ಸಿ. ಕವಿತಾ, ಬೆಂಗಳೂರಿನ ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ 300 ಪುಟಗಳ ಅಂತಿಮ ವರದಿಯನ್ನು ಶುಕ್ರವಾರ ಸಲ್ಲಿಸಿದ್ದಾರೆ. 'ಯುವತಿ ನೀಡಿದ್ದ ದೂರಿನಲ್ಲಿರುವ ಸಂಗತಿಗಳನ್ನು ಕಾನೂನಿನಡಿ ಪರಿಶೀಲಿಸಲಾಗಿದೆ. ದೂರುದಾರರ ಜೊತೆ ಒಡನಾಟವಿಟ್ಟುಕೊಂಡಿದ್ದವರು, ವೈದ್ಯರು, ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಹಾಗೂ ಹಲವರ ಅಭಿಪ್ರಾಯ ಪಡೆಯಲಾಗಿದೆ. ದೂರಿನಲ್ಲಿ ಉಲ್ಲೇಖಿಸಿದ್ದ ಘಟನೆಗಳಿಗೆ ಯಾವುದೇ ಪುರಾವೆಗಳು ಲಭ್ಯವಾಗಿಲ್ಲ' ಎಂಬುದಾಗಿ ಬಿ ರಿಪೋರ್ಟ್‌ನಲ್ಲಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ಹೇಳಿವೆ.

'ಸಮ್ಮತಿಯಿಂದ ನಡೆದ ಕೃತ್ಯ' ಎಂಬ ಮಾಹಿತಿಯೂ ವರದಿಯಲ್ಲಿದೆ. ಅಂತಿಮ ವರದಿಯಲ್ಲಿ ರಮೇಶ ಅವರನ್ನು ಆರೋಪ ಮುಕ್ತಗೊಳಿಸಲಾಗಿದೆ ಎಂದೇ ಹೇಳಲಾಗಿದೆ.

ಮಾಹಿತಿ ನಿರಾಕರಣೆ: ಅಂತಿಮ ವರದಿಯ ಮುಖ್ಯಾಂಶಗಳನ್ನು ಮಾಧ್ಯಮ ಪ್ರತಿನಿಧಿಗಳೊಂದಿಗೆ ಹಂಚಿಕೊಳ್ಳಲು ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ನಿರಾಕರಿಸಿದರು. 'ಈ ಹಂತದಲ್ಲಿ ಯಾವುದೇ ಮಾಹಿತಿ ಹಂಚಿಕೊಳ್ಳಲು ಸಾಧ್ಯವಿಲ್ಲ. ಈ ಕುರಿತು ಕೋರ್ಟ್ ಅಧಿಕಾರಿಗಳಿಂದಲೇ ಪಡೆಯಿರಿ' ಎಂದು ಅವರು ಪ್ರತಿಕ್ರಿಯಿಸಿದರು.

ಕೋರ್ಟ್ ಅಧಿಕಾರಿಗಳನ್ನು ಈ ಕುರಿತು ಸಂಪರ್ಕಿಸಿದಾಗ, 'ಪ್ರಕರಣದ ಸಂತ್ರಸ್ತೆಗೆ ನೋಟಿಸ್ ಜಾರಿಯಾದ ಬಳಿಕ ಮಾಹಿತಿ ಪಡೆದುಕೊಳ್ಳಬಹುದು' ಎಂದು ಉತ್ತರಿಸಿದರು.

'ಬಿ' ರಿಪೋರ್ಟ್?: ಇಂತಹ ಪ್ರಕರಣಗಳಲ್ಲಿ ಅಂತಿಮ ವರದಿ ಸಲ್ಲಿಸಿದಾಗ ಮ್ಯಾಜಿಸ್ಟ್ರೇಟ್ ಸಂತ್ರಸ್ತೆಗೆ ನೋಟಿಸ್ ಜಾರಿ ಮಾಡುವ ಸೂಚನೆಗಳಿವೆ ಎಂದಾದರೆ ಅದು ಪಕ್ಕಾ 'ಬಿ' ರಿಪೋರ್ಟ್ ಆಗಿರುತ್ತದೆ ಎಂಬುದು ಕಾನೂನು ತಜ್ಞರ ಅಭಿಮತ.

ಹಿರಿಯ ಕ್ರಿಮಿನಲ್ ವಕೀಲ ಸಿ.ಎಚ್. ಹನುಮಂತರಾಯ ಅವರ ಪ್ರಕಾರ ಇಂತಹ ಸನ್ನಿವೇಶದಲ್ಲಿ, 'ಪೊಲೀಸರು ನಿಮ್ಮ ಫಿರ್ಯಾದು ಆಧಾರದಲ್ಲಿ ತನಿಖೆ ನಡೆಸಿದಾಗ ಆರೋಪಿ ವಿರುದ್ಧ ದೋಷಾರೋಪ ಹೊರಿಸುವ ಕಾರಣ ಕಂಡು ಬಂದಿಲ್ಲ. 'ಬಿ' ಅಂತಿಮ ವರದಿ ಹಾಕಿದ್ದಾರೆ. ಈ ವರದಿಯನ್ನು ಪ್ರಶ್ನಿಸುವುದಕ್ಕೆ ನಿಮಗೆ ಹಕ್ಕಿದೆ. ನೀವು ಪ್ರಶ್ನಿಸುವುದಿದ್ದರೆ ಇಂತಿಷ್ಟು ದಿನಗಳ ಒಳಗಾಗಿ ಕೋರ್ಟ್ ಮುಂದೆ ಪ್ರಶ್ನಿಸಲು ಅವಕಾಶ ಇದೆ ಎಂದು ಮ್ಯಾಜಿಸ್ಟ್ರೇಟ್ ನೋಟಿಸ್ ಹೊರಡಿಸುತ್ತಾರೆ' ಎನ್ನುತ್ತಾರೆ.

'ಬಿ' ಅಂತಿಮ ವರದಿ ಎಂದರೇನು?

ತನಿಖೆ ಕಾಲದಲ್ಲಿ ಆರೋಪಿಯನ್ನು ವಿಚಾರಣೆಗೆ ಗುರಿಪಡಿಸಲು ಸಾಕಾಗುವಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿಲ್ಲ ಎಂಬುದು ಬಿ ರಿಪೋರ್ಟ್.

ಬಿ.ರಿಪೋರ್ಟ್ ಅನ್ನು ಪ್ರಶ್ನಿಸಿ ಫಿರ್ಯಾದುದಾರರು ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಪ್ರೊಟೆಸ್ಟ್ ಪಿಟಿಷನ್ ಫೈಲ್ ಮಾಡಬಹುದು ಎನ್ನುತ್ತಾರೆ ಸಿ.ಎಚ್.ಹನುಮಂತರಾಯ.

'ಅಪರಾಧ ಪ್ರಕ್ರಿಯಾ ಸಂಹಿತೆ ಸೆಕ್ಷನ್ 200 ಅಡಿಯಲ್ಲಿ ಈ ಪಿಟಿಷನ್ ದಾಖಲಿಸಿದ ನಂತರ ಪ್ರಕ್ರಿಯೆ ಮುಂದುವರಿಯುತ್ತದೆ. ಈ ರೀತಿ ಪ್ರಶ್ನಿಸುವ ಮುನ್ನ ಕ್ರಿಮಿನಲ್ ಪ್ರಕರಣಗಳ ವ್ಯವಹಾರ ನಿಯಮಗಳ ಅಡಿಯಲ್ಲಿ ಮತ್ತಷ್ಟು ತನಿಖೆ ನಡೆಸುವಂತೆ ಕೋರ್ಟ್ ಅನ್ನು ಕೇಳಬಹುದು. ಆ ರೀತಿ ಕೇಳುವಾಗ ಪ್ರೊಟೆಸ್ಟ್ ಪಿಟಿಷನ್‌ನಲ್ಲಿ ಸಕಾರಣ ಕಂಡು ಬಂದರೆ ತನಿಖೆ ಪರಿಪೂರ್ಣವಾಗಿಲ್ಲ ಎಂದು ನ್ಯಾಯಾಧೀಶರು ಇಂತಹ ದಿಕ್ಕಿನಲ್ಲಿ ತನಿಖೆ ಮುಂದುವರಿಸಿ ಬಿ.ರಿಪೋರ್ಟ್ ಸಲ್ಲಿಸಿ ಎಂದು ತನಿಖಾಧಿಕಾರಿಗೆ ನಿರ್ದೇಶಿಸಬಹುದು' ಎನ್ನುತ್ತಾರೆ ಹನುಮಂತರಾಯ.

2,693 ಗ್ರಾಮಗಳ ಪ್ರತಿ ಮನೆಗೂ ಶುದ್ಧ ನೀರು ಪೂರೈಕೆ

'ಗ್ರಾಮೀಣ ಪ್ರದೇಶದ ಮನೆಮನೆಗೂ ಗಂಗೆ'

ಪ್ರಜಾವಾಣಿ ವಾರ್ತೆ



ಮನೆಗೇ ನೀರು ಪೂರೈಕೆ ಆಗುತ್ತಿರುವುದರಿಂದ ಗ್ರಾಮೀಣ ಮಹಿಳೆಯರು ನೀರಿಗಾಗಿ ಬಹು ದೂರ ತೆರಳುವ ಸಂಕಷ್ಟದಿಂದ ಪಾರಾಗಿದ್ದಾರೆ.
ಕೆ.ಎಸ್. ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ



ಗ್ರಾಮೀಣ ಪ್ರದೇಶದ ನೀರಿನ ಗುಣಮಟ್ಟ ಪರೀಕ್ಷೆಗೆ ಗ್ರಾಮಾಭಿವೃದ್ಧಿ ಇಲಾಖೆ ಸ್ಥಾಪಿಸಿರುವ ಪ್ರಯೋಗಾಲಯದ ಒಂದು ನೋಟ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ ಯೋಜನೆಯಾದ 'ಜಲಜೀವನ್ ಮಿಷನ್' ಅಡಿಯಲ್ಲಿ ಗ್ರಾಮೀಣ ಪ್ರದೇಶದ ಪ್ರತಿ ಮನೆಗೂ ನೀರು ಪೂರೈಸುವ 'ಮನೆಮನೆಗೂ ಗಂಗೆ' ಎಂಬ ಕಾರ್ಯಕ್ರಮದಡಿ ರಾಜ್ಯದ 50 ಸಾವಿರ ಗ್ರಾಮಗಳಲ್ಲಿ ಕಾಮಗಾರಿ ಆರಂಭಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದ್ದಾರೆ.


2020ರಲ್ಲಿ ಕರ್ನಾಟಕದಲ್ಲಿ ಆರಂಭವಾದ ಈ ಯೋಜನೆಯಡಿ ಇಲ್ಲಿಯವರೆಗೆ 2,693 ಗ್ರಾಮಗಳ ಪ್ರತಿಯೊಂದು ಮನೆಗೂ ನೀರು ಸಂಪರ್ಕ ನೀಡಲಾಗಿದೆ. ಈ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ 33 ಸ್ವಯಂಸೇವಾ ಸಂಸ್ಥೆಗಳ ಸಹಯೋಗ ಪಡೆದುಕೊಳ್ಳಲಾಗಿದೆ ಎಂದೂ ಅವರು ಹೇಳಿದ್ದಾರೆ.

2019ರ ಆಗಸ್ಟ್ 15ರಂದು ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ 'ಜಲಜೀವನ್ ಮಿಷನ್' ಯೋಜನೆ ಘೋಷಿಸಿದ ಪ್ರಧಾನಿ ಮೋದಿ ಅವರು, 2024 ರೊಳಗೆ ಪ್ರತಿಯೊಂದು ಮನೆಗೂ ನೀರು ಕೊಡುವ ವಾಗ್ದಾನ ಮಾಡಿದ್ದರು. ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗ್ರಾಮೀಣ ಜನರಿಗೆ ಸ್ವಚ್ಛ ಮತ್ತು ಶುದ್ಧ ಕುಡಿಯುವ ನೀರು ಕೊಡುವ ಯೋಜನೆಗೆ ಸಂಪೂರ್ಣ ಬೆಂಬಲ ನೀಡಿ, ರಾಜ್ಯದ ಪಾಲಿನ ಹಣ ಒದಗಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಈ ಯೋಜನೆ ಆರಂಭವಾಗುವ ಮೊದಲು ಕರ್ನಾಟಕದ 97,91,513 ಜನವಸತಿ ಪ್ರದೇಶಗಳ ಪೈಕಿ, 24,51,220 ಜನವಸತಿ ಪ್ರದೇಶಗಳಲ್ಲಿ ಶೇ 25ರಷ್ಟು ಮನೆಗಳಿಗೆ ನಲ್ಲಿಯ ನೀರು ಸಿಗುತ್ತಿತ್ತು. ಈ ಯೋಜನೆ ಜಾರಿಗೆ ಬಂದ ಬಳಿಕ 20,56,560 ಮನೆಗಳಿಗೆ ಹೊಸದಾಗಿ ನೀರು ಸಂಪರ್ಕ ನೀಡಲಾಗಿದೆ. ಎರಡು ವರ್ಷದಲ್ಲಿ ಗ್ರಾಮೀಣ ಭಾಗದಲ್ಲಿನ ಶೇ 25 ರಿಂದ ಶೇ 46 ರಷ್ಟು ಮನೆಗಳಿಗೆ ಕೊಳಾಯಿ ನೀರು ಸಂಪರ್ಕ ಕಲ್ಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಕುಡಿಯುವ ನೀರಿನ ಸಂಪರ್ಕದ ಮೇಲ್ವಿಚಾರಣೆಗಾಗಿ 26,786 ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಗಳ ರಚಿಸಲಾಗಿದೆ. ಈ ಸಮಿತಿಗಳು ನೀರಿನ ಗುಣಮಟ್ಟ ಮತ್ತು ನೀರು ಸರಬರಾಜು ನಿರ್ವಹಣೆಯ ಮೇಲುಸ್ತುವಾರಿ ಮಾಡುತ್ತಿವೆ. ಶುದ್ಧ ನೀರನ್ನು ಪೂರೈಸುವ ಕಾರಣಕ್ಕೆ ನೀರು ಪರೀಕ್ಷೆ ಕಡ್ಡಾಯಗೊಳಿಸಲಾಗಿದೆ. ಇದಕ್ಕಾಗಿಯೇ ರಾಜ್ಯದ 31 ಜಿಲ್ಲೆಯ 46 ತಾಲ್ಲೂಕುಗಳಲ್ಲಿ ತಲಾ ಒಂದು ಪ್ರಯೋಗಾಲಯ ಸ್ಥಾಪಿಸಲಾಗಿದೆ. ಇನ್ನೂ ಎರಡು ಪ್ರಯೋಗಾಲಯಗಳು ಸ್ಥಾಪನೆಯ ಹಂತದಲ್ಲಿವೆ ಎಂದು ಅವರು ವಿವರಿಸಿದ್ದಾರೆ.

ಕೇಂದ್ರ ಜಲಸಂಪನ್ಮೂಲ ಸಚಿವರಾದ ಗಜೇಂದ್ರ ಸಿಂಗ್ ಶೆಖಾವತ್ ಅವರು, ಯೋಜನೆ ಅನುಷ್ಠಾನದ ಪ್ರಗತಿಯ ವಿವರ ಪಡೆದುಕೊಂಡು ಮೇಲುಸ್ತುವಾರಿ ಮಾಡುತ್ತಿದ್ದಾರೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್.ಕೆ. ಅತೀಕ್ ಹಾಗೂ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆಯ ಆಯುಕ್ತ ಪ್ರಕಾಶ್ ಕುಮಾರ್ ಯೋಜನೆಯ ಜಾರಿಗೆ ಮುತುವರ್ಜಿ ವಹಿಸಿದ್ದಾರೆ ಎಂದು ಅವರು ಹೇಳಿದ್ದಾರೆ.



ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ ಹಾಸನ

ಸಂ::ಕಾ..ಇಂ:ಲೋ.ಇ:ಹಾವಿ:ಹಾಸನ:ಸಇಂ–1/2021–22 ದಿನಾಂಕ: 02.02.2022

ಅಲ್ಪಾವದಿ ಟೆಂಡರ್ ಮುಂದೂಡಿಕೆ ಪ್ರಕಟಣೆ

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 24/2021–22 ದಿನಾಂಕ 29.10.2021 ರಲ್ಲಿ ಕರೆಯಲಾಗಿದ್ದ ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಹೋಬಳಿ ಹರದನಹಳ್ಳಿ ಗ್ರಾಮದಲ್ಲಿ ಸನ್ಮಾನ್ಯ ಶ್ರೀ ಹೆಚ್.ಡಿ.ದೇವೇಗೌಡ ರವರ ವಸ್ತು ಸಂಗ್ರಹಾಲಯ(ಮ್ಯೂಸಿಯಂ) ಕಟ್ಟಡ ನಿರ್ಮಾಣ ಕಾಮಗಾರಿಗೆ ಬಿಡ್ಡನ್ನು ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. **16.02.2022**–16.00 ಗಂಟೆ. ಟೆಂಡರ್‌ನ ನಿಗಧಿತ ನಮೂನೆಗಳನ್ನು http://www.eproc.karnataka.gov.in ನಲ್ಲಿ ಡೌನಲೋಡ್ ಮಾಡಿ ಅವಶ್ಯ ದಾಖಲಾತಿಗಳೊಂದಿಗೆ ಹಾಗೂ ನಿಗಧಿತ ಇಎಂಡಿಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ
ನಂ 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052.
ದೂರವಾಣಿ ಸಂಖ್ಯೆ: 080– 22250017 /22250018 ಇ–ಮೇಲ್ mdkmvstdc@gmail.com
WEB: http://www.karnataka.gov.in/kmvstdcl/Pages/home.aspx

ಪ್ರಕಟಣೆ

[illegible]

www.karnataka.gov.in/kmvstdcl ನಿಂದ ಪಡೆಯಬಹುದು.

ಸಹಿ/–.
ಕವಿತಾ ಎಂ. ವಾರಂಗಲ್,
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು

ವಾ.ಸಾ.ಸಂ.ಇ/ಬೆಂ.ನಗರ/3217/ಆಕಾರ್/2021–22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

KSSIDC ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10.
Email:kssidcho@vsnl.com, Phone : 23407011-25

ಸಂಖ್ಯೆ:ಇಪಿ–65:ಇಎನ್‌ಜಿಜಿ:ಅಅ:ತಂತಿಬೇಲಿ:ಜಗಳೂರು:ಹುಮ್ನಾಬಾದ್:2021–22 ದಿ: 03–02–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ ರವರ ಪರವಾಗಿ ಅಧೀಕ್ಷಕ ಅಭಿಯಂತರರು ಕೆ.ಟಿ.ಪಿ.ಪಿ ನಿಯಮ 2000 ರ ಪ್ರಕಾರ ಕಾಮಗಾರಿಗಳಿಗೆ ಪಿಡಬ್ಲ್ಯೂಡಿ ಪರವಾನಗಿಯುಳ್ಳ (ಸಿವಿಲ್ & ವಿದ್ಯುತ್) ಸಾಕಷ್ಟು ಅನುಭವವುಳ್ಳ ಅರ್ಹ ಗುತ್ತಿಗೆದಾರರು ಇವರಿಂದ ಇ–ಪ್ರೊಕ್ಯರ್‌ಮೆಂಟ್ ಮೂಲಕ Single Cover System ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.

Name of the Work: 1) Providing Barbed Wire Fencing, Fixing of M.S Gate and RCC Name Board to the Proposed Industrial Estate **Baggenahalli Village, Jagaluru Tq, Davanagere Dist**. Approx. amount put to tender: **Rs.15.12 Lakhs.** EMD: **Rs.0.38 Lakhs.** Tender processing fee: **Refer e-portal.** Period for Completion: **2 months.**

2) Electrification to balance portion of Industrial Estate regarding Arranging power supply to developed plots at IE **Humnabad 2nd Stage, Bidar dist. (Retender).** Approx. amount put to tender: **Rs.22.00 Lakhs.** EMD: **Rs.0.44 Lakhs.** Tender processing fee: **Refer e-portal.** Period for Completion: **6 months.**

ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ವಿವರವಾದ ಟೆಂಡರ್ ಪ್ರಕಟಣೆಯನ್ನು, ದಾಖಲಾತಿಗಳನ್ನು **https://www.eproc.karnataka.gov.in** (ವಾಣಿಜ್ಯ ಮತ್ತು ಕೈಗಾರಿಕೆ) ಮೂಲಕ **ದಿನಾಂಕ: 09–02–2022 ಬೆಳಿಗ್ಗೆ 11:30**ರ ನಂತರ ಪಡೆದುಕೊಳ್ಳಬಹುದು.

ಭರ್ತಿಮಾಡಲಾದ ಟೆಂಡರ್‌ನೊಡನೆ ಟೆಂಡರ್‌ಗೆ ಸಂಬಂಧಿಸಿದ ಇ.ಎಂ.ಡಿ ಮೊತ್ತವನ್ನು ಆನ್‌ಲೈನ್ ಗೇಟ್‌ವೇ ಪೋರ್ಟಲ್ ವೆಬ್‌ಸೈಟ್ **https://www.eproc.karnataka.gov.in** (Commerce and Industries) ಇ–ಪೋರ್ಟಲ್ ಮೂಲಕ **ದಿನಾಂಕ: 18–02–2022ರ ಸಂಜೆ 4:00 ಗಂಟೆ**ಯೊಳಗೆ ಸಲ್ಲಿಸಬಹುದಾಗಿದೆ. ಬಿಡ್ಡನ್ನು **22–02–2022 ರಂದು ಬೆಳಿಗ್ಗೆ 11.30 ಗಂಟೆಗೆ** ಅಥವಾ ನಂತರದ ಕೆಲಸದ ದಿನದಂದು ತೆರೆಯಲಾಗುವುದು.

ಹೆಚ್ಚಿನ ಮಾಹಿತಿಯನ್ನು ಈ ಕೆಳಸಹಿದಾರ ಅಧಿಕಾರಿಯವರ ಕಛೇರಿಯಲ್ಲಿ ಅಥವಾ ಇ–ಪ್ರೊಕ್ಯುರ್‌ಮೆಂಟ್ ವೆಬ್‌ಸೈಟ್ **https://www.eproc.karnataka.gov.in** ಅಥವಾ ಇ–ಪ್ರಕ್ಯೂರ್‌ಮೆಂಟ್ ಸೆಲ್/ಹೆಲ್ಪ್‌ಡೆಸ್ಕ್ (ದೂರವಾಣಿ 080–25501227 / 25501216) ಮುಖಾಂತರ ಪಡೆಯಲು ಕೋರಿದೆ.

ಸಹಿ/–
ಅಧೀಕ್ಷಕ ಅಭಿಯಂತರರು–ಪ್ರ

DIPR/DDU/AAPL/RO3213/2021-22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ವೈದ್ಯಕೀಯ ಅಧೀಕ್ಷಕರ ಕಛೇರಿ
ಎ.ಆರ್.ಟಿ ಕೇಂದ್ರ, ವಿಕ್ಟೋರಿಯಾ ಆಸ್ಪತ್ರೆ
ಕೆ.ಆರ್. ಮಾರ್ಕೆಟ್, ಬೆಂಗಳೂರು–560002. ದೂ: 080–26701150

ಸಂಖ್ಯೆ: ವಿಆ/ಸಿಬ್ಬಂದಿ(ಜಿ)/01/2008–09 ದಿನಾಂಕ: 03.02.2022

ಪ್ರಕಟಣೆ

ವಿಕ್ಟೋರಿಯಾ ಆಸ್ಪತ್ರೆ, ಕೆ.ಆರ್. ಮಾರುಕಟ್ಟೆ, ಬೆಂಗಳೂರು–02 ಇಲ್ಲಿ ಎ.ಆರ್.ಟಿ ಕೇಂದ್ರದಲ್ಲಿ ಖಾಲಿ ಇರುವ ಔಷಧ ವಿತರಕರು (Pharmacist) ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ತುಂಬಲು **ದಿನಾಂಕ: 16.02.2022 ರಂದು 12:00 ರಿಂದ 1:00 ಗಂಟೆಯವರೆಗೆ** ನೇರ ಸಂದರ್ಶನವನ್ನು ನಿಗಧಿಪಡಿಸಲಾಗಿದೆ. ಹುದ್ದೆಯ ವಿವರ ಕೆಳಗಿನಂತಿವೆ.

ಹುದ್ದೆಯ ಹೆಸರು: ಔಷಧಿ ವಿತರಕರು(**Pharmacist**). ಹುದ್ದೆಯ ಸಂಖ್ಯೆ: **1**. ವಿದ್ಯಾರ್ಹತೆ: **ಬ್ಯಾಚುಲರ್ ಆಫ್ ಫಾರ್ಮಸಿ (B.Pharma) / ಡಿಪ್ಲೊಮಾ ಇನ್ ಫಾರ್ಮಸಿ (D.Pharma).** ಮಾಸಿಕ ಸಂಭಾವನೆ: **ರೂ. 13,000/–.**

1) ಒಂದು ವೇಳೆ B Pharma ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ D Pharma 3 ವರ್ಷಗಳ ಅನುಭವವಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು. 2) ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ಪ್ರಮಾಣ ಪತ್ರ ಮತ್ತು ಜೆರಾಕ್ಸ್ ಪ್ರತಿಯನ್ನು ಸಂದರ್ಶನದ ವೇಳೆ ಸಲ್ಲಿಸುವುದು. 3) ಅಭ್ಯರ್ಥಿಗಳ ವಯೋಮಿತಿ 65 ವರ್ಷ ಮೀರಿರಬಾರದು. 4) ಸಂದರ್ಶನದ ಸ್ಥಳ: ವಿಕ್ಟೋರಿಯಾ ಅಸ್ಪತ್ರೆ, ಕೆ.ಆರ್. ಮಾರುಕಟ್ಟೆ, ಬೆಂಗಳೂರು–560002. ದೂರವಾಣಿ ಸಂಖ್ಯೆ: 080–26701150.

ಸಹಿ/–
ವೈದ್ಯಕೀಯ ಅಧೀಕ್ಷಕರು

ವಾಸಾಸಂಇ/ಬೆಂ.ನ./ಜಿಎ/3207/2021–22

ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ–583231
ಇ.ಮೇಲ್:–eemidnkst@rediffmail.com
ದೂರವಾಣಿ ಸಂಖ್ಯೆ:08539:220054

ಸಂ: ಕಾನಿಇಂ/ಸನೀ&ಅಂ.ಅವಿ/ಕೊಪ್ಪಳ/ತಾಶಾ/2021–22/234 ದಿನಾಂಕ:01.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸರ್ಕಾರದ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಯಲ್ಲಿ ನೊಂದಾಯಿಸಿದ ಈ ಕೆಳಕಂಡ ದರ್ಜೆಯ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಾಗಿ "ಇ–ಪ್ರಕ್ಯೂರ್‌ಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ. **ಕೋಷ್ಟಕ**

ಕಾಮಗಾರಿ ಹೆಸರು: ರಾಯಚೂರು ಜಿಲ್ಲೆ ಮಸ್ಕಿ ವಿಧಾನಸಭಾ ಕ್ಷೇತ್ರದ ಬಳಗಾನೂರು ಸೀಮೆ ಬಳಗನೂರು ಗ್ರಾಮದ ಸರ್ವೇ ನಂ.449 ಬಸವಂತರಾಯ ತಂದೆ ಸೋಮಣ್ಣ ಹಾಗೂ ಇತರ ರೈತರ ಹೊಲಗಳಿಗೆ ಏತ ನೀರಾವರಿ ಯೋಜನೆ, ಉದ್ಬಾಳ (ಯು) ಗ್ರಾಮದ ವೆಂಕಣ್ಣ ತಂದೆ ಮಲ್ಲಪ್ಪ ಇವರ ಸರ್ವೇ ನಂ 23ರ ಜಮೀನುಗಳಿಗೆ ಏತ ನೀರಾವರಿ ಯೋಜನೆ, ಕನ್ನಾಳ ಗ್ರಾಮದ ಬಸಣ್ಣ ಮಲಕಾಜಪ್ಪ ಹಾಗೂ ಇತರರ ಹೊಲಗಳಿಗೆ ಏತ ನೀರಾವರಿ ಸೌಲಭ್ಯ ಹಾಗೂ ಮಾನ್ವಿ ತಾಲ್ಲೂಕಿನ ಗೂಗೆಬಾಳ್ ಗ್ರಾಮದ ಬಸನಗೌಡ ತಂದೆ ಅಮರೇಗೌಡ ಹಾಗೂ ಇತರ ರೈತರ ಹೊಲಗಳಿಗೆ ಗೂಗೆಬಾಳ್ ಹಳ್ಳದಿಂದ ಏತ ನೀರಾವರಿ ಯೋಜನೆ ಮತ್ತು ಸಿಂಧನೂರು ತಾಲ್ಲೂಕಿನ ಹುಲ್ಲೂರು ಗ್ರಾಮದ ಏತ ನೀರಾವರಿ ಯೋಜನೆಯ ಮುಂದುವರೆದ ಕಾಮಗಾರಿ, ತುರುವಿಹಾಳ್ ಗ್ರಾಮದ ಸರ್ವೆ ನಂ.267 ಹಾಗೂ ಇತರರ ಜಮೀನುಗಳಿಗೆ ಏತ ನೀರಾವರಿ ಮುಂದುವರೆದ ಕಾಮಗಾರಿಗಳು. **ಲೆಕ್ಕ ಶೀರ್ಷಿಕೆ:** 4702 ಪ್ರಧಾನ ಕಾಮಗಾರಿಗಳು ಏತ ನೀರಾವರಿ ಯೋಜನೆ. **ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ):** 339.30. **ಟೆಂಡರ ಡಾಕುಮೆಂಟ್:** ಕೆ.ಡಬ್ಲೂ–4. **ಕಾಲಾವಧಿ:** 09ತಿಂಗಳು. **ಗುತ್ತಿಗೆದಾರರ ದರ್ಜೆ:** ಪ್ರಥಮ ದರ್ಜೆ

ಗುತ್ತಿಗೆದಾರರು ಕರ್ನಾಟಕ ಸರ್ಕಾರದ "ಇ–ಪ್ರಕ್ಯೂರ್‌ಮೆಂಟ್" ವೆಬ್‌ಸೈಟ್ http://eproc.karntaka.gov.in/eportal/ index.seam **ದಿನಾಂಕ: 14–02–2022 ರಿಂದ ದಿನಾಂಕ: 28–02–2022 ರ ಸಂಜೆ 5.30 ಗಂಟೆ**ಯವರಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ **ದಿನಾಂಕ 21–02–2022** ರಂದು **ಬೆಳ್ಳಿಗ್ಗೆ 11.00 ಗಂಟೆಗೆ** ಈ ಕಛೇರಿಯಲ್ಲಿ ಜರುಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು **ದಿನಾಂಕ: 02–03–2022 ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು ಮತ್ತು ಆರ್ಥಿಕ ಬಿಡ್ಡನ್ನು **ದಿ: 05–03–2022 ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/521/ಎಂಸಿಎ/2021–22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ – ಯಲಹಂಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು– 560 002.

ಸಂಖ್ಯೆ: ಕಾಪಾಅ/ರಮೂಸೌ/ಯಲಹಂಕ/ಟೆಂಡರ್/08/2021–22ದಿನಾಂಕ: 04.02.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
ಟರ್ನ್‌ಕೀ ಲಂಪ್‌ಸಮ್ ನಿಗದಿತ ದರ ಯಾವುದೇ ವ್ಯತ್ಯಾಸವಿಲ್ಲದ ಗುತ್ತಿಗೆ ಆಧಾರದಲ್ಲಿ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ– ಯಲಹಂಕ ವಿಭಾಗ), ಬೃ.ಬೆಂ.ಮ.ಪಾಲಿಕೆ ಇವರು ಅರ್ಹ ಟೆಂಡರ್‌ದಾರರಿಂದ ಟರ್ನ್‌ಕೀ, ಲಂಪ್‌ಸಮ್, ನಿಗದಿತ ದರದ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಿಗದಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಟೆಂಡರ್‌ದಾರರ ಸ್ವಂತ ವಿನ್ಯಾಸದ ಆಧಾರದಡಿ ಯಾವುದೇ ವ್ಯತ್ಯಾಸವಿಲ್ಲದಂತೆ (ಬದಲಿ ಪ್ರಸ್ತಾವನೆಯನ್ನು ಕೇವಲ ಒಂದಕ್ಕೆ ಮಾತ್ರ ಅನುಮತಿ ನೀಡಿ ನಿಗದಿಪಡಿಸಲಾಗಿದೆ) ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ
ಹಳೆ ಯಲಹಂಕದ, ಕೆಂಪೇಗೌಡ ವೃತ್ತದಲ್ಲಿ ಗ್ರೇಡ್ ಸಪರೇಟರ್ (Grade Separator) ನಿರ್ಮಾಣ ಮಾಡುವುದು.	6036.37	60.37

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **09.02.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **03.03.2022**ರ ಸಂಜೆ **5:30** ಗಂಟೆ–ಯವರೆಗೆ ಅಥವಾ ಮುಂಚಿತವಾಗಿ. (3) ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ, ಯಲಹಂಕ ವಿಭಾಗದಲ್ಲಿ ಟೆಂಡರ್ ವಿಚಾರಣೆ ಸ್ವೀಕರಿಸಲು ಕೊನೆಯ ದಿನಾಂಕ: **18.02.2022**ರ ಮಧ್ಯಾಹ್ನ **3:00** ಗಂಟೆಯವರೆಗೆ. (4) ಪೂರ್ವ–ಟೆಂಡರ್ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, (ರಸ್ತೆ ಮೂಲಭೂತಸೌಕರ್ಯ) ಇಲ್ಲಿ ದಿನಾಂಕ **18.02.2022**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, (ರಸ್ತೆ ಮೂಲಭೂತಸೌಕರ್ಯ–ಯಲಹಂಕ ವಿಭಾಗ) ಇಲ್ಲಿ ದಿನಾಂಕ **05.03.2022**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಮೂಸೌಕರ್ಯ–ಯಲಹಂಕ ವಿಭಾಗ

ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಶನ್ ಲಿಮಿಟೆಡ್
KSMC
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಆಡಳಿತ ಕಛೇರಿ: ಟಿ.ಟಿ.ಎಂ.ಸಿ. "ಎ" ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು – 560 027. ದೂರವಾಣಿ: 080–22278813/14/15/16 ಫ್ಯಾಕ್ಸ್: 080–22213172 ವೆಬ್‌ಸೈಟ್: www.ksmc.kanataka.gov.in

ಸಂಖ್ಯೆ:1104/KSMCL/MECH/SIOM/TIOM/Uility Vehicle/2021–22/2988 ದಿನಾಂಕ: 03.02.2022

ಅಲ್ಪಾವಧಿ ಇ–ಟೆಂಡರ್ ಆಹ್ವಾನ

ಸಂಸ್ಥೆಯ ಕಬ್ಬಿಣದ ಅದಿರು ಗಣಿಗಳು, ಸಂಡೂರು ತಾಲ್ಲೂಕ್, ಬಳ್ಳಾರಿ ಜಿಲ್ಲೆ ಇಲ್ಲಿಗೆ 02 ಸಂಖ್ಯೆ Utility ವಾಹನಗಳನ್ನು ಖರೀದಿಸಲು ಅಲ್ಪಾವಧಿ ಇ–ಟೆಂಡರನ್ನು ಆಹ್ವಾನಿಸಿದೆ.

1.	ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	16.02.2022ರ ಸಂಜೆ 5.00 ಗಂಟೆಯವರೆಗೆ
2.	ಟೆಂಡರನ್ನು ತೆರೆಯುವ ದಿನಾಂಕ	18.02.2022ರಂದು ಬೆಳಿಗ್ಗೆ 11.00 ಗಂಟೆಗೆ
3.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ರೂ. 42,000/–

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಫ್ಲಾಟ್‌ಫಾರ್ಮ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ ಹಾಗೂ ಯಾವುದೇ ಮಾಹಿತಿ ಮತ್ತು ಯಾವುದೇ ಸಹಾಯಕ್ಕಾಗಿ ಸಂಪರ್ಕಿಸಬಹುದಾದ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 080–4601000/6894877

ಸಹಿ/–
ಪ್ರಧಾನ ವ್ಯವಸ್ಥಾಪಕರು(ಯಾ)

ವಾಸಾಸಂಇ/ಬೆಂ.ನ/ಜಿಎ/3211/2021–22

ಕೋವಿಡ್‌-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

KARNATAKA NEERAVARI NIGAM LIMITED
(A Government of Karnataka Enterprises)
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ ಕನೀನಿನಿ,ಘಬದಂಕಾನಿ ವಿಭಾಗ ಸಂ.3 ಗೋಕಾಕ ಫೋನ ನಂ. 08332–225213.

ಸಂ. ಕನೀನಿನಿ/ಜೆಆರ್‌ಬಿಸಿಸಿವಿ–3/ಡಿಬಿ/ ಚಚಡಿ ಎಲ್‌ಆಯ್‌ಎಸ್ ಟೆಂಡರ್/2021–22/2616 ದಿ:03–02–2022.

ಅಲ್ಪಾವಧಿ ಶೇಕಡಾವಾರ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರಮೆಂಟ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದವರು, ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಬೆಳಗಾವಿ ಜಿಲ್ಲೆಯ ಕನೀನಿನಿ, ಘಟಕಾನಿ ವಿಭಾಗ ನಂ.3 ಗೋಕಾಕ ವ್ಯಾಪ್ತಿಯ ಚಚಡಿ ಏತ ನೀರಾವರಿ ಯೋಜನೆಯ ಒಂದು ಕಾಮಗಾರಿಗೆ ಇ–ಪ್ರೊಕ್ಯೂರಮೆಂಟ್ ಇ–ಪೋರ್ಟಲ್ ಮುಖಾಂತರ ಮಾತ್ರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1) ಈ ಕಾಮಗಾರಿಗೆ ಇಟ್ಟ ಅಂದಾಜು ಟೆಂಡರ ಮೊತ್ತವು ರೂ. 651.57 ಲಕ್ಷ ಇರುತ್ತದೆ. 2) ಖಾಲಿ ಟೆಂಡರ್ ಫಾರ್ಮಗಳಿಗಾಗಿ ಅರ್ಜಿ ಸಲ್ಲಿಸುವ ಹಾಗೂ ತುಂಬಿದ ಟೆಂಡರಗಳನ್ನು ಸ್ವೀಕರಿಸುವ ದಿ: 07–02–2022 ರಿಂದ 15–02–2022 ಸಾಯಂಕಾಲ 4.00 ಗಂಟೆಯವರೆಗೆ (ಕಚೇರಿ ವೇಳೆಯಲ್ಲಿ) ಕೆಲಸದ ಹೆಸರು/ಇಎಂಡಿ ಮೊತ್ತ/ಗುತ್ತಿಗೆದಾರರ ದರ್ಜೆ ಹಾಗೂ ಇತರೆ ಟೆಂಡರಿನ ನಿಯಮಗಳ ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕಚೇರಿಯಲ್ಲಿ, ಕಚೇರಿಯ ಸಮಯದಲ್ಲಿ ಅಥವಾ ವೆಬ್‌ಸೈಟನಲ್ಲಿ ಪಡೆಯಬಹುದು. ಇನ್ನು ಮುಂದೆ ಸದರಿ ಟೆಂಡರನಲ್ಲಿ ಯಾವುದೇ ಬದಲಾವಣೆಗಳು/ಮಾರ್ಪಾಡುಗಳು/ಅಥವಾ ಅವಧಿ ವಿಸ್ತರಣೆ ಇತ್ಯಾದಿ ತಿದ್ದುಪಡಿಗಳಾದಲ್ಲಿ, ಇ–ಪ್ರೊಕ್ಯೂರಮೆಂಟ್, ಇ–ಪೋರ್ಟಲ್ ವೆಬ್‌ಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು
ಕನೀನಿನಿ ಜಿಆರಬಿಸಿಸಿ ವಿಭಾಗ ನಂ–3, ಗೋಕಾಕ.

DIPR/BGM/RO-NO-1443/MCA/2021-22

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ,
ಪಂ.ರಾ.ಇಂ. ವಿಭಾಗ, ಕೆ.ಆರ್.ನಗರ

ಸಂ: ಕಾಇಂ/ಪಂರಾಇಂವಿ/ಕೃನಾನ/ಎ.ಇ/ಟೆಂಡರ್/2021–22 ದಿ: 03.02.2022

ಇ–ಪ್ರೊಕ್ಯೂರ್‌ಮೆಂಟ್ ರೀತ್ಯಾ ಅಲ್ಪಾವಧಿ ಟೆಂಡರ್ ಪ್ರಕಟಣೆ – ಸಂಖ್ಯೆ 12/2021–22 ದಿನಾಂಕ: 03.02.2022

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು K.W-3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು G.O. No. FD 9 PCL 2004 Dt. 06-08-2005 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು–560025 ದೂರವಾಣಿ: 080–22485867, 080–22485927 ರಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕೆ.ಆರ್.ನಗರ ರವರ ಪರವಾಗಿ ಈ ಕೆಳಗೆ ನಮೂದಿಸಿರುವ ವಿವಿಧ ಲೆಕ್ಕಶೀರ್ಷಿಕೆಯ ಯೋಜನೆಯಡಿ ಕಾಮಗಾರಿಯನ್ನು ಕೈಗೊಳ್ಳಲು **ಇ–ಪ್ರೊಕ್ಯೂರ್‌ಮೆಂಟ್ ಮೂಲಕ** ಟೆಂಡರ್ ಆಹ್ವಾನಿಸಲಾಗಿದೆ.

1) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಷೆಡ್ಯೂಲ್–ಬಿ ಅಪ್ ಲೋಡ್ (Upload) ಮಾಡುವ ಅಂದಾಜು ದಿ: 10.02.2022ರ ಬೆಳಿಗ್ಗೆ 10.30 ಗಂಟೆಯಿಂದ. 2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಷೆಡ್ಯೂಲ್–ಬಿ ನಲ್ಲಿ ದರ ನಮೂದಿಸುವ ಕೊನೆಯ ದಿ: 25.02.2022ರ ಸಂಜೆ 4.30 ಗಂಟೆಯವರೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿ: 28.02.2022ರ ಬೆಳಿಗ್ಗೆ 10.30 ಗಂಟೆಯಿಂದ. 4) ಆರ್ಥಿಕ ಬಿಡ್ ತೆರೆಯುವ ದಿ: 05.03.2022ರ ಬೆಳಿಗ್ಗೆ 10.30 ಗಂಟೆಯಿಂದ

ಕಾಮಗಾರಿಗಳ ವಿವರ

ತಾಲ್ಲೂಕು	ಕೆ.ಆರ್.ನಗರ	ಪಿರಿಯಾಪಟ್ಟಣ	ಒಟ್ಟು
ಒಟ್ಟು ಕಾಮಗಾರಿಗಳ ಸಂಖ್ಯೆ	01	01	02

ಆನ್ ಲೈನ್ ನಲ್ಲಿ ಮಾತ್ರ ನಿರ್ವಹಿಸಲಾಗುವುದು, ವಿವರಗಳಿಗೆ www.eproc.karnataka.gov.inನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ. ದೂರವಾಣಿ ಸಂಖ್ಯೆ 08223–262228.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ತಾಂತ್ರಿಕ ವಿಭಾಗ, ಕೆ.ಆರ್.ನಗರ

DIPR/DDMYS/MCA/907/2021-22

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

Tender Notice /Expression of Interest

For Instadia Advertisement, Ticketing Rights and Other Services
India Vs Srilanka 2nd Test Match

The Test match between India and Sri Lanka is proposed to be held at M. Chinnaswamy Stadium, Bangalore from Friday, 12th March 2022 till Wednesday, 16th March 2022.
Reputed registered vendors are invited to submit their tender bids for:
(A) IN-STADIA ADVERTISING RIGHTS INCLUDING ADDITIONAL BRANDING SPACE IN THE STADIUM, (B) TICKETING AND GATE CONTROL RIGHTS,(C) BRANDING RIGHTS ON THE DIGITAL VIDEO SCORE BOARD (D) EVENT MANAGEMENT SERVICES.
Reputed Registered Vendors are invited to submit Quotations for following services:- (1) Security Services, (2) Housekeeping and Cleaning (3) Sanitization of premises and related COVID protocol services (4) Baggage Scanner on rent, (5) Match Entertainment, (6) Temporary infrastructure on rent, (7) Catering services, (8) Generator and electrical works, (9) Public address system, (10) Event insurance, (11) Food stalls at various stands, (12) and any other services inside the Stadium.
Only reputed vendors having statutory compliances including GST compliance are eligible to apply.
Vendor's representatives may visit the stadium for inspection and to collect the documents from CFO's Office at KSCA, M. Chinnaswamy Stadium and submit their tender bids/quotations in sealed covers on or before 4.00 PM Monday 14th February, 2022.

Sd/-
Hon. Secretary, KSCA

ಕರ್ನಾಟಕ ಸರಕಾರ
ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಧಾರವಾಡ

ಉಲ್ಲೇಖ ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: 37/2021–22 ದಿನಾಂಕ: 03–02–2022.

ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಚೇರಿಯಡಿ ಬರುವ ಹಾನಗಲ್ ಮತ್ತು ರಾಣೇಬೆನ್ನೂರ ಉಪವಿಭಾಗದ ಈ ಕೆಳಗಿನ ಕಾಮಗಾರಿಗಳಿಗಾಗಿ ಕೆ.ಡ್ಬ್ಲ್ಯು–1, 2, 3, 4 & ಕೆಸಿ/5 (ಏಕ–ಲಕೋಟೆ ಮತ್ತು ದ್ವಿ–ಲಕೋಟೆ) ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಲೆಕ್ಕ ಶೀರ್ಷಿಕೆ: 4702–ಕೆರೆಗಳ ಆಧುನಿಕರಣ ಕಾಮಗಾರಿಗಳು (ಒಟ್ಟು 09 ಕಾಮಗಾರಿ), 2702–ಏತ ನೀರಾವರಿ ಯೋಜನೆಗಳ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿಗಳು (ಒಟ್ಟು 4 ಕಾಮಗಾರಿ), 4702– ವಿಶೇಷ ಘಟಕ ಯೋಜನೆ ಕಾಮಗಾರಿಗಳು (ಒಟ್ಟು 1 ಕಾಮಗಾರಿ), 4702–ಆಣೆಕಟ್ಟು ಪಿಕಪ –ಪ್ರಧಾನ ಕಾಮಗಾರಿಗಳು (ಒಟ್ಟು 2 ಕಾಮಗಾರಿ), 4711–ಪ್ರವಾಹ ನಿಯಂತ್ರಣ ಸಣ್ಣ ನೀರಾವರಿ ಕಾಮಗಾರಿಗಳು (ಒಟ್ಟು 7 ಕಾಮಗಾರಿ), 4702 – ವಿಶೇಷ ಅಭಿವೃದ್ಧಿ ಕಾಮಗಾರಿಗಳು (ಒಟ್ಟು 7 ಕಾಮಗಾರಿ), 4702– ಏತ ನೀರಾವರಿ ಯೋಜನೆಗಳ ಕಾಮಗಾರಿಗಳು (ಒಟ್ಟು 1 ಕನ್ಸಲಟೆಂಟ್ ಕಾಮಗಾರಿ), ಟೆಂಡರ್‌ಗೆ ಇಡಲಾದ ಗರಿಷ್ಠ ಅಂದಾಜು ಮೊತ್ತ ರೂ. 500/– ಲಕ್ಷ ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ ರೂ. 2.04 ಲಕ್ಷ ಮತ್ತು ಕನಿಷ್ಠ ಅಂದಾಜು ಮೊತ್ತ ರೂ. 2.04 ಹಾಗೂ ಕನಿಷ್ಠ ಇ.ಎಂ.ಡಿ. ಮೊತ್ತ ರೂ. 5100/– ಖಾಲಿ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://eproc.karnataka.gov.in ನಲ್ಲಿ **ದಿನಾಂಕ: 18–02–2022** ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ **ದಿನಾಂಕ: 22–02–2022** ರೊಳಗಾಗಿ ಅನುಮಾನಗಳಿದ್ದರೆ, ಕಚೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು **ದಿನಾಂಕ: 24–02–2022** ರ 17:30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿ/ಆರ್ಥಿಕ ಬಿಡ್‌ನ್ನು **ದಿನಾಂಕ: 25–02–2022** ಸಂಜೆ 17:45 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ದೊರತ ನಂತರ ತೆರೆಯಲಾಗುವುದು.

ವಿ.ಸೂ : ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– (ವಿನಾಯಕ ಆರ್. ಹರನಟ್ಟಿ)
ಕಾರ್ಯನಿರ್ವಾಹಕ ಇಂಜಿನೀಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ.


ವಾಸಾಇ/ಹಾವೇರಿ/428/2021–22 ದೇಶಪಾಂಡೆಪಬ್ಲಿಸಿಟಿ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕಾನೀನಿನಿ.,
ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 12/2021–22
ದಿನಾಂಕ: 04.02.2022

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಅರ್ಹ ಕರ್ನಾಟಕ ಲೋಕೋಪಯೋಗಿ/ಕೇಂದ್ರ ಲೋಕೋಪಯೋಗಿ/ಇತರೆ ಇಲಾಖೆಗಳಲ್ಲಿ ಒಂದನೇ ದರ್ಜೆಯಲ್ಲಿ ನೋಂದಾಯಿತ ಹಾಗೂ ಕಾವೇರಿ ನೀರಾವರಿ ನಿಗಮದಲ್ಲಿ '1' ಬಿ ಮತ್ತು ಮೇಲ್ಪಟ್ಟ ದರ್ಜೆಯಲ್ಲಿ ನೊಂದಣಿ ಹೊಂದಿರುವ ಸಿವಿಲ್ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಪಾರದರ್ಶಕ ಕಾಯಿದೆ **KW-3** ಅನ್ವಯ ಶೇಕಡವಾರು ಟೆಂಡರ್‌ನ್ನು **E-procurement Plat form** ನಲ್ಲಿ ಟೆಂಡರ್‌ಗಳನ್ನು ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಬಲದಂಡೆ ನಾಲಾ ವಿಭಾಗ, ಹೊಳೆನರಸೀಪುರ ಇವರು ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ದಿನಾಂಕಗಳು ಈ ಕೆಳಕಂಡಂತಿದೆ. 1.ಟೆಂಡರ್ ಪ್ರೋಸೆಸ್ಸಿಂಗ್ ಫೀ: **E-procurement** ನಲ್ಲಿ ನೋಡುವುದು. **2.E-procurement** ನಲ್ಲಿ ದಾಖಲಾತಿಗಳನ್ನು ಪಡೆಯುವ ಹಾಗೂ ಅಪ್‌ಲೋಡ್ ಮಾಡುವ ಅವಧಿ ದಿನಾಂಕ: 04.02.2022 ರಿಂದ 14.02.2022 ಸಂಜೆ 5.30 ಘಂಟೆಯವರೆಗೆ. 3.ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 14.02.2022 ಸಂಜೆ 5.30 ಘಂಟೆಯವರೆಗೆ 4.ಬಿಡ್ ಪೂರ್ವ ಸಭೆಯ ದಿನಾಂಕ: 07.02.2022 ರ ಬೆಳಗ್ಗೆ 11.30ಕ್ಕೆ ಮುಖ್ಯ ಇಂಜಿನಿಯರ್ ರವರ ಕಛೇರಿ, ಹೇಮಾವತಿ ಯೋಜನೆ, ಗೊರೂರು. 5.ಮೊದನೇ ಲಕೋಟೆ (ತಾಂತ್ರಿಕ ಬಿಡ್) ತೆರೆಯುವ ದಿನಾಂಕ: 16.02.2022 ಬೆಳಗ್ಗೆ 11.30 ರ ನಂತರ. 6.ಎರಡನೇ ಲಕೋಟೆ (ಆರ್ಥಿಕ ಬಿಡ್) ತೆರೆಯುವ ದಿನಾಂಕ: 17.02.2022 ರ ನಂತರ ತಾಂತ್ರಿಕ ಬಿಡ್ ಅನುಮೋದನೆಗೊಂಡ ಗುತ್ತಿಗೆದಾರರ ಬಿಡ್‌ಗಳನ್ನು ಮಾತ್ರ. 7.ಕಾಮಗಾರಿಗಳ ಸಂಖ್ಯೆ: 01 ಕಾಮಗಾರಿ 8.ಕೆಲಸದ ರೀತಿ: ಸರ್ವೆ ಮತ್ತು ಡಿ.ಪಿ.ಆರ್. ತಯಾರಿಸುವ ಕಾಮಗಾರಿ. 9.ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ: ರೂ. 51.36 ಲಕ್ಷ 10.ಇ. ಎಂ. ಡಿ.: ರೂ. 1.03 ಲಕ್ಷ 11.ಗುತ್ತಿಗೆದಾರರ ವರ್ಗ: I - B ಮತ್ತು ಮೇಲ್ಪಟ್ಟು ಸೂಚನೆಃ 1.ಯಾವುದೇ ಸಂದರ್ಭದಲ್ಲಾದರೂ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಅಂಗೀರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. 2.ಟೆಂಡರ್ ನಿಬಂಧನೆಗಳು ಹಾಗೂ ಸಂಬಂಧಪಟ್ಟ ವಿವರಗಳನ್ನು **E-procurement portal www.eproc.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. 3.ಟೆಂಡರ್‌ಗಿಟ್ಟ ಮೊತ್ತವು ಬದಲಾವಣೆಗೆ ಒಳಪಟ್ಟಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕಾನೀನಿನಿ, ಹೇ.ಬ.ನಾ ವಿಭಾಗ, ಹೊಳೆನರಸೀಪುರ



ಸುಭಾಷಿತ

ನೀತಿ ನಿಯಮಗಳ ಬೇಲಿ ಇಲ್ಲದೆ ಸಮಾಜಜೀವನವೇ ಅಸಾಧ್ಯ. –ಗೋಪಾಲಕೃಷ್ಣ ಅಡಿಗ

ಪೆಗಾಸಸ್ ಮೂಡಿಸುವ ಪ್ರಶ್ನೆಗಳು ಅನುಮಾನ ಪರಿಹರಿಸುವ ಕೆಲಸವಾಗಲಿ

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು 2017ರಲ್ಲಿ ಅತ್ಯಾಧುನಿಕ ಯುದ್ಧ ಸಲಕರಣೆಗಳ ಖರೀದಿ ಒಪ್ಪಂದದ ಭಾಗವಾಗಿ ಇಸ್ರೇಲಿನ ಗೂಢಚರ್ಯೆ ಕುತಂತ್ರಾಂಶ ಪೆಗಾಸಸ್ ಅನ್ನು ಖರೀದಿಸಿತ್ತು. ಇಡೀ ಒಪ್ಪಂದದ ಒಟ್ಟು ಮೊತ್ತವು 2 ಬಿಲಿಯನ್ ಡಾಲರ್ (₹ 14.93 ಸಾವಿರ ಕೋಟಿ) ಎಂದು ಈಚೆಗೆ ಪ್ರಕಟವಾಗಿರುವ ಕೆಲವು ಮಾಧ್ಯಮ ವರದಿಗಳು ಹೇಳಿವೆ. ಈ ವರದಿಗಳು, ಅತ್ಯಂತ ಗೂಢಚರ್ಯೆಗೆ ಸಂಬಂಧಿಸಿದ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿವೆ. 2017ರಲ್ಲಿ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಭೇಟಿ ನೀಡಿದ್ದಾಗ ಈ ಒಪ್ಪಂದ ಮಾಡಿಕೊಳ್ಳಲಾಗಿತ್ತು ಎಂದು ವರದಿಗಳು ಹೇಳಿವೆ. ಪೆಗಾಸಸ್ ಕುತಂತ್ರಾಂಶವನ್ನು ಬಳಸಿ ದೇಶದ ಕೆಲವು ರಾಜಕಾರಣಿಗಳು, ಸಾಮಾಜಿಕ ಕಾರ್ಯಕರ್ತರು, ನ್ಯಾಯಮೂರ್ತಿಗಳು ಹಾಗೂ ಪತ್ರಕರ್ತರ ಮೇಲೆ ಕಣ್ಗಾವಲು ಇರಿಸಲಾಗಿತ್ತು ಎಂದು ತನಿಖಾ ಪತ್ರಕರ್ತರ ಒಕ್ಕೂಟವೊಂದು ಹಿಂದಿನ ವರ್ಷ ಬಹಿರಂಗಪಡಿಸಿದ ನಂತರದಲ್ಲಿ, ಕೇಂದ್ರ ಸರ್ಕಾರದ ಪಾತ್ರದ ಬಗ್ಗೆ ಪ್ರಶ್ನೆಗಳು ಮೂಡಿವೆ. ಪೆಗಾಸಸ್ ಕುತಂತ್ರಾಂಶವನ್ನು ಸರ್ಕಾರಗಳಿಗೆ ಮಾತ್ರ ಮಾರಾಟ ಮಾಡಲಾಗುತ್ತದೆ ಎಂದು ಆ ಕುತಂತ್ರಾಂಶವನ್ನು ಅಭಿವೃದ್ಧಿಪಡಿಸಿರುವ ಇಸ್ರೇಲಿನ ಎನ್‌ಎಸ್‌ಒ ಗ್ರೂಪ್ ಸ್ಪಷ್ಟಪಡಿಸಿದೆ. ಹೀಗಿದ್ದರೂ, ಕೇಂದ್ರ ಸರ್ಕಾರವು ಈ ವಿವಾದದಲ್ಲಿ ತನ್ನ ಪಾತ್ರ ಏನು, ತನ್ನ ನಿಲುವು ಏನು ಎಂಬುದನ್ನು ಸ್ಪಷ್ಟವಾಗಿ ಹೇಳಿಲ್ಲ. ತಾನು ಈ ತಂತ್ರಾಂಶವನ್ನು ಖರೀದಿಸಿದ್ದು ನಿಜವೆ, ಇಲ್ಲವೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲ. ಮೋದಿ ನೇತೃತ್ವದ ಸರ್ಕಾರದ ಸಿದ್ಧಾಂತವನ್ನು, ನೀತಿಗಳನ್ನು ಹಾಗೂ ಕ್ರಿಯೆಗಳನ್ನು ವಿರೋಧಿಸುತ್ತಿರುವ ಹಲವು ನಾಗರಿಕರ ಮೊಬೈಲ್ ಫೋನ್‌ಗಳ ಮೇಲೆ ಅಕ್ರಮವಾಗಿ ಕಣ್ಣಿಡಲಾಗಿದೆ ಎಂದು ಮಾಧ್ಯಮ ವರದಿಗಳು ಹೇಳಿದ್ದವು. ಇದು ದೇಶದಲ್ಲಿ ರಾಜಕೀಯ ವಿವಾದಕ್ಕೆ ಕಾರಣವಾಗಿತ್ತು. ಕಣ್ಗಾವಲು ಇರಿಸಲಾಗಿದ್ದ ಕೆಲವರ ಹೆಸರು ಬಹಿರಂಗವಾಗಿತ್ತು ಕೂಡ. ಇಂಥವರಲ್ಲಿ ಕೆಲವರು ತಮ್ಮ ಸ್ಮಾರ್ಟ್‌ಫೋನ್ ಅನ್ನು ಪರಿಶೀಲನೆಗೆ ಒಪ್ಪಿಸಿದ್ದರು, ಅದರಲ್ಲಿ ಪೆಗಾಸಸ್ ಕುತಂತ್ರಾಂಶ ಹೊಕ್ಕಿದ್ದಕ್ಕೆ ಸಾಕ್ಷ್ಯ ಲಭಿಸಿತ್ತು.



ಈ ಪ್ರಕರಣದ ವಿಚಾರವಾಗಿ ತಾನು ಶುದ್ಧಹಸ್ತ ಎಂಬುದನ್ನು ದೇಶಕ್ಕೆ ತೋರಿಸಬೇಕಾದುದು ಕೇಂದ್ರ ಸರ್ಕಾರದ ಹೊಣೆಯಾಗಿದೆ

ಈಗ, ಕೇಂದ್ರ ಸರ್ಕಾರವು ಈ ಕುತಂತ್ರಾಂಶವನ್ನು ಖರೀದಿ ಮಾಡಿತ್ತು ಎಂದು ದಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ವರದಿ ಮಾಡಿರುವುದು ಹಳೆಯ ಆರೋಪಗಳನ್ನು ಮತ್ತೊಮ್ಮೆ ಕೇಳಿಬರುವಂತೆ ಮಾತ್ರವೇ ಆಗುವುದಿಲ್ಲ. ಸಮಾಧಾನಕರ ಉತ್ತರ ಬಯಸುವ ಹಲವು ಪ್ರಶ್ನೆಗಳು ಆ ವರದಿಯಲ್ಲಿ ಇವೆ. ಕೇಂದ್ರ ಸರ್ಕಾರವು ಈ ವಿಚಾರದಲ್ಲಿ ತಾನು ಶುದ್ಧಹಸ್ತ ಎಂಬುದನ್ನು ಸಾಬೀತು ಮಾಡಬೇಕು. ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ಆಡಿರುವ ಮಾತು ಸೇರಿದಂತೆ, ಈವರೆಗಿನ ವಿವರಣೆಗಳು ವಿಶ್ವಾಸಾರ್ಹ ಆಗಿ ಉಳಿದಿಲ್ಲ. ಪೆಗಾಸಸ್ ಕುತಂತ್ರಾಂಶವನ್ನು ದೇಶದ ಪ್ರಜೆಗಳ ಮೇಲೆ ಕಣ್ಗಾವಲು ಇರಿಸಲು ಬಳಸಲಾಗಿದೆಯೇ ಎಂಬ ವಿಚಾರವನ್ನು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಕೆಯಾದ ಒಂದು ಅರ್ಜಿಯ ವಿಚಾರಣೆ ಸಂದರ್ಭದಲ್ಲಿಯೂ ಕೇಂದ್ರ ಸರ್ಕಾರವು ಸ್ಪಷ್ಟ ಉತ್ತರ ನೀಡಲಿಲ್ಲ. ಕೇಂದ್ರ ಸರ್ಕಾರದ ಉತ್ತರಗಳು ತೃಪ್ತಿಕರವಾಗಿ ಇಲ್ಲ, ಆ ಉತ್ತರಗಳನ್ನು ಒಪ್ಪಿಕೊಳ್ಳಲು ಆಗದು ಎಂದು ನ್ಯಾಯಾಲಯ ಹೇಳಿತು. ಸರ್ಕಾರವು ರಾಷ್ಟ್ರೀಯ ಭದ್ರತೆಯ ಹೆಸರಿನಲ್ಲಿ ಪ್ರತಿಬಾರಿಯೂ ನುಣುಚಿಕೊಳ್ಳಲು ಆಗದು, ದೇಶದ ಪ್ರಜೆಗಳ ವಿರುದ್ಧ ಪೆಗಾಸಸ್ ಕುತಂತ್ರಾಂಶವನ್ನು ಬಳಸಿಕೊಳ್ಳಲಾಗಿತ್ತೇ ಎಂಬುದನ್ನು ತಿಳಿಯುವ ಹಕ್ಕು ನಾಗರಿಕರಿಗೆ ಇದೆ ಎಂದು ನ್ಯಾಯಾಲಯವು ಹೇಳಿತ್ತು. ನ್ಯಾಯಾಲಯವು ಮೂವರು ಸದಸ್ಯರ ಸಮಿತಿಯೊಂದನ್ನು ರಚಿಸಿ, ಕೇಂದ್ರ ಸರ್ಕಾರವು ಪೆಗಾಸಸ್ ಬಳಕೆ ಮಾಡಿಕೊಂಡಿದೆಯೇ ಎಂಬ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸಮಿತಿಗೆ ಸೂಚಿಸಿದೆ. ಆದರೆ, ಹೀಗೆ ಸಮಿತಿಯೊಂದು ತನಿಖೆ ನಡೆಸುತ್ತಿದೆ ಎನ್ನುವುದು ಕೇಂದ್ರ ಸರ್ಕಾರಕ್ಕೆ ಸಾರ್ವಜನಿಕವಾಗಿ ಮಾಹಿತಿ ಮುಚ್ಚಿಡಲು ಒಂದು ನೆಪ ಆಗಬಾರದು.

ಮಿಲಿಟರಿ ಬಳಕೆಗೆ ಯೋಗ್ಯವಾದ ತಂತ್ರಜ್ಞಾನವನ್ನು ಬಳಸಿ ಪೆಗಾಸಸ್ ಕುತಂತ್ರಾಂಶ ರೂಪಿಸಲಾಗಿದೆ. ಈ ಕುತಂತ್ರಾಂಶ ಬಳಸಿ, ದೇಶದ ಗಡಿಯಾಚೆಗಿನ ಅಪಾಯಕಾರಿ ವ್ಯಕ್ತಿಗಳ ಮೇಲೆ ನಿಗಾ ಇರಿಸಲು ಸಾಧ್ಯ ಎಂಬ ಮಾತು ಇದೆ. ವ್ಯಕ್ತಿಗಳು ದಿನನಿತ್ಯ ಬಳಸುವ ಸ್ಮಾರ್ಟ್‌ಫೋನ್ ಅಥವಾ ಕಂಪ್ಯೂಟರ್ ಮೂಲಕವೇ ಆ ವ್ಯಕ್ತಿಯ ಪಠ್ಯದ ಮೂಲಕ, ಧ್ವನಿಯ ಮೂಲಕ ಹಾಗೂ ವಿಡಿಯೊ ಮೂಲಕ ನಡೆಸುವ ಸಂಭಾಷಣೆಗಳ ಮೇಲೆ ಕಣ್ಣಿಡಲು ಇದರಿಂದ ಸಾಧ್ಯವಿದೆ. ಅಷ್ಟೇ ಅಲ್ಲದೆ, ಆ ಸ್ಮಾರ್ಟ್‌ಫೋನ್ ಅಥವಾ ಕಂಪ್ಯೂಟರ್ ಮೇಲೆ ನಿಯಂತ್ರಣ ಸಾಧಿಸಿ, ಅಲ್ಲಿ ಕೆಲವು ಡಿಜಿಟಲ್ ಕಡತಗಳನ್ನು ತೂರಿಸಲು ಸಾಧ್ಯವಿದೆ! ಅಲ್ಲಿರುವ ಕಡತಗಳನ್ನು ತಿರುಚಲು ಕೂಡ ಸಾಧ್ಯವಿದೆ ಎಂಬ ಅಭಿಪ್ರಾಯವೂ ಇದೆ. ಇಂತಹ ಕುತಂತ್ರಾಂಶಗಳನ್ನು ಗೂಢಚರ್ಯೆ ಸಂಸ್ಥೆಗಳು ಬಳಕೆ ಮಾಡುವುದು ಸಹಜ ಆಗಿರಬಹುದು. ಆದರೆ, ಇಂತಹ ಕುತಂತ್ರಾಂಶಗಳನ್ನು ದೇಶದ ನಾಗರಿಕರ ವಿರುದ್ಧ ಬಳಸಿಕೊಳ್ಳುವುದು ಸ್ವೀಕಾರಾರ್ಹ ಅಲ್ಲ. ಆದರೆ, ಇದನ್ನು ದೇಶದ ಪ್ರಜೆಗಳ ವಿರುದ್ಧ ಬಳಕೆ ಮಾಡಲಾಗಿದೆ ಎಂಬ ಅನುಮಾನ ವ್ಯಾಪಕವಾಗಿರುವುದಂತೂ ನಿಜ. ಹಾಗೆ ಬಳಕೆ ಮಾಡಿಕೊಂಡಿದ್ದು ನಿಜವೇ ಆಗಿದ್ದರೆ, ಈಗಿನ ಆಡಳಿತಾರೂಢರು ಅಧಿಕಾರದಲ್ಲಿ ಮುಂದುವರಿಯುವ ನೈತಿಕ ಹಕ್ಕನ್ನು ಉಳಿಸಿಕೊಳ್ಳುತ್ತಾರೆಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಪೆಗಾಸಸ್ ಸುತ್ತ ಸೃಷ್ಟಿಯಾಗಿರುವ ವಿವಾದಕ್ಕೆ ಅಷ್ಟು ಮಹತ್ವ ಇದೆ. ಹೀಗಾಗಿ, ಇಡೀ ಪ್ರಕರಣದ ವಿಚಾರವಾಗಿ ತಾನು ಶುದ್ಧಹಸ್ತ ಎಂಬುದನ್ನು ದೇಶಕ್ಕೆ ತೋರಿಸಬೇಕಾದುದು ಕೇಂದ್ರ ಸರ್ಕಾರದ ಹೊಣೆಯಾಗಿದೆ.

ದಿನದ ಟ್ವೀಟ್

ಲಾಭ ಗಳಿಕೆಯ ಮಾರಾಟ




ತೃಪ್ತಿಕರವಾಗಿ ಕೆಲಸ ನಿರ್ವಹಿಸದ ಕಂಪನಿಗಳ ಷೇರುಗಳನ್ನು ಲಾಭ ಗಳಿಕೆಯ ಉದ್ದೇಶದಿಂದ ಮಾರಾಟ ಮಾಡುವುದು ಒಳ್ಳೆಯದು. ಆದರೆ, ಮೂಲಭೂತವಾಗಿ ಗಟ್ಟಿಯಾಗಿರುವ ಕಂಪನಿಗಳ ಷೇರುಗಳನ್ನು ಲಾಭ ಗಳಿಕೆಯ ಉದ್ದೇಶದಿಂದ ಮಾರಾಟ ಮಾಡುವುದು ಸಂಪತ್ತು ಸೃಷ್ಟಿಗೆ ಒಂದು ಅಡ್ಡಿ. ಕಂಪನಿಯು ಒಳ್ಳೆಯ ಸಾಧನೆ ತೋರುತ್ತಿದೆ ಎಂದಾದರೆ, ಅದು ಅದೇ ಸ್ಥಿತಿಯಲ್ಲಿ ಮುಂದುವರಿಯುವಷ್ಟು ಕಾಲ ಅದರ ಷೇರುಗಳನ್ನು ಇಟ್ಟುಕೊಂಡಿರಿ.

ಡಿ. ಮುತ್ತುಕೃಷ್ಣನ್, ಹವ್ಯಾಸಿ ಹೂಡಿಕೆದಾರ

ಕಿಡಿನುಡಿ

ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ತಮಿಳುನಾಡಿನವರಾದ ಕಾರಣ ನದಿ ಜೋಡಣೆ ಯೋಜನೆ ಘೋಷಿಸಿದ್ದಾರೆ. ಯೋಜನೆಯಿಂದ ಆ ರಾಜ್ಯಕ್ಕೆ ಲಾಭವೇ ವಿನಾ ಕರ್ನಾಟಕಕ್ಕೆ ಏನೂ ಸಿಗುವುದಿಲ್ಲ. ನದಿ ಜೋಡಣೆ ಕುರಿತು ನಮ್ಮ ರಾಜ್ಯದ ಜತೆಗೆ ಈವರೆಗೆ ಚರ್ಚೆ ನಡೆಸಿಲ್ಲ. ಯೋಜನೆಯ ವ್ಯಾಪ್ತಿಯ ರಾಜ್ಯಗಳ ಜತೆಗೆ ಚರ್ಚೆಯನ್ನೇ ನಡೆಸದೆ ಯೋಜನೆ ಜಾರಿಗೆ ಮುಂದಾದರೆ ಜಲವಿವಾದ ಉದ್ಭವಿಸುತ್ತದೆ.



ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 5-2-1997

• ನವಾಜ್ ಷರೀಫ್ ಪಕ್ಷಕ್ಕೆ ಬಹುಮತ ಬೆನಜೀರ್ ಪಕ್ಷಕ್ಕೆ ಸೋಲು

ಇಸ್ಲಾಮಾಬಾದ್, ಫೆ. 4 (ಎಎಫ್‌ಪಿ)– ನವಾಜ್ ಷರೀಫ್ ನೇತೃತ್ವದ ಪಾಕಿಸ್ತಾನ ಮುಸ್ಲಿಂ ಲೀಗ್ ಸೋಮವಾರ ನಡೆದ ರಾಷ್ಟ್ರೀಯ ಚುನಾವಣೆಯಲ್ಲಿ ನಿಚ್ಚಳ ಬಹುಮತ ಗಳಿಸಿ ಜಯಭೇರಿ ಬಾರಿಸಿದೆ. ಜತೆಗೆ ಪಂಜಾಬ್ ಪ್ರಾಂತ್ಯದ ಎಲ್ಲ ಅಸೆಂಬ್ಲಿ ಚುನಾವಣೆಯಲ್ಲೂ ಭಾರಿ ಜಯ ಸಾಧಿಸಿದೆ.

ರಾಷ್ಟ್ರೀಯ ಅಸೆಂಬ್ಲಿಯ 214 ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ಪಾಕಿಸ್ತಾನ ಮುಸ್ಲಿಂ ಲೀಗ್ ಪಕ್ಷವು 134 ಸ್ಥಾನಗಳನ್ನು ಗೆದ್ದುಕೊಂಡಿದೆ. ಬೆನಜೀರ್ ಭುಟ್ಟೊ ಅವರ ಪಾಕಿಸ್ತಾನ ಪೀಪಲ್ಸ್ ಪಾರ್ಟಿಯು ಸೋಲು ಕಂಡಿದ್ದು, 17 ಸ್ಥಾನಗಳನ್ನಷ್ಟೇ ಗೆದ್ದಿದೆ.

• ಹೆಜ್ಜಾಲ ಗೋಲಿಬಾರ್ ಪ್ರಕರಣ ನ್ಯಾಯಾಂಗ ತನಿಖೆಗೆ ಆದೇಶ

ಬೆಂಗಳೂರು, ಫೆ. 4– ಬಿಡದಿ ಬಳಿ ಹೆಜ್ಜಾಲದಲ್ಲಿ ಹಿಂಸಾಚಾರದಲ್ಲಿ ತೊಡಗಿದ್ದ ಉದ್ರಿಕ್ತ ಗುಂಪು ಚದುರಿಸಲು ಸೋಮವಾರ ನಡೆದ ಪೊಲೀಸ್ ಗೋಲಿಬಾರ್ ಘಟನೆ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸುವುದಾಗಿ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಅಥವಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅವರ ನೇತೃತ್ವದಲ್ಲಿ ನ್ಯಾಯಾಂಗ ವಿಚಾರಣಾ ಆಯೋಗ ರಚಿಸಲಾಗುವುದು ಎಂದರು.

50 ವರ್ಷಗಳ ಹಿಂದೆ

ಶನಿವಾರ, 5-2-1972

• ಬಾಂಗ್ಲಾದೇಶಕ್ಕೆ ಒಂದೇ ಬಾರಿಗೆ 8 ಐರೋಪ್ಯ ರಾಷ್ಟ್ರಗಳ ಮನ್ನಣೆ

ನವದೆಹಲಿ, ಫೆ. 4– ಪಶ್ಚಿಮ ಜರ್ಮನಿ ಮತ್ತು ಬ್ರಿಟನ್ ನೇತೃತ್ವದಲ್ಲಿ ಪಶ್ಚಿಮ ಯುರೋಪಿನ ಎಂಟು ರಾಷ್ಟ್ರಗಳು ಇಂದು ಬಾಂಗ್ಲಾದೇಶಕ್ಕೆ ಮಾನ್ಯತೆ ನೀಡಿವೆ. ಶೀಘ್ರವೇ ಇನ್ನೂ ಎರಡು ದೇಶಗಳು ಇಂತಹುದೇ ಒಂದು ವಿಧ್ಯುಕ್ತ ಮನ್ನಣೆ ಪ್ರಕಟಿಸುವ ನಿರೀಕ್ಷೆ ಇದೆ.

ಇಂದು ಸಂಜೆ 4.30 ಗಂಟೆಗೆ ಬ್ರಿಟನ್ ಮತ್ತು ಪಶ್ಚಿಮ ಜರ್ಮನಿಗಳು ಏಕಕಾಲದಲ್ಲಿ ತಮ್ಮ ನಿರ್ಧಾರ ಘೋಷಿಸಿದವು.

• ಅರಸು ಸ್ಪರ್ಧೆ ಇಲ್ಲ

ನವದೆಹಲಿ, ಫೆ. 4– ಚುನಾವಣೆಗಳಲ್ಲಿ ಪಕ್ಷದ ಪ್ರಚಾರ ಸಂಘಟನೆಗೆ ಸಮಯ ವಿನಿಯೋಗಿಸುವುದಕ್ಕಾಗಿ ಮೈಸೂರು ಪ್ರದೇಶ ಆಡಳಿತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಡಿ. ದೇವರಾಜ ಅರಸು ಅವರು ವಿಧಾನಸಭೆಗೆ ಸ್ಪರ್ಧಿಸುವುದಿಲ್ಲ.

ಪಕ್ಷದ ಕೇಂದ್ರ ಚುನಾವಣಾ ಸಮಿತಿಯು ಅವರ ಹುಣಸೂರು ಕ್ಷೇತ್ರದಿಂದ ಶ್ರೀ ಡಿ. ಕರಿಯಪ್ಪ ಗೌಡರನ್ನು ಉಮೇದುವಾರರನ್ನಾಗಿ ನಾಮಕರಣ ಮಾಡಿದೆ.

ಡಿಜಿಟಲ್ ಜ್ಞಾನದ ಯಜಮಾನಿಕೆಯಲ್ಲಿ ಮನುಷ್ಯಜ್ಞಾನ ಅಡಿಯಾಳಾಗಬಾರದು

ಶಿಕ್ಷಣ ಕ್ಷೇತ್ರದ ಕಾರ್ಪೊರೇಟೀಕರಣ



ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ನನ್ನ ಹುಟ್ಟೂರು ಬರಗೂರಿಗೆ ಐದಾರು ಕಿಲೊ ಮೀಟರ್ ದೂರದಲ್ಲಿ ಹಾರೋಗೆರೆಯೆಂಬ ಹಳ್ಳಿಯಿದೆ. ಈ ಹಳ್ಳಿಯನ್ನು ದಾಟದರೆ ಆಂಧ್ರಪ್ರದೇಶ ಆರಂಭ. ಇಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯಿನಿ ಇತ್ತೀಚೆಗೆ ನನ್ನನ್ನು ಸಂಪರ್ಕಿಸಿದರು. 'ನಮ್ಮ ಶಾಲೆಗೆಂದು ಆರು ಕೊಠಡಿಗಳಿವೆ. ಐದು ಶಿಥಿಲಗೊಂಡಿವೆ. ಬಯಲಲ್ಲಿ ತರಗತಿ ಮಾಡುತ್ತಿದ್ದೇವೆ. ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ನೆರವು ಕೊಡಿಸಿ' ಎಂದು ಕೇಳಿದ್ದಲ್ಲದೆ, ಬಯಲು ತರಗತಿಯ ಚಿತ್ರಗಳನ್ನು ಕಳಿಸಿದರು.

ಅವರು ನನ್ನನ್ನೇ ಕೇಳಲು ಕಾರಣವಿತ್ತು. ನಾನು ಅದೇ ಊರಿಗೆ ಒಂದು ಹಾಸ್ಟೆಲ್, ಹುಟ್ಟೂರಿಗೆ ಎರಡು ಹಾಸ್ಟೆಲ್, ಸಾಂಸ್ಕೃತಿಕ ಭವನ, ಆಸ್ಪತ್ರೆ ಕಟ್ಟಡಕ್ಕೆ ಕಾರಣನಾಗಿದ್ದೆ. ಇದು ಬೇರೆ ವಿಷಯ. ಮುಖ್ಯ ವಿಷಯವೆಂದರೆ, ಸರ್ಕಾರಿ ಶಾಲೆಗಳ ದುಃಸ್ಥಿತಿ. ಹಾರೋಗೆರೆಯೆಂಬ ಗಡಿಗ್ರಾಮದ್ದು ಒಂದು ಸಾಂಕೇತಿಕ ಸಾಕ್ಷಿ.

ಒಂದು ಮಾಹಿತಿಯಂತೆ, ನಮ್ಮ ದೇಶದಲ್ಲಿ 10,83,678 ಸರ್ಕಾರಿ ಶಾಲೆಗಳು, ನಮ್ಮ ರಾಜ್ಯದಲ್ಲಿ 44,615 ಪ್ರಾಥಮಿಕ ಮತ್ತು 5,240 ಪ್ರೌಢಶಾಲೆಗಳು ಇವೆ. ಇವುಗಳಲ್ಲಿ ಅನೇಕ ಶಾಲೆಗಳು ಹಾರೋಗೆರೆ ಶಾಲೆಯ ಸ್ಥಿತಿಯಲ್ಲಿವೆ.

ಹೀಗೆ ಅನೇಕ ಶಾಲೆಗಳು ಸೌಕರ್ಯವಿಲ್ಲದೆ ಉಪವಾಸ ಅನುಭವಿಸುತ್ತಿರುವಾಗ ಸರ್ಕಾರಗಳು ಡಿಜಿಟಲ್ ಶಿಕ್ಷಣಕ್ಕೆ ಆದ್ಯತೆ ನೀಡುವ ಮೂಲಕ 'ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು' ಎಂಬ ಹಳ್ಳಿ ಗಾದೆಯನ್ನು ನಿಜ ಮಾಡುತ್ತಿವೆ. ಇತ್ತೀಚಿನ ಸಾಕ್ಷಿಯಾಗಿ ಒಕ್ಕೂಟ (ಕೇಂದ್ರ) ಸರ್ಕಾರದ ಬಜೆಟ್ ಅನ್ನು ನೋಡಬಹುದು.

ಸಮಗ್ರ ಶಿಕ್ಷಣಕ್ಕೆ ಸ್ವಲ್ಪ ಹೆಚ್ಚು ಹಣ ನೀಡಿರುವುದು ಸ್ವಾಗತಾರ್ಹವಾದರೂ ಡಿಜಿಟಲ್ ಆದ್ಯತೆಯ ದಿಕ್ಸೂಚಿ ದಿಗಿಲು ಹುಟ್ಟಿಸುತ್ತದೆ. ಯಾಕೆಂದರೆ ಈಗಾಗಲೇ ದೊಡ್ಡ ಪ್ರಮಾಣದಲ್ಲಿರುವ ಶೈಕ್ಷಣಿಕ ಅಸಮಾನತೆಗೆ ಡಿಜಿಟಲ್ ಆದ್ಯತೆಯ ಅಸಮಾನತೆಯೂ ಸೇರಿಕೊಂಡು ದೇಶದ ಗ್ರಾಮೀಣರನ್ನು, ಬಡವರನ್ನು ಅಣಕಿಸುತ್ತದೆ. 200 ಟಿ.ವಿ. ಚಾನೆಲ್‌ಗಳನ್ನು ಸ್ಥಾಪಿಸಿ ಪೂರಕ ಶಿಕ್ಷಣ ಕೊಡಲಾಗುತ್ತದೆ. 'ಪೂರಕ' ಎನ್ನುವುದು ಸಮಾಧಾನದ ಸಂಗತಿಯಾದರೂ ಇ-ಕಂಟೆಂಟ್ ಸಿದ್ಧಪಡಿಸುವಿಕೆ, ವೃತ್ತಿಪರ ಕೋರ್ಸುಗಳಿಗೆ 750 ವರ್ಚುವಲ್ ಲ್ಯಾಬ್ ಮತ್ತು 75 ಇ-ಲ್ಯಾಬ್ ನಿರ್ಮಾಣ, ಡಿಜಿಟಲ್ ವಿಶ್ವವಿದ್ಯಾಲಯ ಸ್ಥಾಪನೆಯಂತಹ ವಿಷಯಗಳಿಗೆ ನೀಡಿರುವ 'ಆದ್ಯತೆ'ಯು ಸರ್ಕಾರದ ಶೈಕ್ಷಣಿಕ ನೀತಿಯ ದಿಕ್ಕನ್ನು ತೋರುತ್ತದೆ.

ಪ್ರಾದೇಶಿಕ ಭಾಷೆಗಳಲ್ಲಿ ಇ-ಕಂಟೆಂಟ್ ಸಿದ್ಧಮಾಡಿ, ಇಂಟರ್‌ನೆಟ್, ಮೊಬೈಲ್, ಟಿ.ವಿ., ರೇಡಿಯೊ ಮೂಲಕ ವಿದ್ಯಾರ್ಥಿಗಳಿಗೆ ದೊರಕಿಸುವ ಪ್ರಸ್ತಾಪವನ್ನು ಬಜೆಟ್‌ನಲ್ಲಿ ಮಾಡಲಾಗಿದೆ. ಡಿಜಿಟಲ್ ವಿಶ್ವವಿದ್ಯಾಲಯವು ಮನೆ ಬಾಗಿಲಲ್ಲೇ ಕಲಿಕೆಯ ಅನುಭವ ನೀಡುತ್ತದೆಯೆಂಬ ಆಕರ್ಷಕ ಮಾತನ್ನೂ ಹೇಳಲಾಗಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಶೇ 40ರಷ್ಟು ಆನ್‌ಲೈನ್ ಶಿಕ್ಷಣಕ್ಕೆ ಅವಕಾಶ ನೀಡುವ ಅಂಶವಿದ್ದು ಅದಕ್ಕೆ ಪೂರಕವಾಗಿಯೇ ಬಜೆಟ್ ಪ್ರಸ್ತಾಪಗಳೂ ಬಂದಿವೆಯೆಂಬುದು ಸ್ಪಷ್ಟವಾಗಿದೆ.

ಹೊಸ ತಂತ್ರಜ್ಞಾನವನ್ನು ಶಿಕ್ಷಣಕ್ಕೆ ಪೂರಕ ಸಾಧನವಾಗಿ ಮಾತ್ರ ಬಳಸಿಕೊಳ್ಳುವುದು ಸರಿ. ಆದರೆ ಅದೇ ಆದ್ಯತೆಯಾದರೆ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಒಟ್ಟಿಗೆ ಸೇರುವ ತರಗತಿ ಶಿಕ್ಷಣಕ್ಕೆ ಧಕ್ಕೆಯಾಗುತ್ತದೆ. ನೇರ ತರಗತಿ ಶಿಕ್ಷಣಕ್ಕೆ ಮತ್ತಾವುದೂ ಪರ್ಯಾಯವಲ್ಲ. ತಂತ್ರಜ್ಞಾನಾಧಾರಿತ ಶೈಕ್ಷಣಿಕ ಪದ್ಧತಿಯು ವಿದ್ಯಾರ್ಥಿಗಳನ್ನು ಏಕಾಕಿತನಕ್ಕೆ ದೂಡುತ್ತದೆ, ಪೋಷಕರಿಂದ, ಅಧ್ಯಾಪಕರಿಂದ, ಸಹಪಾಠಿಗಳಿಂದ ಬಹಳಷ್ಟು ದೂರ ಮಾಡುತ್ತದೆ. ಮನುಷ್ಯ ಸಂಬಂಧಗಳ ಸುಖ ಮೂಕವಾಗುತ್ತದೆ.

ತಂತ್ರಜ್ಞಾನವು ಎಷ್ಟು ಬೇಕೋ ಅಷ್ಟು ಇರಬೇಕೇ ವಿನಾ ಮನುಷ್ಯನ ಮನಸ್ಸಿನ ಮೇಲೆ ಸವಾರಿ ಮಾಡಿ ಸಂವೇದನಾಶೀಲತೆಯನ್ನು ಕುಗ್ಗಿಸಬಾರದು. ಸಂವೇದನಾಶೀಲತೆ ಕುಗ್ಗಿದರೆ, ಸೃಜನಶೀಲತೆಯೂ ಮಗ್ಗಿಯ ಮಟ್ಟಕ್ಕೆ ಇಳಿಯುತ್ತದೆ. ಯಾಂತ್ರಿಕ ಲೆಕ್ಕ ಮುಖ್ಯವಾಗುತ್ತದೆ. ನಿಜ, ಕೋವಿಡ್ ಕಾಲದಲ್ಲಿ ಆನ್‌ಲೈನ್ ಅನಿವಾರ್ಯವು ಅನುಕೂಲಕರವಾಗಿತ್ತೆಂಬ ವಾಸ್ತವವನ್ನು ಒಪ್ಪೋಣ. ಆದರೆ, ಆನ್‌ಲೈನ್ ವಿಧಾನವೇ ಅವಿಭಾಜ್ಯ ಅಂಗವಾಗಿ ಆದ್ಯತೆಯಾಗುವುದನ್ನು ಒಪ್ಪದಿರೋಣ.

ಇಲ್ಲಿಯೇ ಇನ್ನೊಂದು ಅಂಶವನ್ನು ಗಮನಿಸಬೇಕು. ತಂತ್ರಜ್ಞಾನದ ಸಲಕರಣೆಗಳು ಶಿಕ್ಷಣ ಕ್ಷೇತ್ರದ ಅವಿಭಾಜ್ಯ ಅಂಗವಾಗುವುದೆಂದರೆ ಶಿಕ್ಷಣವು ಉದ್ಯಮದ ಒಂದು ಅಂಗವಾಗುತ್ತದೆ. ಈ ಸಲಕರಣೆಗಳನ್ನು ಉತ್ಪಾದಿಸುವ ಉದ್ಯಮಗಳಿಗೆ ಪೂರಕವೂ ಲಾಭ ತರುವ ಸಾಧನವೂ ಆಗಿ ಶಿಕ್ಷಣ ಕ್ಷೇತ್ರವು ಬಳಕೆಯಾಗುತ್ತದೆ. ಹೈಟೆಕ್ ಹಾಗೂ ಆಧುನಿಕತೆಯ ಹೆಸರಿನಲ್ಲಿ ಶಿಕ್ಷಣವು ಕಾರ್ಪೊರೇಟ್ ಉದ್ಯಮೀಕರಣವಾಗುತ್ತದೆ.

ಹಾಗಾದರೆ ಆಧುನೀಕರಣ ಬೇಡವೇ ಎಂದು ಪ್ರಶ್ನಿಸಬಹುದು. ಆಧುನೀಕರಣ ಬೇಕು. ಆದರೆ, ಆಧುನೀಕರಣವೆಂದರೆ ಕಾರ್ಪೊರೇಟೀಕರಣವಲ್ಲ, ಕಾರ್ಪೊರೇಟ್ ಕಲ್ಪನಾ ವಿಲಾಸ ಇಲ್ಲದೆ ಇದ್ದಾಗಲೂ ಶತಶತಮಾನಗಳಿಂದ ಆಧುನೀಕರಣಗೊಳ್ಳುತ್ತಲೇ ಬಂದ ಸಮಾಜ ಮತ್ತು ಸಂಸ್ಕೃತಿಯ ಪರಂಪರೆ ನಮ್ಮದು. ಆಧುನಿಕತೆ ಎನ್ನುವುದು ಆಯಾ ಸಂದರ್ಭದ ಸಮಕಾಲೀನ ಹಂತ. ಜಡತೆಯಿಂದ ಬಿಡಿಸಿಕೊಂಡ ಚಲನಶೀಲ ಪ್ರಕ್ರಿಯೆ. ಆದ್ದರಿಂದ ಆಧುನಿಕತೆಯೆನ್ನುವುದು ಯಾಂತ್ರಿಕವಲ್ಲ, ತಾಂತ್ರಿಕವಲ್ಲ. ಅದು ತಾತ್ವಿಕ. ನಮ್ಮ ಮನೋಧರ್ಮದ ಭಾಗ.



ಈ ದೃಷ್ಟಿಯಿಂದ ನೋಡಿದಾಗ ವೈಜ್ಞಾನಿಕ ಮನೋಧರ್ಮವಿಲ್ಲದ ವಿಜ್ಞಾನಿಗಳನ್ನು 'ತಂತ್ರಜ್ಞಾನ'ದ ಕಾರಣಕ್ಕಾಗಿ ಆಧುನಿಕ ಎನ್ನಲಾದೀತೆ? ಬುದ್ಧ, ಬಸವಣ್ಣ, ಪಂಪ, ಕುಮಾರವ್ಯಾಸ, ಕನಕದಾಸ, ಗಾಂಧಿ, ಅಂಬೇಡ್ಕರ್, ನೆಹರೂ, ಸುಭಾಷ್‌ಚಂದ್ರ ಬೋಸ್, ಭಗತ್ ಸಿಂಗ್, ಮೌಲಾನಾ ಆಜಾದ್, ಕುವೆಂಪು ಮುಂತಾದವರು ಇವತ್ತಿಗೂ ಆಧುನಿಕ ವಿಚಾರದವರಲ್ಲವೇ? ಅಕ್ಕ ಮಹಾದೇವಿ, ಸಾವಿತ್ರಿಬಾಯಿ ಫುಲೆಯವರಿಗಿಂತ ಆಧುನಿಕರು ಬೇಕೆ? ಇಂಥ ಅಸಂಖ್ಯಾತ 'ಆಧುನಿಕ' ಚೇತನಗಳ ಸಾಕ್ಷಿ ಕೊಡಬಹುದು.

ಹಾಗೆಂದು ಹಿಂದಿನ ಕಾಲದಲ್ಲಿದ್ದಂತೆಯೇ ಎಲ್ಲವೂ ಇರಬೇಕೆಂದು ನಾನು ಹೇಳುವುದಿಲ್ಲ. ಹಳೆಯ ಪ್ರತಿಯೊಂದೂ ಪ್ರಸ್ತುತ ಎಂದರೆ ನಾವು ಬದುಕಿಲ್ಲ ಎಂದು ಅರ್ಥ. ಹಳೆಯ ಪ್ರತಿಯೊಂದೂ ಅಪ್ರಸ್ತುತ ಎಂದರೆ ನಾವು ಬೆಳೆದಿಲ್ಲ ಎಂದು ಅರ್ಥ. ಪರಂಪರೆಯ ಪ್ರಜ್ಞೆ ಇಲ್ಲದೆ ಪ್ರಗತಿ ಪ್ರಜ್ಞೆ ಅರ್ಥಪೂರ್ಣವಾಗುವುದಿಲ್ಲ. ಈ ವಿವೇಕವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಅಗತ್ಯ. ಡಿಜಿಟಲ್ ಜ್ಞಾನದ ಯಜಮಾನಿಕೆಯಲ್ಲಿ ಮನುಷ್ಯಜ್ಞಾನ ಅಡಿಯಾಳಾಗಬಾರದು. ಅಸಮಾನತೆಯನ್ನು ಕಾಯಂಗೊಳಿಸಬಾರದು.


ನಮ್ಮ ಸಮಾಜವು ಈಗಾಗಲೇ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯಿಂದ ನರಳುತ್ತಿದೆ. ಒಂದು ಮಾಹಿತಿಯ ಪ್ರಕಾರ, ದೇಶದ ಶೇ 10ರಷ್ಟು ಶ್ರೀಮಂತರು ಶೇ 75ರಷ್ಟು ಸಂಪತ್ತಿನ ಒಡೆಯರಾಗಿದ್ದಾರೆ. ಆರ್ಥಿಕ ಸಂಕಷ್ಟದಲ್ಲಿರುವ ರೈತ, ಕೂಲಿಕಾರ, ದಲಿತ ಮುಂತಾದವರು ತಮ್ಮ ಮಕ್ಕಳಿಗೆ ಪೂರ್ಣ ಶಿಕ್ಷಣ ಕೊಡಿಸಲಾಗದ ಸುಳಿಯಲ್ಲಿ ಸಿಕ್ಕಿರುವಾಗ ಡಿಜಿಟಲ್ ಆದ್ಯತೆಯ ಶಿಕ್ಷಣವು ಅಸಮಾನತೆಯ ದೊಡ್ಡ ಕಂದಕ ನಿರ್ಮಾಣ ಮಾಡುತ್ತದೆ.

ನಿಜ, ಡಿಜಿಟಲ್‌ರಹಿತ ಶಿಕ್ಷಣ ವ್ಯವಸ್ಥೆಯಲ್ಲೂ ಅಸಮಾನತೆಯಿದೆ. ಈ ಅಸಮಾನತೆಯು ಮಕ್ಕಳಲ್ಲಿ ಮೇಲರಿಮೆ, ಕೀಳರಿಮೆಗಳಿಗೆ ಕಾರಣವಾಗುತ್ತ ಬಂದಿದೆ. ಒಂದೇ ವಯಸ್ಸಿನ ಮಕ್ಕಳು ವಿವಿಧ ಮಾದರಿಯ ಶಾಲಾ ಪದ್ಧತಿಯಲ್ಲಿ ವಿಭಜನೆಗೊಳ್ಳುವ ಶಿಕ್ಷಣ ನಮ್ಮದಾಗಿದೆ. ಖಾಸಗಿ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಸೇರುವ ವಿದ್ಯಾರ್ಥಿಗಳ ಸಾಮಾಜಿಕ- ಆರ್ಥಿಕ ಸ್ವರೂಪದಲ್ಲೇ ವಿಭಜಕತೆಯ ಸಾಕ್ಷಿಯಿದೆ.

ನಮ್ಮ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳಿಗೆ 53 ಸಾವಿರಕ್ಕೂ ಹೆಚ್ಚು ಶಿಕ್ಷಕರ ಅಗತ್ಯವಿದೆಯೆಂದು ಸಚಿವರೇ ಹೇಳಿದ್ದಾರೆ. ಈಗ ಅರ್ಧದಷ್ಟು ಅತಿಥಿ ಬೋಧಕರನ್ನು ನೇಮಿಸಲಾಗಿದೆ. ಅತ್ತ ಕಾಲೇಜುಗಳು ಅತಿಥಿ ಉಪನ್ಯಾಸಕರಿಂದಲೇ ಬಹುಪಾಲು ನಡೆಯುತ್ತಿವೆ. ಆದ್ದರಿಂದ ಶಿಕ್ಷಣ ಕ್ಷೇತ್ರದ ಅಸಮಾನತೆಯನ್ನು ತೊಡೆದುಹಾಕುವ ಪ್ರಾಥಮಿಕ ಪ್ರಯತ್ನವಾಗಿ ಸರ್ಕಾರಿ ಶಾಲೆ, ಕಾಲೇಜುಗಳ ಮೂಲ ಸೌಕರ್ಯಗಳ ಹಸಿವನ್ನು ಮೊದಲು ಹಿಂಗಿಸಬೇಕು.

ನೇರ ತರಗತಿ ಶಿಕ್ಷಣವೇ ಆದಿ ಮತ್ತು ಅಂತಿಮ ಆದ್ಯತೆಯಾಗಬೇಕು. ಡಿಜಿಟಲ್ ಶಿಕ್ಷಣವು ನೇರ ತರಗತಿಯ ಕಲಿಕೆಗೆ ಪರ್ಯಾಯವಲ್ಲ ಎಂದು ಶೈಕ್ಷಣಿಕ ಸಂಶೋಧನೆಗಳೆಲ್ಲ ಹೇಳಿರುವುದನ್ನು ಅರ್ಥಮಾಡಿಕೊಳ್ಳಬೇಕು. ಶೈಕ್ಷಣಿಕ ಅಸಮಾನತೆ ಇಲ್ಲವಾಗಬೇಕು.

ಚುರುಮುರಿ



ತಲೆಗೆ ಬಿಸಿ, ಕಾಲಿಗೆ ತಂಪು!

• ಬಿ.ಎನ್.ಮಲ್ಲೇಶ್

'ಲೇ ತೆಪರ, ಏನೋ ಹೊಸ ಸುದ್ದಿ? ಅದೇನೋ ಕೇಜ್ರಿವಾಲು ಗೋವಾದಲ್ಲಿ ಅಫಿಡವಿಟ್ ತಗಾತದಾರಂತೆ?' ಹರಟೆಕಟ್ಟೇಲಿ ತೆಪರೇಸಿಯನ್ನ ದುಬ್ಬೀರ ಕೇಳಿದ.

'ಅದಾ... ನಾನು ಇನ್ಮುಂದೆ ಭ್ರಷ್ಟಾಚಾರ ಮಾಡಲ್ಲ, ಪಕ್ಷಾಂತರ ಮಾಡಲ್ಲ ಅಂತ ಎಮ್ಮೆಲ್ಲೆ ಕ್ಯಾಂಡೇಟ್‌ಗಳತ್ರ ಅಫಿಡವಿಟ್ ತಗಾತದಾರಂತೆ'.

'ಅಲೆ ಇವ್ನ, ಹೌದಾ? ನಮ್ಮಲ್ಲೂ ಯಾಕೆ ಹಂಗ್ ಮಾಡಬಾರ್ದು?'

'ಮಾಡಬೋದು, ಆದ್ರೆ ಅಫಿಡವಿಟ್ ಬರ್ಕೊಡೋರು ಯಾರು? ಎಲ್ಲ ಪಕ್ಷದಲ್ಲೂ ಜಿಗಿತವೀರರು, 'ಸಂಪರ್ಕ'ದಲ್ಲಿರೋರೇ ಇದಾರೆ...' ತೆಪರೇಸಿ ನಕ್ಕ.

'ಸಂಪರ್ಕ'ದಲ್ಲಿ ಇರಬಾರದು ಅಂತಾನೂ ಒಂದು ಅಫಿಡವಿಟ್ ತಗಂಡ್ರೆ ಹೆಂಗೆ?' ಗುಡ್ಡೆಗೂ ನಗು.

'ಅದು ಬಿಡಲೆ ಪಂಗೆ... ಈಗ ಪದೇಪದೇ ಒಡವೆ ವಸ್ತ್ರ ಕೇಳಲ್ಲ ಅಂತ ಹೆಂಡ್ತೀರತ್ರ ಅಫಿಡವಿಟ್ ಬರೆಸ್ಕಂಡ್ರೆ ಹೆಂಗೆ? ಚಿನ್ನದ ರೇಟು ಇಳೀತತಿ ಅಂತ ಬಜೆಟ್ಟಲ್ಲಿ ಕೇಳ್ತಿದ್ದಂಗೆ 'ನೆಕ್ಲೇಸ್ ಕೊಡ್ಸಿ' ಅಂತ ನನ್ನೆಂಡ್ತಿ ಗಂಟುಬಿದ್ದಾಳೆ. ಏನ್ ಮಾಡ್ಲಿ?' ದುಬ್ಬೀರನಿಗೆ ಕೋಪ.

'ಆಗ ಅವರು ಗಂಡಸರಿಗೂ 'ನಾವು ಗುಂಡು ಹಾಕಲ್ಲ...' ಅಂತೆಲ್ಲ ಅಫಿಡವಿಟ್ ಬರ್ಕೊಡಿ ಅಂತ ಕೇಳಿದ್ರೆ?' ತೆಪರೇಸಿ ಕೊಕ್ಕೆ ಹಾಕಿದ.

'ಅದೆಂಗ್ ಬರ್ಕೊಡೋಕಾಗ್ತತಿ? ಈಗ ಅದೆಲ್ಲ ಬೇಡ, ಸೆಂಟ್ರಲ್ ಬಜೆಟ್‌ನ ಯಾರಾದ್ರೂ ಸಿಂಗಲ್ ಲೈನಲ್ಲಿ ಹೇಳ್ರಿ ನೋಡಾಣ...' ದುಬ್ಬೀರ ಸವಾಲು ಹಾಕಿದ.

'ತಲೆಗೆ ಬಿಸಿ, ಕಾಲಿಗೆ ತಂಪು' ಎಂದ ಗುಡ್ಡೆ.

'ಅಂದ್ರೆ?'

'ಛತ್ರಿ ದುಬಾರಿ, ಚಪ್ಪಲಿ ಸೋವಿ ಅಂತ'.

'ಕರೆಕ್ಟ್, ಲೇ ದುಬ್ಬೀರ ನೀನ್ಯಾಕೆ ನಿನ್ ಹೆಂಡ್ತಿಗೆ ನೆಕ್ಲೇಸ್ ಬದಲು ನಾಕು ಜತಿ ಚಪ್ಪಲಿ ಕೊಡಿಸ್ಬಾರ್ದು? ಈಗ ಎರಡೂ ಸೋವಿ ತಾನೆ?' ತೆಪರೇಸಿ ಪ್ರಶ್ನೆ.

'ಕೊಡಿಸಬಹುದು, ಆದ್ರೆ ಅವುನ್ನ ನೆಕ್ಲೇಸ್ ತರ ಕುತ್ತಿಗೆಗೆ ಹಾಕ್ಕಂಡ್ ಹೋಗೋಕಾಗಲ್ಲಲ್ಲೋ...' ದುಬ್ಬೀರನ ಮಾತಿಗೆ ಹರಟೆಕಟ್ಟೆಯಲ್ಲಿ ನಗೆಯ ಅಲೆ ತೇಲಿತು.

ಸಂಗತ

ನೋ ಕ್ಲಿಕ್ ಪ್ಲೀಸ್...

ಪಕ್ಷಿಗಳನ್ನು ನಾವು ಗಮನಿಸುವ ವಿಧಾನವೇ ಬದಲಾಗಬೇಕಿದೆ

• ಮಹೇಶ್ವರ ಹುರುಕಡ್ಲಿ

ರಾಜ್ಯಕ್ಕೆ ಬರುವ ವಲಸೆ ಪಕ್ಷಿಗಳ ಸಂಖ್ಯೆ ಗಣನೀಯವಾಗಿ ಕುಸಿದಿರುವುದು ವರದಿಯಾಗಿದೆ (ಪ್ರ.ವಾ., ಜ. 30). ಚಳಿಗಾಲ ಬಂತೆಂದರೆ ಪಕ್ಷಿಪ್ರಿಯರಿಗೆ ಮತ್ತು ಅವುಗಳೊಟ್ಟಿಗೆ ಫೋಟೊ ಕ್ಲಿಕ್ಕಿಸಿಕೊಳ್ಳಲು ಬಯಸುವವರಿಗೆ ಹಬ್ಬ. ಕೆಲವರಿಗೆ ದೂರದೂರದಿಂದ ಹಾರಿಬರುವ ವಿವಿಧ ಪಕ್ಷಿಗಳನ್ನು ಕಣ್ತುಂಬಿಕೊಳ್ಳುವ ಮತ್ತು ಇನ್ನು ಕೆಲವರಿಗೆ ಅವುಗಳ ಫೋಟೊ ಕ್ಲಿಕ್ಕಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟು ಸೈ ಎನಿಸಿಕೊಳ್ಳುವ ತವಕ. ಆದರೆ ಪಕ್ಷಿಗಳಿಗೆ ಹೇಗೆ ಅರ್ಥವಾಗಬೇಕು ಮನುಷ್ಯನ ಈ ಒಣ ವ್ಯವಹಾರ? ಅವುಗಳೋ ಸರಳಜೀವಿಗಳು. ಜಾತಿ-ದೇಶದ ಗಡಿಗಳನ್ನು ದಾಟಿ ಬದುಕುತ್ತಿರುವ ಶ್ರೇಷ್ಠ ಜೀವಿಗಳು. ಅವುಗಳಿಗೆ ಬೇಕಿರುವುದು ಋತುಮಾನಕ್ಕೆ ಅನುಗುಣವಾಗಿ ಒಂದಿಷ್ಟು ಆಹಾರ, ಮರಿ ಮಾಡಲು ಯೋಗ್ಯ ವಾತಾವರಣ, ಜೊತೆಗಿಷ್ಟು ಖಾಸಗಿತನ ಅಷ್ಟೇ!

ಇಷ್ಟಿದ್ದರೆ ಪಕ್ಷಿಗಳನ್ನು ನೀವು ಆಹ್ವಾನಿಸುವುದೇ ಬೇಕಿಲ್ಲ. ಈ ಮೂಲ ಸೌಕರ್ಯಗಳು ಇರುವಲ್ಲಿ ಪಕ್ಷಿಗಳು ಸ್ವಾಭಾವಿಕವಾಗಿ ಬಂದು ಗುಂಪಾಗಿ ನೆಲೆ ನಿಲ್ಲುತ್ತವೆ. ಇಂತಹ ಪ್ರದೇಶಗಳನ್ನು ಸರ್ಕಾರಗಳು ಪಕ್ಷಿಧಾಮ ಎಂದು ಘೋಷಿಸಿ ಪ್ರವಾಸಿಗರಿಗೆ ಅವಕಾಶ ಕಲ್ಪಿಸಿ ಕೊಡುತ್ತವೆ. ಇದೇ ಮುಂದಾಗುವ ದುರಂತದ ಮೊದಲ ಅಧ್ಯಾಯ. ಎಲ್ಲರಿಂದಲೂ ಆದಾಯ ನಿರೀಕ್ಷಿಸುವುದು ಮನುಷ್ಯನ ಅದರಲ್ಲೂ ಸರ್ಕಾರದ ಸಹಜ ಗುಣವೇ ಆದರೂ ಇಂತಹ ಪಕ್ಷಿಧಾಮ ಮತ್ತು ವನ್ಯಧಾಮಗಳಲ್ಲಿ ಪ್ರವಾಸಿಗರಿಗೆ ಅನುಮತಿ ನೀಡುವುದು ಉಚಿತವಲ್ಲ. ಏಕೆಂದರೆ ಪಕ್ಷಿಗಳನ್ನು ಹೇಗೆ ನೋಡಬೇಕೆಂಬುದೇ ನಮಗೆ ಇನ್ನೂ ಅರ್ಥವಾಗಿಲ್ಲ.

ಪಕ್ಷಿಗಳನ್ನು ಗಮನಿಸಬೇಕು, ಅವುಗಳ ಬಗ್ಗೆ ಅಧ್ಯಯನ ಮಾಡಬೇಕು ಎಂಬ ಯಾವ ಇರಾದೆಯೂ ಶೇ 98ರಷ್ಟು ಪ್ರವಾಸಿಗರಿಗೆ ಇರುವುದೇ ಇಲ್ಲ. ಪ್ರವಾಸಿಗರು ಬಂದಾಗ ಅವರಿಗೆ ಪಕ್ಷಿಗಳು ಕಾಣಬೇಕು ಮತ್ತು ಅವರು ಫೋಟೊ ತೆಗೆದುಕೊಳ್ಳಲು ಅವು ಒಳ್ಳೆಯ ಪೋಸ್ ಕೊಡಬೇಕು ಅಷ್ಟೇ! ಒಂದೊಮ್ಮೆ ಪಕ್ಷಿಧಾಮಕ್ಕೆ ಬಂದು ಪಕ್ಷಿಗಳು ಕಾಣದೇ ಗೂಡುಗಳಲ್ಲಿ ಮರೆಯಾಗಿ ಕೂತಿದ್ದರೆ, ಗಲಾಟೆ ಮಾಡಿಯಾದರೂ ಅವುಗಳನ್ನು ಎಬ್ಬಿಸಿ ತಮ್ಮ ಫೋಟೊ ಖಯಾಲಿ ತೀರಿಸಿಕೊಳ್ಳುವ ಹಲವು ಪ್ರವಾಸಿಗರು ನಮಗೆ ಕಾಣುತ್ತಾರೆ.

ಇದಲ್ಲದೆ, ಪಕ್ಷಿಗಳನ್ನು ನೋಡಲು ಪಕ್ಷಿಧಾಮಕ್ಕೇ ಹೋಗಬೇಕು ಎನ್ನುವುದು ದೇವರನ್ನು ನೋಡಲು ದೇವಸ್ಥಾನಕ್ಕೇ ಹೋಗಬೇಕು ಎನ್ನುವಷ್ಟೇ ತಪ್ಪು ಭಾವನೆ. ಮೊದಲು ನಮ್ಮ ಮನೆಯ ಸುತ್ತಮುತ್ತಲಿನ ಪಕ್ಷಿಗಳನ್ನು ಅವುಗಳ ಖಾಸಗಿತನಕ್ಕೆ ಧಕ್ಕೆ ಬಾರದಂತೆ ಗಮನಿಸುವುದನ್ನು ಕಲಿಯಬೇಕು. ನಂತರ ಪಕ್ಷಿಧಾಮಗಳಿಗೆ ಹೋದಾಗ ಅಲ್ಲಿನ ಪಕ್ಷಿಗಳ ವೈಯಕ್ತಿಕತೆಯನ್ನು ಗೌರವಿಸುವುದನ್ನು ಕಲಿಯಬೇಕು. ನಮ್ಮ ಫೋಟೊ ತೆಗೆಯುವ ತೆವಲಿಗೆ ಪಕ್ಷಿಗಳ ವೈಯಕ್ತಿಕ ಜೀವನದ ಕ್ಷಣಗಳನ್ನು ಹಾಳುಮಾಡಬಾರದು. ಏಕೆಂದರೆ ಪಕ್ಷಿಗಳು ಅತಿಯಾದ ಒತ್ತಡದಲ್ಲಿ ಬದುಕು ಕಟ್ಟಿಕೊಳ್ಳುತ್ತಿವೆ, ನಾವು ಅದನ್ನು ಅರ್ಥಮಾಡಿಕೊಳ್ಳದೆ, ಕಂಡಕಂಡಲ್ಲಿ ಅವು ಕೂತಿದ್ದು, ನಿಂತಿದ್ದು, ಮಲಗಿದ್ದು, ಜೊತೆಗೆ ಮಿಲನ ಕ್ರಿಯೆಯಲ್ಲಿ ತೊಡಗಿದ್ದಾಗಲೂ ಎಡೆಬಿಡದೆ ಫೋಟೊ ಕ್ಲಿಕ್ಕಿಸಿ ಕಾಡುವುದು ತರವೇ?

ಇದರಿಂದ ನಮ್ಮ ರೆಕ್ಕೆಮಿತ್ರರು ಅನುಭವಿಸುವ ಕಿರಿಕಿರಿ ಅವುಗಳಿಗೆ ಮಾತ್ರ ಗೊತ್ತು. ಎಷ್ಟೋ ಬಾರಿ ಗೂಡಿನಲ್ಲಿ ಮರಿಗಳಿಗೆ ಆಹಾರ ನೀಡಬೇಕಿದ್ದ ತಾಯಿ ಹಕ್ಕಿ ಕೊಕ್ಕಿನಲ್ಲಿ ಆಹಾರ ಹಿಡಿದು ಗಂಟೆಗಟ್ಟಲೆ ದೂರದಲ್ಲಿ ಅಸಹಾಯಕವಾಗಿ ಕೂಗುತ್ತಾ ಕೂತಿರುವುದನ್ನು ಗಮನಿಸಿದ್ದೇನೆ. ಕಾರಣವಿಷ್ಟೇ, ಅದರ ಗೂಡಿನ ಬಳಿ ಫೋಟೊ ತೆಗೆಯಲು ಕೂತಿರುವ ಆಗಂತುಕರು. ಆದ್ದರಿಂದ ಯಾವುದೇ ಪಕ್ಷಿಯನ್ನು ನೋಡುವಾಗ ಮೊದಲು ಅದರ ಖಾಸಗಿತನವನ್ನು ಗೌರವಿಸುವುದನ್ನು ಕಲಿಯಬೇಕು. ಗಾಢ ಬಣ್ಣದ ಬಟ್ಟೆ ಧರಿಸುವುದು, ಕಿವಿಗಡಚಿಕ್ಕುವಂತೆ ಶಬ್ದ ಮಾಡುವುದು ಸಲ್ಲದು. ಸಾಧ್ಯವಾದರೆ ಕ್ಯಾಮೆರಾ ಬದಲು ಬೈನಾಕ್ಯುಲರ್‌ಗಳನ್ನು ಮಾತ್ರ ಬಳಸಲು ನಾವೆಲ್ಲ ಮುಂದಾಗಬೇಕು.



ಇಷ್ಟಕ್ಕೇ ಕೈತೊಳೆದುಕೊಂಡರೆ ಸಾಲದು. ದಿನನಿತ್ಯ ಪಕ್ಷಿಗಳ ಕಳ್ಳಬೇಟೆ ಅವ್ಯಾಹತವಾಗಿ ನಡೆಯುತ್ತಿದೆ. ಇದನ್ನು ಜನಸಾಮಾನ್ಯರಾದ ನಾವೆಲ್ಲರೂ ಕಾನೂನಿನ ಚೌಕಟ್ಟಿನಲ್ಲಿ ತಡೆಯಬೇಕು. ಪಕ್ಷಿಗಳ ಆವಾಸವನ್ನು ರಕ್ಷಿಸುವುದು, ಋತುಮಾನದ ಹಣ್ಣಿನ ಸಸಿಗಳನ್ನು ನೆಡುವಂತಹ ಕೆಲಸಗಳನ್ನು ಜನಸಾಮಾನ್ಯರೂ ಮಾಡಬಹುದು. ಭಾರತದ ಕೆಲವು ಬೆರಳೆಣಿಕೆಯಷ್ಟು ಹಳ್ಳಿಗಳಲ್ಲಿ ಇಂದಿಗೂ ಪಟಾಕಿಗಳನ್ನು ಸುಡುವುದು ನಿಷಿದ್ಧ. ಏಕೆಂದರೆ ಆ ಹಳ್ಳಿಗಳ ಪಕ್ಕದಲ್ಲಿರುವ ಪಕ್ಷಿಧಾಮಗಳು! ಇಂತಹ ಉನ್ನತ ಆದರ್ಶಗಳನ್ನು ಎಲ್ಲಾ ಹಳ್ಳಿಗರು ಮೈಗೂಡಿಸಿಕೊಳ್ಳಬೇಕು.

ಪಕ್ಷಿಗಳು ಪರಿಸರ ಆರೋಗ್ಯದ ನೈಸರ್ಗಿಕ ಸೂಚಕಗಳು. ಉತ್ತಮ ಪರಿಸರ ಇರುವೆಡೆ ಅವುಗಳ ಸಂಖ್ಯೆಯೂ ಹೆಚ್ಚು ಇರುತ್ತದೆ. ಯಾವಾಗ ಅವುಗಳ ಸಂಖ್ಯೆ ಕಡಿಮೆಯಾಗುತ್ತದೆಯೋ ಅದು ನಮಗೆಲ್ಲಾ ಎಚ್ಚರಿಕೆಯ ಕರೆಗಂಟೆ. ಈ ದಿಸೆಯಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಮಾತು ನೆನಪಾಗುತ್ತದೆ: 'ಪಕ್ಷಿಗಳ ಆವಾಸವನ್ನು ನೀವು ಕಿತ್ತುಕೊಂಡರೆ ಅವು ನಮ್ಮನ್ನು ದೂರದೇ ನಿರ್ಗಮಿಸುತ್ತವೆ. ಆದರೆ ಅವುಗಳ ನಿರ್ಗಮನ ನಮ್ಮ ನಿರ್ಗಮನದ ಮುನ್ನುಡಿ ಅಷ್ಟೇ. ಏಕೆಂದರೆ ಅವು ಬದುಕಲಾಗದ ವಾತಾವರಣದಲ್ಲಿ ನಾವು ಬದುಕಲು ಸಾಧ್ಯವಿಲ್ಲ'.

ಹೀಗಾಗಿ, ಪರಿಸರ ಉಳಿಯದ ವಿನಾ ಪಕ್ಷಿಗಳಿಗೂ ಪಶುಗಳಿಗೂ ಮನುಷ್ಯನಿಗೂ ಉಳಿವಿಲ್ಲ. ಪಕ್ಷಿಗಳು ಮತ್ತು ಪರಿಸರ ಒಂದಕ್ಕೊಂದು ಬೆಸೆದುಕೊಂಡಿವೆ. ಈ ಕೊಂಡಿಗಳಲ್ಲಿಯೇ ಮನುಷ್ಯನ ಭವಿಷ್ಯ ಅಡಗಿದೆ ಎಂಬುದನ್ನು ಮರೆಯುವಂತಿಲ್ಲ.

ವಾಚಕರ ವಾಣಿ

ರಚನಾತ್ಮಕ ಅಭಿಪ್ರಾಯ ಸಂಗ್ರಹಿಸಿ

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಬಾಡಿಗೆಯನ್ನು ವೈಜ್ಞಾನಿಕವಾಗಿ ಹೆಚ್ಚಿಸುವುದು ಸ್ವಾಗತಾರ್ಹ. ಏಕೆಂದರೆ, ಇಂತಹ ಸುಸಜ್ಜಿತ ರಂಗಮಂದಿರವು ಪ್ರಸ್ತುತ ಕಡಿಮೆ ದರಕ್ಕೆ ರಂಗಾಸಕ್ತರ ಕೈಗೆ ಎಟಕುತ್ತಿದೆ. ಈಗ ಅದರ ಬಾಡಿಗೆ ದರವು ₹ 3,000 ಇದೆ. ಇದನ್ನು ₹ 5,000ದಿಂದ 10,000ದವರೆಗೆ ಹೆಚ್ಚಳ ಮಾಡಲು ಯೋಜಿಸಲಾಗಿದೆ. ಆದರೆ ಇದು ದುಬಾರಿ ದರವಾಗುತ್ತದೆ. ಲಾಗಾಯ್ತಿನಿಂದಲೂ ಇರುವ ಬಾಡಿಗೆಯನ್ನು ಹೆಚ್ಚಳ ಮಾಡದೇ ಇರುವುದು ಪ್ರಾಯೋ ಗಿಕ ಅಲ್ಲ. ಒಬ್ಬ ವ್ಯಕ್ತಿ ತನ್ನ ಪ್ರಭಾವ ಬಳಸಿ ಹಲವು ಬಾರಿ ರಂಗಮಂದಿರವನ್ನು ಕಡಿಮೆ ದರಕ್ಕೆ ಬಾಡಿಗೆಗೆ ಪಡೆದು ಅವ್ಯವಹಾರ ಮಾಡಬಹುದಾದ ಸಾಧ್ಯತೆ ಇರುತ್ತದೆ. ಇದನ್ನು ತಪ್ಪಿಸಿ, ಪ್ರಾಮಾಣಿಕ ರಂಗಕಲಾವಿದರು, ಅಶಕ್ತ ಸಾಮಾಜಿಕ ಸಂಸ್ಥೆಗಳಿಗೆ ಉತ್ತೇಜನ ನೀಡಬೇಕಾದಲ್ಲಿ, ರಚನಾತ್ಮಕ ಅಭಿಪ್ರಾಯ ಸಂಗ್ರಹಿಸಿ ನಂತರ ಪರಿಷ್ಕೃತ ದರ ನಿಗದಿಪಡಿಸುವುದು ಒಳ್ಳೆಯದು.

ಆರ್.ವೆಂಕಟರಾಜು, ಬೆಂಗಳೂರು

ಕನ್ನಡ ಭಾಷೆಗೊಂದು ಹೊಸ ಪದ!

ಸಿ.ಎಂ.ಇಬ್ರಾಹಿಂ ಅವರು ಫೆಬ್ರುವರಿ ಹದಿನಾಲ್ಕರ ಪ್ರೇಮಿಗಳ ದಿನದಂದು 'ಅಲಿಂಗ' ಸಮಾವೇಶ ನಡೆಸುವುದಾಗಿ ಹೇಳಿದ್ದಾರೆ. ತನ್ಮೂಲಕ ಕನ್ನಡಕ್ಕೊಂದು ಹೊಸ ಪದವನ್ನು ಅವರು ಸೇರಿಸಲು ಹೊರಟಿದ್ದಾರೆ. ಸಾಮಾನ್ಯವಾಗಿ ನಾವು ಕನ್ನಡ ವ್ಯಾಕರಣ ಕಲಿಯುವಾಗ 'ಪುಲ್ಲಿಂಗ, ಸ್ತ್ರೀಲಿಂಗ ಹಾಗೂ ನಪುಂಸಕಲಿಂಗ'ದ ಬಗ್ಗೆ ಕಲಿತಿದ್ದೆವು. ಈಗ ಇದರ ಜೊತೆಗೆ 'ಅಲಿಂಗ' ಬಂದು ಸೇರಿಕೊಳ್ಳುತ್ತಿದೆ. 'ಅ' ಪದವು ನಕಾರಾತ್ಮಕ ರೂಪದಲ್ಲಿ ಕನ್ನಡ ಹಾಗೂ ಸಂಸ್ಕೃತ ವ್ಯಾಕರಣದಲ್ಲಿ ಅರ್ಥಕೊಡುತ್ತದೆ. ಪದದ ಹಿಂದೆ ಬರುವ 'ಅ'ಗೆ 'ಇಲ್ಲದ್ದು' ಎನ್ನುವ ಅರ್ಥ ಬರುತ್ತದೆ. ಹೀಗಾಗಿ ಇಬ್ರಾಹಿಂ ಸಾಹೇಬರು ಈ ವಿಷಯದಲ್ಲಿ ಸ್ವಲ್ಪ ಜಾಗರೂಕರಾಗಿರಬೇಕು. ಇದು 'ಲಿಂಗ ಇಲ್ಲದ್ದು' ಎನ್ನುವ ಅರ್ಥ ಹೊರಹೊಮ್ಮಿಸಬಹುದು!

ಮುರಳೀಧರ ಆಚಾರ್ಯ, ಬೆಂಗಳೂರು

ನರೇಗಾ: ದೊಡ್ಡ ಗಾಯದ ಮೇಲೆ ದೊಡ್ಡ ಬರೆ

ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮೂಲಕ ಗ್ರಾಮೀಣ ಬಡತನದ ಸಮಸ್ಯೆಗೆ ಪರಿಹಾರ ಒದಗಿಸುವ ವಾಸ್ತವಿಕ ಚಿಂತನೆಯ ಮೇಲೆ ನಿಂತಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಅನುಷ್ಠಾನದ ಹಂತದಲ್ಲಿ ಕೆಲವು ವೈಫಲ್ಯಗಳನ್ನು ಕಂಡಿದ್ದು ನಿಜ. ಇದನ್ನೇ 2014ರ ಚುನಾವಣೆ ಸಮರದಲ್ಲಿ ಎನ್‌ಡಿಎ ನಾಯಕರಾಗಿದ್ದ ನರೇಂದ್ರ ಮೋದಿ ತಮ್ಮ ಭಾಷಣದಲ್ಲಿ ಎತ್ತಿ ತೋರಿಸಿದ್ದರು. ಪರಿಸ್ಥಿತಿ ಎಷ್ಟರಮಟ್ಟಿಗೆ ಹೋಗಿತ್ತೆಂದರೆ, ಎನ್‌ಡಿಎ ಅಧಿಕಾರಕ್ಕೆ ಬಂದರೆ ನರೇಗಾ ಅಳಿಸಿ ಹೋಗಬಹುದೆಂಬ ಭಾವನೆ ಹರಡಿತ್ತು. ಆದರೆ ಮೋದಿ ನೇತೃತ್ವದ ಪ್ರಥಮ ಸರ್ಕಾರದ ಅವಧಿಯಲ್ಲಿ ಆಗಿದ್ದೇ ಬೇರೆ. ಆಗ ಹಣಕಾಸು ಸಚಿವರಾಗಿದ್ದ ಅರುಣ್ ಜೇಟ್ಲಿ ಅವರು ನರೇಗಾದ ಮಹತ್ವವನ್ನು ಗುರುತಿಸಿದ್ದರು, ತಮ್ಮ ಬಜೆಟ್‌ಗಳಲ್ಲಿ ಹೆಚ್ಚು ಹೆಚ್ಚು ಅನುದಾನ ನೀಡಿದ್ದರು. ಕೃಷಿಗೆ ಅದನ್ನು ಪೂರಕಗೊಳಿಸುವ ಕನಸನ್ನೂ ಕಂಡಿದ್ದರು.

ಅವರ ಉತ್ತರಾಧಿಕಾರಿ ನಿರ್ಮಲಾ ಸೀತಾರಾಮನ್ ನರೇಗಾವನ್ನು ಉಪೇಕ್ಷಿಸಿದ್ದು ಗುಟ್ಟಾಗಿ ಉಳಿದಿಲ್ಲ. ಕೊರೊನಾ ಹಾವಳಿ ಜೋರಾದಾಗ ಅನಿವಾರ್ಯವಾಗಿ ಮನಸ್ಸಿಲ್ಲದ ಮನಸ್ಸಿನಿಂದ ಅವರು ತುರ್ತಾಗಿ ನರೇಗಾಕ್ಕೆ ಅಲ್ಪಸ್ವಲ್ಪ ಅನುದಾನ ಹೆಚ್ಚಿಸಿದ್ದೇನೋ ಹೌದು. ಆದರೆ ಇದೀಗ ಮಂಡಿಸಿರುವ 2022-23ನೇ ಸಾಲಿನ ಬಜೆಟ್‌ನಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಾಗ ಅನುದಾನವನ್ನು ಶೇ 25ರಷ್ಟು ಕಡಿತಗೊಳಿಸಲಾಗಿದೆ. ವಲಸೆಯ ಪ್ರಭಾವದಿಂದ ಗ್ರಾಮೀಣ ನಿರುದ್ಯೋಗ ಸಮಸ್ಯೆ ತೀವ್ರವಾಗಿರುವಾಗಲೇ ಈ ನಿರ್ಣಯ. ನರೇಗಾ ಕಾರ್ಮಿಕರಿಗೆ ಸುಮಾರು ₹ 12,300 ಕೋಟಿಯನ್ನು ವೇತನ ರೂಪದಲ್ಲಿ ಕೊಡುವುದು ಇನ್ನೂ ಬಾಕಿ ಉಳಿದಿದೆ. ಅಂದರೆ ಕೇಂದ್ರ ಹಣಕಾಸು ಸಚಿವೆ ದೊಡ್ಡ ಗಾಯದ ಮೇಲೆ ದೊಡ್ಡ ಬರೆಯನ್ನೇ ಎಳೆಯುತ್ತಿದ್ದಾರೆ!

ಪ್ರೊ. ಜಿ.ವಿ.ಜೋಶಿ, ಮಂಗಳೂರು

ಮೂಲ ದಾಖಲಾತಿ ಕೇಳುವುದೇಕೆ?

ಸರ್ಕಾರದ ಯಾವುದೇ ಸೇವೆ ಮತ್ತು ಸೌಲಭ್ಯವನ್ನು ಪಡೆದುಕೊಳ್ಳಲು ಎಲ್ಲದಕ್ಕೂ ಆಧಾರ್ ಕಾರ್ಡ್ ಬೇಕಾಗುತ್ತದೆ ಎಂಬುದೇನೋ ಸರಿ. ಇದಕ್ಕೆ ಸರ್ಕಾರಿ ಆಸ್ಪತ್ರೆಗಳು ಕೂಡ ಹೊರತಾಗಿಲ್ಲ. ಇಲ್ಲಿ ಯಾವುದೇ ವೈದ್ಯಕೀಯ ಸೌಲಭ್ಯವನ್ನು ಪಡೆದುಕೊಳ್ಳಲು ಮೂಲ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ತರಬೇಕು ಎಂಬ ನಿಯಮವಿದೆ. ಸರ್ಕಾರಿ ಆಸ್ಪತ್ರೆಗಳಿಗೆ ಬರುವವರೆಲ್ಲರೂ ಶಕ್ತರು, ದೃಢ ವಯಸ್ಕರಾಗಿರುವುದಿಲ್ಲ. ಬದಲಾಗಿ ವಯೋವೃದ್ಧರು, ಅಶಕ್ತರು, ಅಂಗವಿಕಲರು, ಗರ್ಭಿಣಿಯರು, ಬಾಣಂತಿಯರು ಹೆಚ್ಚಾಗಿ ಇರುತ್ತಾರೆ. ಇನ್ನು ಒಬ್ಬೊಬ್ಬರೇ ಬೇರೆ ಊರುಗಳಿಂದ ಬರುವುದೂ ಉಂಟು. ಹೀಗೆ ದೂರದ ಊರುಗಳಿಂದ ಆಸ್ಪತ್ರೆಗೆ ಬರುವ ಮಾರ್ಗಮಧ್ಯೆ ಅಥವಾ ಆಸ್ಪತ್ರೆಯ ಜನಸಂದಣಿಯಲ್ಲಿ ಮೂಲ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಕಳೆದುಹೋಗುವ ಸಾಧ್ಯತೆ ಇರುತ್ತದೆ. ಆಸ್ಪತ್ರೆಗೆ ಬರುವ ಧಾವಂತದಲ್ಲಿ ಅನೇಕ ವೃದ್ಧರು ಈ ಮೊದಲು ಮೂಲ ದಾಖಲೆಗಳನ್ನು ಕಳೆದುಕೊಂಡಿರುವ ಉದಾಹರಣೆಗಳಿವೆ.

ಇತ್ತೀಚೆಗೆ ನಾನು ದಾವಣಗೆರೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ತೆರಳಿದ್ದಾಗ, ಅಲ್ಲಿ ಒಬ್ಬ ವೃದ್ಧೆಯ ಮೂಲ ಆಧಾರ್ ಕಾರ್ಡ್ ಪ್ರತಿ ದೊರಕಿತ್ತು. ಅದರಲ್ಲಿ ಮೊಬೈಲ್ ಸಂಖ್ಯೆ ಇರದ ಕಾರಣ, ನಾನು ಕೂಡಲೇ ಫೇಸ್‌ಬುಕ್ ಗ್ರೂಪ್ ಒಂದಕ್ಕೆ ಅದರ ಚಿತ್ರವನ್ನು ಅಪ್‌ಲೋಡ್ ಮಾಡಿದೆ. ಸಾರ್ವಜನಿಕರ ಸಹಾಯದಿಂದ ಆಧಾರ್ ಕಾರ್ಡ್‌ನ ಮೂಲ ವಾರಸುದಾರರನ್ನು ಪತ್ತೆಹಚ್ಚಿ, ಮರುದಿನವೇ ಅವರಿಗೆ ಅದನ್ನು ಮರಳಿಸಲು ಸಾಧ್ಯವಾಯಿತು. ಅಕಸ್ಮಾತ್ ಆ ವೃದ್ಧೆಗೆ ಮೂಲ ಆಧಾರ್ ಕಾರ್ಡ್‌ನ ತುರ್ತು ಅವಶ್ಯಕತೆ ಇದ್ದಿದ್ದರೆ ಏನಾಗುತ್ತಿತ್ತು? ನಕಲು ಪ್ರತಿಗಳಿಗೆ ಅವಕಾಶ ನೀಡಿದರೆ ಈ ಸಮಸ್ಯೆ ಉದ್ಭವಿಸುವುದಿಲ್ಲ. ಇಂದಿನ ಆಧುನಿಕ ತಂತ್ರಜ್ಞಾನದ ಯುಗದಲ್ಲೂ ಮೂಲ ದಾಖಲಾತಿಗಳನ್ನು ಕೇಳುವುದು ಹಾಸ್ಯಾಸ್ಪದ. ಕಂಪ್ಯೂಟರ್‌ನಲ್ಲಿ ನೋಂದಣಿ ಸಂಖ್ಯೆ ನಮೂದಿಸಿದರೆ ಸಂಬಂಧಿಸಿದ ವ್ಯಕ್ತಿಯ ಊರು, ಹೆಸರು, ವಯಸ್ಸು ಸೇರಿದಂತೆ ಎಲ್ಲಾ ವಿವರಗಳು ತಿಳಿಯುತ್ತವಲ್ಲವೇ? ಆರೋಗ್ಯ ಸಚಿವರು ಇತ್ತ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿದ್ಯಾರ್ಥಿಗಳು ಶಾಲೆಗೆ ಹೋಗುವಾಗ ಹಿಜಾಬ್, ಕೇಸರಿ ಶಾಲು ಧರಿಸುವುದು ಸರಿಯೇ?

ಧರ್ಮವೇ ಸಂಕಟವೇ



ಮುಸ್ಲಿಂ ಹುಡುಗಿಯರ ತಲೆಮೇಲಿನ ತುಂಡುವಸ್ತ್ರ ಯಾರಿಗೆ ಯಾಕಾಗಿ ಮುಖ್ಯವಾಗುತ್ತಿದೆ? ಇದು ತುಳುಸೀಮೆಗೆ ಮಾತ್ರ ಸಂಬಂಧಿಸಿದ ಗದ್ದಲವಲ್ಲ. ಕೆಲವರ್ಷಗಳ ಹಿಂದೆ ನಾನಿದ್ದ ಕಾಲೇಜಿನಲ್ಲಿ (ಅದೂ ಚುನಾವಣಾ ಪೂರ್ವದ ವರ್ಷವೇ) ಕೆಲ ಹುಡುಗರ ಹೆಗಲಿಗೆ ಕೇಸರಿ ಶಾಲು ಬಂತು. 'ಇದೆಲ್ಲಾ ಕ್ಯಾಂಪಸ್ಸಿನ ಹೊರಗಿಟ್ಟುಕೊಳ್ಳಿ' ಎಂದರೆ, ಅವರು ಬೆರಳು ತೋರಿಸಿದ್ದು ಬುರ್ಖಾಗಳಿಗೆ. 'ಅವರಿಗೆ ಯೂನಿಫಾರ್ಮ್‌ನಲ್ಲಿ ಬರಾಕೆ ಹೇಳ್ರಿ' ಎಂದು ಜಬ್ರು

ಪ್ರಜಾವಾಣಿ ಚರ್ಚೆ

• ವಿನಯಾ ಒಕ್ಕುಂದ

ಹೌದು, ಅದೆಷ್ಟು ಚಂದವಿರುತ್ತಿತ್ತು. ಜಾತಿ ಧರ್ಮಗಳ ಮರೆತ್ತಯಲ್ಲಿ ಪಿತೃಸಂಹಿತೆಗಳ ಅರ್ಭಟಗಳಿಂದ ನಮ್ಮನ್ನು ಮುಕ್ತಗೊಳಿಸಿ ಬದುಕಲು ಬಿಟ್ಟಿದ್ದರೆ! ಹೆಣ್ಣಿನ ದೇಹ ಮನಸ್ಸುಗಳನ್ನು ತಮ್ಮ ಹಿತಾಸಕ್ತಿಯನ್ನೇ ಕಾಪಾಡುವ ಕೈವಶ ಮಾಡಿಕೊಳ್ಳದಿದ್ದರೆ. ನಾವು ಏನು ತೊಡಬೇಕು, ಉಡಬೇಕು, ಉಣ್ಣಬೇಕು, ಯಾವಾಗ ನಗಬೇಕು, ಯಾಕೆ ಅಳಬೇಕು, ಯಾರನ್ನು ಪ್ರೀತಿಸಬೇಕು, ಯಾರನ್ನು ಮದುವೆಯಾಗಬೇಕು, ಕಲಿಯಬೇಕು ಏನು, ಎಷ್ಟು, ಹೇಗೆ, ಏಕೆ ಓದ್... ಹೆಣ್ಣನ್ನು ಸುತ್ತಿ ಸಾಯಿಸುತ್ತಿರುವ ಯಜಮಾನಿಕೆಗಳು ಇಲ್ಲದಿದ್ದರೆ... ನಾನು ಬದುಕುತ್ತಿರುವುದು ನನ್ನದೇ ಬಾಳು ಎಂಬ ಆತ್ಮವಿಶ್ವಾಸ ನಡಿಗೆಯೊಂದು ದಕ್ಕಿದ್ದರೆ. ಇಲ್ಲ ಹಾಗಾಗಲಿಲ್ಲ. ಮಾನವ ಚರಿತ್ರೆಯಲ್ಲಿ ಸಾಮಾಜಿಕ ಪರಿವರ್ತನೆಗಳು ಅದೆಷ್ಟೇ ಸಂಭವಿಸಿದ ಮೇಲೂ ಹೆಣ್ಣನ್ನು ಹತೋಟಿಯಲ್ಲಿಟ್ಟುಕೊಳ್ಳುವ ಪಿತೃತ್ವದ ನಡೆ ನೀತಿಗಳು ಬದಲಾಗಲಿಲ್ಲ. ಒಳಗಿನ ಎಲ್ಲ ಪರಿವರ್ತನೆಗಳನ್ನೂ ಬಿಗಿದು ಹಿಡಿದ ಒಡೆಯನೊಯಾಗಿ ಬಂತು. ಗಂಡಾಳಿಕೆಯ ವಿಧಾನಗಳು ರೂಪಾಂತರಗೊಂಡವೇ ವಿನಃ ನಿಯಂತ್ರಿತವಾಗಲಿಲ್ಲ. ಇದಕ್ಕೆ ಯಾವ ದೇಶ, ಕಾಲ, ಜಾತಿ, ಧರ್ಮಗಳೂ ಹೊರತಾಗಿಲ್ಲ. ಸಾಮಾಜಿಕವಾಗಿ ಅಪಾಯದಲ್ಲಿರುವ ಸಮುದಾಯಗಳಲ್ಲಿ ಇದು ಇನ್ನೂ ಕಠಿಣವಾಗಿರುತ್ತದೆ.

ಗಂಡಸಿಗೆ ಕಡ್ಡಾಯವಲ್ಲದ ಅಥವಾ ಸಾಂದರ್ಭಿಕವಾಗಿರುವ ಧಾರ್ಮಿಕ ಕುರುಹುಗಳು ಹೆಣ್ಣಿಗೆ ಮಾತ್ರ ಸಾರ್ವತ್ರಿಕವೂ ಸಾರ್ವಕಾಲಿಕವೂ ಕಡ್ಡಾಯವೂ ಆಗಿರುತ್ತದೆ. ಭಾರತದಂತಹ ಬಹುಧಾರ್ಮಿಕ ಪರಿಸರದಲ್ಲಿ ಹೆಣ್ಣನ್ನು ಹತೋಟಿಯಲ್ಲಿಡುವ ಬೇಲಿಗಳು ಇನ್ನೂ ಬಿಗಿಯಾಗಿವೆ. ಈ ಬಿಗಿತಕ್ಕಾಗಿಯೇ ಅವಳ ಉಡುಪು ತೊಡುಪುಗಳನ್ನು ಪವಿತ್ರೀಕರಣಗೊಳಿಸಲಾಗುತ್ತದೆ. ಹುಡುಗಿ ಜೀನ್ಸ್ ತೊಡಬಹುದು. ಆದರೆ, ಕೆಲವು ಆಚರಣೆಗಳಲ್ಲದು ನಿಷಿದ್ಧ- ತುಂಬಾ ಜಾಳು ಜಾಳಾಗಿ ಕಾಣುವ ಧಾರ್ಮಿಕ, ಸಾಂಸ್ಕೃತಿಕ ಒತ್ತಾಯಗಳಿರುತ್ತವೆ. ಹಣೆಗೆ ಬಿಂದಿ ಹಚ್ಚಬೇಕಾದವರು ಯಾರು, ಹಚ್ಚಬಾರದವರು ಯಾರು? ಹೀಗೆ ನೂರೊಂದು ಒಪ್ಪಿತಗಳಿರುತ್ತವೆ. ಯಾವುದೂ ಹೆಣ್ಣಿನ ಆಯ್ಕೆಯಲ್ಲ. ಈ ಹೇರಿಕೆಗಳ ಉಲ್ಲಂಘನೆ ತುಂಬಾ ಸಣ್ಣಮಟ್ಟದಲ್ಲಿ ಮನೆಯ ಹೊಸ್ತಿಲೊಳಗೆ ಅಥವಾ ಅತಿನಾಗರಿಕ ವಾತಾವರಣದಲ್ಲಿ ಕ್ವಚಿತ್ತಾಗಿ ಕಾಣಬಹುದು. ನನ್ನ ಬಾಲ್ಯದಲ್ಲಿ ಹಿರಿಯರೊಬ್ಬರು 'ತಂಗೀ ಹಣೆಯೇನು ನಾಯಿ ನೆಕ್ಕಿತೇ?' ಎಂದು ಕೇಳಿದ್ದರು. ಹಣೆಯ ಮೇಲೆ ಕುಂಕುಮ ಇಲ್ಲದ್ದಕ್ಕೆ ಅವರು ಹಾಗಂದರು ಎಂದು ನಂತರ ತಿಳಿದಿತ್ತು. ಬಯಲುಸೀಮೆಯ ನನ್ನ ಅತ್ತೆ ಯಾವತ್ತೂ ತಲೆಸೆರಗನ್ನು ಕೆಳಜಾರಿಸಿದವರಲ್ಲ. 'ಅದೆಂಗೆ ಸಂಭಾಳಿಸ್ತೀರಿ?' ಎಂದು ಕೇಳಿದ್ದೆ. 'ಸಣ್ಣವರಿದ್ದಾಗಿನಿಂದ ರೂಢಿಯಾಗಿರ್ತದೆ, ಜರಾ ಸೆರಗು ಜಾರಿದ್ರೂ ನಿಮ್ಮ ಮಾವ 'ಯಾಕ ನೆತ್ತಿ ಮ್ಯಾಕ ಗೂಟ ಬಡೀಬೇಕೇನು? ಅಂತ ಜಬರಸ್ತಿದ್ದ' ಎಂದು ಒಂದಿಷ್ಟು ಜಂಭದಿಂದಲೇ ಹೇಳಿದ್ದರು. ಎಲ್ಲ ಜಾತಿ- ಸಂಪ್ರದಾಯಗಳೂ ಹೆಣ್ಣಿಗೆ ಇಂತಹ ಒಪ್ಪಿತವನ್ನು ಕಲಿಸಿರುತ್ತವೆ. ಹೆಣ್ಣಿನ ಚಹರೆಯನ್ನು ಹೊಲಿದು ಸಿದ್ಧಮಾಡುವ ಸೂಜಿಯ ಹಿಡಿತ ಮಾತ್ರ ಪಿತೃ ಹಿತಾಸಕ್ತವೇ ಆಗಿರುತ್ತದೆ. ಈ ಸ್ಪಷ್ಟತೆಯೊಂದಿಗೆ ಮಂಗಳೂರಿನ ಕಾಲೇಜು ಹುಡುಗಿಯರ ಹಿಜಾಬ್ ಘಟನೆಯನ್ನು ನೋಡಬೇಕು.



ಇಸ್ಲಾಂ ಧರ್ಮದ ಆರಂಭದ ಕಾಲದಲ್ಲಿ ಅರಬ್ಬರ ಹಲವು ಬುಡಕಟ್ಟುಗಳ ಒಕ್ಕೂಟದಲ್ಲಿ ಇಲ್ಲದಿದ್ದ ಬುರ್ಖಾ ಪದ್ಧತಿ, ಇಸ್ಲಾಮಿನ ಪುನರುತ್ಥಾನದ ಕಾಲದಲ್ಲಿ ಕಾಣಿಸಿಕೊಂಡಿತು. ಹಿಂದೂ ಪುನರುತ್ಥಾನವಾದಿ ಕಾಲದಲ್ಲಿ ಬಹುವೈವಿಧ್ಯಗಳಲ್ಲಿದ್ದ ಹೆಣ್ಣಿನ ಚಹರೆಗೆ ಅಧಿಕೃತತೆಯ ಮೊಹರು ಒತ್ತಿ ನಂತರ ಅದನ್ನು ಭಾರತೀಯತೆಯೊಂದಿಗೆ ಸಮೀಕರಿಸಿದ ರಾಜಕಾರಣವನ್ನು ಗಮನಿಸಬೇಕು. ಭಾರತದಲ್ಲಿ ಕೋಮುವಾದ ತೀವ್ರ ಸ್ವರೂಪ ಪಡೆದುಕೊಂಡ ಪರಿಣಾಮವಾಗಿ ಮುಸ್ಲಿಂ ಧರ್ಮ ಮತ್ತಷ್ಟು ಮೂಲಭೂತವಾದದೆಡೆಗೆ ಹೊರಳಿತು. ಇದರ ಪರಿಣಾಮವಾಗಿ ಮುಸ್ಲಿಂ ಮಹಿಳೆಯರು ಹೆಚ್ಚು ನಿರ್ಬಂಧಗಳಿಗೆ ಒಳಗಾದರು. ಕಳೆದ ಕಾಲು ಶತಮಾನದಿಂದ ಬುರ್ಖಾ ಹಿಜಾಬ್‌ಗಳೆಲ್ಲ ಕಡ್ಡಾಯಗೊಂಡವು.

ಇಂದಿಗೂ ಕಾಲೇಜಿನ ಹುಡುಗಿಯರಿಗೆ ಬುರ್ಖಾ ದಾರಿನೆಂಟ. ಡೆಸ್ಕ್‌ನಲ್ಲಿ ಸುತ್ತಿಟ್ಟು ಯೂನಿಫಾರ್ಮ್‌ನಲ್ಲಿ ಆರಾಮಾಗಿರುವ, ತಲೆಗೆ ಹಿಜಾಬ್ ಕಟ್ಟಿಕೊಂಡಿರುವ ಸ್ಥಿತಿಯಲ್ಲಿರುತ್ತಾರೆ. ಏಕೆಂದರೆ, ಅದೊಂದು ಪಾವಿತ್ರ್ಯ, ಹೆಣ್ತನದ ರಕ್ಷಣೆ ಎಂದೆಲ್ಲ ಒಪ್ಪಿಸಲಾಗಿದೆ. ಇನ್ನೊಂದೆಡೆ ಕುಟುಂಬಗಳೆಂಬ ಧಾರ್ಮಿಕ ಮೂಲಭೂತವಾದದ ಮುಷ್ಟಿಯಿಂದ ಜಗುಳಿಕೊಂಡು ಶಿಕ್ಷಣ ವಲಯಕ್ಕೆ ಪ್ರವೇಶಿಸಿದ ಇವರು ಹಾಯಬೇಕಾದ ಬೆಂಕಿ ಕೊಂಡಗಳು ಹಲವಾರು. ಮನೆಯ ಕರ್ತವ್ಯಗಳನ್ನು ಇಡಿಯಾಗಿ ನಿಭಾಯಿಸಬೇಕಾದ ದರ್ದು, ಕಡಿಮೆ ಓದಿನಲ್ಲಿ ತಕ್ಷಣದ ಸುಲಭದ ಉದ್ಯೋಗ ಸಿಕ್ಕೀತೇ ಎಂಬ ಹಳಹಳಿ, ಅನ್ಯ ಭಾಷಾ ಪರಿಸರದಿಂದ ಶೈಕ್ಷಣಿಕ ಪರಿಸರಕ್ಕೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ... ಈ ಸವಾಲುಗಳಲ್ಲವರಿಗೆ ಬುರ್ಖಾ, ಹಿಜಾಬ್ ಯಾವುದೂ ಮುಖ್ಯವಾಗುವುದಿಲ್ಲ. ಸಮಾನ ಹಿತಾಸಕ್ತಿಗಳ ಸೌಹಾರ್ದದ ಸಮಾಜದಲ್ಲಿ ಹೆಣ್ಣಿಗೆ ಆಯ್ಕೆ ಇದ್ದರೆ... ಧಾರ್ಮಿಕ ಗುರುತುಪಟ್ಟಿಯಿಂದ ಕಳಚಿಕೊಳ್ಳುವುದು ಸಾಧ್ಯವಿತ್ತು. ಆದರೆ, ದಿನದಿಂದ ದಿನಕ್ಕೆ ಮತೀಯವಾಗುತ್ತಿರುವ ಸಮಾಜದಲ್ಲಿ ಹೆಣ್ಣಿನ ಆಯ್ಕೆಯ ದಾರಿ ತುಂಬಾ ಕಡಿದಾಗುತ್ತದೆ. ಸಿಕ್ಕ ಅವಕಾಶದಲ್ಲಿ ಶಿಕ್ಷಣ ಉದ್ಯೋಗಗಳಿಗೆ ತೆರಳದೆ, ಮತೀಯತೆಯನ್ನು ವಿರೋಧಿಸುವುದೆಂದರೆ ಅದು ದೋಣಿಯ ತೂತಿನಷ್ಟು ಅಪಾಯಕಾರಿ ಎಂಬ ಭಯ ಕಾಡುತ್ತದೆ. 'ಪಾಠ ಮಾಡುವ ಶಿಕ್ಷಕರು ಗಂಡಸರು. ಆದ್ದರಿಂದ ಸ್ವಸ್ಥವಾಗಿರಲು ಹಿಜಾಬ್ ಬೇಕು ಎಂಬ ಬಾಲೆಯ ಮಾತು ಗಿಳಿಪಾಠವೇ. ಗುರು-ಶಿಷ್ಯ ಸಂಬಂಧದ ಕ್ಲಾಸ್‌ರೂಂ ಕೂಡ ಗಂಡು-ಹೆಣ್ಣು, ಜಾತಿ-ಧರ್ಮಗಳ ಬಣ್ಣ ಪಡೆದರೆ ಅದು ದುರವಸ್ಥೆಯ ಸಮಾಜದ ಕುರುಹು. ಖಂಡಿತ, ಎಲ್ಲ ಧರ್ಮಗಳೂ ಹೆಣ್ಣಿನ ಮೈಮೇಲಿನ ತಮ್ಮ ದಸ್ತಾವೇಜನ್ನು ಇಳುಹಬೇಕು. ಯೋಗ್ಯ, ಸಭ್ಯ, ಇಷ್ಟಗಳ ಆಯ್ಕೆ ಅವಳದಾಗಬೇಕು. ಆದರೆ.. ಅಂತಹ ಸಾಧ್ಯತೆಯ ನಡಿಗೆಗೆ ಹಾದಿಯೇ ಸಿದ್ಧಗೊಳ್ಳುತ್ತಿಲ್ಲ.

ಹಾಗಿರುವಾಗ, ಮುಸ್ಲಿಂ ಹುಡುಗಿಯರ ತಲೆಮೇಲಿನ ತುಂಡುವಸ್ತ್ರ ಯಾರಿಗೆ ಯಾಕಾಗಿ ಮುಖ್ಯವಾಗುತ್ತಿದೆ? ಇದು ತುಳುಸೀಮೆಗೆ ಮಾತ್ರ ಸಂಬಂಧಿಸಿದ ಗದ್ದಲವಲ್ಲ. ಕೆಲವರ್ಷಗಳ ಹಿಂದೆ ನಾನಿದ್ದ ಕಾಲೇಜಿನಲ್ಲಿ (ಅದೂ ಚುನಾವಣಾ ಪೂರ್ವದ ವರ್ಷವೇ) ಕೆಲ ಹುಡುಗರ ಹೆಗಲಿಗೆ ಕೇಸರಿ ಶಾಲು ಬಂತು. 'ಇದೆಲ್ಲಾ ಕ್ಯಾಂಪಸ್ಸಿನ ಹೊರಗಿಟ್ಟುಕೊಳ್ಳಿ' ಎಂದರೆ, ಅವರು ಬೆರಳು ತೋರಿಸಿದ್ದು ಬುರ್ಖಾಗಳಿಗೆ. 'ಅವರಿಗೆ ಯೂನಿಫಾರ್ಮ್‌ನಲ್ಲಿ ಬರಾಕೆ ಹೇಳ್ರಿ' ಎಂದು ಜಬ್ರು. ಕಾರ್ಯಕ್ರಮ ನಡೆದಾಗ, ಎಲ್ಲಿಂದಲೋ ಬೈಕ್‌ಗಳಲ್ಲಿ ಚೀಲಗಟ್ಟಲೆ ಕೇಸರಿ ಶಾಲುಗಳು ಬಂದು ಮುಕ್ಕಾಲು ಮೂರುವೀಸ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ ಹೊದ್ದಾಯಿತು. ನಾವೆಲ್ಲ ಆಗ, ಅಹಂಕಾರಕ್ಕೆ ಉದಾಸೀನವೇ ಮದ್ದು ಎಂಬ ನಿರ್ಲಕ್ಷ್ಯವನ್ನು ಬಲು ಕಷ್ಟದಿಂದ ನಿರ್ವಹಿಸಬೇಕಾಯಿತು. ದಿನಗಳುರುಳಿದವು. ಕ್ಲಾಸ್‌ರೂಂ ಗೋಡೆಗಳ ಮೇಲೆ, ಬಾಗಿಲ ಮೇಲೆ, 'ದಂ ಇದ್ದರೆ ಬುರ್ಖಾ ತೆಗೆಸಿ' ಎಂಬ ಬರಹಗಳು ಬಂದವು. 4-5 ಹುಡುಗರು ಪರೀಕ್ಷೆಯಲ್ಲೂ ಶಾಲು ಹೊದ್ದು ಕುಳಿತರು. ತುಂಬಾ ಸ್ಪಷ್ಟವಾಗಿ ಅದು ಚುನಾವಣಾ ಸಿದ್ಧತೆಯಾಗಿತ್ತು. ಯುವಮನಸ್ಸಿಗೆ ಧರ್ಮದ ಹೆಸರಿನಲ್ಲಿ ವಿಷ ಬಿತ್ತಿದರೆ, ಸರಿಯಾಗಿ ಫಲಕೊಡುತ್ತದೆ ಎಂಬ ರಾಜಕಾರಣವಾಗಿತ್ತು. ಅದರಿಂದ ತಕ್ಷಣದ ಗೆಲುವು ಸಿದ್ಧವಾಗಿರುತ್ತದೆ. ದೂರದ ಪರಿಣಾಮದಲ್ಲದು ಊರೂರುಗಳನ್ನೆಲ್ಲಾ ಸುಡುಬೂದಿಯಾಗಿಸುತ್ತದೆ ಎನ್ನುವುದು ಯಾರಿಗೆ ಬೇಕಿದೆ?


ಹಿಜಾಬ್ ಅನ್ನು ವಿರೋಧಿಸುವವರು, ತಂತಮ್ಮ ಕುಟುಂಬಗಳ ತಾಯಂದಿರು ಸಾಂಪ್ರದಾಯಿಕ ಕುರುಹುಗಳನ್ನು ನಿರಾಕರಿಸಿದರೆ ಒಪ್ಪುತ್ತಾರೆಯೇ? ಪ್ರತಿಧರ್ಮವೂ ಹೆಣ್ಣನ್ನು ಹೀಗೇ ಬಳಸಿಕೊಳ್ಳುತ್ತದೆ ಎನ್ನುವುದನ್ನು ಅರ್ಥಮಾಡಿಕೊಳ್ಳುತ್ತಾರೆಯೇ? ಮುಸ್ಲಿಮರನ್ನು ವಿರೋಧಿಸಲು ಹುಡುಕುವ ನೆಪಗಳಲ್ಲಿ ಹಿಜಾಬ್ ಕೂಡ ಒಂದು. ದುರಂತವೆಂದರೆ, ಇದರಿಂದ ನಲುಗುವುದು ಹೆಣ್ಣಿನ ಬದುಕೇ. ಒಂದಿಷ್ಟು ಹೊರಬದುಕಿಗೆ ತೆರೆದುಕೊಳ್ಳುತ್ತಿರುವವರನ್ನು ಮತ್ತೆ ಹೊಸ್ತಿಲೊಳಗೆ ದೂಡುತ್ತದೆ. ಮತಾಂಧತೆಯನ್ನು ಪ್ರಶ್ನಿಸುತ್ತ ತನ್ನ ದಾರಿಯನ್ನು ನಿಸೂರಗೊಳಿಸಿಕೊಳ್ಳಬೇಕಾದ ಅವಕಾಶಗಳು ಇಲ್ಲದಂತಾಗುತ್ತದೆ. ಹೆಣ್ಣು ಬಾಳಿನ ಧರ್ಮಸಂಕಟವಿದು.

ಹೆಣ್ಣಿನ ಸ್ವಾತಂತ್ರ್ಯ-ಸಮಾನತೆಯ ಆದ್ಯತೆಯನ್ನು ತನ್ನ ಮಾರುಕಟ್ಟೆ ಮಾಡಿಕೊಂಡ ಬಂಡವಾಳವಾದ ಕಣ್ಣಿಗಾದರೂ ಕಂಡೀತು. ಕೋಮುವಾದಿ ರಾಜಕೀಯದ ರಣನೀತಿ ಪಂಚೇಂದ್ರಿಯಗಳ ಅರಿವಿನ ಆಚೆಗಿನದು. ನಮ್ಮ ಕಾಲದ ಮಹಿಳಾ ಚಿಂತನೆ ಈ ರಾಜಕೀಯವನ್ನು ತುಸು ನಿರ್ಲಕ್ಷಿಸಿದರೂ ತಾತ್ವಿಕವಾಗಿಯೇ ಕುಸಿದು, ಬರಡಾಗಿಬಿಡಬಹುದು. ನಾವೀಗ ಅರ್ಥೈಸಿಕೊಳ್ಳಬೇಕಿರುವುದು ಉಸಿರು-ಉಸಿರಿಗೂ ಇರಿವ ಈ ಇಬ್ಬಾಯ ಕತ್ತಿಯನ್ನು.

ಲೇಖಕಿ: ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾಂಡೇಲಿ

ಒಂದಾಗಿ ಬಾಳುವ ಆಶಯಕ್ಕೆ ವ್ಯತಿರಿಕ್ತ

• ಹರ್ಷವರ್ಧನ ವಿ. ಶೀಲವಂತ



'ಹಿಜಾಬ್', ಬುರ್ಖಾ ಅಥವಾ ಕೇಸರಿ ಶಾಲು ಧರಿಸುವುದರಿಂದ ಕಲಿಕೆಯ ಮೌಲ್ಯವೇನಾದರೂ ವೃದ್ಧಿಸಲಿದೆಯೇ? ಓದಿನ ಹಸಿವುಳ್ಳವರಿಗೆ ಈ ಅನಗತ್ಯದ ಬೆಳವಣಿಗೆ ನೆಮ್ಮದಿಯ ಪರಿಸರ ಉಳಿಸುವುದೇ? ಕಾಲೇಜಿನ ಶೈಕ್ಷಣಿಕ ವಾತಾವರಣವೂ ಕದಡಿ ಹೋಗುವುದಿಲ್ಲವೇ? ಪಾಲಕರ ಆತಂಕವೂ ಹೆಚ್ಚುವುದಿಲ್ಲವೇ? ಇದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ವಿವಾದ ಸೃಷ್ಟಿಸಿದ್ದು ಹೊಟ್ಟೆ ತುಂಬಿದವರ ಹುಂಬತನ

'ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವುದು' ಅಂದ ದೇವನೂರ ಮಹಾದೇವ ಅವರು, 'ಅಕ್ಷರ ಕಲಿತಿದ್ದರಿಂದಲೇ ನಾನು ಸಂಕಷ್ಟಕ್ಕೆ ಈಡಾದೆ' ಅಂತಲೂ ಸಂದರ್ಶನವೊಂದರಲ್ಲಿ ಹೇಳಿದ್ದರು. ಈ ಸಂಕಟ ಮತ್ತು ದ್ವಂದ್ವ ನಮ್ಮ ಹೃದಯವನ್ನು ಕಲಕಿದಂತಿಲ್ಲ.

ಉನ್ನತ ಶಿಕ್ಷಣದ ಸಮಸ್ಯೆಗಳು ಸಾವಿರ ಇವೆ! ಅದರ ನಡುವೆ ಕೋವಿಡ್-19 ಹರಡುವಿಕೆ, ರೂಪಾಂತರಿತ ಕೊರೊನಾ ತಳಿ ಓಮೈಕ್ರಾನ್ ಬಾಧೆಯ ತುರ್ತು ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಮತ್ತು ಉದ್ಯೋಗಾಕಾಂಕ್ಷಿಗಳ ಬದುಕಿನ ಅಮೂಲ್ಯ ಎರಡು ವರ್ಷಗಳು ಕಳೆದುಹೋಗಿವೆ. ಶೈಕ್ಷಣಿಕ ಚಟುವಟಿಕೆಗಳು ಸುಮಾರು ಹತ್ತು ವರ್ಷಗಳಷ್ಟು ಹಿಂದಕ್ಕೆ ಹೋದಂತಾಗಿದೆ ಎನ್ನುತ್ತಾರೆ ತಜ್ಞರು. ಧಾರ್ಮಿಕ ಲಾಂಛನಗಳನ್ನು ಧರಿಸುವುದಾಗಿ ಹಟ ಹಿಡಿದು ಸಲ್ಲದ ವಿವಾದ ಸೃಷ್ಟಿಸಲು ಹೊರಟವರಿಗೆ ಇದರ ಪರಿವೆ ಇದೆಯೇ?

ಕೋವಿಡ್ ಸಂಕಷ್ಟದ ಮಧ್ಯೆಯೂ ಶಾಲಾ-ಕಾಲೇಜುಗಳಿಗೆ ಸ್ವಂತ ಖರ್ಚಿನಲ್ಲಿ ಸುಣ್ಣ-ಬಣ್ಣ ಬಳಿದವರಿದ್ದಾರೆ. ಗ್ರಂಥ ಜೋಳಿಗೆ ಮೂಲಕ ಗ್ರಂಥಾಲಯಗಳನ್ನು ಮಕ್ಕಳಿಗಾಗಿ ಸಮೃದ್ಧಗೊಳಿಸಿದವರಿದ್ದಾರೆ. ಶಾರದೆಯ ತಾಣವನ್ನು ಕಲಿಕಾಸ್ನೇಹಿ ಆಗಿಸುವಲ್ಲಿ, ಅನೇಕ ಸುಮನಸ್ಸುಗಳು ತನು, ಮನ ಹಾಗೂ ಧನ ವಿನಿಯೋಗಿಸಿ ದುಡಿದಿವೆ. ಅನೇಕ ಮಕ್ಕಳ ಫೀ ಕೂಡ ಕಟ್ಟಿದ್ದಾರೆ. ಅಲ್ಲಿ ಕಲಿಯಲು ಬಯಸುವ ಮಕ್ಕಳ ಜಾತಿ, ಮತ, ಧರ್ಮದ ಹಿನ್ನೆಲೆಯನ್ನು ಇವರಾರೂ ಗಣನೆಗೆ ತೆಗೆದುಕೊಂಡಿಲ್ಲ. 'ಎಲ್ಲ ಮಕ್ಕಳೂ ನಮ್ಮವೇ' ಎಂಬ ನಿಸ್ವಾರ್ಥ ಭಾವ ಮೆರೆದಿದ್ದಾರೆ.

ದುರ್ದೈವ. ಈ ನೈಜ ಕಾಳಜಿಗಳನ್ನು ಕ್ಷುಲ್ಲಕೀಕರಿಸುವಂತೆ, ಕೆಲ ವಿವಾದಪ್ರಿಯರು ಕಾಲೇಜಿಗೆ ಪ್ರವೇಶ ಪಡೆದ ಒಂದೇ ಕಾರಣದಿಂದ, ಧಾರ್ಮಿಕ ಲಾಂಛನಗಳು ಮತ್ತು ಸಮವಸ್ತ್ರೇತರ ಉಡುಪಿನಿಂದ ಶಾರದೆಯ ತಾಣವನ್ನು ಸುದ್ದಿಯ ಮೂಲವಾಗಿಸಿದ್ದಾರೆ. ವಿಘ್ನಸಂತೋಷಿಗಳು.

ನಮ್ಮ ಹಿರೀಕರಿಗೆ ಮೌಲ್ಯಗಳು ಚರ್ಮವಾಗಿದ್ದವು. ಅವುಗಳನ್ನೀಗ ಸಂಕೇತಗಳ ಮಟ್ಟಕ್ಕೆ ಇಳಿಸಿ, ಕೇವಲ ನಾಲಗೆಯಾಗಿಸಿದ್ದೇವೆ. ನಡೆ-ನುಡಿಯಲ್ಲಿ ಏಕತೆ ಸಾಧಿಸಿದ್ದ ಹಿರಿಯರನ್ನು ಪುತ್ಥಳಿಗೆ ಸೀಮಿತಗೊಳಿಸಿ, ಅವರ ಆದರ್ಶಗಳನ್ನು ಗಾಳಿಗೆ ತೂರಿದ್ದೇವೆ. ಕೇಳಿಸಿಕೊಳ್ಳುವ ವಿವೇಕವೂ ಮರೆಯಾದಂತಾಗಿದೆ. ದರ್ಶನವಿಲ್ಲದ ಪ್ರದರ್ಶನ ಈಗಿನ ಸಾಧನೆ. ಈ ಹಿಂದೆ ಎಂದಿಗೂ ಕಾಣದಿದ್ದ ಈ ಪ್ರದರ್ಶನದ ವ್ಯಸನ ಈಗ ಏಕಾಏಕಿ ಸೃಷ್ಟಿಯಾಗಿದ್ದಾದರೂ ಎಲ್ಲಿಂದ?

'ಹಿಜಾಬ್', ಬುರ್ಖಾ ಅಥವಾ ಕೇಸರಿ ಶಾಲು ಧರಿಸುವುದರಿಂದ ಕಲಿಕೆಯ ಮೌಲ್ಯವೇನಾದರೂ ವೃದ್ಧಿಸಲಿದೆಯೇ? ಓದಿನ ಹಸಿವುಳ್ಳವರಿಗೆ ಈ ಅನಗತ್ಯದ ಬೆಳವಣಿಗೆ ನೆಮ್ಮದಿಯ ಪರಿಸರ ಉಳಿಸುವುದೇ? ಕಾಲೇಜಿನ ಶೈಕ್ಷಣಿಕ ವಾತಾವರಣವೂ ಕದಡಿ ಹೋಗುವುದಿಲ್ಲವೇ? ಪಾಲಕರ ಆತಂಕವೂ ಹೆಚ್ಚುವುದಿಲ್ಲವೇ? ಇದ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೆ ವಿವಾದ ಸೃಷ್ಟಿಸಿದ್ದು ಹೊಟ್ಟೆ ತುಂಬಿದವರ ಹುಂಬತನ.

ಕಾಲೇಜಿನ ಆವರಣದಾಚೆಗೆ ಬೇಕಾದ ಉಡುಪು ಧರಿಸಲು ಯಾರ ಅಡ್ಡಿಯೂ ಇಲ್ಲ (ಈ ಹಿಂದೆ ಹಿಜಾಬ್ ಧರಿಸಿ ಕಾಲೇಜಿಗೆ ಬರುತ್ತಿದ್ದ ವಿದ್ಯಾರ್ಥಿನಿಯರು, ಕಾಲೇಜಿಗೆ ಬಂದೊಡನೆ ಅದನ್ನು ತೆಗೆದಿಟ್ಟು ವಸ್ತ್ರಸಂಹಿತೆ ಪಾಲಿಸುತ್ತಿದ್ದರು). ಆದರೆ, ಈಗ ತಮಗೆ ಬೇಕಾದಂತೆ ಉಡುಪು ಧರಿಸಿ ವಿದ್ಯಾಸಂಸ್ಥೆಯ ಆವರಣದಲ್ಲೇ ಓಡಾಡಬೇಕು, ತರಗತಿ ಕೋಣೆಗೂ ಪ್ರವೇಶಿಸಬೇಕು ಎಂಬ ಹಟದ ಹಿಂದೆ ಯಾರಿದ್ದಾರೆ? ಸದುದ್ದೇಶವಂತೂ ಈ ನಡೆಯ ಹಿಂದಿಲ್ಲ. ನಾವು ಕೇಸರಿ ಶಾಲು ಹೊದ್ದು ಬರುತ್ತೇವೆ ಎನ್ನುವ ಹಟವನ್ನೂ ಒಪ್ಪಲಾಗದು. ಎರಡೂ ಬದಿಯವರಿಗೆ ಕೇವಲ ಹಟ ಮತ್ತು ಪ್ರತಿಷ್ಠೆ ಅಷ್ಟೆ.

'ನಾವೆಲ್ಲ ಒಂದು; ನಾವೆಲ್ಲ ಬಂಧು. ಕೂಡಿ ಕಲಿಯೋಣ. ಕೂಡಿ ಬಾಳೋಣ' ಎಂಬ ನಿಹಿತಾರ್ಥ ಮೈಗೂಡಿಸಲು, ವಸ್ತ್ರ ಸಂಹಿತೆಯನ್ನು ಕಡ್ಡಾಯಗೊಳಿಸಲಾಗಿದೆ. ಸಮಾನತೆಯನ್ನು ಸಾಧಿಸುವ ಉದಾತ್ತ ಕಲ್ಪನೆ ಅದರಲ್ಲಡಗಿದೆ. ಪ್ರವೇಶ ಪಡೆಯುವಾಗ ಒಪ್ಪಿ, ಬಳಿಕ ಸ್ವೇಚ್ಛೆಗೆ ಇಳಿಯುವುದು ವಿದ್ಯಾರ್ಥಿಯ ಲಕ್ಷಣವಲ್ಲ. ಶಿಕ್ಷಣ ಸಂಸ್ಥೆಗಳಲ್ಲಿ ಮತೀಯ ಹುಚ್ಚಾಟಗಳಿಗೆ ಅವಕಾಶವಿಲ್ಲ. ಮೇಲಾಗಿ ಈ ಅಟಾಟೋಪಗಳಿಗೆ ಅದು ಸೂಕ್ತ ಜಾಗವೂ ಅಲ್ಲ. ವಿದ್ಯಾಸಂಸ್ಥೆಗಳು ವಾಸ್ತವವಾಗಿ, ಮತಗಳ ಹೊಟ್ಟು ತೂರಿ, ಎಲ್ಲ ತತ್ವಗಳ ಎಲ್ಲೆ ಮೀರಿ ಮಾನವತೆಯನ್ನು ಅರಳಿಸುವ ತಾಣಗಳು. ಅವುಗಳನ್ನು ಧಾರ್ಮಿಕ ಚೌಕಟ್ಟಿಗೆ ಇಳಿಸುವ ಪ್ರಯತ್ನ ಬಾಲಿಶವಾದುದು. ನಾವೆಲ್ಲ ಭಾರತಾಂಬೆಯ ಮಕ್ಕಳು ಎನ್ನುವ ಭಾವ ವಿದ್ಯಾರ್ಥಿ ಸಮುದಾಯದಿಂದ ವ್ಯಕ್ತವಾಗಬೇಕೇ ವಿನಾ ನಾವು ಈ ಧರ್ಮದಿಂದ ಬಂದವರು ಎಂದಲ್ಲ.

ಕೂಡಿ ಓದುವ ಮಹತ್ವವನ್ನು ಮನಗಾಣಲಾಗದಿದ್ದರೆ, ಭಿನ್ನ ಹಾದಿಯೇ ಮಹತ್ವದ್ದು ಎನಿಸಿದರೆ, ಅವರ ಮತ, ಪಂಥ, ಸಂಪ್ರದಾಯ ಅಥವಾ ಧರ್ಮದವರು ನಡೆಸುವ ಹಾಗೂ ಅಪೇಕ್ಷೆಯ ವಸ್ತ್ರ ತೊಟ್ಟು ಹೋಗಲು ಅವಕಾಶ ಇರುವ ಶಿಕ್ಷಣ ಸಂಸ್ಥೆಗೆ ಪ್ರವೇಶ ಪಡೆದುಕೊಳ್ಳುವುದು ಶ್ರೇಯಸ್ಕರ. ಅಂತಹ ಸಂಸ್ಥೆಗಳು ಸಾಕಷ್ಟಿವೆ ಕೂಡ. ಎಲ್ಲರೂ ಕೂಡಿ ಓದುವ ಕಾಲೇಜಿನಲ್ಲಿ ಪ್ರವೇಶ ಪಡೆದು, ಇಂತಹ ಅನಗತ್ಯ ವಿವಾದ ಸೃಷ್ಟಿಸುವ ಉದ್ಧಟತನ ಬೇಕಾಗಿಲ್ಲ.

ವಿವೇಕ ಮತ್ತು ವ್ಯಕ್ತಿತ್ವದ ನಡುವಿನ ಸಂಕಟ ಮತ್ತು ದ್ವಂದ್ವಕ್ಕೆ 'ನಡವಳಿಕೆ' ಎನ್ನುವುದಾದರೆ, ಜಡವನ್ನು ಚೈತನ್ಯಗೊಳಿಸುವ ಮನುಷ್ಯ ಪ್ರಯತ್ನವೇ ಅಧ್ಯಾತ್ಮ. ಇದೇ ಬದುಕಿನ ಕಲೆ. ಆತ್ಮದೃಷ್ಟಿ, ಮಾನವೀಯತೆ, ಔದಾರ್ಯ, ಪರಧರ್ಮ ಸಹಿಷ್ಣುತೆ. ನಮ್ಮ ಆಚಾರಗಳನ್ನೆಲ್ಲ ಮನೆಗೆ ಸೀಮಿತಗೊಳಿಸಿ, ಹೊರಗೆ ಇತರರೊಂದಿಗೆ ಸಮಾನವಾಗಿ, ಸಾಮರಸ್ಯದಿಂದ ಬದುಕಲು ತಾನೆ ನಮ್ಮ ಹಿರಿಯರು ಹೇಳಿಕೊಟ್ಟಿದ್ದು. ಆ ವಿವೇಕದ ಎಳೆ ಈಗೇಕೆ ಕತ್ತರಿಸಿ ಹೋಗಿದೆ?

ಮಕ್ಕಳಲ್ಲಿ ನೈತಿಕ ಪ್ರಜ್ಞೆ ಮೂಡಿಸುವುದು ಅಧ್ಯಾಪಕರ ಜವಾಬ್ದಾರಿ. ಪೊಲೀಸ್ ನಿಯಮ, ಕೋರ್ಟ್‌ಗಳ ಕಾನೂನಿಗಿಂತ, ಈ ನೈತಿಕ ಕಟ್ಟಳೆ ಮಕ್ಕಳನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಯಾವತ್ತೂ ಪ್ರೇರೇಪಿಸಿದೆ.

ರಾಷ್ಟ್ರಭಕ್ತಿ ಗೀತೆ ನಮ್ಮಲ್ಲಿ, ರಾಷ್ಟ್ರದೇವೋಭವ ಎಂಬ ವಿವೇಕವನ್ನು ಜಾಗೃತವಾಗಿರಿಸಿದೆ. ದೇಶ ಮೊದಲು; ಆ ಬಳಿಕ ಎಲ್ಲವೂ, ಎಂಬ ವಿನೀತ ಭಾವವನ್ನು ಸ್ವಭಾವವಾಗಿಸಿದೆ. ಇಲ್ಲಿ ಬೆಸೆಯುವ ಮತ್ತು ಬೆರೆಯುವ ಭಾವವನ್ನು ಉದ್ದೀಪಿಸುವ ಶ್ರದ್ಧೆಯ ಪ್ರಯತ್ನವಿದೆ. ಇಂದು ಉಡುಪು, ನಾಳೆ ಶಾಲೆ-ಕಾಲೇಜುಗಳಲ್ಲೂ ಧಾರ್ಮಿಕ ಪ್ರಾರ್ಥನೆ ಕಡ್ಡಾಯಗೊಳಿಸಬೇಕಾದ ಅನಿವಾರ್ಯವೂ ಸೃಷ್ಟಿಯಾಗಬಹುದು!

ಆ ವಯೋಮಾನದಲ್ಲಿ ತುಂಬ ಶಕ್ತಿ ಸಂಚಯವಾಗುವ ಮಕ್ಕಳನ್ನು ಏಕಾಗ್ರಗೊಳಿಸಿ, ತೊಡಗಿಸುವುದೇ ದೊಡ್ಡ ಸವಾಲು! ಅವರು ಮನೆಯಲ್ಲಿ ಯಾರ ಮಾತು ಕೇಳದಿದ್ದರೂ, ಮೇಷ್ಟ್ರ ಮಾತು ಮೀರುವುದಿಲ್ಲ. ಆ ಗೌರವ, ಭಯ-ಭಕ್ತಿ, ಪ್ರೀತಿ ಮತ್ತು ಅಂತಃಕರಣದ ಮುಂದೆ ಯಾವ ಕಾಯ್ದೆಯೂ ನಿಲ್ಲದು. ಬಾಹ್ಯ ಒತ್ತಡಗಳು ಬೇಡದ ಬೆಳವಣಿಗೆಗಳಿಗೆ ಇಂಬು ನೀಡುತ್ತಿವೆ. ಬಾಹ್ಯ ಒತ್ತಡಗಳು ನಮ್ಮ ಸಂಬಂಧಗಳ ಆವರಣ ಭೇದಿಸಿ, ಇರಿಸು-ಮುರಿಸಿಗೆ ಕಾರಣವಾಗುತ್ತವೆ. ಆ ಹುನ್ನಾರದ ಭಾಗವಾಗಿ ನಮ್ಮ ಮಕ್ಕಳು ಅಸ್ತ್ರವಾಗಿ ಬಳಕೆಯಾಗುತ್ತಾರೆ. ಪರಸ್ಪರ ಸಂವಾದಕ್ಕೆ ಆಸ್ಪದವಿರದಂತಹ ವಾತಾವರಣ ನಿರ್ಮಾಣ ಆಗುತ್ತಿರುವುದು ದುರಂತ.

ಜಾತಿ, ಧರ್ಮ, ನಂಬಿಕೆ, ನಡೆ, ಆಚರಣೆ ಮತ್ತು ಧರ್ಮದ ಲಾಂಛನಗಳು ಯಾವ ಗೋಡೆಯನ್ನೂ ನಿರ್ಮಿಸಲಾರದಂತಹ ಶೈಕ್ಷಣಿಕ ವಾತಾವರಣ ಇಂದಿನ ಅಗತ್ಯವಾಗಿದೆ.

ಮನೆಯ ಹೊಸ್ತಿಲಿನಾಚೆ ನಾವು ಹೆಜ್ಜೆ ಇಡುವಾಗ, ಎಲ್ಲರೊಳು ಒಂದಾಗಿ ಬದುಕಬೇಕೆನ್ನುವ ಸಾಮಾಜಿಕ ಜವಾಬ್ದಾರಿ ಖಂಡಿತ ಮುನ್ನೆಲೆಗೆ ಬರಬೇಕು. ನಡೆ-ನುಡಿಯಲ್ಲಿ ಏಕತೆ ಸಾಧಿಸಿದಾಗ ಮಾತ್ರ ಅದು ಸಾಧ್ಯವೇ ಹೊರತು ಧಾರ್ಮಿಕ ಲಾಂಛನ, ಶಾಸ್ತ್ರೀತನದಿಂದಲ್ಲ. ಹೀಗಾಗಿ, ತಿಳಿವಳಿಕೆ ಮತ್ತು ನಡವಳಿಕೆಯ ಮಧ್ಯೆ ನಿರ್ಮಾಣವಾದ ಕಂದರವನ್ನು ಇಲ್ಲವಾಗಿಸುವ ಕೆಲಸವನ್ನು ಸಮಾಜವೇ ಮಾಡಬೇಕಿದೆ.

ಅಕ್ಷರಗಳು ಕೇವಲ 'ಮುಖೋದ್ಗತ'ವಾಗುತ್ತಿವೆ. ಪಡೆದ ಶಿಕ್ಷಣ ನಮಗೆ 'ಹೃದ್ಗತ'ವಾಗದಿದ್ದರೆ ತಕ್ಕ ಮಣ್ಣಿನ ತೇವಕ್ಕಾಗಿ ಕಾಯ್ದಿರುವ ಬೀಜವಷ್ಟೆ! ಓದು ನಮ್ಮ ಆತ್ಮೋದ್ಧಾರಕ್ಕೆ; ಲೋಕೋಪಕಾರಕ್ಕಲ್ಲ.

ಲೇಖಕ: ಅಧ್ಯಾಪಕ, ಅಭ್ಯುದಯ ಪರ್ತಕರ್ತ





ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 37

ಶಿವಪೂಜೆಗೆ ನಿಶೀಥ ಕಾಲ


ಶಿವಪದವನ್ನು ಕೊಡುವ ಗಾಯತ್ರಿಯನ್ನು ಸಾವಿರದ ನೂರೆಂಟು ಬಾರಿ ಪ್ರಾತಃಕಾಲದಲ್ಲಿ ಜಪಿಸಬೇಕು. 'ಗಾಯತ್ರಿ' ಎಂದರೆ 'ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ ತನ್ನೋ ರುದ್ರಃ ಪ್ರಚೋದಯಾತ್' ಎಂಬ 'ರುದ್ರಗಾಯತ್ರಿ'. ಜೊತೆಗೆ ವೇದಮಂತ್ರ-ಸೂಕ್ತಿಗಳನ್ನು ನಿಯಮದಿಂದ ಜಪಿಸಬೇಕು. ದಶಾರ್ಣಮಂತ್ರವನ್ನು ತೊಂಬತ್ತೊಂಬತ್ತು ಬಾರಿ ಜಪಿಸಬೇಕು. ಇದಕ್ಕಿಂತ ಹೆಚ್ಚಾಗಿ ಹತ್ತುಸಾವಿರ ಬಾರಿಯಾಗಲೀ, ಸಾವಿರದ ತೊಂಬತ್ತೊಂಬತ್ತು ಬಾರಿಯಾಗಲೀ ಜಪಿಸಿ, ನಿತ್ಯವೂ ವೇದಪಾರಾಯಣ ಮಾಡಿದರೆ ಶಿವಲೋಕವು ಲಭಿಸುವುದು. ಇನ್ನು ಮಿಕ್ಕ ಮಂತ್ರಗಳನ್ನು ಅಕ್ಷರವೊಂದಕ್ಕೆ ಲಕ್ಷದಂತೆ ಜಪಿಸಬೇಕು. ಒಂದೇ ಅಕ್ಷರವುಳ್ಳ ಮಂತ್ರಗಳನ್ನು ಕೋಟಿ ಬಾರಿ ಜಪಿಸಬೇಕು. ಸಾಧ್ಯವಾಗದಿದ್ದರೆ ಸಾವಿರ ಬಾರಿಯಾದರೂ ಭಕ್ತಿಪೂರ್ವಕವಾಗಿ ಜಪಿಸಬೇಕು. ಹೀಗೆ ತನ್ನ ಶಕ್ತಿಗನುಸಾರವಾಗಿ ಯಾರು ಮಾಡುವರೋ ಅವರು ಶಿವಲೋಕವನ್ನು ಪಡೆಯುವರು.

ಈಶ್ವರಿಗೆ ಪ್ರಿಯವಾದ 'ಓಂ' ಎಂಬ ಒಂದೇ ಮಂತ್ರವನ್ನು ನಿತ್ಯವೂ ಸಹಸ್ರ ಬಾರಿ ಜಪಿಸಿದರೆ ಶಿವನ ಆಜ್ಞೆಯಿಂದ ಸಕಲ ಇಷ್ಟಾರ್ಥಗಳೂ ನೆರವೇರುವುದು. ಹೂದೋಟನಿರ್ಮಾಣ, ಶಿವದೇವಾಲಯವನ್ನು ಶುದ್ಧಗೊಳಿಸುವುದು ಮುಂತಾದವುಗಳನ್ನು ಶಿವಕಾರ್ಯಾರ್ಥವಾಗಿ ಅಥವಾ ಶಿವಪ್ರೀತಿಗಾಗಿ ಮಾಡಿದರೂ ಶಿವಪದವು ಲಭಿಸುವುದು. ಶಿವಕ್ಷೇತ್ರದಲ್ಲಿ ನಿತ್ಯವೂ ಭಕ್ತಿಯಿಂದ ವಾಸವನ್ನು ಮಾಡಬೇಕು. ಶಿವಕ್ಷೇತ್ರವಾಸವು ತಿಳಿವಳಿಕೆಯುಳ್ಳವರಿಗೂ, ತಿಳಿವಳಿಕೆ ಇಲ್ಲದವರಿಗೂ ಭೋಗ ಮತ್ತು ಮುಕ್ತಿಯನ್ನು ಕೊಡುವುದು. ಆದುದರಿಂದ ಶಿವಕ್ಷೇತ್ರದಲ್ಲಿ ಮರಣಪರ್ಯಂತ ವಾಸ ಮಾಡಿದರೆ ಬಹಳ ಒಳ್ಳೆಯದು.

ಸಾಮಾನ್ಯ ಜನ ಪ್ರತಿಷ್ಠಾಪಿಸಿದ ಲಿಂಗದ ಸುತ್ತಲೂ ನೂರು ಮೊಳಗಳಷ್ಟು ಪ್ರದೇಶ ಪುಣ್ಯಸ್ಥಳವಾಗಿರುತ್ತದೆ. ಋಷಿಸ್ಥಾಪಿತ ಲಿಂಗದ ಸುತ್ತಲೂ ಇರುವ ಸಾವಿರ ಹಸ್ತಪ್ರಮಾಣದಷ್ಟು ಪ್ರದೇಶ ಪುಣ್ಯಸ್ಥಳವಾದರೆ, ದೇವಪ್ರತಿಷ್ಠಿತವಾದ ಲಿಂಗದ ಸುತ್ತ ಹತ್ತು ಸಾವಿರ ಹಸ್ತ ಪ್ರಮಾಣಗಳಷ್ಟು ಪ್ರದೇಶ ಪವಿತ್ರವಾಗಿರುತ್ತದೆ. ಉದ್ಭವಲಿಂಗವುಳ್ಳ ಕ್ಷೇತ್ರದಲ್ಲಿ ಸಾವಿರ ಧನುಸ್ಸಿನಷ್ಟು ವಿಸ್ತಾರವಾದ ಪ್ರದೇಶವು ಪವಿತ್ರವಾಗಿರುತ್ತದೆ. ಪುಣ್ಯಕ್ಷೇತ್ರದಲ್ಲಿರುವ ಬಾವಿ, ಕಲ್ಯಾಣಿ, ಸರೋವರ ಮುಂತಾದುವುಗಳನ್ನು ಶಿವಗಂಗೆ ಎಂದು ತಿಳಿಯಬೇಕು. ಶಿವಗಂಗೆಗಳಲ್ಲಿ ಸ್ನಾನ, ದಾನ, ಜಪಗಳನ್ನು ಮಾಡಿದರೆ ಶಿವಪದವನ್ನು ಪಡೆಯುವರು. ಶಿವಕ್ಷೇತ್ರಕ್ಕೆ ಹೋಗಿ ಮರಣದವರೆಗೂ ಅಲ್ಲಿಯೇ ವಾಸಿಸಬೇಕು. ಶಿವಕ್ಷೇತ್ರದಲ್ಲಿ ಮೃತರಾದ ನಂತರ ದಹನಮಾಡಬೇಕು. ಮೃತರಿಗೆ ಹತ್ತು ದಿನಗಳಲ್ಲಿ ಮಾಡುವ ನಿತ್ಯಕ್ರಿಯೆ, ಮಾಸಿಕ, ಹನ್ನೆರಡನೆಯ ದಿನದಲ್ಲಿ ಮಾಡುವ ಸಪಿಂಡೀಕರಣ ಮತ್ತು ವರ್ಷಾಂತದಲ್ಲಿ ಶ್ರಾದ್ಧಗಳನ್ನು ಮಾಡಿದರೆ ಮೃತವ್ಯಕ್ತಿ ಸಕಲ ಪಾಪಗಳಿಂದ ಮುಕ್ತನಾಗಿ ಶಿವಲೋಕವನ್ನು ಸೇರುವನು. ಶಿವಕ್ಷೇತ್ರದಲ್ಲಿ ಮರಣಪರ್ಯಂತದವರೆಗೆ ವಾಸ ಮಾಡಲಾಗದಿದ್ದರೆ, ಏಳು ರಾತ್ರಿಯಾಗಲೀ, ಐದು ರಾತ್ರಿಯಾಗಲೀ, ಮೂರು ರಾತ್ರಿಯಾಗಲೀ ಕೊನೆಗೆ ಒಂದು ರಾತ್ರಿಯಾಗಲೀ ವಾಸಮಾಡಿದರೂ ಶಿವಲೋಕ ಲಭಿಸುವುದು.

ಫಲಾಪೇಕ್ಷೆಯಿಂದ ಶಿವಪೂಜೆಯನ್ನು ಮಾಡಿದರೆ ಆ ಕೂಡಲೇ ಬೇಕಾದಂತಹ ಫಲವನ್ನು ಪಡೆಯುವರು. ಫಲೇಚ್ಛೆಯಿಲ್ಲದೆ ಮಾಡಿದರೆ ಸಾಕ್ಷಾತ್ ಶಿವಲೋಕವೇ ಲಭಿಸುವುದು. ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ ಈ ಮೂರು ಕಾಲಗಳಲ್ಲೂ ಶಿವನನ್ನು ಭಕ್ತಿಯಿಂದ ಪೂಜಿಸಬೇಕು. ಪ್ರಾತಃಕಾಲದಲ್ಲಿ ನಿತ್ಯಕರ್ಮವಿಧಿಯನ್ನು ನಿರ್ವಹಿಸುವುದಕ್ಕೆ ಶ್ರೇಷ್ಠವಾಗಿರುತ್ತದೆ. ಮಧ್ಯಾಹ್ನ ಕಾಲವು ಕಾಮ್ಯಕರ್ಮಕ್ಕೂ, ಸಾಯಂಕಾಲ ಮತ್ತು ರಾತ್ರಿಕಾಲಗಳು ಶಾಂತಿಕರ್ಮಕ್ಕೂ ಪ್ರಶಸ್ತವಾದವು. ಮಧ್ಯರಾತ್ರಿಯ ಎರಡು ಯಾಮಗಳಿಗೆ 'ನಿಶೀಥ'ವೆಂದು ಹೆಸರು. ಮಧ್ಯರಾತ್ರಿಯ 12 ಗಂಟೆ 26 ನಿಮಿಷದಿಂದ 1 ಗಂಟೆ 15 ನಿಮಿಷದವರೆಗಿನ ಸರಿ ಸುಮಾರು 49 ನಿಮಿಷಗಳು ನಿಶೀಥದ ಕಾಲಾವಧಿಯಾಗಿರುತ್ತದೆ. ಈ ಕಾಲದಲ್ಲೇ ಶಿವನು ಲಿಂಗರೂಪದಲ್ಲಿ ಬ್ರಹ್ಮ-ವಿಷ್ಣು ಯುದ್ಧ ಸಂದರ್ಭದಲ್ಲಿ ಬಂದಿದ್ದು. ಹೀಗಾಗಿ ಈ ನಿಶೀಥಕಾಲವು ಶಿವಪೂಜೆಗೆ ಪ್ರಶಸ್ತವಾದುದು. ಮಹಾಶಿವರಾತ್ರಿಯಂದು 'ನಿಶೀಥ' ಕಾಲದಲ್ಲಿ ಶಿವನನ್ನು ಪೂಜಿಸಿದರೆ ಇಷ್ಟ ಸಿದ್ಧಿಯು ಸಿಗುವುದು. ಕಲಿಯುಗದಲ್ಲಿ ಕರ್ಮದಿಂದಲೇ ಫಲಸಿದ್ಧಿಯು ವಿಶೇಷವಾಗಿ ಆಗುವುದು. ಪಾಪವನ್ನು ಆಚರಿಸದೆ ಒಳ್ಳೆಯ ಆಚಾರವುಳ್ಳವನಾಗಿ ಯಾವುದಾದರೂ ತನಗೆ ಯೋಗ್ಯವಾದ ಕರ್ಮವನ್ನು ಆಚರಿಸಿದರೆ ಅದಕ್ಕೆ ತಕ್ಕ ಫಲವನ್ನು ಪಡೆಯಬಹುದು. ಹೀಗೆ ಸೂತಮುನಿಯು ಶಿವಪ್ರತಿಷ್ಠಾಪನೆಯ ವಿಧಾನ, ಅದರ ಪೂಜಾ ಕ್ರಮ ಮತ್ತು ಫಲಗಳನ್ನು ಋಷಿಮುನಿಗಳಿಗೆ ತಿಳಿಸುವುದರೊಂದಿಗೆ ಶ್ರೀಶಿವಮಹಾಪುರಾಣದ ವಿದ್ಯೇಶ್ವರಸಂಹಿತೆಯ ಹನ್ನೊಂದನೆಯ ಅಧ್ಯಾಯ ಮುಗಿಯುತ್ತದೆ.

ಪದಬಂಧ 4860 – ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಅಧಿಕವಾಗಿ ವರ್ಣಿಸುವುದು (3)
2.ಉಗ್ರವಾದ ಹೊಡೆದಾಟ (4)
4.ದಂತವನ್ನು ಮುಂದಿರಿಸಿ ಯಾಚಿಸು! (4)
6.ಮೂಗಿನಿಂದ ಸೋರುವ ಶ್ಲೇಷ್ಮ ವಸ್ತು (3)
7.ತಿರುಗಿದಾಗ ಕಾಣಿಸಿದ ನೊಸಲು (2)
9.ವಾತಾಯನ ಇಲ್ಲಿದೆ (3)
11.ಹಮ್ಮೀರನಿಗೊಲಿದ ಶಿವ (2)
13.ಕಮ್ಮಾರನ ಒಲೆ (3)
14.ದಮಯಂತಿ ಪತಿ ಮಾಡಿದ ಅಡುಗೆ (4)
16.ವಧೂವರರು ಒಬ್ಬರಿಗೊಬ್ಬರು ಈಡುಜೋಡಾಗಿರುವುದು (4)
17.ಎದುರು ಬಂದಿರುವವ ನೀಚ ವ್ಯಕ್ತಿ! (3)

ಮೇಲಿಂದ ಕೆಳಕ್ಕೆ

1.ದಾಹವಿದ್ದಾಗ ನೀಡಿದ ದೃಷ್ಟಾಂತ! (5)
2.ನೂಲು ಹೊಸೆದು ತಯಾರಿಸಿದ ಹುರಿ (2)
3.ಇದು ಲಲಾಟಲಿಖಿತ (5)
5.ಕಿವಿಗೆ ಧರಿಸುವ ಆಭರಣ (3)
8.ಈ ಠಕ್ಕ ಹರನೊಳಗಿದ್ದಾನಲ್ಲಾ? (5)
10.ನೃತ್ಯ ಮಾಡುವವಳು ತಿರುಗಿದ್ದಾಳಲ್ಲಾ? (3)
12.ರುಚಿಕಟ್ಟಾದ ಭೋಜನ (5)
15.ಹೋಗಬೇಕಾದ ಸ್ಥಳ (2)

4859ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮರ್ದನ 6.ದಂತಮಂಜನ 7.ವಾರಿಜ 10.ಜನಾನುರಾಗಿ 15.ವಿವಾದ 16.ವಾದವಿವಾದ 17.ನಸರಿ

ಮೇಲಿಂದ ಕೆಳಕ್ಕೆ: 1.ಮಧಿವಾಳ 2.ನದೀಜ 3.ವದಂತಿ 4.ದೀಮಂತ 5.ವನಸ್ಪತಿ 8.ಜಾನಪದ 9.ರುಜಾನ 11.ಅನುವಾದ 12.ವಾದಕ 13.ಮೊಸರು 14.ಹಕ್ಕಿ 15.ವಿಧಾನ

ಸುಡೊಕು 5246

6		4				7		8
		5		7	1		4	
1	3			4				6
		1				9		7
			3	9	7			4
7		9				8		
5				6		4		
4					3		2	1
	6	2		8	4			5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5245 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಶನಿವಾರ ಫೆಬ್ರುವರಿ 5, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಮಕರ ಮಾಸದ 22 ನೇ ದಿನ ತಿಥಿ: (ಮಾಘ ಶುಕ್ಲ) ಪಂಚಮಿ ಗಂ. 27-47 ನಕ್ಷತ್ರ: ಉತ್ತರಾಭಾದ್ರಾ ಗಂ. 16-09 ಯೋಗ: ಸಿದ್ಧ ಗಂ. 17-41, ಕರಣ: ಬವ ಗಂ. 15-41, ಬಾಲವ ಗಂ. 27-47. ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 07-00 ಸೂರ್ಯಾಸ್ತ : 06-29 ಮುಸ್ಲಿಂ ದಿನಾಂಕ : 03 ರಜಬ್ ದಿನ ವಿಶೇಷ : ಶ್ರೀ ಪಂಚಮಿ, ಸರಸ್ವತಿ ಪೂಜೆ, ವಸಂತ ಪಂಚಮಿ ಅದೃಷ್ಟ ಸಂಖ್ಯೆ: 6, 8

ಮೇಷ: ನಿಮ್ಮ ಉತ್ಸಾಹವನ್ನು ಹೆಚ್ಚಿಸುವ ಪ್ರೋತ್ಸಾಹಕರ ಸುದ್ದಿ ಕೇಳುತ್ತೀರಿ. ಹುಣಸೆಹಣ್ಣು ಹಾಗೂ ದ್ರಾಕ್ಷಿ ಬೆಳೆಗಾರರಿಗೆ ವ್ಯಾಪಾರದಲ್ಲಿ ಅನುಕೂಲ. ಮನೆಯ ನಿರ್ವಹಣೆಯಲ್ಲಿ ಹೆಚ್ಚಿನ ಜವಾಬ್ದಾರಿ ಬರಲಿದೆ.

ವೃಷಭ: ನಿಮ್ಮ ಎಲ್ಲಾ ಕಾರ್ಯಗಳಿಗೂ ಅನುಭವದ ಕೊರತೆ ಕಾಣಲಿದೆ. ಆದ್ದರಿಂದ ಬಂಧು ವರ್ಗದವರಿಂದ ಅಥವಾ ಪಿತೃ ಸಮಾನರಿಂದ ಸೂಕ್ತ ಮಾರ್ಗದರ್ಶನ ತೆಗೆದುಕೊಳ್ಳಿ. ಚಿನ್ನಾಭರಣದ ಖರೀದಿ ಸಾಧ್ಯತೆ.

ಮಿಥುನ: ಮುದ್ರಣಕಾರರಿಗೆ ದೇಹಾಯಾಸ ಹೆಚ್ಚಾಗಿ ತಪ್ಪುಗಳು ನಡೆಯಬಹುದಾದ ಸನ್ನಿವೇಶಗಳಿವೆ. ಮಕ್ಕಳ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ. ಬಹಳ ದಿನಗಳಿಂದ ಸ್ಥಗಿತಗೊಂಡಿದ್ದ ಕೆಲಸ ಇಂದು ನೆರವೇರುತ್ತದೆ.

ಕರ್ಕಾಟಕ: ಆಲಸ್ಯ ದೂರವಾಗಿ ಲವಲವಿಕೆಯಿಂದ ದಿನ ಕಳೆಯುತ್ತೀರಿ. ಒಡಹುಟ್ಟಿದವರೊಡನೆ ಗಹನವಾದ ಮಾತುಕತೆ ನಡೆಯಲಿದೆ. ನಿಮಗೆ ಒದಗಿದ್ದ ಆತಂಕ ದೂರವಾಗುತ್ತದೆ.

ಸಿಂಹ: ಪ್ರಾಪಂಚಿಕ ಅನುಭವಕ್ಕಾಗಿ ಕಾನೂನಿನ ಬಗ್ಗೆ ಅಧ್ಯಯನ ಮಾಡುವ ಮನಸ್ಸಾಗುತ್ತದೆ. ಈ ದಿನದ ನಿಮ್ಮ ಕೆಲವು ಮಾತುಗಳಿಂದ ಇತರರು ಪ್ರಭಾವಿತರಾಗುತ್ತಾರೆ. ಹಳೆಯ ನೆನಪುಗಳನ್ನು ಹೊಂದಿರುವ ವಸ್ತು ಪುನಃ ಕೈ ಸೇರುತ್ತದೆ.

ಕನ್ಯಾ: ಬದುಕಿನ ಕವಲುದಾರಿಯಲ್ಲಿರುವ ಸರಿಯಾದ ಮಾರ್ಗದರ್ಶನ ದೊರೆಯಲಿದೆ. ಧರ್ಮ ಕೆಲಸಗಳಲ್ಲಿ ತೊಡಗುತ್ತೀರಿ. ವಾಹನ ಚಾಲನೆ ಕಲಿಕೆ ಆರಂಭಿಸಬಹುದು. ಸರ್ಕಾರಿ ಉನ್ನತ ಅಧಿಕಾರಿಗಳಿಗೆ ವರ್ಗಾವಣೆ ಸಾಧ್ಯತೆ.

ತುಲಾ: ವ್ಯವಹಾರದಲ್ಲಿನ ಹಿಂದಿನ ನಿರ್ಧಾರಗಳು ನಿಮ್ಮ ಒಳಿತಿಗಾಗಿ ಬದಲಾಗುವ ಸಂಭವವಿದೆ. ಈ ದಿನ ಗೋವಿನ ಸೇವೆ ಮಾಡುವುದರಿಂದ ಸಮಸ್ಯೆಗಳಿಗೆ ಪರಿಹಾರ ತಾನಾಗಿಯೇ ಗೋಚರಿಸಲಿದೆ.

ವೃಶ್ಚಿಕ: ಬಾಲ್ಯದ ಸ್ನೇಹಿತರ ಭೇಟಿಯು ಹಳೆಯ ನೆನಪುಗಳನ್ನು ಮರುಕಳಿಸಲಿದೆ. ನಿರುದ್ಯೋಗಿಗಳಿಗೆ ಸಾಧಾರಣವಾದ ಉದ್ಯೋಗ ದೊರಕಿದರೂ ಯಾವುದೇ ಕಾರಣಕ್ಕೂ ತಿರಸ್ಕರಿಸಬೇಡಿ.

ಧನು: ನಿಮ್ಮ ಜೀವನಶೈಲಿಗೆ ಸಂಬಂಧಿಸಿದಂತೆ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸುಸಮಯ. ವಿದ್ಯಾರ್ಥಿಗಳು ಸ್ವಲ್ಪ ಶ್ರಮವಹಿಸಿ ಓದಿದರೆ, ಅಭ್ಯಾಸಿಸಿದರೆ ನಿರೀಕ್ಷೆಗಿಂತ ಹೆಚ್ಚಿನ ಯಶಸ್ಸು ಲಭ್ಯವಾಗುವುದು.

ಮಕರ: ಕಬ್ಬಿಣ ಕೆಲಸದ ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ಸಿಗುವ ಸಂಭವಗಳಿವೆ. ಹಿರಿಯ ಅಧಿಕಾರಿಗಳಿಂದ ಪ್ರಶಂಸೆಯ ಮಾತುಗಳು ಬರಲಿದೆ. ಹಿತಶತ್ರುಗಳು ನಿಮ್ಮ ಹೆಸರನ್ನು ಹಾಳು ಮಾಡುವ ಪ್ರಯತ್ನ ಮಾಡಬಹುದು. ಜಾಗ್ರತರಾಗಿರಿ.

ಕುಂಭ: ಬಹುಜನರಲ್ಲಿ ಮಾಡಿದ ಸಾಲಗಳು ತೀರಿದ್ದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಯಾಗಲಿದೆ. ನೂತನವಾಗಿ ಭೂಮಿ ಖರೀದಿಗೆ ಸಂಬಂಧಿಸಿದಂತೆ ಈ ಹಿಂದೆ ತೆಗೆದುಕೊಂಡ ನಿಲುವನ್ನು ಬದಲಾಯಿಸಬೇಡಿ.

ಮೀನ: ಶಸ್ತ್ರವೈದ್ಯ ವೃತ್ತಿಯವರಿಗೆ ಸೌಲಭ್ಯಗಳು ಹೆಚ್ಚಲಿದೆ. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು, ನವ ಉಲ್ಲಾಸವನ್ನು ಕಾಣಲಿದ್ದೀರಿ. ಮನೆಯ ಕೆಲಸಗಳು ಸರಾಗವಾಗಿ ನೆರವೇರುವುದು.

ಶಿರವಸ್ತ್ರ, ಶಾಲು ಧರಿಸಿದವರಿಗೆ ಪ್ರವೇಶ ನಿರಾಕರಣೆ; ಕೆಲವು ಸರ್ಕಾರಿ ಕಾಲೇಜುಗಳಲ್ಲಿ ಅವಕಾಶ

ಹಿಜಾಬ್– ಕೇಸರಿ ಶಾಲು ಸಂಘರ್ಷ ತೀವ್ರ

ಪ್ರಜಾವಾಣಿ ವಾರ್ತೆ


ಕುಂದಾಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರವೇಶ ದ್ವಾರದಲ್ಲಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿನಿಯರು

ಕುಂದಾಪುರ: ಇಲ್ಲಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಧರಿಸಿ ಬಂದಿದ್ದ ವಿದ್ಯಾರ್ಥಿನಿಯರಿಗೆ ಶುಕ್ರವಾರವೂ ಪ್ರವೇಶ ನಿರಾಕರಿಸಲಾಯಿತು. ಇದರಿಂದ ಆಕ್ರೋಶಗೊಂಡ ವಿದ್ಯಾರ್ಥಿನಿಯರು ಕಾಲೇಜು ಪ್ರವೇಶದ್ವಾರದಲ್ಲಿ ಕುಳಿತು ಪ್ರತಿಭಟಿಸಿದರು. ಪೋಷಕರು, ಸಂಘಟನೆಗಳ ಮುಖಂಡರು ಸ್ಥಳದಲ್ಲಿ ಜಮಾಯಿಸಿದ್ದರಿಂದ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಸಮವಸ್ತ್ರ ಧರಿಸಿ ಬಂದ ವಿದ್ಯಾರ್ಥಿಗಳಿಗೆ ಮಾತ್ರ ಶುಕ್ರವಾರ ಕಾಲೇಜಿನೊಳಗೆ ಪ್ರವೇಶ ನೀಡಲಾಗುತ್ತಿತ್ತು. ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರು, 'ಪ್ರವೇಶ ನೀಡಲೇಬೇಕು' ಎಂದು ಒತ್ತಾಯಿಸಿ ಕಾಲೇಜು ಆವರಣ ಪ್ರವೇಶಿಸಿದರು. ಇದಕ್ಕೆ ಪ್ರತಿಯಾಗಿ ಆವರಣದಲ್ಲಿದ್ದ ಹಿಂದೂ ವಿದ್ಯಾರ್ಥಿಗಳು ಕೇಸರಿ ಶಾಲು ಹಾಕಿಕೊಂಡು ಓಡಾಡಲು ಆರಂಭಿಸಿದರು.

ಬಿಗುವಿನ ವಾತಾವರಣ ನಿರ್ಮಾಣ ಆಗುತ್ತಿರುವುದನ್ನು ಗಮನಿಸಿದ ಪ್ರಾಂಶುಪಾಲರು ಹಾಗೂ ಉಪನ್ಯಾಸಕರು, ಹಿಜಾಬ್ ಹಾಗೂ ಕೇಸರಿ ಶಾಲು ಧರಿಸಿದ ವಿದ್ಯಾರ್ಥಿಗಳನ್ನು ಆವರಣದಿಂದ ಹೊರ ಹೋಗುವಂತೆ ಸೂಚಿಸಿದರು. ಈ ಸಂದರ್ಭ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರ ನಡುವೆ ವಾಗ್ವಾದ ನಡೆಯಿತು.

'ಹಿಂದಿನಿಂದಲೂ ಹಿಜಾಬ್ ಧರಿಸಿಯೇ ಕಾಲೇಜಿಗೆ ಬರುತ್ತಿದ್ದೇವೆ. ಈಗ ವಿರೋಧಿಸುವುದು ಸರಿಯಲ್ಲ. ನಮಗೆ ಹಿಜಾಬ್ ಬೇಕು, ಶಿಕ್ಷಣವೂ ಬೇಕು' ಎಂದು ವಿದ್ಯಾರ್ಥಿನಿಯರು ಪಟ್ಟು ಹಿಡಿದರು. 'ಕಾಲೇಜು ಅಭಿವೃದ್ಧಿ ಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಸಮವಸ್ತ್ರ ಹೊರತಾಗಿ ಯಾವುದೇ ವಸ್ತ್ರ ಧರಿಸುವಂತಿಲ್ಲ' ಎಂದು ತಿಳಿಸಿದ ಉಪನ್ಯಾಸಕರು ವಿದ್ಯಾರ್ಥಿಗಳನ್ನು ಆವರಣದಿಂದ ಹೊರಹಾಕಿದರು.

ಉಪನ್ಯಾಸಕರ ನಡೆ ವಿರೋಧಿಸಿ ವಿದ್ಯಾರ್ಥಿನಿಯರು ಪ್ರವೇಶದ್ವಾರದಲ್ಲಿ ಕುಳಿತು ಪ್ರತಿಭಟನೆ ನಡೆಸಿದರು. ಪ್ರತಿಯಾಗಿ ಕೇಸರಿ ಶಾಲು ಧರಿಸಿದ ವಿದ್ಯಾರ್ಥಿಗಳು ಜೈಶ್ರೀರಾಮ್ ಘೋಷಣೆ ಕೂಗಿದರು. ವಿದ್ಯಾರ್ಥಿನಿಯರ ಪೋಷಕರು ಕಾಲೇಜು ಆಡಳಿತ ಮಂಡಳಿಯ ನಡೆ ಖಂಡಿಸಿ ಪ್ರತಿಭಟನೆಗೆ ಮುಂದಾದರು. ಈ ವೇಳೆ ವಾಗ್ವಾದ ನಡೆಯಿತು. ಮಧ್ಯಪ್ರವೇಶಿಸಿದ ಪೊಲೀಸರು ಗುಂಪನ್ನು ಚದುರಿಸಿದರು.

ವಿವಾದ ವಿಸ್ತರಣೆ: ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜು, ಡಾ.ಬಿ.ಬಿ. ಹೆಗ್ಡೆ ಕಾಲೇಜು, ಕೋಟೇಶ್ವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಕಾಲೇಜಿನೊಳಗೆ ಪ್ರವೇಶ ನಿರ್ಬಂಧಿಸಲಾಯಿತು.

ಕುಂದಾಪುರದ ಆರ್.ಎನ್. ಶೆಟ್ಟಿ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಕೊಠಡಿಯಲ್ಲಿ ಕೂರಲು ವ್ಯವಸ್ಥೆ ಮಾಡಲಾಗಿತ್ತು.

ಕೆಲವೆಡೆ ಅವಕಾಶ: ಬಸ್ರೂರಿನ ಶಾರದಾ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಹಾಗೂ ಕೇಸರಿ ಶಾಲು ಧರಿಸಿದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಯಿತು.

ಬೈಂದೂರು ಹಾಗೂ ನಾವುಂದದ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲೂ ಹಿಜಾಬ್ ಧರಿಸಿದ ಹಾಗೂ ಕೇಸರಿ ಶಾಲು ಹಾಕಿಕೊಂಡ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿತ್ತು.

ಶಂಕಾಸ್ಪದ ವ್ಯಕ್ತಿ ವಶಕ್ಕೆ: ಕುಂದಾಪುರದ ಸರ್ಕಾರಿ ಪದವಿಪೂರ್ವ ಕಾಲೇಜು ಬಳಿ ಶುಕ್ರವಾರ ಸಂಜೆ ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರುವಶಕ್ಕೆ ಪಡೆದುಕೊಂಡಿದ್ದು ವಿಚಾರಣೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

> **ಮತೀಯ ಸಂಘಟನೆ ಕುಮ್ಮಕ್ಕಿನಿಂದ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಹಾಕುತ್ತಿದ್ದಾರೆ. ವಸ್ತ್ರಸಂಹಿತೆ ಪಾಲಿಸದಿದ್ದರೆ ಹಿಂದೂ ವಿದ್ಯಾರ್ಥಿಗಳು ಕೇಸರಿ ಶಾಲು ಹಾಕಲಿದ್ದಾರೆ.**
> **ಸುರೇಂದ್ರ,** ಹಿಂದೂ ಜಾಗರಣ ವೇದಿಕೆ ಮುಖಂಡ

> **ನನ್ನ ಅಕ್ಕ, ತಂಗಿ ಎಲ್ಲರೂ ಹಿಜಾಬ್ ಹಾಕಿಯೇ ಕಲಿತಿದ್ದಾರೆ. ಈಗ ನಿರಾಕರಿಸಿದ್ದು ಖಂಡನೀಯ. ಶೌಚಾಲಯ ಬಳಸಲೂ ಅವಕಾಶ ನೀಡಿಲ್ಲ. ಭಿಕ್ಷುಕರಂತೆ ಗೇಟ್ ಎದುರು ಕುಳಿತಿದ್ದೇವೆ.**
> **ತಾಹಿರಾ,** ವಿದ್ಯಾರ್ಥಿನಿ

> **ಕಾಲೇಜಿನಲ್ಲಿ ಸಮಾನತೆ ಬೇಕು, ಧರ್ಮಾಚರಣೆ ಬೇಡ. ಮಸೀದಿ, ಮನೆಗಳಲ್ಲಿ ಹಿಜಾಬ್ ಹಾಕಲಿ. ಕಾಲೇಜಿನಲ್ಲಿ ಹಿಜಾಬ್ ಹಾಕಿದರೆ ನಾವು ಕೇಸರಿ ಶಾಲು ಹಾಕುತ್ತೇವೆ.**
> **ಕೇಸರಿ ಶಾಲು ಹಾಕಿದ ವಿದ್ಯಾರ್ಥಿ**

'ವಿದ್ಯೆಯಿಂದ ಹೊರಗಿಡುವ ಹುನ್ನಾರ'

'ಕುಂದಾಪುರದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಶಿರವಸ್ತ್ರ ಧರಿಸಿ ಬಂದ ವಿದ್ಯಾರ್ಥಿನಿಯರನ್ನು ಕಾಲೇಜಿನೊಳಗೆ ಬಿಡದಿರುವುದು ಖಂಡನೀಯ' ಎಂದು ಜಿಲ್ಲಾ ಮುಸ್ಲಿಂ ಒಕ್ಕೂಟದ ಅಧ್ಯಕ್ಷ ಇಬ್ರಾಹಿಂ ಸಾಹೇಬ್ ಕೋಟ ಆಕ್ಷೇಪಿಸಿದ್ದಾರೆ.

'ಶೈಕ್ಷಣಿಕ ವರ್ಷದ ಆರಂಭದಿಂದಲೂ ಮುಸ್ಲಿಂ ವಿದ್ಯಾರ್ಥಿನಿಯರು ತರಗತಿಯಲ್ಲಿ ಹಿಜಾಬ್ ಧರಿಸುತ್ತಿದ್ದಾರೆ. ಹಿಂದೆಯೂ ಧರಿಸುತ್ತಿದ್ದರು. ಈಗ ಏಕಾಏಕಿ ಅವಕಾಶ ನಿರಾಕರಣೆ ಸರಿಯಲ್ಲ. ಈ ಕ್ರಮ ಮುಸ್ಲಿಂ ವಿದ್ಯಾರ್ಥಿನಿಯರನ್ನು ಶಿಕ್ಷಣದಿಂದ ಹೊರಗಿಡುವ ಹುನ್ನಾರವಾಗಿದೆ. ವಿದ್ಯೆ ನೀಡಬೇಕಾದ ಪ್ರಾಂಶುಪಾಲರೇ ವಿದ್ಯೆಯ ಬಾಗಿಲು ಮುಚ್ಚುವುದು ಸರಿಯಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕುಂದಾಪುರ: ಸರ್ಕಾರಿ ಕಾಲೇಜಿಗೆ ಇಂದು ರಜೆ

ಕುಂದಾಪುರದ ಸರ್ಕಾರಿ ಜೂನಿಯರ್ ಪದವಿಪೂರ್ವ ಕಾಲೇಜಿನಲ್ಲಿ ಹಿಜಾಬ್ ಹಾಗೂ ಕೇಸರಿ ಶಾಲು ಸಂಘರ್ಷ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ, ಕಾಲೇಜಿಗೆ ಶನಿವಾರ ರಜೆ ಘೋಷಿಸಲಾಗಿದೆ.

ರಘುಪತಿ ಭಟ್ ತಿರುಗೇಟು

ಹಿಜಾಬ್ ವಿವಾದ ಕುರಿತು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕೆಗೆ ಉಡುಪಿ ಶಾಸಕ ಕೆ.ರಘುಪತಿ ಭಟ್ ಟ್ವೀಟ್ ಮೂಲಕ ತಿರುಗೇಟು ನೀಡಿದ್ದಾರೆ. 'ರಘುಪತಿ ಭಟ್ ಯಾರು ಎಂದು ಪ್ರಶ್ನಿಸುವ ಸಿದ್ದರಾಮಯ್ಯನವರೇ, ನಾನು ಜನರಿಂದ ಆಯ್ಕೆಯಾದವನು. ನಿಮ್ಮ ಹಾಗೆ ಸ್ವಕ್ಷೇತ್ರದಲ್ಲಿ ಜನರಿಂದ ತಿರಸ್ಕೃತಗೊಂಡು, ಬೇರೆಯವರ ಕ್ಷೇತ್ರದ ಮೇಲೆ ಅವಲಂಬಿತನಾದವನಲ್ಲ. ನನ್ನ ಕ್ಷೇತ್ರದ ಸಮಸ್ಯೆಗೆ ಧ್ವನಿಯಾಗುವುದು ನನಗೆ ಸಂವಿಧಾನ ಕಲ್ಪಿಸಿದ ಹಕ್ಕು. ಅದನ್ನು ನಿಮ್ಮಿಂದ ಕಲಿಯಬೇಕಿಲ್ಲ' ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕರ್ನಾಟಕದ ತಾಲೀಬಾನಿಕರಣಕ್ಕೆ ಬಿಡಲ್ಲ : ಸುನಿಲ್ ಕುಮಾರ್



ಬೆಂಗಳೂರು: ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಬಿತ್ತಿದ ಜಾತಿ ವಿಷ ಬೀಜದ ಮುಂದುವರಿದ ಭಾಗವೇ ಹಿಜಾಬ್ ವಿವಾದ. ಕರ್ನಾಟಕವನ್ನು ತಾಲೀಬಾನಿಕರಣ ಮಾಡಲು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಹೇಳಿದ್ದಾರೆ.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಜನಮಾನಸದಲ್ಲಿ ಶಾಲಾ– ಕಾಲೇಜುಗಳಿಗೆ ಸಮವಸ್ತ್ರಬೇಕು ಎಂಬ ಅಭಿಪ್ರಾಯ ವಿದೆ. ಖುಷಿ ಬಂದಾಗ ಒಬ್ಬೊಬ್ಬರು ಒಂದೊಂದು ವಸ್ತ್ರ ಹಾಕಿಕೊಂಡು ಬರಲು ಸಾಧ್ಯವಿಲ್ಲ ಎಂದರು.

ಉಡುಪಿ, ಮಂಗಳೂರು ಜಿಲ್ಲೆಗಳನ್ನು ತಾಲೀಬಾನಿಕರಣ ಮಾಡಲು ಹೊರಟಿದ್ದಾರೆ, ಅದಕ್ಕೆ ಅವಕಾಶ ನೀಡುವುದಿಲ್ಲ ಎಂದರು.

ಸಮವಸ್ತ್ರ ನಿಯಮಕ್ಕೆ ಸಮಿತಿ ರಚನೆ ಮಾಡುವುದಾಗಿ ಶಿಕ್ಷಣ ಇಲಾಖೆ ಈಗಾಗಲೇ ಸ್ಪಷ್ಟ ಮಾಡಿದೆ. ಶೀಘ್ರವಾಗಿ ಸುತ್ತೋಲೆ ನೀಡುವುದಾಗಿ ಹೇಳಿದೆ. ಸರ್ಕಾರಿ ಶಾಲೆಗೆ ಶುಲ್ಕ ಕಟ್ಟೋಕೆ ಕಷ್ಟ ಎನ್ನುವವರು ನ್ಯಾಯಾಲಯಕ್ಕೆ ಹೋಗುತ್ತಾರೆ ಎಂದರೆ ಇದರ ಹಿಂದೆ ಯಾರ ಕೈವಾಡ ಇದೆ? ಮತೀಯ ಸಂಗತಿಗಳನ್ನು ವಿಜೃಂಭಿಸುವ ಕೆಲಸವನ್ನು ಶಾಲಾ ಕ್ಯಾಂಪಸ್‌ನಲ್ಲಿ ಮಾಡಲಾಗುತ್ತಿದೆ ಎಂದರು.

ಜಾತಿ–ಜಾತಿಗಳ ನಡುವೆ ಎತ್ತಿಕಟ್ಟುವ ಕೆಲಸ ಮಾಡಿದ್ದೆ ಸಿದ್ದರಾಮಯ್ಯ. ಹಿಜಾಬ್ ವಿವಾದದ ಹಿಂದೆ ಇಸ್ಲಾಮಿ ಸಂಘಟನೆಗಳು ಇದೆ ಅನ್ನಿಸುತ್ತಿತ್ತು. ಈಗ ಸಿದ್ದರಾಮಯ್ಯ ಮತ್ತು ಯು.ಟಿ.ಖಾದರ್ ಹೇಳಿಕೆಗಳನ್ನು ನೋಡಿದರೆ ಇವರೇ ಇದ್ದಂತೆ ಕಾಣುತ್ತದೆ ಎಂದಿದ್ದಾರೆ.

ರಾಜ್ಯದ ಸ್ತಬ್ಧಚಿತ್ರಕ್ಕೆ ದ್ವಿತಿಯ ಸ್ಥಾನ

ನವದೆಹಲಿ: ಇಲ್ಲಿನ ರಾಜಪಥದಲ್ಲಿ ಜನವರಿ 26ರಂದು ನಡೆದಿದ್ದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದ್ದ ರಾಜ್ಯದ ಸ್ತಬ್ಧಚಿತ್ರಕ್ಕೆ ಅತ್ಯುತ್ತಮ ಸ್ತಬ್ಧಚಿತ್ರ ವಿಭಾಗದಲ್ಲಿ ದ್ವಿತೀಯ ಸ್ಥಾನ ದೊರೆತಿದೆ.

ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ತಜ್ಞರ ಸಮಿತಿ ಅತ್ಯುತ್ತಮ ಮೂರು ಸ್ತಬ್ಧಚಿತ್ರಗಳನ್ನು ಆಯ್ಕೆ ಮಾಡಿದ್ದು, ಶುಕ್ರವಾರ ಬಹುಮಾನ ಘೋಷಿಸಲಾಗಿದೆ. ಕರಕುಶಲ ಕಲೆಯ ವೈಭವವನ್ನು ಬಿಂಬಿಸಿದ್ದ ಕರ್ನಾಟಕದ ಸ್ತಬ್ಧಚಿತ್ರವು ವೀಕ್ಷಕರ ಗಮನ ಸೆಳೆದಿತ್ತು.

ಕಾಶಿ ವಿಶ್ವನಾಥ ಕಾರಿಡಾರ್ ಕುರಿತ ಉತ್ತರ ಪ್ರದೇಶದ ಸ್ತಬ್ಧಚಿತ್ರ ಪ್ರಥಮ ಸ್ಥಾನ ಪಡೆದಿದ್ದು, ಮಹಿಳಾ ಸಹಕಾರ ಸಂಘಗಳ ಸಾಧನೆ ಹಾಗೂ ರಾಜ್ಯದ ಸುವರ್ಣ ಮಹೋತ್ಸವ ಸಂಭ್ರಮ ಬಿಂಬಿಸುವ ಮೇಘಾಲಯದ ಸ್ತಬ್ಧಚಿತ್ರ ತೃತೀಯ ಸ್ಥಾನಕ್ಕೆ ಪಾತ್ರವಾಗಿದೆ.

'ವಂದೇ ಭಾರತಂ' ನೃತ್ಯ ತಂಡವು ವಿಶೇಷ ಬಹುಮಾನಕ್ಕೆ ಆಯ್ಕೆಯಾಗಿದ್ದು, ಹುಬ್ಬಳ್ಳಿಯ ಮಯೂರ ಭರತ ನೃತ್ಯ ಅಕಾಡೆಮಿಯ ನೃತ್ಯಪಟುಗಳು ಈ ತಂಡದಲ್ಲಿ ಭಾಗವಹಿಸಿದ್ದರು.


ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ಭಾಗವಹಿಸಿದ್ದ ವಿಭಾಗದಲ್ಲಿ ಶಿಕ್ಷಣ ಹಾಗೂ ನಾಗರಿಕ ವಿಮಾನಯಾನ ಸಚಿವಾಲಯಗಳ ಸ್ತಬ್ಧಚಿತ್ರಗಳು ವಿಶೇಷ ಬಹುಮಾನ ಪಡೆದಿವೆ. ಕೇಂದ್ರದ ಲೋಕೋಪಯೋಗಿ ಇಲಾಖೆ ಪ್ರದರ್ಶಿಸಿದ್ದ 'ಸುಭಾಷ್- @125' ಸ್ತಬ್ಧಚಿತ್ರಕ್ಕೂ ವಿಶೇಷ ಬಹುಮಾನ ನೀಡಲಾಗಿದೆ.

ರಾಮದುರ್ಗ: ಕೇಸರಿ ಶಾಲು ಧರಿಸಿದ ವಿದ್ಯಾರ್ಥಿಗಳು

ರಾಮದುರ್ಗ (ಬೆಳಗಾವಿ ಜಿಲ್ಲೆ): ಉಡುಪಿ ಜಿಲ್ಲೆಯ ಕುಂದಾಪುರದ ಕೆಲವು ಕಾಲೇಜುಗಳ ವಿದ್ಯಾರ್ಥಿನಿಯರು ಹಿಜಾಬ್, ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಬಂದು ವಿವಾದ ಸೃಷ್ಟಿಯಾಗಿರುವ ನಡುವೆಯೇ, ಜಿಲ್ಲೆಯ ರಾಮದುರ್ಗ ಪಟ್ಟಣದ ಈರಮ್ಮ ಶಿವಲಿಂಗಪ್ಪ ಯಾದವಾಡ ಪ್ರಥಮ ದರ್ಜೆ ಸರ್ಕಾರಿ ಕಾಲೇಜಿನಲ್ಲಿ ಕೆಲವು ವಿದ್ಯಾರ್ಥಿಗಳು ಕೂಡ ಕೇಸರಿ ಶಾಲು ಹಾಕಿ ಹಾಜರಾಗಿದ್ದಾರೆ. ಇದರಿಂದ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಘಟನೆ ಬುಧವಾರ ನಡೆದಿದ್ದು, ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಶುಕ್ರವಾರ ವೈರಲ್ ಆಗಿವೆ.

ಪ್ರಾಚಾರ್ಯ ಡಾ.ಎ.ಎಸ್. ಲಾಳಸಂಗಿ ನೀಡಿದ ಮಾಹಿತಿ ಮೇರೆಗೆ ಕಾಲೇಜಿಗೆ ಬಂದ ಪಿಎಸ್‌ಐ ಎಸ್.ಎಂ ಕಾರಜೋಳ ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಕೇಸರಿ ಶಾಲು ತೆಗೆಸಿ ವಿದ್ಯಾರ್ಥಿಗಳಿಗೆ ಬುದ್ಧಿವಾದ ಹೇಳಿದ್ದಾರೆ ಎಂದು ತಿಳಿದು ಬಂದಿದೆ. ಹನುಮ ವ್ರತ ಆಚರಣೆ ಕಾರಣಕ್ಕೆ ಕೇಸರಿ ಶಾಲು ಧರಿಸಿದ್ದಾಗಿ ಕೆಲ ವಿದ್ಯಾರ್ಥಿಗಳು ಸಮಜಾಯಿಷಿ ನೀಡಿದ್ದಾರೆ. ಆ ಯುವಕರಿಗೆ ಪೊಲೀಸರು ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ ಎನ್ನಲಾಗಿದೆ.



> **ಇಲ್ಲಿ ಹಿಜಾಬ್ ಮತ್ತು ಇಸ್ಲಾಂ ಮುಖ್ಯ ಎನ್ನುವವರು ಪಾಕಿಸ್ತಾನ ಅಥವಾ ಅಫ್ಘಾನಿಸ್ತಾನಕ್ಕೆ ಹೋಗಲಿ. ಈಗ ಹಿಜಾಬ್‌ಗೆ ಹಠ ಹಿಡಿಯುತ್ತಾರೆ. ನಾಳೆ ಬುರ್ಕಾ ,ಮಸೀದಿ ಎನ್ನುತ್ತಾರೆ**
> **ಪ್ರಮೋದ್ ಮುತಾಲಿಕ್**
> ಶ್ರೀರಾಮ ಸೇನೆ ಅಧ್ಯಕ್ಷ



> **ಉಡುಪಿಯ ಕಾಲೇಜುಗಳಲ್ಲಿ ಸಮವಸ್ತ್ರ ವಿಷಯದಲ್ಲಿ ಆಗಿರುವ ಗೊಂದಲಗಳು ರಾಜ್ಯದಾದ್ಯಂತ ವಿಸ್ತರಿಸಿದರೆ ಬಹು ದೊಡ್ಡ ಸಮಸ್ಯೆಗಳಾಗುತ್ತವೆ**
> **ಸತೀಶ ಜಾರಕಿಹೊಳಿ**
> ಕೆಪಿಸಿಸಿ ಕಾರ್ಯಾಧ್ಯಕ್ಷ

'ಸಮಸ್ಯೆ ಮುಚ್ಚಿಡಲು ಹಿಜಾಬ್–ಶಾಲು ವಿವಾದ'

ಬೆಂಗಳೂರು: ಸರ್ಕಾರಿ ಶಾಲಾ–ಕಾಲೇಜುಗಳಲ್ಲಿರುವ ಹತ್ತಾರು ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗದ ಸರ್ಕಾರ ಹಿಜಾಬ್–ಕೇಸರಿ ಶಾಲು ವಿವಾದವನ್ನು ಮುಂದಿಟ್ಟು ತನ್ನ ಹುಳುಕು ಮುಚ್ಚಿಡಲು ಯತ್ನಿಸುತ್ತಿದೆ ಎಂದು ಆಮ್ ಆದ್ಮಿ ಪಾರ್ಟಿಯ ರಾಜ್ಯಾಧ್ಯಕ್ಷ ಪೃಥ್ವಿರೆಡ್ಡಿ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದ ಶೇ 64ರಷ್ಟು ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳು ಸರಿಯಾಗಿಲ್ಲ. ಕುಡಿಯುವ ನೀರು, ಮೇಲ್ಛಾವಣಿ, ಬೆಂಚು, ಕುರ್ಚಿ ಸೇರಿದಂತೆ ಮೂಲಸೌಕರ್ಯಗಳು ಶೋಚನೀಯ ಸ್ಥಿತಿಯಲ್ಲಿವೆ. ಬಹುತೇಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿದೆ. ಇಂತಹ ಪರಿಸ್ಥಿತಿ ಮರೆಮಾಚಲು ಹಿಜಾಬ್ ವಿವಾದವನ್ನು ಸೃಷ್ಟಿಸಲಾಗುತ್ತಿದೆ ಎಂದು ದೂರಿದರು.

ಯಥಾಸ್ಥಿತಿ ಪಾಲಿಸುವಂತೆ ಆಯೋಗ ಸೂಚನೆ

ಬೆಂಗಳೂರು: ವಿದ್ಯಾರ್ಥಿಗಳು ಹಿಜಾಬ್ ಧರಿಸಿ ಕಾಲೇಜಿಗೆ ಬರುವ ವಿಷಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ಆರಂಭದಿಂದ ಪಾಲಿಸಿಕೊಂಡು ಬಂದಿರುವ ಸಮವಸ್ತ್ರ ಸಂಹಿತೆಯನ್ನು ಕೂಲಂಕಶವಾಗಿ ಪರಿಶೀಲಿಸಿ ಮುಂದುವರಿಸುವಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಸೂಚಿಸಿದೆ.

ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಅವರಿಗೆ ಪತ್ರ ಬರೆದಿರುವ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ, 'ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ ವಿವಾದಗಳು ಮುಂದುವರಿದಿದ್ದು, ಶಾಂತಿ ಮತ್ತು ಸೌಹಾರ್ದತೆಗೆ ಧಕ್ಕೆ ಉಂಟಾಗುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಹಿಜಾಬ್ ಧರಿಸುವ ಪ್ರಕರಣ ಹೈಕೋರ್ಟ್‌ನಲ್ಲೂ ಬಾಕಿ ಇದೆ. ಪ್ರಕರಣ ಇತ್ಯರ್ಥವಾಗುವ ತನಕ ಯಥಾಸ್ಥಿತಿ ಪಾಲನೆ ಮಾಡಬೇಕಾಗುತ್ತದೆ. ಹಿಂದಿನಿಂದ ಹಿಜಾಬ್ ಧರಿಸಲಾಗುತ್ತಿದೆ ಎಂದು ವಿದ್ಯಾರ್ಥಿಗಳು ಹೇಳುತ್ತಿದ್ದರೆ, ಇಲ್ಲ ಎಂದು ಕಾಲೇಜಿನವರು ಹೇಳುತ್ತಿದ್ದಾರೆ. ಇದನ್ನು ಅಧಿಕಾರಿಗಳು ಕೂಲಂಕಶವಾಗಿ ಪರಿಶೀಲಿಸುವ ಅಗತ್ಯವಿದೆ' ಎಂದಿದ್ದಾರೆ.

ಹಿಜಾಬ್: ರಾಜಕೀಯ 'ಅಮಲು'

ಒಂದನೇ ಪುಟದಿಂದ

'ಹೈಕೋರ್ಟ್‌ನಿಂದ ಸ್ಪಷ್ಟ ನಿರ್ದೇಶನ ಬರುವವರೆಗೆ ಹಾಲಿ ನಿಯಮವನ್ನು ಎಲ್ಲರೂ ಪಾಲಿಸಬೇಕು. ನ್ಯಾಯಾಲಯದ ತೀರ್ಪಿನ ಬಳಿಕ ಹೊಸ ನಿಯಮ ರೂಪಿಸಲಾಗುವುದು' ಎಂದು ಸಚಿವ ನಾಗೇಶ್ ತಿಳಿಸಿದರು.

ಈ ಕುರಿತು ಪ್ರತಿಕ್ರಿಯಿಸಿರುವ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, 'ಶಾಲೆ, ಕಾಲೇಜುಗಳಲ್ಲಿ ಹಿಜಾಬ್ ಧರಿಸಬಾರದು ಎಂಬ ನಿಯಮವೇ ಇಲ್ಲ. ಹಿಜಾಬ್ ಧರಿಸಿ ಬರುವವರಿಗೆ ತರಗತಿ ಕೊಠಡಿ ಪ್ರವೇಶಿಸದಂತೆ ತಡೆಯುತ್ತಿರುವುದು ಮೂಲಭೂತ ಹಕ್ಕುಗಳ ಉಲ್ಲಂಘನೆ' ಎಂದು ಕಿಡಿಕಾರಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಎಚ್ಚರಿಕೆಯ ಹೇಳಿಕೆ ನೀಡಿದ್ದು, 'ಪಕ್ಷದ ಅಧ್ಯಕ್ಷನಾಗಿ ಮಾತನಾಡುವುದು ಸರಿಯಲ್ಲ. ಎಲ್ಲರಿಗೂ ಅವರದೇ ಆದ ಜೀವನ ಪದ್ಧತಿ, ಸಂಸ್ಕೃತಿ ಇದೆ. ಈ ಬಗ್ಗೆ ಬಹಿರಂಗ ಚರ್ಚೆ ಮಾಡಬೇಕಿಲ್ಲ. ಮಕ್ಕಳು, ಧಾರ್ಮಿಕ ಆಚರಣೆ ವಿಚಾರವನ್ನು ಒಂದು ಚೌಕಟ್ಟಿನಲ್ಲಿ ಚರ್ಚೆ ಮಾಡಬೇಕಿದೆ' ಎಂದಿದ್ದಾರೆ.

ಈ ಮಧ್ಯೆ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಂ ಅವರು 'ಈ ವಿಷಯ ಹೈಕೋರ್ಟ್‌ನಲ್ಲಿ ಇರುವುದರಿಂದ ಅಲ್ಲಿಂದ ನಿರ್ದೇಶನ ಬರುವವರೆಗೆ ಯಥಾಸ್ಥಿತಿ ಕಾಯ್ದುಕೊಂಡು ಹೋಗಬೇಕು' ಎಂದು ಶಿಕ್ಷಣ ಇಲಾಖೆಗೆ ಸೂಚನೆ ನೀಡಿದ್ದಾರೆ. ವಕ್ಫ್ ಮಂಡಳಿ ಅಧ್ಯಕ್ಷ ಷಫಿ ಅವರು, 'ಹಿಜಾಬ್ ಧರಿಸುವುದಕ್ಕೆ ವಿರೋಧ ವ್ಯಕ್ತವಾಗುತ್ತಿರುವುದರಿಂದ ಸಮುದಾಯದವರು ಆತಂಕಕ್ಕೆ ಒಳಗಾಗಿದ್ದಾರೆ. ಸಚಿವರು ಮಧ್ಯಪ್ರವೇಶಿಸಬೇಕು' ಎಂದು ಮನವಿ ಮಾಡಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ರಂಗಭೂಮಿ, ಚಲನಚಿತ್ರ, ಕಿರುತೆರೆ ಕಲಾವಿದೆ ಗಿರಿಜಾ ಲೋಕೇಶ್
ಗಿರಿಜಾ ಲೋಕಾಭಿರಾಮ...
ಸೆಲೆಬ್ರಿಟಿ LIVE
ಬೆಳಿಗ್ಗೆ 11ರಿಂದ 12
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ

ಪೋಷಕರ ಸಭೆ; ಹಿಜಾಬ್–ಕೇಸರಿ ಶಾಲು ವಿವಾದ ಪರಿಹಾರ

ಚಿಕ್ಕಮಗಳೂರು: ಜಿಲ್ಲೆಯ ಕೊಪ್ಪ ತಾಲ್ಲೂಕು ಕೇಂದ್ರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎದ್ದಿದ್ದ 'ಹಿಜಾಬ್' ಮತ್ತು 'ಕೇಸರಿ ಶಾಲು' ವಿವಾದವನ್ನು ಮಾತುಕತೆಯ ಮೂಲಕ ತಾತ್ಕಾಲಿಕವಾಗಿ ಬಗೆಹರಿಸುವಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯವರು ಮತ್ತು ಜನಪ್ರತಿನಿಧಿಗಳು ಯಶಸ್ವಿಯಾಗಿದ್ದಾರೆ.

ಪೋಷಕರ ಸಭೆ ಕರೆದು ಕೆಲವು ತೀರ್ಮಾನಗಳನ್ನು ಕೈಗೊಂಡಿದ್ದರಿಂದ ಸಮಸ್ಯೆ ಬೇಗನೇ ಬಗೆಹರಿದಿದೆ. 2018ರಲ್ಲಿ ಈ ಕಾಲೇಜಿನಲ್ಲಿ ಇಂಥದ್ದೇ ಪ್ರಸಂಗ ಎದುರಾಗಿದ್ದಾಗ, ಪೋಷಕರ ಸಭೆ ಕರೆದು ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು. ಅದಕ್ಕೆ ಎಲ್ಲರೂ ಬದ್ಧರಾಗಿದ್ದರು.

ಆದರೆ ಈಚೆಗೆ ಘಟನೆ ಮರುಕಳಿಸಿತ್ತು. ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸುವುದಕ್ಕೆ ವಿರೋಧ ವ್ಯಕ್ತಪಡಿಸಿ, ಎಬಿವಿಪಿ ಸಂಘಟನೆಯ ಕೆಲ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾಲೇಜಿಗೆ ಬಂದಿದ್ದರು. ಕಾಲೇಜಿನಲ್ಲಿ ಪ್ರತಿಭಟನೆ ನಡೆಸಿದ್ದರು.

ಕಾಲೇಜು ಅಭಿವೃದ್ಧಿ ಸಮಿತಿಯವರು ಕೂಡಲೇ ಎಚ್ಚೆತ್ತುಕೊಂಡು ಪುನಃ ಪೋಷಕರ ಸಭೆ ಆಯೋಜಿಸಿದರು. ಸಮಿತಿಯ ಅಧ್ಯಕ್ಷರೂ ಆಗಿರುವ ಶಾಸಕ ಟಿ.ಡಿ. ರಾಜೇಗೌಡ, ಪ್ರಾಚಾರ್ಯ ಅನಂತ್, ಪಿಎಸ್‌ಐ ಶ್ರೀನಾಥ್ ರೆಡ್ಡಿ, ವಿದ್ಯಾರ್ಥಿಗಳ ಪೋಷಕರು ಹಾಗೂ ಇತರ ಕೆಲವು ಜನಪ್ರತಿನಿಧಿಗಳು ಸಭೆಯಲ್ಲಿದ್ದರು.

ಹಿಂದೆ ನಡೆದಿದ್ದ ಸಭೆಯ ತೀರ್ಮಾನದಂತೆ, ತಲೆಯ ಮೇಲೆ 'ದುಪಟ್ಟ' (ವೇಲ್) ಹಾಕಿಕೊಳ್ಳಲು ಅವಕಾಶ ಇದೆ. ಆದರೆ, ಕೇಸರಿ ಶಾಲು ಧರಿಸಿ ಕಾಲೇಜಿಗೆ ಬರುವಂತಿಲ್ಲ. ಈ ಒಪ್ಪಿತ ನಿರ್ಣಯಕ್ಕೆ ವಿರುದ್ಧವಾಗಿ ನಡೆದುಕೊಂಡರೆ ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರ (ಟಿ.ಸಿ) ನೀಡಬೇಕಾಗುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ.

'ಸಮವಸ್ತ್ರದ ವಿಚಾರದಲ್ಲಿ ಕಾಲೇಜು ಶಿಕ್ಷಣ ಇಲಾಖೆಯಿಂದ ಯಾವುದೇ ನಿರ್ದೇಶನ ಇಲ್ಲ. ಸಮವಸ್ತ್ರ ಬೇಕೇ, ಬೇಡವೇ ಎಂಬುದನ್ನು ಪೋಷಕರ ಆಯ್ಕೆಗೆ ಬಿಡಲಾಗಿತ್ತು. ಸಮವಸ್ತ್ರ ಇರಬೇಕು, ಜತೆಗೆ ಅದೇ ಬಣ್ಣದ ದುಪಟ್ಟವನ್ನು ತಲೆಯ ಮೇಲೆ ಹಾಕಿಕೊಳ್ಳಲು ಅವಕಾಶ ನೀಡಬಹುದು ಎಂದು ಹಿಂದೆ ನಡೆದಿದ್ದ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ, ಕೇಸರಿ ಶಾಲು ಧರಿಸಲು ಅವಕಾಶ ಕೊಟ್ಟಿರಲಿಲ್ಲ. ಸಭೆಯ ಆ ತೀರ್ಮಾನವನ್ನು ಪಾಲನೆ ಮಾಡಲಾಗುತ್ತಿದೆ. ಹಿಂದೆ ನಡೆದ ಸಭೆಯಲ್ಲೂ ಇದೇ ತೀರ್ಮಾನ ಕೈಗೊಳ್ಳಲಾಗಿತ್ತು' ಎಂದು ಕೊಪ್ಪ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಅನಂತ್ 'ಪ್ರಜಾವಾಣಿ'ಗೆ ತಿಳಿಸಿದರು.

> **ಪೋಷಕರ ಅಭಿಪ್ರಾಯ ಪಡೆದು ತೀರ್ಮಾನ ಕೈಗೊಳ್ಳಲಾಗಿದೆ. ಮೊದಲಿನ ವ್ಯವಸ್ಥೆಯನ್ನೇ ಮುಂದುವರಿಸಿದ್ದೇವೆ.ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತೆ ಗಮನ ಹರಿಸಲಾಗಿದೆ.**
> **ಟಿ.ಡಿ.ರಾಜೇಗೌಡ,**
> ಕೊಪ್ಪ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ,

'ಹಿಜಾಬ್‌ಗೆ ವಿರೋಧದಿಂದ ಆತಂಕ ಸೃಷ್ಟಿ'

ಬೆಂಗಳೂರು: ಹಿಂದಿನಿಂದ ಹಿಜಾಬ್ ಧರಿಸಿ ಹೋಗುತ್ತಿದ್ದರೂ, ಈಗ ಧರಿಸಬಾರದು ಎಂದು ಕೆಲವೆಡೆ ಹೇಳುತ್ತಿರುವುದು ಇಡೀ ಸಮುದಾಯದಲ್ಲಿ ಆತಂಕ ಸೃಷ್ಟಿಸಿದೆ ಎಂದಿರುವ ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಎನ್.ಕೆ. ಷಾಫಿ ಸಾ– ಅದಿ ಅವರು, ಈ ವಿಷಯದಲ್ಲಿ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಮನವಿ ಮಾಡಿದ್ದಾರೆ.

ಸಚಿವರನ್ನು ಭೇಟಿ ಮಾಡಿದ್ದ ಅವರು, 'ಶೈಕ್ಷಣಿಕವಾಗಿ ಮೊದಲೇ ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳು ಕಾಲೇಜಿನಿಂದ ಹೊರಗೆ ಉಳಿದಿದ್ದಾರೆ. ಇದನ್ನು ಹೈಕೋರ್ಟ್ ಇತ್ಯರ್ಥ ಮಾಡುವ ತನಕ ಯಥಾಸ್ಥಿತಿ ಕಾಪಾಡುವುದು ಸೂಕ್ತ' ಎಂದು ತಿಳಿಸಿದ್ದಾರೆ.

'ಹಿಜಾಬ್–ಶಾಲು ಧರಿಸಿದವರಿಗೆ ಅವಕಾಶ ಇಲ್ಲ'

ಒಂದನೇ ಪುಟದಿಂದ

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಈಗ ಇರುವ ಶಾಲಾ ಸಮವಸ್ತ್ರ ನಿಯಮ ಕರ್ನಾಟಕ ಶಿಕ್ಷಣ ಕಾಯ್ದೆಯ ಅನ್ವಯ 2013 ಮತ್ತು 2018 ಲ್ಲೇ ರೂಪಿಸಿದ್ದು, ಅದರಲ್ಲಿರುವ ಅಂಶಗಳನ್ನೇ ಪಾಲಿಸಲಾಗುತ್ತಿದೆ. ಅದನ್ನು ಆಧರಿಸಿ ಸುತ್ತೋಲೆ ಹೊರಡಿಸಲಾಗಿದೆ' ಎಂದರು.

'ಇವತ್ತಿನ ಸಭೆಯಲ್ಲಿ ಅಡ್ವೊಕೇಟ್ ಜನರಲ್, ಕಾನೂನು ಇಲಾಖೆ ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳು ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಮಾಹಿತಿ ನೀಡಿದ್ದಾರೆ. ಸರ್ಕಾರದ ನಿಲುವನ್ನು ಹೈಕೋರ್ಟ್‌ನಲ್ಲಿ ಮಂಡಿಸಲಾಗುವುದು. ನ್ಯಾಯಾಲಯದ ತೀರ್ಪು ಬಂದ ನಂತರ ಹೊಸ ನಿಯಮ ರೂಪಿಸಲಾಗುವುದು' ಎಂದು ಹೇಳಿದರು.

'ಶಿರವಸ್ತ್ರದ ವಿಚಾರವಾಗಿ ಕೇರಳ ಮತ್ತು ಮುಂಬೈ ಹೈಕೋರ್ಟ್‌ಗಳೂ ಈ ಹಿಂದೆಯೇ ತೀರ್ಪು ನೀಡಿವೆ. ಆ ತೀರ್ಪುಗಳ ಪ್ರಕಾರ ಶಿಕ್ಷಣ ಸಂಸ್ಥೆಗಳಲ್ಲಿ ಶಿರವಸ್ತ್ರ ಧರಿಸುವುದಕ್ಕೆ ಅವಕಾಶವಿಲ್ಲ. ಸಂವಿಧಾನ ಗೊತ್ತಿಲ್ಲವೇ ಎಂದು ನಮ್ಮನ್ನು ಪ್ರಶ್ನಿಸುವ ಸಿದ್ದರಾಮಯ್ಯ ಅವರಿಗೆ ಈ ವಿಚಾರ ಗೊತ್ತೆ? ಅವರ ಪ್ರಕಾರ ಹೈಕೋರ್ಟ್‌ಗಳಿಗೇ ಸಂವಿಧಾನ ಗೊತ್ತಿಲ್ಲ. ನ್ಯಾಯಾಲಯಗಳಿಗಿಂತ ಇವರೇ ಅತೀತರು ಎಂದಾಯಿತು' ಎಂದು ನಾಗೇಶ್ ಲೇವಡಿ ಮಾಡಿದರು.

'ರಾಜ್ಯ ಸರ್ಕಾರ 2013 ಮತ್ತು 2018 ರಲ್ಲಿ ರೂಪಿಸಿದ ನಿಯಮದ ಪ್ರಕಾರ ಶಾಲಾ–ಕಾಲೇಜು ಅಭಿವೃದ್ಧಿ ಸಮಿತಿಗಳು ಸಮವಸ್ತ್ರವನ್ನು ಜಾರಿ ಮಾಡಿವೆ. ಉಡುಪಿಯಲ್ಲಿ ಜನವರಿವರೆಗೆ ಯಾವುದೇ ಸಮಸ್ಯೆ ಇರಲಿಲ್ಲ. ಆ ಬಳಿಕ ಇದ್ದಕ್ಕಿದ್ದಂತೆ ಈ ಸಮಸ್ಯೆ ಸೃಷ್ಟಿಯಾಗಿದೆ. ಇದರ ಹಿಂದೆ ಯಾರದ್ದೋ ಕುಮ್ಮಕ್ಕಿದೆ. ವಿದ್ಯಾರ್ಥಿಗಳು ಯಾರದ್ದೋ ಪ್ರೇರಣೆಗೆ ಒಳಗಾಗಿ ಬಲಿಪಶುಗಳಾಗಬಾರದು. ಮಕ್ಕಳು ಶಾಲೆಗೆ ಬರಬೇಕು. ಸಾಮರಸ್ಯದಿಂದ ಶಿಕ್ಷಣ ಪಡೆಯಬೇಕು' ಎಂದು ನಾಗೇಶ್ ಹೇಳಿದರು.

ಉಡುಪಿ ಎಸ್‌ಡಿಎಂಸಿ ಅಧ್ಯಕ್ಷರಾಗಿರುವ ಶಾಸಕ ರಘುಪತಿ ಭಟ್ ಅವರು ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳಿಗಿಂತ ಉತ್ತಮವಾಗಿ ಅಭಿವೃದ್ಧಿಪಡಿಸಿದ್ದಾರೆ. ಅವರನ್ನು ಯಾರು ಎಂದು ಸಿದ್ದರಾಮಯ್ಯ ಪ್ರಶ್ನಿಸುವುದು ಅವರಿಗೆ ಶೋಭೆ ತರುವುದಿಲ್ಲ.

'ಶಾಲೆಯ ಆರಂಭದಲ್ಲಿ ಸಮವಸ್ತ್ರವೂ ಸೇರಿದಂತೆ ಶಾಲೆಯ ನಿಯಮಾವಳಿಗಳ ಬಗ್ಗೆ ಲಿಖಿತ ಪತ್ರ ನೀಡಲಾಗಿತ್ತು. ಅದನ್ನು ಓದಿ, ಒಪ್ಪಿಕೊಂಡು ಸಹಿಯನ್ನು ಮಾಡಿದ್ದಾರೆ. ಈಗ ಬೇರೆಯೇ ವರಸೆ ಆರಂಭವಾಗಿದೆ' ಎಂದೂ ಹೇಳಿದರು.

ಕಾಳಿದಾಸ ಸಮ್ಮಾನ ಪ್ರಶಸ್ತಿಗೆ ಭಾಜನರಾದ ಪಂ. ವೆಂಕಟೇಶ ಕುಮಾರ

'ಗುರುಗಳಿಗೆ ಸಿಕ್ಕ ಪ್ರಶಸ್ತಿ ಲಭಿಸಿದ್ದಕ್ಕೆ ನಾನು ಧನ್ಯ'

● ಇ.ಎಸ್. ಸುಧೀಂದ್ರ ಪ್ರಸಾದ್


ಮುಖ್ಯಾಂಶಗಳು
- 2017ನೇ ಸಾಲಿನ ಪ್ರಶಸ್ತಿ ವೆಂಕಟೇಶ ಕುಮಾರ ಅವರಿಗೆ
- ಮೊದಲ ಪ್ರಶಸ್ತಿ ಪಡೆದಿದ್ದ ಪಂ. ಮಲ್ಲಿಕಾರ್ಜುನ ಮನಸೂರ
- ರಂಗಭೂಮಿ ಕ್ಷೇತ್ರದಲ್ಲಿ ರಾಜ್ಯದ ಮೂವರಿಗೆ ಸಮ್ಮಾನ

ಧಾರವಾಡ: 'ಮಧ್ಯಪ್ರದೇಶ ಸರ್ಕಾರ ನೀಡುವ ಕಾಳಿದಾಸ ಸಮ್ಮಾನ ಪ್ರಶಸ್ತಿಯು ಗುರುಗಳಾದ ಪಂಡಿತ್ ಪುಟ್ಟರಾಜ ಗವಾಯಿಗಳಿಗೆ ಸಿಕ್ಕಿತ್ತು. ಅವರ ಕೃಪಾಶೀರ್ವಾದದಿಂದ ನನಗೂ ದೊರೆತಿದ್ದಕ್ಕೆ ನಾನು ಧನ್ಯ' ಎಂದು ಹಿರಿಯ ಹಿಂದೂಸ್ತಾನಿ ಗಾಯಕ ಪಂಡಿತ್ ವೆಂಕಟೇಶ ಕುಮಾರ ಹೇಳಿದರು.

₹2ಲಕ್ಷ ನಗದು ಪುರಸ್ಕಾರ ಹಾಗೂ ಸ್ಮರಣಿಕೆ ಒಳಗೊಂಡಿರುವ ಕಾಳಿದಾಸ ಸಮ್ಮಾನ 2017ನೇ ಸಾಲಿನ ಪ್ರಶಸ್ತಿ ಪಡೆದ ಅವರು ಶುಕ್ರವಾರ 'ಪ್ರಜಾವಾಣಿ'ಯೊಂದಿಗೆ ತಮ್ಮ ಅನಿಸಿಕೆ ಹಂಚಿಕೊಂಡರು.

'1980ರಲ್ಲಿ ಕಾಳಿದಾಸ ಸಮ್ಮಾನ ಪ್ರಶಸ್ತಿ ಆರಂಭಿಸಿದ ಮಧ್ಯಪ್ರದೇಶ ಸರ್ಕಾರ, ಮೊದಲು ನೀಡಿದ್ದೇ ಈ ನೆಲದ ಪಂಡಿತ್ ಮಲ್ಲಿಕಾರ್ಜುನ ಮನಸೂರ ಅವರಿಗೆ. 1981ರಲ್ಲಿ ಪಂಡಿತ್ ಕುಮಾರ ಗಂಧರ್ವ ಅವರಿಗೆ ಲಭಿಸಿತು. 2005ರಲ್ಲಿ ಈ ಪ್ರಶಸ್ತಿ ನನ್ನ ಗುರುಗಳಾದ ಪಂಡಿತ್ ಪುಟ್ಟರಾಜ ಗವಾಯಿಗಳಿಗೂ ಸಿಕ್ಕಿದೆ. ಇದು ಈ ಮಣ್ಣಿನ ಶ್ರೇಷ್ಠ ಗುಣ. ಈ ನೆಲದಲ್ಲಿ ಶಿಕ್ಷಣ ಪಡೆದು, ಅದರಲ್ಲಿ ಪ್ರಾಮಾಣಿಕವಾಗಿ ದುಡಿದರೆ ಅಂಥವರನ್ನು ಪ್ರಶಸ್ತಿ ಖಂಡಿತಾ ಹುಡುಕಿಕೊಂಡು ಬರಲಿದೆ. ಅವಿಭಜಿತ ಧಾರವಾಡದ ಗದುಗಿನಲ್ಲಿ ಶಿಕ್ಷಣ ಪಡೆದು ಧಾರವಾಡದಲ್ಲಿ ಕೆಲಸ ಸಿಕ್ಕಾಗ ಗುರುಗಳು ನೀನು ಪುಣ್ಯವಂತ ಎಂದು ಆಶೀರ್ವದಿಸಿದ್ದರು. ಇವೆಲ್ಲವೂ ಅವರ ಆಶೀರ್ವಾದದ ಫಲವೇ ಆಗಿದೆ' ಎಂದರು.

'ದೇವಾಸ್‌ನಲ್ಲಿ ನೆಲೆಸಿದ್ದ ಕುಮಾರ ಗಂಧರ್ವರಿಗೆ ಮೊದಲ ಪ್ರಶಸ್ತಿ ಘೋಷಣೆಯಾಗಿತ್ತು. ಆದರೆ ಅವರು ಈ ಪ್ರಶಸ್ತಿಯನ್ನು ತನಗಿಂತ ಹಿರಿಯರಾದ ಪಂಡಿತ್ ಮನಸೂರ ಅವರಿಗೆ ಕೊಡುವಂತೆ ಅಲ್ಲಿನ ಸರ್ಕಾರಕ್ಕೆ ಹೇಳಿದ್ದರು. ಇದನ್ನು ಕಾರ್ಯಕ್ರಮವೊಂದರಲ್ಲಿ ಮನಸೂರ ಅವರೇ ಹೇಳಿದ್ದರು. ಸಾಂಸ್ಕೃತಿಕ ಕ್ಷೇತ್ರದಲ್ಲಿನ ಇಂಥ ಸಂಬಂಧ ಇತ್ತೀಚಿನ ದಿನಗಳಲ್ಲಿ ವಿರಳಾತಿವಿರಳ' ಎಂದು ನೆನಪಿಸಿಕೊಂಡರು.


ಕಾಳಿದಾಸ ಸಮ್ಮಾನ ಫಲಕದೊಂದಿಗೆ ಪಂಡಿತ್ ವೆಂಕಟೇಶ ಕುಮಾರ
ಪ್ರಜಾವಾಣಿ ಚಿತ್ರ: ಬಿ.ಎಂ. ಕೇದಾರನಾಥ

'ಪ್ರಶಸ್ತಿಗಾಗಿ ನಾನು ಎಂದಿಗೂ ಅರ್ಜಿ ಹಾಕಿದವನಲ್ಲ. ನಿನ್ನ ಕೆಲಸ ನೀನು ಮಾಡು. ತಾನಾಗಿಯೇ ಬರುವ ಪ್ರಶಸ್ತಿಗಳನ್ನು ಸ್ವೀಕರಿಸು. ಆದರೆ ಎಂದಿಗೂ ಪ್ರಶಸ್ತಿ ಪಡೆಯುವ ಸಲುವಾಗಿಯೇ ಕೆಲಸ ಮಾಡಬೇಡ ಎಂದು ಗುರುಗಳು ಹೇಳುತ್ತಿದ್ದ ಮಾತು ಸದಾ ನೆನಪಿಸಿಕೊಳ್ಳುತ್ತೇನೆ. ಅವರ ಮಾತು ಹಾಗೂ ಆಶೀರ್ವಾದ ಸದಾ ನೆನಪಾಗುತ್ತಲೇ ಇರುತ್ತದೆ. ಪ್ರಶಸ್ತಿಗಳು ಬಂದಾಗ ಜವಾಬ್ದಾರಿ ಮತ್ತು ಸಮಾಜಕ್ಕೆ ಇನ್ನಷ್ಟು ಸೇವೆ ಮಾಡುವ ಮನೋಭಾವ ಹೆಚ್ಚಾಗುತ್ತದೆ' ಎಂದು ವೆಂಕಟೇಶ ಕುಮಾರ ಹೇಳಿದರು.

'2017ರಲ್ಲೇ ಈ ಪ್ರಶಸ್ತಿ ಘೋಷಣೆಯಾಗಿತ್ತು. ಅಲ್ಲಿಂದ 2021ರವರೆಗಿನ ಪ್ರಶಸ್ತಿಗಳನ್ನು ಕಳೆದ ಡಿ. 28ರಂದು ಗ್ವಾಲಿಯರ್‌ನಲ್ಲಿ ಪ್ರದಾನ ಮಾಡಲಾಗಿತ್ತು. ಕಾರಣಾಂತರಗಳಿಂದ ಅಲ್ಲಿಗೆ ಹೋಗಲು ನನಗೆ ಆಗಿರಲಿಲ್ಲ. ನನ್ನ ಸ್ನೇಹಿತರೊಬ್ಬರು ಪ್ರಶಸ್ತಿ ಪಡೆದು ಪುಣೆಗೆ ತಂದಿದ್ದರು. ಇತ್ತೀಚೆಗೆ ಪುಣೆಯಲ್ಲಿ ಆಯೋಜಿಸಲಾಗಿದ್ದ ಪಂ. ಭೀಮಸೇನ ಜೋಶಿ ಅವರ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಹೋಗಿದ್ದಾಗ ಅವುಗಳನ್ನು ತೆಗೆದುಕೊಂಡು ಬಂದೆ' ಎಂದರು.

ರಂಗಭೂಮಿ ಕ್ಷೇತ್ರದಲ್ಲಿ ದುಡಿದ ಬಿ.ವಿ. ಕಾರಂತ, ಗಿರೀಶ ಕಾರ್ನಾಡ ಹಾಗೂ ಕೆ.ವಿ.ಸುಬ್ಬಣ್ಣ ಅವರಿಗೂ ಕಾಳಿದಾಸ ಸಮ್ಮಾನ ಪ್ರಶಸ್ತಿ ಲಭಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

> **ಕಲಾವಿದನಿಗೆ ಪ್ರಶಸ್ತಿಗಳು ಬೇಕು. ಆದರೆ ಆ ಪ್ರಶಸ್ತಿಗಾಗಿಯೇ ಕಲಾ ಜೀವನ ನಡೆಸಬಾರದು. ಹಾಗೆಯೇ ಬಂದ ಪ್ರಶಸ್ತಿಗಳನ್ನು ತಿರಸ್ಕರಿಸಲೂಬಾರದು.**
> **ಪಂ. ವೆಂಕಟೇಶ ಕುಮಾರ,**
> ಹಿರಿಯ ಹಿಂದೂಸ್ತಾನಿ ಗಾಯಕ

'ಹಿಜಾಬ್ ನಿಷೇಧ ಮೂಲಭೂತ ಹಕ್ಕಿನ ಉಲ್ಲಂಘನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಜಾಬ್ ಧರಿಸಿದ ಮುಸ್ಲಿಂ ವಿದ್ಯಾರ್ಥಿನಿಯರು ಶಾಲಾ, ಕಾಲೇಜುಗಳ ತರಗತಿಗಳಿಗೆ ಪ್ರವೇಶಿಸಬಾರದು ಎಂಬ ನಿಷೇಧ ಹೇರುವುದು ಮೂಲಭೂತ ಹಕ್ಕಿನ ಉಲ್ಲಂಘನೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.


ಸಿದ್ದರಾಮಯ್ಯ

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಉಡುಪಿ ಜಿಲ್ಲೆಯ ಕುಂದಾಪುರದ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾಂಶುಪಾಲರೊಬ್ಬರು ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರು ಕಾಲೇಜು ಪ್ರವೇಶಿಸದಂತೆ ಪ್ರವೇಶ ದ್ವಾರ ಮುಚ್ಚಿ, ಪ್ರವೇಶ ನಿರಾಕರಿಸಿರುವುದು ವ್ಯಕ್ತಿಯೊಬ್ಬನ ಮೂಲಭೂತ ಹಕ್ಕಿನ ಉಲ್ಲಂಘನೆ. ಪದವಿಪೂರ್ವ ಕಾಲೇಜು ಹಂತದಲ್ಲಿ ಸಮವಸ್ತ್ರ ಕಡ್ಡಾಯಗೊಳಿಸಬೇಕು ಎಂದು ಸರ್ಕಾರ ಎಲ್ಲಿಯೂ ಹೇಳಿಲ್ಲ' ಎಂದರು.

ಕಾಲೇಜಿನ ಪ್ರಾಂಶುಪಾಲರು ಪ್ರವೇಶ ದ್ವಾರದಲ್ಲಿ ನಿಂತು ಮಕ್ಕಳು ಒಳಕ್ಕೆ ಬಾರದಂತೆ ತಡೆಯುವುದು ಅಮಾನವೀಯ. ಸರ್ಕಾರ ಇಂತಹ ಪ್ರಯತ್ನಗಳಿಗೆ ಕುಮ್ಮಕ್ಕು ಕೊಡಬಾರದು. ಅಮಾನವೀಯವಾಗಿ ವರ್ತಿಸಿರುವ ಪ್ರಾಂಶುಪಾಲರನ್ನು ಸೇವೆಯಿಂದ ವಜಾಗೊಳಿಸಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದರು.

ಶಿಕ್ಷಣದ ಹಕ್ಕು ಮೂಲಭೂತ ಹಕ್ಕು. ತಮ್ಮ ಆಯ್ಕೆಯ ಧರ್ಮವನ್ನು ಪಾಲಿಸುವುದು ಕೂಡ ಮೂಲಭೂತ ಹಕ್ಕು. ಧರ್ಮ ಮತ್ತು ವಸ್ತ್ರದ ಹೆಸರಿನಲ್ಲಿ ಮಕ್ಕಳನ್ನು ಶಾಲೆ, ಕಾಲೇಜುಗಳ ಪ್ರವೇಶಕ್ಕೆ ನಿರಾಕರಿಸುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಇದು ಸಂವಿಧಾನದ ಉಲ್ಲಂಘನೆ ಕೂಡ ಆಗುತ್ತದೆ ಎಂದು ಹೇಳಿದರು.

'ಹಿಜಾಬ್ ಧರಿಸಿ ಶಾಲೆ, ಕಾಲೇಜುಗಳಿಗೆ ಬರುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅದರಿಂದ ಇತರರಿಗೆ ಏನು ತೊಂದರೆ ಆಗುತ್ತದೆ? ಈ ವಿವಾದದ ಹಿಂದೆ ಮುಸ್ಲಿಂ ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿತಗೊಳಿಸುವ ಕುಟಿಲ ತಂತ್ರ ಇದೆ' ಎಂದು ದೂರಿದರು.

'ಸಮವಸ್ತ್ರ ಕಡ್ಡಾಯ ಮಾಡಿ ಎಂದು ಹೇಳಲು ಶಾಸಕ ರಘುಪತಿ ಭಟ್ ಯಾರು? ಈಗ ಬಿಜೆಪಿಯ ಪ್ರಚೋದನೆಯಿಂದ ಕೆಲವು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾಲೇಜಿಗೆ ಬರುತ್ತಿದ್ದಾರೆ. ಹಿಂದೆ ಯಾರಾದರೂ ಹಾಗೆ ಶಾಲೆ, ಕಾಲೇಜಿಗೆ ಬರುತ್ತಿದ್ದರೆ?' ಎಂದು ಕೇಳಿದರು.


'ಹಿಜಾಬ್ ಸಂಘರ್ಷ ಎಂಬುದೇ ಇಲ್ಲ'


ಯು.ಟಿ. ಖಾದರ್

'ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಶಾಲೆ, ಕಾಲೇಜಿಗೆ ಬರುವ ವಿಚಾರದಲ್ಲಿ ಸಂಘರ್ಷ ಎಂಬುದೇ ಇಲ್ಲ. ಉಡುಪಿಯಲ್ಲಿ ಕೆಲವರು ದುರುದ್ದೇಶದಿಂದ ಆ ರೀತಿ ಮಾಡುತ್ತಿದ್ದಾರೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕರಾವಳಿಯ ನೂರಾರು ಶಾಲೆ, ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗಳಿಗೆ ಹೋಗುತ್ತಿದ್ದಾರೆ. ಹಿಜಾಬ್ ಎಂದರೆ ತಲೆಗೂದಲು ಮುಚ್ಚಿಕೊಳ್ಳುವ ವಸ್ತ್ರ. ಅದನ್ನು ಎಲ್ಲ ವರ್ಗದವರೂ ಧರಿಸುತ್ತಾರೆ' ಎಂದರು.

'ರಾಜಕೀಯಕ್ಕೆ ವಿದ್ಯಾರ್ಥಿಗಳ ಬಳಕೆ'


ಜಮೀರ್ ಅಹ್ಮದ್ ಖಾನ್

'ಹಿಜಾಬ್ ವಿಚಾರವನ್ನು ಮುಂದಿಟ್ಟುಕೊಂಡು ಕೆಲವರು ರಾಜಕೀಯ ಮಾಡುತ್ತಿದ್ದಾರೆ.ಉತ್ತಮ ಭವಿಷ್ಯಕ್ಕಾಗಿ ಶಿಕ್ಷಣ ಪಡೆಯಲು ಬರುವ ಮಕ್ಕಳನ್ನೂ ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವುದು ದುರದೃಷ್ಟಕರ'ಎಂದು ಕಾಂಗ್ರೆಸ್ ಶಾಸಕ ಬಿ.ಜೆಡ್. ಜಮೀರ್ ಅಹಮ್ಮದ್ ಖಾನ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹಿಜಾಬ್ ಧಾರಣೆ ಈಗಿನಿಂದ ಆರಂಭವಾದುದಲ್ಲ. ಬಹಳ ಹಿಂದಿನಿಂದಲೂ ಇದೆ. ಬ್ರಿಟಿಷರ ಕಾಲದಿಂದಲೂ ಇತ್ತು. ಉಡುಪಿ ಕಾಲೇಜೊಂದರಲ್ಲಿ ರಾಜಕೀಯ ಕಾರಣಕ್ಕೆ ಆರಂಭವಾದ ವಿರೋಧ ಈಗ ಎಲ್ಲ ಕಡೆಯೂ ಹರಡುತ್ತಿದೆ' ಎಂದರು.

ಹಣ ಅಕ್ರಮ ವರ್ಗಾವಣೆ ಪ್ರಕರಣ • ಜಾರಿ ನಿರ್ದೇಶನಾಲಯ ಕ್ರಮ

ಚನ್ನಿ ಸೋದರಳಿಯನ ಬಂಧನ

ನವದೆಹಲಿ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಸೋದರ ಅಳಿಯ ಭೂಪಿಂದರ್ ಸಿಂಗ್ ಅವರನ್ನು ಮರಳು ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು ಬಂಧಿಸಿದೆ. ಇದು ರಾಜಕೀಯ ಆರೋಪ-ಪ್ರತ್ಯಾರೋಪಕ್ಕೆ ಕಾರಣವಾಗಿದೆ.

2018ರಲ್ಲಿ ದಾಖಲಾಗಿದ್ದ ಮರಳು ಅಕ್ರಮ ಗಣಿಗಾರಿಕೆ ಪ್ರಕರಣದ ಸಂಬಂಧ ಜನವರಿ 18ರಂದು ಜಾರಿ ನಿರ್ದೇಶನಾಲಯವು ಭೂಪಿಂದರ್ ಸಿಂಗ್ ಅವರ ಮನೆ, ಕಚೇರಿ ಮತ್ತು ಇತರ ಕಡೆಗಳಲ್ಲಿ ಶೋಧ ಕಾರ್ಯ ನಡೆಸಿತ್ತು. ಆಗ ₹8 ಕೋಟಿ ನಗದು ಪತ್ತೆಯಾಗಿತ್ತು. ಈ ಸಂಬಂಧ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿದ್ದರು.

ಈ ಪ್ರಕರಣದ ವಿಚಾರಣೆಗಾಗಿ ನಿರ್ದೇಶನಾಲಯದ ಜಲಂಧರ್ ಕಚೇರಿಗೆ ಭೂಪಿಂದರ್ ಸಿಂಗ್ ಅವರನ್ನು ಗುರುವಾರ ಕರೆಸಿಕೊಳ್ಳಲಾಗಿತ್ತು. ತಡ ರಾತ್ರಿಯವರೆಗೂ ವಿಚಾರಣೆ ನಡೆಸಲಾಯಿತು. ಅನಂತರ ಭೂಪಿಂದರ್ ಅವರನ್ನು ಬಂಧಿಸಲಾಯಿತು ಎಂದು ಜಾರಿ ನಿರ್ದೇಶನಾಲಯವು ಹೇಳಿದೆ.

'ವಿಚಾರಣೆ ವೇಳೆ ಕೇಳಲಾದ ಪ್ರಶ್ನೆಗೆ ಅವರು ಸಮರ್ಪಕವಾದ ಉತ್ತರ ನೀಡಿಲ್ಲ. ಬದಲಿಗೆ ಹಾರಿಕೆಯ ಉತ್ತರ ನೀಡುತ್ತಿದ್ದರು. ವಿಚಾರಣೆ ಮುಂದುವರಿಸುವ ಅಗತ್ಯ ಇರುವ ಕಾರಣ ಅವರನ್ನು ಬಂಧಿಸಲಾಗಿದೆ. ಅವರನ್ನು ಶೀಘ್ರವೇ ಹಣ ಅಕ್ರಮ ವರ್ಗಾವಣೆ ತಡೆ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುತ್ತದೆ' ಎಂದು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಹೇಳಿದ್ದಾರೆ.

ಪಂಜಾಬ್ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಇನ್ನಷ್ಟೇ ಘೋಷಿಸಬೇಕಿದೆ. ಈ ಸಂದರ್ಭದಲ್ಲಿಯೇ ಮುಖ್ಯಮಂತ್ರಿ ಚನ್ನಿ ಅವರ ಸೋದರಳಿಯನನ್ನು ಜಾರಿ ನಿರ್ದೇಶನಾಲಯವು ಬಂಧಿಸಿದೆ. ಚನ್ನಿ ಸಹ ಈ ಚುನಾವಣೆಯಲ್ಲಿ ಮುಖ್ಯಮಂತ್ರಿ ಅಭ್ಯರ್ಥಿಯ ಆಕಾಂಕ್ಷಿಯಾಗಿದ್ದಾರೆ.

ಚನ್ನಿ ಉತ್ತರಕ್ಕೆ ವಿಪಕ್ಷಗಳ ಆಗ್ರಹ

ತಮ್ಮ ಸೋದರ ಅಳಿಯನನ್ನು ಜಾರಿ ನಿರ್ದೇಶನಾಲಯವು ಬಂಧಿಸಿರುವ ಬಗ್ಗೆ ಮುಖ್ಯಮಂತ್ರಿ ಚನ್ನಿ ಅವರು ಜನರಿಗೆ ಉತ್ತರ ನೀಡಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿವೆ.

'ಮುಖ್ಯಮಂತ್ರಿ ಅವರ ಸೋದರ ಅಳಿಯನ ಮನೆಯಲ್ಲಿ ಕೋಟ್ಯಂತರ ನಗದು ವಶಪಡಿಸಿಕೊಳ್ಳಲಾಗಿದೆ. ಮುಖ್ಯಮಂತ್ರಿ ಆದ 111 ದಿನಗಳಲ್ಲೇ ಅವರು ಇಷ್ಟೊಂದು ಹಣವನ್ನು ಹೇಗೆ ಸಂಪಾದಿಸಿದರು ಎಂಬುದನ್ನು ನೀವು ಊಹಿಸಿಕೊಳ್ಳಿ. ಚನ್ನಿ ತಮ್ಮ ಸಂಬಂಧಿಯಿಂದ ಅಂತರ ಕಾಯ್ದುಕೊಂಡಿರಬಹುದು. ಆದರೆ, ಅವರು ಸತ್ಯದಿಂದ ದೂರ ಓಡಲು ಸಾಧ್ಯವಿಲ್ಲ. ಈ ಬಗ್ಗೆ ಅವರು ಜನರಿಗೆ ಉತ್ತರ ನೀಡಲೇಬೇಕು' ಎಂದು ಎಎಪಿ ಮುಖಂಡ ರಾಘವ್ ಛಡ್ಡಾ ಆಗ್ರಹಿಸಿದ್ದಾರೆ. 'ಭೂಪಿಂದರ್ ಸಿಂಗ್ ಅವರಿಗೆ ಸರ್ಕಾರದಿಂದ ಭಾರಿ ಭದ್ರತೆ ನೀಡಲಾಗಿದೆ. ಅವರಿಗೆ ಹೇಗೆ ಭದ್ರತೆ ನೀಡಲಾಯಿತು ಎಂಬುದನ್ನು ಚನ್ನಿ ಅವರು ಹೇಳಬೇಕು. ಭೂಪಿಂದರ್ ಬಳಿ ₹8 ಕೋಟಿ ನಗದು ಹೇಗೆ ಬಂತು ಎಂಬುದನ್ನು ಚನ್ನಿ ಜನರಿಗೆ ವಿವರಿಸಬೇಕು' ಎಂದು ಶಿರೋಮಣಿ ಅಕಾಲಿ ದಳ ನಾಯಕ ಬಿಕ್ರಮ್ ಸಿಂಗ್ ಆಗ್ರಹಿಸಿದ್ದಾರೆ.

'ಒತ್ತಡ ಸೃಷ್ಟಿಸಲು ಯತ್ನ'

'ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ತನಿಖಾ ಸಂಸ್ಥೆಗಳು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸಂಬಂಧಿಗಳ ಮನೆಗಳಲ್ಲಿ ಶೋಧ ಕಾರ್ಯ ನಡೆಸಿತ್ತು. ಅದೇ ತಂತ್ರವನ್ನು ಬಿಜೆಪಿ ಪಂಜಾಬ್‌ನಲ್ಲೂ ಅನುಸರಿಸುತ್ತಿದೆ. ನನ್ನ ಮೇಲೆ, ನಮ್ಮ ಸಚಿವರ ಮೇಲೆ ಮತ್ತು ಕಾಂಗ್ರೆಸ್ ಪಕ್ಷದ ಮೇಲೆ ಒತ್ತಡ ಸೃಷ್ಟಿಸಲು ಬಿಜೆಪಿ ಹೀಗೆ ಮಾಡುತ್ತಿದೆ' ಎಂದು ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹೇಳಿದ್ದಾರೆ.


ಭೂಪಿಂದರ್ ಸಿಂಗ್ (ಎಡದಲ್ಲಿ ಇರುವವರು) ಅವರನ್ನು ಬಂಧಿಸಿ ಕರೆದೊಯ್ದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು –ಪಿಟಿಐ ಚಿತ್ರ

ಪ್ರಜಾಮತ
ಪ್ರಜಾವಾಣಿ ಕನ್ನಡ ಧ್ವನಿ ಪಾಡ್‌ಕಾಸ್ಟ್
ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ, ಮಣಿಪುರ ಐದು ರಾಜ್ಯಗಳ ವಿಧಾನಸಭೆ ಚುನಾವಣೆಯ ನಿಷ್ಪಕ್ಷಪಾತ ಸುದ್ದಿ, ವಿಶ್ಲೇಷಣೆಗಳಿಗೆ ಆಲಿಸಿ ಪ್ರಜಾವಾಣಿ ಪಾಡ್‌ಕಾಸ್ಟ್ ಪ್ರತಿ ರಾತ್ರಿ 9.00 ಗಂಟೆಗೆ
prajavani.net/podcast

'ಝಡ್' ಭದ್ರತೆ ತಿರಸ್ಕರಿಸಿದ ಒವೈಸಿ

ನವದೆಹಲಿ (ಪಿಟಿಐ): ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಅವರು 'ಝಡ್' ಶ್ರೇಣಿ ಭದ್ರತೆಯನ್ನು ತಿರಸ್ಕರಿಸಿದ್ದಾರೆ. ಉತ್ತರ ಪ್ರದೇಶದಲ್ಲಿ ಚುನಾವಣಾ ಪ್ರಚಾರ ಮುಗಿಸಿ ಗುರುವಾರ ದೆಹಲಿಗೆ ಹಿಂದಿರುಗುತ್ತಿದ್ದಾಗ ತಮ್ಮ ಕಾರಿನ ಮೇಲೆ ಗುಂಡು ಹಾರಿಸಲಾಗಿದೆ ಎಂದು ಒವೈಸಿ ಹೇಳಿದ್ದರು. ಹಾಗಾಗಿ, ಅವರಿಗೆ 'ಝಡ್' ಶ್ರೇಣಿಯ ಭದ್ರತೆ ಒದಗಿಸಲು ಶುಕ್ರವಾರ ನಿರ್ಧರಿಸಲಾಗಿತ್ತು.

ತಮ್ಮ ಮೇಲೆ ದಾಳಿ ನಡೆಸಲು ಯತ್ನಿಸಿದವರ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಒವೈಸಿ ಅವರು ಲೋಕಸಭೆಯಲ್ಲಿ ಒತ್ತಾಯಿಸಿದ್ದಾರೆ.

ರಾಜ್ಯ ಸರ್ಕಾರವು ಆರೋಪಿಗಳನ್ನು ಬಂಧಿಸಿದೆ. ಗೃಹ ಸಚಿವ ಅಮಿತ್ ಶಾ ಅವರು ಪ್ರಕರಣದ ಬಗ್ಗೆ ಸೋಮವಾರ ಹೇಳಿಕೆ ನೀಡಲಿದ್ದಾರೆ ಎಂದು ಸಚಿವ ಪೀಯೂಷ್ ಗೋಯಲ್ ಸದನಕ್ಕೆ ತಿಳಿಸಿದ್ದಾರೆ.

ಪ್ರಿಯಾಂಕಾ, ಅಖಿಲೇಶ್ ಮನೆ–ಮನೆ ಭೇಟಿ • ಪ್ರಧಾನಿ ಮೋದಿ ವರ್ಚುವಲ್ ರ‍್ಯಾಲಿ

ಉತ್ತರ ಪ್ರದೇಶ: ಬಿರುಸು ಪಡೆದ ಪ್ರಚಾರ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನ ಸನಿಹವಾಗುತ್ತಿರುವ ಜತೆಯಲ್ಲಿ ರಾಜಕೀಯ ಪಕ್ಷಗಳು ತಮ್ಮ ಪ್ರಚಾರವನ್ನು ಬಿರುಸುಗೊಳಿಸಿವೆ. ಪ್ರಚಾರದ ವೇಳೆ ಎಲ್ಲಾ ಪಕ್ಷಗಳ ರಾಜಕೀಯ ನಾಯಕರು ಪರಸ್ಪರ ಆರೋಪ–ಪ್ರತ್ಯಾರೋಪ ಮಾಡುತ್ತಿದ್ದಾರೆ.

ಬಿಜೆಪಿಯ ಅಭ್ಯರ್ಥಿಗಳ ಪರವಾಗಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪ್ರಚಾರ ನಡೆಸುತ್ತಿದ್ದಾರೆ. ಇನ್ನೊಂದೆಡೆ ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮನೆ ಮನೆ ಭೇಟಿ ನಡೆಸುತ್ತಿದ್ದಾರೆ.

ಇದೇ 10ರಂದು ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಗಾಜಿಯಾಬಾದ್, ಮೀರತ್, ಹಾಪುರ ಮತ್ತು ಅಲೀಗಡ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳಲ್ಲಿ ರಾಜಕೀಯ ನಾಯಕರು, ಪಕ್ಷಗಳ ತಾರಾ ಪ್ರಚಾರಕರು ಬೀಡು ಬಿಟ್ಟಿದ್ದಾರೆ. ಈ ಜಿಲ್ಲೆಗಳಲ್ಲಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮತ್ತು ಮಿತ್ರಪಕ್ಷವಾದ ಆರ್‌ಎಲ್‌ಡಿಯ ಜಯಂತ್ ಚೌಧರಿ ಅವರು ಪ್ರಚಾರಕ್ಕೆ ಚುರುಕು ನೀಡಿದ್ದಾರೆ. ಇಬ್ಬರೂ ನಾಯಕರು ಜಂಟಿಯಾಗಿ ರ‍್ಯಾಲಿ, ಮಾಧ್ಯಮಗೋಷ್ಠಿ ಮತ್ತು ಮನೆ–ಮನೆ ಭೇಟಿಗಳನ್ನು ನಡೆಸುತ್ತಿದ್ದಾರೆ.



ಗಾಜಿಯಾಬಾದ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಂಗೀತಾ ತ್ಯಾಗಿ ಪರವಾಗಿ ಪ್ರಚಾರ ನಡೆಸಿದ ಪ್ರಿಯಾಂಕಾ ಗಾಂಧಿ ಅವರು ಜನರತ್ತ ಕೈಬೀಸಿದರು –ಪಿಟಿಐ ಚಿತ್ರ

ಬಿಜೆಪಿ ಬಡವರಿಗಾಗಿ ಕೆಲಸ ಮಾಡುತ್ತಿಲ್ಲ: ಪ್ರಿಯಾಂಕಾ ಗಾಂಧಿ

'ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರವು ಬಡವರಿಗಾಗಿ ಕೆಲಸ ಮಾಡುತ್ತಿಲ್ಲ. ಬದಲಿಗೆ ತನ್ನ ಕೆಲವೇ ಉದ್ಯಮಿ ಸ್ನೇಹಿತರಿಗಾಗಿ ಕೆಲಸ ಮಾಡುತ್ತಿದೆ. ಇವರ ಆಡಳಿತದಲ್ಲಿ ಸಣ್ಣ ವರ್ತಕರು ಮತ್ತು ಬಡವರಿಗೆ ಜಾಗವೇ ಇಲ್ಲ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

'ಈ ಸರ್ಕಾರ ನೋಟು ಅಮಾನ್ಯೀಕರಣ ಮಾಡಿತು, ಲಾಕ್‌ಡೌನ್ ಹೇರಿತು. ಆದರೆ ಜನರಿಗೆ ಯಾವುದೇ ಪರಿಹಾರ ನೀಡಲಿಲ್ಲ. ಕೋವಿಡ್ ಲಾಕ್‌ಡೌನ್‌ನ ನಂತರ ಜನರು ಎಷ್ಟು ಕಷ್ಟಪಡುತ್ತಿದ್ದಾರೆ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ? ಜನರು ತಮ್ಮ ಮಕ್ಕಳ ಶಾಲಾಶುಲ್ಕವನ್ನೂ ಭರಿಸಲಾಗದ ಸ್ಥಿತಿಯಲ್ಲಿ ಇದ್ದಾರೆ' ಎಂದು ಅವರು ಹೇಳಿದ್ದಾರೆ.

ಭ್ರಾತೃತ್ವ ವರ್ಸಸ್ ಬಿಜೆಪಿ: ಅಖಿಲೇಶ್

'ಈ ಚುನಾವಣೆ ನಡೆಯುತ್ತಿರುವುದು ಭ್ರಾತೃತ್ವ ಮತ್ತು ಬಿಜೆಪಿ ಮಧ್ಯೆ. ಹೀಗಾಗಿಯೇ ಸಮಾಜದ ಎಲ್ಲಾ ವರ್ಗದ ಜನರನ್ನು ಸಮಾಜವಾದಿ ಪಕ್ಷವು ಒಟ್ಟಿಗೇ ಕರೆದುಕೊಂಡು ಹೋಗುತ್ತಿದೆ' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದ್ದಾರೆ.

ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಜತೆಗೆ ಆಗ್ರಾದಲ್ಲಿ ಪ್ರಚಾರ ರ‍್ಯಾಲಿ ನಡೆಸಿದ ಅಖಿಲೇಶ್ ಅವರು, ಬಿಜೆಪಿ ವಿರುದ್ಧ ಹರಿಹಾಯ್ದರು. 'ಈ ಚುನಾವಣೆಯು ಸಂವಿಧಾನ ರಕ್ಷಣೆಗಾಗಿ ನಡೆಯುತ್ತಿದೆ. ಈ ಸರ್ಕಾರವು ಜನರ, ರೈತರ ಪರವಾಗಿ ಇಲ್ಲ. ಬದಲಿಗೆ ಕೆಲವೇ ಉದ್ಯಮಿಗಳಿಗಾಗಿ ಕೆಲಸ ಮಾಡುತ್ತಿದೆ' ಎಂದು ಅಖಿಲೇಶ್ ಆರೋಪಿಸಿದ್ದಾರೆ.

'ಈ ಸರ್ಕಾರವು ಪ್ರವಾಸೋದ್ಯಮವನ್ನು ಕಡೆಗಣಿಸಿದೆ. ರಾಜ್ಯದ ಕೆಲವೇ ಪ್ರವಾಸಿ ಮತ್ತು ತೀರ್ಥ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುತ್ತಿದೆ. ಆಗ್ರಾದಲ್ಲಿನ ತಾಜ್‌ಮಹಲ್‌ಗೆ ಪ್ರತಿ ವರ್ಷ 1 ಕೋಟಿಗೂ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಿದ್ದರು. ಈ ಸರ್ಕಾರ ಬಂದಮೇಲೆ ಪ್ರವಾಸಿಗರ ಸಂಖ್ಯೆ 25 ಲಕ್ಷಕ್ಕೆ ಇಳಿದಿದೆ' ಎಂದು ಜಯಂತ್ ಚೌಧರಿ ಆರೋಪಿಸಿದ್ದಾರೆ.

ನಕಲಿ ಸಮಾಜವಾದಿಗಳನ್ನು ದೂರವಿಡಿ: ಮೋದಿ

'ನಕಲಿ ಸಮಾಜವಾದಿಗಳನ್ನು ಅಧಿಕಾರದಿಂದ ದೂರವಿಡಿ. ಅವರು ಅಧಿಕಾರಕ್ಕೆ ಬಂದರೆ, ಬಡವರಿಗೆಂದು ಕೇಂದ್ರ ಸರ್ಕಾರ ಕೊಡುವ ಸವಲತ್ತುಗಳನ್ನು ತಡೆಯುತ್ತಾರೆ ಮತ್ತು ಅವುಗಳನ್ನು ಲೂಟಿ ಹೊಡೆಯುತ್ತಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಉತ್ತರ ಪ್ರದೇಶದ ಪಶ್ಚಿಮ ಭಾಗದ ವಿಧಾನಸಭಾ ಕ್ಷೇತ್ರಗಳಿಗೆ ಇದೇ 10ರಂದು ಮತದಾನ ನಡೆಯಲಿದೆ. ಆ ಕ್ಷೇತ್ರಗಳ ಮತದಾರರನ್ನು ಉದ್ದೇಶಿಸಿ ಮೋದಿ ಅವರು ಶುಕ್ರವಾರ ವರ್ಚುವಲ್ ರ‍್ಯಾಲಿ ನಡೆಸಿದರು.

ಈ ಹಿಂದೆ ಅಧಿಕಾರದಲ್ಲಿ ಇದ್ದವರು ಗೂಂಡಾಗಳನ್ನು, ಮಾಫಿಯಾವಾದಿಗಳನ್ನು ಸಲಹುತ್ತಿದ್ದರು. ಯೋಗಿ ಆದಿತ್ಯನಾಥ ಅವರ ಸರ್ಕಾರ ಬಂದಮೇಲೆ ಅವರಿಗೆಲ್ಲಾ ತಕ್ಕ ಪಾಠ ಕಲಿಸಲಾಗಿದೆ. ಮತ್ತೆ ನಕಲಿ ಸಮಾಜವಾದಿಗಳು ಅಧಿಕಾರಕ್ಕೆ ಬಂದರೆ, ಗೂಂಡಾಗಳು ಮತ್ತು ಮಾಫಿಯಾವಾದಿಗಳು ಜನರ ಮೇಲೆ ಸೇಡು ತೀರಿಸಿಕೊಳ್ಳುತ್ತಾರೆ. ಹೀಗಾಗಿ ನೀವು ಬಹಳ ಎಚ್ಚರಿಕೆಯಿಂದ ಮತ ನೀಡಬೇಕು ಎಂದು ಮೋದಿ ಕರೆ ನೀಡಿದ್ದಾರೆ.

ಮಹದಾಯಿ ಪಾಲಿಗೆ ಸರ್ವಯತ್ನ: ಗೋವಾ ಕಾಂಗ್ರೆಸ್ ಪ್ರಣಾಳಿಕೆ



ಪಣಜಿ: ಮಹದಾಯಿ ನದಿ ನೀರಿನ ಪಾಲನ್ನು ಪಡೆದುಕೊಳ್ಳಲು ಎಲ್ಲ ಪ್ರಯತ್ನಗಳನ್ನೂ ನಡೆಸಲಾಗುವುದು ಎಂದು ಗೋವಾ ವಿಧಾನಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷವು ಹೇಳಿದೆ. ಈಗಿನ ಬಿಜೆಪಿ ನೇತೃತ್ವದ ಸರ್ಕಾರವು ಮಹದಾಯಿ ನೀರನ್ನು ಕರ್ನಾಟಕಕ್ಕೆ ಉಡುಗೊರೆಯಾಗಿ ಕೊಟ್ಟಿದೆ ಎಂದೂ ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ನ್ಯಾಯಾಲಯಗಳು ಮತ್ತು ನೀರು ಹಂಚಿಕೆ ನ್ಯಾಯಮಂಡಳಿಗಳಲ್ಲಿ ವಾದಿಸಲು ಖ್ಯಾತ ವಕೀಲರನ್ನು ನೇಮಿಸಲಾಗುವುದು ಎಂದು ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರು ಶುಕ್ರವಾರ ಬಿಡುಗಡೆ ಮಾಡಿದ ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ಪಶ್ಚಿಮದತ್ತ ಗೋವಾದ ಮೂಲಕ ಹರಿಯುವ ಯಾವುದೇ ನದಿಯನ್ನು ತಿರುಗಿಸಲು ಅವಕಾಶ ಕೊಡುವುದಿಲ್ಲ ಎಂದೂ ಪ್ರಣಾಳಿಕೆಯು ಭರವಸೆ ಕೊಟ್ಟಿದೆ.

ಮಹದಾಯಿ ವಿವಾದವನ್ನು ಸರಿಯಾಗಿ ನಿಭಾಯಿಸಿಲ್ಲ ಎಂದು ವಿರೋಧ ಪಕ್ಷಗಳು ಹಾಗೂ ನಾಗರಿಕ ಸಂಘಟನೆಗಳು ಸರ್ಕಾರವನ್ನು ಟೀಕಿಸುತ್ತಲೇ ಇವೆ. ಕರ್ನಾಟಕದಲ್ಲಿಯೂ ಬಿಜೆಪಿ ನೇತೃತ್ವದ ಸರ್ಕಾರವೇ ಇರುವುದರಿಂದ ಬಿಜೆಪಿ ರಾಜಿ ಮಾಡಿಕೊಂಡಿದೆ ಎಂದು ವಿರೋಧ ಪಕ್ಷಗಳು ಆಪಾದಿಸಿವೆ.

ಗೋರಖಪುರದಿಂದ ಆದಿತ್ಯನಾಥ ನಾಮಪತ್ರ

ಲಖನೌ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗೋರಖಪುರ ನಗರ ವಿಧಾನಸಭಾ ಕ್ಷೇತ್ರದಿಂದ ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ.

ಆದಿತ್ಯನಾಥ ಅವರು ಇದೇ ಮೊದಲಿಗೆ ವಿಧಾನಸಭೆಗೆ ಸ್ಪರ್ಧಿಸುತ್ತಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖಂಡರು ಆದಿತ್ಯನಾಥ ಅವರು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಜತೆಗೆ ಇದ್ದರು. ನಾಮಪತ್ರ ಸಲ್ಲಿಕೆಗೆ ಮೊದಲು, ಆದಿತ್ಯನಾಥ ಮತ್ತು ಶಾ ಅವರು ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಈ ಚುನಾವಣೆಯಲ್ಲಿ ಪಕ್ಷಕ್ಕೆ ಬಹುಮತ ಬರಲಿದೆ, ಬಿಜೆಪಿ ಮುಂದಿನ ಸರ್ಕಾರ ರಚಿಸಲಿದೆ ಎಂದು ಇಬ್ಬರೂ ಮುಖಂಡರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.


ಯೋಗಿ ಆದಿತ್ಯನಾಥ

'ರಾಜ್ಯವು ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದೆ. ಕಾನೂನು ಮತ್ತು ಸುವ್ಯವಸ್ಥೆಯು ಉತ್ತಮಗೊಂಡಿದೆ. ಮಾಫಿಯಾಗಳನ್ನು ಜೈಲಿಗೆ ತಳ್ಳಲಾಗಿದೆ' ಎಂದು ಶಾ ಅವರು ಹೇಳಿದ್ದಾರೆ. ಆದಿತ್ಯನಾಥ ಅವರನ್ನು ಶಾ ಅವರು ಹೊಗಳಿದ್ದಾರೆ. ಅವರ ನಾಯಕತ್ವದಲ್ಲಿ ರಾಜ್ಯವು 'ಬಿಮಾರು' ಹಣೆಪಟ್ಟಿ ಕಳಚಿಕೊಳ್ಳಲು ಸಾಧ್ಯವಾಗಿದೆ ಎಂದು ಶಾ ಹೇಳಿದ್ದಾರೆ.

ಭೀಮ್ ಆರ್ಮಿಯ ಸ್ಥಾಪಕ ಮತ್ತು ದಲಿತ ನಾಯಕ ಚಂದ್ರಶೇಖರ್ ಆಜಾದ್ ಅಲಿಯಾಸ್ ರಾವಣ ಅವರು ಆದಿತ್ಯನಾಥ ವಿರುದ್ಧ ಸ್ಪರ್ಧಿಸುವುದಾಗಿ ಈಗಾಗಲೇ ಘೋಷಿಸಿದ್ದಾರೆ. ಸಮಾಜವಾದಿ ಪಕ್ಷವು ಈ ಕ್ಷೇತ್ರದ ಅಭ್ಯರ್ಥಿಯ ಹೆಸರನ್ನು ಇನ್ನಷ್ಟೇ ಪ್ರಕಟಿಸಬೇಕಿದೆ.

ಗೋರಖಪುರ ನಗರ ವಿಧಾನಸಭಾ ಕ್ಷೇತ್ರವು ಬಿಜೆಪಿಯ 'ಭದ್ರಕೋಟೆ'. 1967ರಿಂದಲೇ ಇಲ್ಲಿ ಜನಸಂಘದ ಅಭ್ಯರ್ಥಿಗಳು ಗೆಲ್ಲುತ್ತಿದ್ದರು.

ವರಿಷ್ಠರಿಗೆ ದುರ್ಬಲ ಸಿ.ಎಂ ಬೇಕಿದೆ: ಸಿಧು



ಚಂಡೀಗಡ: 'ವರಿಷ್ಠರಿಗೆ ಅತ್ಯಂತ ದುರ್ಬಲ ಮುಖ್ಯಮಂತ್ರಿ ಬೇಕಾಗಿದೆ. ಏಕೆಂದರೆ ಅವರ ತಾಳಕ್ಕೆ ಕುಣಿಯಬಲ್ಲ ಮುಖ್ಯಮಂತ್ರಿ ಅವರಿಗೆ ಬೇಕಾಗಿದೆ' ಎಂದು ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಹೇಳಿದ್ದಾರೆ. ಪಂಜಾಬ್ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಶೀಘ್ರವೇ ಘೋಷಿಸಲಿದೆ. ಈ ಸಂದರ್ಭದಲ್ಲಿ ಸಿಧು ಈ ಮಾತು ಹೇಳಿದ್ದಾರೆ.

ಜಮ್ಮುವಿನಲ್ಲಿ ವೈಷ್ಣೋದೇವಿ ದರ್ಶನ ಮುಗಿಸಿ ವಾಪಸಾದ ನಂತರ ಪತ್ರಕರ್ತರ ಜತೆಗೆ ಮಾತನಾಡಿದ ಅವರು, 'ಚೆನ್ನಾಗಿ ಕುಣಿ, ನಿನಗೆ ಹಣ ದೊರೆಯುತ್ತದೆ ಎನ್ನುತ್ತಾರೆ ನಾಯಕರು' ಎಂದು ಸಿಧು ಲೇವಡಿ ಮಾಡಿದ್ದಾರೆ. ಪಂಜಾಬ್ ಚುನಾವಣೆಗೆ ಕಾಂಗ್ರೆಸ್‌ನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಆಯ್ಕೆ ಮಾಡಲಾಗುತ್ತದೆ ಎಂಬ ವದಂತಿ ಹರಡಿರುವ ಸಂದರ್ಭದಲ್ಲಿ ಸಿಧು ಹೀಗೆ ಹೇಳಿದ್ದಾರೆ.

ಸಿಧು ಹೇಳಿಕೆಯನ್ನು ಅವರ ಮಾಧ್ಯಮ ಸಲಹೆಗಾರರು ಸಮರ್ಥಿಸಿಕೊಂಡಿದ್ದಾರೆ. ಸಿಧು ಅವರು ಕೇಂದ್ರ ಸರ್ಕಾರದ ಬಗ್ಗೆ ಹೇಳಿದ್ದಾರೆಯೇ ಹೊರತು, ಕಾಂಗ್ರೆಸ್‌ನ ಹೈಕಮಾಂಡ್ ಬಗ್ಗೆ ಅಲ್ಲ ಎಂದಿದ್ದಾರೆ.

ಚನ್ನಿ ಅವರನ್ನು ಗುರಿ ಮಾಡಿಕೊಂಡು ಸಿಧು ಅವರು ಈ ಹೇಳಿಕೆ ನೀಡಿದ್ದಾರೆಯೇ ಎಂಬುದು ಸ್ಪಷ್ಟವಾಗಿಲ್ಲ. ಅಥವಾ ಕಾಂಗ್ರೆಸ್‌ನ ಹಿಂದಿನ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರನ್ನು ಅಥವಾ ಶಿರೋಮಣಿ ಅಕಾಲಿ ದಳದ ಸರ್ಕಾರದಲ್ಲಿ ಸಿ.ಎಂ ಆಗಿದ್ದವರನ್ನು ಗುರಿ ಮಾಡಿಕೊಂಡು ಈ ಮಾತು ಹೇಳಿದ್ದಾರೆಯೇ ಎಂಬುದೂ ಸ್ಪಷ್ಟವಾಗಿಲ್ಲ.

ಪಂಜಾಬ್ ಚುನಾವಣೆಗೆ ಕಾಂಗ್ರೆಸ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಭಾನುವಾರ ಘೋಷಿಸುವ ಸಾಧ್ಯತೆ ಇದೆ. ಮತದಾರರನ್ನು ಉದ್ದೇಶಿಸಿ ಕಾಂಗ್ರೆಸ್ ನಾಯಕ ರಾಹುಲ್ ಅವರು ಭಾನುವಾರ ವರ್ಚುವಲ್ ರ‍್ಯಾಲಿ ನಡೆಸಲಿದ್ದಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ
ಕೋಳಿ ಫಾರ್ಮ್ ಗೇಟ್, ಬೆಂಗಳೂರು–560 083, ದೂರವಾಣಿ: 080–29755405, ಇ–ಮೇಲ್:dcfbnp83@gmail.com
ಸಂ: ಎ3/ಬರಾಉ/ಸಿಆರ್–19/2021–22 ದಿನಾಂಕ: 01.02.2022

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

2021–22ನೇ ಸಾಲಿನಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ವಿವಿಧ ವನ್ಯಜೀವಿ ವಲಯಗಳಲ್ಲಿ ರೈಲ್ವೇ ಹಳಿ ಮೂಲಕ ಆನೆತಡೆ ಬೇಲಿ ನಿರ್ಮಿಸುತ್ತಿದ್ದು, ರೈಲ್ವೆ ಹಳಿಗಳನ್ನು ಖರೀದಿಸಿ, ಸಾಗಣೆ ಮಾಡಲು ಹಾಗೂ ರೈಲ್ವೆಹಳಿ ಬೇಲಿ ನಿರ್ಮಿಸಲು ಅರ್ಹ ಪಿ.ಡಬ್ಲ್ಯೂ.ಡಿ Class-1 ಗುತ್ತಿಗೆದಾರಿಂದ ಮಾತ್ರ ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (https://eproc.karnataka.gov.in) ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

Scheme: 4406-Capital Quality on Forestry & Wildlife-01-Forestry Projection, Regeneration & Cultural Operations-0-01-Railway Barricade to Prevent Man-Animal Conflict132-Capital Expenses.

Name of the work: Construction of Elephant Proof Barricading using used Rails along the Boundary of Anekal wildlife range during 2021-22.

1) From Channappana gutte to Thegadamarada gutte-600 Mtrs. **2)** From Teggdamarada gutte to Kariyammana halla -609 Mtrs **3)** From Kariyammana halla to Jarbande gutte-620 Mtrs. **4)** From Jarbande gutte to Bhakthamuneshwara Kunte-135 Mtrs. **5)** From Arun Kumar Thota Kaggalipura Road to Raju Thotada Bande- 660 Mtrs. **6)** From Raju Thota to Beside Kaggalipura Road - 660 Mtrs. **7)** From Beside Kaggalipura Road to Beside Bilwarada halli Road - 660 Mtrs. **8)** From Beside Bilwarada halli Road to Devasantha Bande Area - 520 Mtrs. **9)** From Herbivorous Safari Gate to Jayaram Thotada Moole-500 Mtrs. **10)** From Nishane Devasthana to Laale Vaddu - 600 Mts. **11)** From Bajappana Moole to Kaggali Kunte - 500 Mtrs. **12)** From Mallige Moole to Thibbe Gowdana kere-650 Mtrs.

Estimated Value of work(in Rs.) (Including GST %): Minimum: Rs. 18,00,000/- to **Maximum:** Rs. 92,90,000/-. **EMD (in Rs.) (2%): Minimum**: Rs. 36,000/-. to **Maximum**: Rs. 1,86,000/-.

1) ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 10.02.2022 ಬೆಳಿಗ್ಗೆ 11:00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 11.02.2022 ರಂದು 11:30 ಗಂಟೆಗೆ.** 3) ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 11.02.2022ರಂದು ಅಪರಾಹ್ನ 4:00 ಗಂಟೆಗೆ,** ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://eproc.karnataka.gov.in ಅನ್ನು ಸಂಪರ್ಕಿಸಿ.

ವಾಸಾಸಂಇ/ಬೆಂ.ನ./ಜಿಎ/3199/2021–22
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬ.ರಾ.ಉ, ಬೆಂಗಳೂರು.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

रजिस्ट्री सं. डी.एल.- 33004/99 REGD. No. D. L.-33004/99

भारत का राजपत्र
The Gazette of India

सी.जी.-डी.एल.-अ.-13012022-232625
CG-DL-E-13012022-232625
असाधारण
EXTRAORDINARY
भाग II—खण्ड 3—उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

सं. 178] नई दिल्ली, बृहस्पतिवार, जनवरी 13, 2022/पौष 23, 1943
No. 178] NEW DELHI, THURSDAY, JANUARY 13, 2022/PAUSHA 23, 1943

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
ಅಧಿಸೂಚನೆ
ನವದೆಹಲಿ, 13ನೇ ಜನವರಿ, 2022
(ಲೋಕೋಪಯೋಗಿ ಇಲಾಖೆ)

ಸಂಖ್ಯೆ: ಭೂಸ್ವಾ/ಸಿಆರ್–1/2019–20/214 ದಿನಾಂಕ: 23.01.2022

ಅಧಿಸೂಚನೆ ಸಂಖ್ಯೆ ಎಸ್.ಓ. ನಂ.182(ಇ) ಮತ್ತು ಎಸ್.ಓ. ನಂ.3491(ಇ) ದಿನಾಂಕ: 19ನೇ ಸೆಪ್ಟೆಂಬರ್ 2021 ರಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 (1956ರ 48)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಂತೆ ಜಮೀನುಗಳನ್ನು **ಕರ್ನಾಟಕ ರಾಜ್ಯದಲ್ಲಿರುವ ಧಾರವಾಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 63, ಕಿ.ಮೀ. 128.850 ರಿಂದ ಕಿ.ಮೀ. 142.750 (ಅಂಕೋಲಾ–ಗೂಟಿ ಸೆಕ್ಷನ್)** ರವರೆಗೆ ನಾಲ್ಕು ಪಥದ ರಸ್ತೆಯನ್ನಾಗಿ ಅಗಲಪಡಿಸುವ ಕಾಮಗಾರಿ ಮಾಡುವ ಸಲುವಾಗಿ **ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು** ಭೂಸ್ವಾಧೀನಪಡಿಸಿಕೊಂಡಿರುತ್ತಾರೆ.

ಸದರಿ ಕಾಯ್ದೆಯ ಸೆಕ್ಷನ್ 3ಎ ರ ಸಬ್‌ಸೆಕ್ಷನ್ (3)ರಡಿ ಈ ಪ್ರಕಟಣೆಯನ್ನು **ಡೆಕ್ಕನ್ ಹೆರಾಲ್ಡ್ ಮತ್ತು ಟೈಮ್ಸ್ ಆಫ್ ಇಂಡಿಯಾ ಹಾಗೂ ವಿಜಯ ಕರ್ನಾಟಕ ಮತ್ತು ವಿಜಯವಾಣಿ** ದಿನಪತ್ರಿಕೆಗಳಲ್ಲಿ ದಿನಾಂಕ **19.09.2021ರ** ಸಂಚಿಕೆಗಳಲ್ಲಿ ಪ್ರಕಟಿಸಲಾಗಿದೆ. ಅದರನುಸಾರ ಸಾರ್ವಜನಿಕರಿಂದ ಸ್ವೀಕೃತಗೊಂಡಿರುವ ಆಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ತಿರಸ್ಕರಿಸಿರುತ್ತಾರೆ.

ರಾಷ್ಟ್ರೀಯ ಹೆದ್ದಾರಿ ಕಾಯಿದೆ, 1956 ಕಲಂ 3(ಡಿ) (1) ಹಾಗೂ (2)ರ ಅನ್ವಯ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆಗಾಗಿ ಬೇಕಾಗಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿನ ಎಲ್ಲಾ ಜಮೀನುಗಳು ಸರ್ಕಾರದ ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಎಲ್ಲಾ ಋಣಭಾರದಿಂದ ವಿಮುಕ್ತಿ ಹೊಂದಿ ಭಾರತ ಸರ್ಕಾರದಲ್ಲಿ ವಿಹಿತಗೊಂಡಿರುತ್ತದೆ. ಆದ ಕಾರಣ ರಾಷ್ಟ್ರೀಯ ಹೆದ್ದಾರಿ ಕಾಯಿದೆ 1956 (1956ರ 48) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು ಮಾಲೀಕರುಗಳಿಗೆ ಮತ್ತು ಸದರಿ ಜಮೀನುಗಳಲ್ಲಿ ಹಿತಾಸಕ್ತಿ ಉಳ್ಳವರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅವರುಗಳ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ವಶಪಡಿಸಿಕೊಂಡಿರುವ ಬಗ್ಗೆ ಅವರಿಗೆ ಪರಿಹಾರ ಧನ ನಿರ್ಧರಿಸಿ ಪಾವತಿ ಮಾಡುವ ಸಲುವಾಗಿ ಸಂಬಂಧಪಟ್ಟ ದಾಖಲಾತಿ ಪತ್ರಗಳೊಂದಿಗೆ ಈ ಕೆಳಕಾಣಿಸಿದ ವಿಳಾಸದಲ್ಲಿ ಹಾಜರಾಗುವುದು.

ಗ್ರಾಮದ ಹೆಸರು	ವಿಚಾರಣೆಯ ದಿನಾಂಕ ಮತ್ತು ಸಮಯವು ದಿನಪತ್ರಿಕೆ ಪ್ರಕಟಣೆಯ 21 ದಿನದ ನಂತರ ಪ್ರಾರಂಭವಾಗುತ್ತದೆ.	ಭೂಮಾಲೀಕರು/ ಹಿತಾಸಕ್ತಿಯುಳ್ಳವರು ಅವರ ಬೇಡಿಕೆಗಳನ್ನು ಸಲ್ಲಿಸುವ ಸ್ಥಳ
1) ಅಯೋಧ್ಯಾ 2) ಬಹ್ಮಾಪೂರ 3) ಹುಬ್ಬಳ್ಳಿ	25–02–2022 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ	ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿರವರ ಕಚೇರಿ, ರಾಷ್ಟ್ರೀಯ ಹೆದ್ದಾರಿ, ಮಿನಿವಿಧಾನಸೌಧ, ಧಾರವಾಡ

ಸಹಿ/– ವಿ.ಜಿ. ಗುಳಗುಳಿ
ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ,
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 63 (ಅಂಕೋಲಾ–ಗೂಟಿ ಸೆಕ್ಷನ್),
ರಾಷ್ಟ್ರೀಯ ಹೆದ್ದಾರಿಗಳು, ಮಿನಿವಿಧಾನ ಸೌಧ, ಧಾರವಾಡ–580001.

ಷೆಡ್ಯೂಲ್

ಕರ್ನಾಟಕ ರಾಜ್ಯದ ಧಾರಾವಾಡ ಜಿಲ್ಲೆಯ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 63, ಕಿ.ಮೀ. 128.850 ರಿಂದ ಕಿ.ಮೀ. 142.750 ರವರೆಗೆ (ಅಂಕೋಲಾ–ಗೂಟಿ ಸೆಕ್ಷನ್, ಕರ್ನಾಟಕ ರಾಜ್ಯ) ನಾಲ್ಕು ಪಥದ ರಸ್ತೆ ಮತ್ತು ರಸ್ತೆ ಅಗಲೀಕರಣಕ್ಕೆ ಜಮೀನು/ಅವಶ್ಯಕವಾಗಿರುವ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ ಜಮೀನುಗಳ/ಸ್ವತ್ತುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ ಜಿಲ್ಲೆಯ ಹೆಸರು : ಧಾರವಾಡ

ಕ್ರ ಸಂ.	ಸರ್ವೆ ಸಂಖ್ಯೆ	ಜಮೀನಿನ ವಿವರಣೆ	ಜಮೀನಿನ ತರಹೆ	ವಿಸ್ತೀರ್ಣ (ಹೆಕ್ಟೇರ್)	ಭೂಮಾಲೀಕರು/ಹಿತಾಸಕ್ತಿಯುಳ್ಳವರು ಭಾಗಶಃ ಸರ್ವೆ ಸಂಖ್ಯೆ
1	2	3	4	5	6
ತಾಲ್ಲೂಕು: ಹುಬ್ಬಳ್ಳಿ					
ಗ್ರಾಮದ ಹೆಸರು : ಅಯೋಧ್ಯ					
1	110/1/ಬಿ	ಖಾಸಗಿ	ಖುಷ್ಕಿ	0.002076	ಕಟ್ಟೀಮನಿ ಅಪ್ಪಾಸಾಹೇಬ್ ಬಿನ್ ಬಾಬುಸಾಬ್
2	110/1/ಸಿ	ಖಾಸಗಿ	ಖುಷ್ಕಿ	0.0053966	1) ಹಯಗ್ರಿ ಭಟ್ಟ ಬಿನ್ ಸೇತುಮಾಧವ ಭಟ್ಟ 2) ಮೆಹಬೂಬ್ ಸಮೀರ್ ಬಿನ್ ರಸೂಲ್‌ಸಾಬ್ ಫಣಿಭನ್, ಶ್ರೀ ಮಹಮ್ಮದ್ ಸಾದಿಕ್ ಬಿನ್ ನೂರುದ್ದೀನ್. ಟಿ. ಖಾನ್ 3) ಗಫರ್ ದೇಸಾಯಿ.
3	110/1ಎ/3	ಖಾಸಗಿ	ಖುಷ್ಕಿ	0.0073292	1) ನಸೀರುದ್ದೀನ್ ಹೆಚ್. ಕಮನಗರ 2) ಯಾದಾಳ್ ಎಸ್. ಕೋಂ ಬಸವರಾಜ್ ಮದುವೆ ಮುಂಚೆ ಹೆಸರು ಶಕುಂತಲ ಬಿನ್ ಮಲ್ಲೇಶಪ್ಪ ಲಕಜಾನ್ವರ್ 3) ಮೂರನೇ ಹಿಸ್ಸಾ ಶ್ರೀಮತಿ ಕಮಲಾ ಮಲ್ಲೇಶಪ್ಪ ಲಕಜಾನ್ವರ್
ಗ್ರಾಮದ ಹೆಸರು : ಬಮ್ಮಾಪುರ					
4	59/3	ಖಾಸಗಿ	ಖುಷ್ಕಿ	0.011	ಕಿಶೋರಿಬಾಯಿ ಕೋಂ ಬಸವರಾಜ್ ಬ್ಯಾಹಟ್ಟಿ
ಗ್ರಾಮದ ಹೆಸರು : ಹುಬ್ಬಳ್ಳಿ					
5	14	ಖಾಸಗಿ	ಖುಷ್ಕಿ	0.003313	ಹಸನ್‌ಸಾಬ್ ಮಹಮ್ಮದ್‌ಸಾಬ್ ಖತೇಬ್ (ಸರ್ಕಾರಿ)
6	179/A/1ಬಿ	ಖಾಸಗಿ	ಖುಷ್ಕಿ	0.0470657	ಹೆಚ್) ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಅಸೋಸಿಯೇಶನ್ (ಬಿಕೆ)
7	179/ಜಿ	ಖಾಸಗಿ	ಖುಷ್ಕಿ	0.0039767	ಹೆಚ್) ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಅಸೋಸಿಯೇಶನ್ (ಬಿಕೆ) 1) ಪುಣ್ಯವತಿ ಕೋಂ, ಧರ್ಮಗೌಡ, ಗೌಡರ್ 2) ಪದ್ಮಿನಿ ಬಿನ್ ಧರ್ಮಗೌಡ, ಗೌಡರ್ 3) ಜೋಸ್ನಾ ಕೋಂ ಮೆಂಜಮನ್ ಗುಂದಮಿ 4) ಸ್ಯಾಮ್‌ವೆಲ್ ಧರ್ಮಗೌಡ ಗೌಡರ್ 5) ಜಯಶ್ರೀ ಕೋಂ ಸ್ಯಾಮ್‌ವೆಲ್ ಬಾಗಲಕೋಟಾ ಹೆಚ್) ಕರ್ನಾಟಕ ಸರ್ಕಾರ ಎಲ್ 1) ರಾಜೇಶ್ ಇ ಮುರ್ನಲ್ ಎಲ್2) ಪ್ರವೀಣ ಇ ಮುರ್ನಲ್
8	2&3	ಖಾಸಗಿ	ಖುಷ್ಕಿ	0.0059194	ಪ್ರಾಪರ್ಟಿ ಕಾರ್ಡ್ ಸಂ. ಹೆಸರು ಇಲ್ಲ
9	209/ಡಿ	ಖಾಸಗಿ	ಖುಷ್ಕಿ	0.0071962	ಹೆಚ್) ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಅಸೋಸಿಯೇಶನ್ (ಬಿಕೆ)
10	210/ಎ	ಖಾಸಗಿ	ಖುಷ್ಕಿ	0.0154353	ಹೆಚ್) ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಅಸೋಸಿಯೇಶನ್ (ಬಿಕೆ) ಎಲ್1) ಮಾರ್ಟಿನ್ ಲೂಥರ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಜಯಶೀಲ ಮಾರ್ಟಿನ್ ಲೂಥರ್ ಬಾಸ್ಮೆ ಎಲ್2) ಡಾ॥ ಪುಷ್ಪ ಗೋಕಾವಿ
11	28/109/1ಎ1	ಖಾಸಗಿ	ಖುಷ್ಕಿ	0.002363	ಧಾರವಾಡ ಜಿಲ್ಲಾ ಮೇದಾರ್ ಕೋ–ಆಪರೇಟಿವ್
12	2966/ಬಿ	ಖಾಸಗಿ	ಖುಷ್ಕಿ	0.0006904	ಇಲ್ಲ
13	2967	ಖಾಸಗಿ	ಖುಷ್ಕಿ	0.0005458	ಚಿಟಗುಬ್ಬಿ
14	2968/A1A/1ಎ	ಖಾಸಗಿ	ಖುಷ್ಕಿ	0.000202	ಚಂದರಪ್ಪ ದುರಗಪ್ಪ ಬುಗಡಿ
15	32/ಎ	ಖಾಸಗಿ	ಖುಷ್ಕಿ	0.0098417	ಲತಾ ಹನುಂತಪ್ಪ ಬಂಕಾಪುರ
16	4/ಎ	ಖಾಸಗಿ	ಖುಷ್ಕಿ	0.006998	ಎನ್.ಎ. ಶಿರೂರ
17	4/ಬಿ	ಖಾಸಗಿ	ಖುಷ್ಕಿ	0.0006281	ರಿಯಾಶಾ ಭಗವಾನ್
18	470/1	ಖಾಸಗಿ	ಖುಷ್ಕಿ	0.0066117	1) ಕೆ.ಕೆ.ಕಟಾರಿ 2) ಕೆ.ಎಂ. ಕಟಾರಿ, 3) ಎನ್.ಎಂ.ಕಟಾರಿ, (ಜಿಪಿ ಹೋಲ್ಡರ್ ಸಿ.ಎನ್.ದೇವಾನಂದ)
19	5/B	ಖಾಸಗಿ	ಖುಷ್ಕಿ	0.00032	ಎನ್.ಎ. ಶಿರೂರ್
20	564	ಖಾಸಗಿ	ಖುಷ್ಕಿ	0.0015431	ಸರ್ಕಾರಿ (ಪೊಲೀಸ್ ಲಯನ್ಸ್)
21	872/ಎ	ಖಾಸಗಿ	ಖುಷ್ಕಿ	0.0037933	ಹೆಚ್) ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಅಸೋಸಿಯೇಶನ್ (ಬಿಕೆ) ಎಲ್) ಎಸ್.ಎಂ. ಮಿರಜ್‌ಕಲ್ & ಕಂ ಎಲ್2) ರಾಜೇಶ್ ಇ ಮುರ್ನಲ್ ಎಲ್3) ಪ್ರವೀಣ್ ಇ ಮುರ್ನಲ್
22	876/1ಎ	ಖಾಸಗಿ	ಖುಷ್ಕಿ	0.0037187	ಹೆಚ್) ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಅಸೋಸಿಯೇಶನ್ (ಬಿಕೆ) ಎಲ್) ಪುಣ್ಯವಂತಪ್ಪ ಸೈಮನ್ ದಂಡಿನ್
23	876/2	ಖಾಸಗಿ	ಖುಷ್ಕಿ	0.0046123	ಹೆಚ್) ಯುನೈಟೆಡ್ ಬಾಸೆಲ್ ಮಿಷನ್ ಚರ್ಚ್ ಇನ್ ಇಂಡಿಯಾ ಟ್ರಸ್ಟ್ ಅಸೋಸಿಯೇಶನ್ (ಬಿಕೆ)
24	98	ಖಾಸಗಿ	ಖುಷ್ಕಿ	0.008005	ಏಕಾಂತಸಾ ಅರ್ಜುನಸಾ ಇರಕಲ್
			ಒಟ್ಟು	0.1585812	

[ಎಫ್.ನಂ. ಎನ್‌ಹೆಚ್–63–ಕೆಎನ್‌ಟಿ–2016–17–838/3ಡಿ]
ರಾಜೇಶ್ ಗುಪ್ತಾ, ನಿರ್ದೇಶಕರು
ವಾಸಾಸಂಇ/ಧಾ/ಯಕ್ಷಿ/970/2021–22

ಬಿಜೆಪಿ ಈಗ ಬೀಜಿಂಗ್ ಜನತಾ ಪಕ್ಷ: ಖರ್ಗೆ

ಪ್ರಜಾವಾಣಿ ವಾರ್ತೆ


ರಾಹುಲ್ ಗಾಂಧಿ


ಮಲ್ಲಿಕಾರ್ಜುನ ಖರ್ಗೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ತೀವ್ರ ವಾಗ್ದಾಳಿ ನಡೆಸಿದ್ದು, ಪಕ್ಷದ ನಾಯಕ ರಾಹುಲ್ ಗಾಂಧಿ ಅವರು 'ಮೇಕ್ ಇನ್ ಇಂಡಿಯಾ ಈಗ ಚೀನಾದಿಂದ ಖರೀದಿಸಿ ಎಂಬಂತಾಗಿದೆ' ಎಂದಿದ್ದರೆ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಭಾರತೀಯ ಜನತಾ ಪಕ್ಷವನ್ನು ಬೀಜಿಂಗ್ ಜನತಾ ಪಕ್ಷ ಎಂದು ವ್ಯಂಗ್ಯವಾಡಿದ್ದಾರೆ.

ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯದ ವೇಳೆ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ರಾಹುಲ್, 'ಮೋದಿ ಸರ್ಕಾರವು ಅಸಂಘಟಿತ ವಲಯ ಮತ್ತು ಉದ್ಯೋಗಗಳನ್ನು ಸೃಷ್ಟಿಸುವ ಎಂಎಸ್‌ಎಂಇಗಳನ್ನು ನಾಶಪಡಿಸಿದೆ' ಎಂದು ಹೇಳಿದರು.

'ಭಾರತಕ್ಕೆ ಜುಮ್ಲಾ, ಚೀನಾಕ್ಕೆ ಉದ್ಯೋಗ! ಮೋದಿ ಸರ್ಕಾರವು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಅಸಂಘಟಿತ ವಲಯ ಮತ್ತು ಎಂಎಸ್‌ಎಂಇಗಳನ್ನು ನಾಶಪಡಿಸಿದೆ. ಅದರ ಫಲಿತಾಂಶವು 'ಮೇಕ್ ಇನ್ ಇಂಡಿಯಾ' ಈಗ 'ಚೀನಾದಿಂದ ಖರೀದಿಸಿ' ಎಂದಾಗಿದೆ ಎಂದು ರಾಹುಲ್ ಟ್ವೀಟ್ ಮಾಡಿದ್ದಾರೆ. ಲೋಕಸಭೆಯಲ್ಲಿನ ತಮ್ಮ ಭಾಷಣದ ವಿಸ್ತೃತ ಭಾಗಗಳನ್ನು ಹೊಂದಿರುವ ವಿಡಿಯೊವನ್ನೂ ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ.

'ಪ್ರಧಾನಿ ಅವರು ಮೇಕ್ ಇನ್ ಇಂಡಿಯಾದ ಭರವಸೆ ನೀಡಿದ್ದಾರೆ. ಆದರೆ, ಚೀನಾದಿಂದ ಮಾತ್ರ ಖರೀದಿಸಿ ಎಂಬಂತಾಗಿದೆ. 2021ರಲ್ಲಿ ಚೀನಾದಿಂದ ಮಾಡಿಕೊಂಡ ಆಮದು ಪ್ರಮಾಣವು ಶೇ 46ರಷ್ಟು ಏರಿಕೆಯಾಗಿದೆ. ಇದು ಈವರೆಗಿನ ಅತ್ಯಧಿಕ ಆಮದು ಪ್ರಮಾಣವಾಗಿದೆ. ದೇಶದಲ್ಲಿ ನಿರುದ್ಯೋಗದ ಪ್ರಮಾಣವು ಎಲ್ಲಾ ದಾಖಲೆಗಳನ್ನು ಮರಿದು ಹಾಕಿದೆ. ಅಷ್ಟೇ ಅಲ್ಲ, ಚೀನಾವು ಭಾರತದ ಭೂಪ್ರದೇಶವನ್ನು ಅತಿಕ್ರಮಿಸಿಕೊಂಡಿದೆ. ಇದು ಮೋದಿ ಸರ್ಕಾರವು ಚೀನಾದ ವಿಕಾಸವನ್ನು (ಅಭಿವೃದ್ಧಿ) ಖಾತ್ರಿಪಡಿಸುವಂತಿದೆ' ಎಂದು ರಾಹುಲ್ ಆರೋಪಿಸಿರುವ ಮಾತುಗಳು ವಿಡಿಯೊದಲ್ಲಿದೆ.

ರಾಹುಲ್ ಅವರ ಟ್ವೀಟ್ ಅನ್ನು ಟ್ಯಾಗ್ ಮಾಡಿ, ಟ್ವೀಟ್ ಮಾಡಿರುವ ಮಲ್ಲಿಕಾರ್ಜುನ ಖರ್ಗೆ ಅವರು, 'ಬೀಜಿಂಗ್ ಜನತಾ ಪಕ್ಷವು (ಬಿಜೆಪಿ) ಬರೀ ನಮ್ಮ ದೇಶದ ಭೂಭಾಗವನ್ನಷ್ಟೇ ಬಿಟ್ಟುಕೊಟ್ಟಿಲ್ಲ. ಬದಲಿಗೆ ನಮ್ಮ ಆರ್ಥಿಕತೆಯನ್ನು ಸಹ ಒಪ್ಪಿಸುತ್ತಿದೆ' ಎಂದು ದೂರಿದ್ದಾರೆ.

ಬಿಜೆಪಿ ಸಂಸದ ತಪಿರ್ ಗಾವೊ ಅವರ ಹೇಳಿಕೆಯನ್ನು ಉಲ್ಲೇಖಿಸಿ, ಪತ್ರಿಕಾ ವರದಿಯೊಂದನ್ನು ಟ್ಯಾಗ್ ಮಾಡಿರುವ ರಾಹುಲ್ ಗಾಂಧಿ, 'ಚೀನಾವು ಭಾರತೀಯ ನಾಗರಿಕರನ್ನು ಅಪಹರಿಸುತ್ತಿರುವ ಕಾರಣ, ಪರಿಹಾರ ಕಂಡುಕೊಳ್ಳಬೇಕಿದೆ' ಎಂದು ಸರ್ಕಾರಕ್ಕೆ ಒತ್ತಾಯಿಸಿ ಟ್ವೀಟ್ ಮಾಡಿದ್ದಾರೆ.

ಚೀನಾದ ಬೆದರಿಕೆಯ ತಂತ್ರ: ಭಾರತಕ್ಕೆ ಅಮೆರಿಕ ಬೆಂಬಲ

ಚಳಿಗಾಲದ ಒಲಿಂಪಿಕ್ಸ್ ಜ್ಯೋತಿ: ಚೀನಾ ಕ್ರಮಕ್ಕೆ ಅಮೆರಿಕ ಕಿಡಿ

ವಾಷಿಂಗ್ಟನ್ (ಪಿಟಿಐ): '2020ರ ಗಾಲ್ವಾನ್ ಕಣಿವೆಯಲ್ಲಿ ಭಾರತೀಯ ಸೈನಿಕರ ಮೇಲೆ ದಾಳಿ ಮಾಡಿದ್ದ ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ರೆಜಿಮೆಂಟ್ ಕಮಾಂಡರ್ ಕಿ ಫಬಾ ಅವರಿಗೆ ಬೀಜಿಂಗ್‌ನ ಚಳಿಗಾಲದ ಒಲಿಂಪಿಕ್ಸ್ ಕ್ರೀಡಾಕೂಟದ ಜ್ಯೋತಿ ಹೊತ್ತೊಯ್ಯುವ ಜವಾಬ್ದಾರಿ (ಟಾರ್ಚ್ ಬೇರರ್) ನೀಡಿರುವ ಚೀನಾದ ಕ್ರಮವು ನಾಚಿಕಗೇಡಿನ ಸಂಗತಿ 'ಎಂದು ಅಮೆರಿಕವು ಕಿಡಿಕಾರಿದೆ.

ಈ ಮೂಲಕ ಭಾರತದ ವಿರುದ್ಧ ಪ್ರಚೋದನಕಾರಿ ನಡೆ ತೋರಿ, ಬೆದರಿಕೆ ಒಡ್ಡಿರುವ ಚೀನಾದ ಕ್ರಮವನ್ನು ವಿರೋಧಿಸಿರುವ ಅಮೆರಿಕವು, ತಾನು ಭಾರತವನ್ನು ಬೆಂಬಲಿಸುವುದಾಗಿ ತಿಳಿಸಿದೆ.

ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಬುಧವಾರ ಪಿಎಲ್‌ಎಯ ರೆಜಿಮೆಂಟ್ ಕಮಾಂಡರ್‌ಗೆ ಕ್ರೀಡಾಕೂಟದ ಜ್ಯೋತಿಯನ್ನು ಹೊತ್ತೊಯ್ಯುವ ಜವಾಬ್ದಾರಿ ನೀಡಲಾಗಿದೆ. ಚೀನಾದ ಈ ಕ್ರಮವು ಕ್ರೀಡಾಕೂಟದ ಉದ್ಘಾಟನಾ ಮತ್ತು ಸಮಾರೋಪ ಸಮಾರಂಭಗಳ ರಾಜತಾಂತ್ರಿಕ ಬಹಿಷ್ಕಾರವನ್ನು ಘೋಷಿಸಲು ಭಾರತಕ್ಕೆ ಪ್ರೇರಣೆ ನೀಡಿದಂತಾಗಿದೆ.

ಚೀನಾದ ಪ್ರಚೋದನಕಾರಿ ನಡೆಯ ಕುರಿತು ಸುದ್ದಿಗಾರರ ಪ್ರಶ್ನೆಗೆ ಗುರುವಾರ ಪ್ರತಿಕ್ರಿಯಿಸಿರುವ ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರ ನೆಡ್ ಪ್ರೈಸ್ ಅವರು, 'ತನ್ನ ನೆರೆಹೊರೆಯವರನ್ನು ಬೆದರಿಸುವ ಚೀನಾದ ನಿರಂತರ ಪ್ರಯತ್ನಗಳ ಬಗ್ಗೆ ಅಮೆರಿಕವು ಈ ಹಿಂದೆಯೂ ಕಳವಳ ವ್ಯಕ್ತಪಡಿಸಿದೆ. ಭಾರತ- ಚೀನಾದ ಗಡಿ ಪರಿಸ್ಥಿತಿಯ ವಿಷಯಕ್ಕೆ ಬಂದಾಗ, ನಾವು ನೇರ ಮಾತುಕತೆ ಮತ್ತು ಗಡಿ ವಿವಾದಗಳ ಶಾಂತಿಯುತ ಪರಿಹಾರಕ್ಕೆ ಬೆಂಬಲಿಸುವುದನ್ನು ಮುಂದುವರಿಸುತ್ತೇವೆ' ಎಂದು ಹೇಳಿದ್ದಾರೆ.

'ನಾವು ಪ್ರತಿಸಲದಂತೆ ಸ್ನೇಹಿತರೊಂದಿಗೆ ನಿಲ್ಲುತ್ತೇವೆ. ಇಂಡೋ-ಪೆಸಿಫಿಕ್‌ನಲ್ಲಿ ಭದ್ರತೆ ಮತ್ತು ಮೌಲ್ಯಗಳನ್ನು ಮುನ್ನಡೆಸಲು ನಾವು ಪಾಲುದಾರರು ಮತ್ತು ಮಿತ್ರರಾಷ್ಟ್ರಗಳೊಂದಿಗೆ ನಿಲ್ಲುತ್ತೇವೆ' ಎಂದೂ ಅವರು ತಿಳಿಸಿದ್ದಾರೆ.

ಚೀನಾದ ಕ್ರಮಕ್ಕೆ ಅಮೆರಿಕದ ಇಬ್ಬರು ಸೆನೆಟರ್‌ಗಳು ಕೂಡಾ ಟೀಕೆ ವ್ಯಕ್ತಪಡಿಸಿದ್ದಾರೆ.

'ಚಳಿಗಾಲದ ಒಲಿಂಪಿಕ್ಸ್‌ಗೆ ಭಾರತೀಯ ಸೈನಿಕರ ವಿರುದ್ಧದ ದಾಳಿಯಲ್ಲಿ ಭಾಗವಹಿಸಿದ್ದ ಸೇನಾಧಿಕಾರಿಯನ್ನು ಕ್ರೀಡಾಜ್ಯೋತಿಧಾರಕರನ್ನಾಗಿ ಆಯ್ಕೆ ಮಾಡಿರುವ ಚೀನಾದ ನಿರ್ಧಾರವು ಭಯಾನಕ ಮತ್ತು ಉದ್ದೇಶಪೂರ್ವಕವಾಗಿ ಪ್ರಚೋದನಕಾರಿಯಾದದ್ದು' ಎಂದು ಫ್ಲಾರಿಡಾದ ಸೆನೆಟರ್ ಮಾರ್ಕೊ ರೂಬಿಯೊ ಅಭಿಪ್ರಾಯಪಟ್ಟಿದ್ದಾರೆ.

'ಚೀನಾದ ಕ್ರಮವು ನಾಚಿಕೆಗೇಡಿನ ಸಂಗತಿ. ಅಮೆರಿಕವು ಭಾರತದ ಸಾರ್ವಭೌಮತ್ವ ಬೆಂಬಲಿಸುವುದನ್ನು ಮುಂದುವರಿಸುತ್ತದೆ' ಎಂದು ಅಮೆರಿಕದ ವಿದೇಶ ಸಂಬಂಧಗಳ ಸಮಿತಿಯ ಸದಸ್ಯ, ಸೆನೆಟರ್ ಜಿಮ್ ರಿಶ್ ಅವರು ಟ್ವೀಟ್ ಮಾಡಿದ್ದಾರೆ.

ತನ್ನದೇ ಅರ್ಹತೆ ಮೇಲೆ ಭಾರತದ ಜೊತೆ ಸಂಬಂಧ: ಅಮೆರಿಕ ಸ್ಪಷ್ಟನೆ

'ಭಾರತದೊಂದಿಗಿನ ಅಮೆರಿಕದ ಸಂಬಂಧವು ತನ್ನದೇ ಆದ ಅರ್ಹತೆಯ ಮೇಲೆ ನಿಂತಿದೆಯೋ ಹೊರತು ರಷ್ಯಾದ ಜತೆ ನಡೆಯುತ್ತಿರುವ ಉದ್ವಿಗ್ನತೆಯಿಂದ ಪ್ರಭಾವಿತವಾಗಿಲ್ಲ' ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಉಕ್ರೇನ್ ಗಡಿಯಲ್ಲಿನ ಪರಿಸ್ಥಿತಿಯನ್ನು ಕುರಿತು ಚರ್ಚಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತವು ಮತದಾನದಿಂದ ದೂರ ಉಳಿದಿದೆ. ಈ ಬೆಳವಣಿಗೆಯ ನಂತರ ಅಮೆರಿಕವು ತನ್ನ ಅಭಿಪ್ರಾಯ ವ್ಯಕ್ತಪಡಿಸಿದೆ.

ಟಿಬೆಟಿಯನ್ನರ ಪ್ರತಿಭಟನೆ

ನವದೆಹಲಿ (ಪಿಟಿಐ): ಬೀಜಿಂಗ್‌ನ ಚಳಿಗಾಲದ ಒಲಿಂಪಿಕ್ಸ್ 2022 ಅನ್ನು ವಿರೋಧಿಸಿ ದೆಹಲಿಯ ಚಾಣಕ್ಯಪುರಿಯಲ್ಲಿರುವ ಚೀನಾದ ರಾಯಭಾರದ ಕಚೇರಿಯ ಹೊರಗೆ ಟಿಬೆಟಿಯನ್ನರ ಗುಂಪೊಂದು ಶುಕ್ರವಾರ ಪ್ರತಿಭಟನೆ ನಡೆಸಿತು ಎಂದು ಪೊಲೀಸರು ತಿಳಿಸಿದ್ದಾರೆ.

'ಸುಮಾರು 50ರಿಂದ 60 ಜನರಿದ್ದ ಗುಂಪೊಂದು ಭಿತ್ತಿಪತ್ರಗಳೊಂದಿಗೆ ಸುಮಾರು 45 ನಿಮಿಷ ಕಾಲ ರಾಯಭಾರ ಕಚೇರಿಯ ಹೊರಗೆ ಪ್ರತಿಭಟನೆ ನಡೆಸಿತು. ಪ್ರತಿಭಟನನಿರತರನ್ನು ಚದುರಿಸಲಾಯಿತು. ಯಾರನ್ನೂ ಬಂಧಿಸಿಲ್ಲ' ಎಂದೂ ಅವರು ಮಾಹಿತಿ ನೀಡಿದ್ದಾರೆ.

'ಚೀನಾವು ಟಿಬೆಟ್‌ನಲ್ಲಿ ಸಮಗ್ರ ಮಾನವ ಹಕ್ಕುಗಳ ಉಲ್ಲಂಘನೆ ಮಾಡುವುದನ್ನು ಮುಂದುವರಿಸಿದ್ದು, ಸನ್ಯಾಸಿಗಳ ಸಂಸ್ಥೆಗಳನ್ನು ಕೆಡವಿ, ಸುಟ್ಟು ಭಸ್ಮ ಮಾಡುತ್ತಿದೆ' ಎಂದು ಗುಂಪು ಆರೋಪಿಸಿದೆ.

ಸುದ್ದಿ 2 ನಿಮಿಷ

ಪ್ರಧಾನಿ ಪಟ್ಟ ಉಳಿಸಿಕೊಳ್ಳಲು ಜಾನ್ಸನ್ ಹರಸಾಹಸ

ಲಂಡನ್ (ಎಎಫ್‌ಪಿ): ತಮ್ಮ ಆಪ್ತಬಳಗದಲ್ಲಿನ ಕೆಲವರು ಹೊರನಡೆದ ಕಾರಣ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರ ಸ್ಥಾನ ಅಲುಗಾಡುತ್ತಿದೆ. ಹೇಗಾದರೂ ಮಾಡಿ ಪ್ರಧಾನಿ ಪಟ್ಟ ಉಳಿಸಿಕೊಳ್ಳಲು ಹೆಣಗಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕೋವಿಡ್–19 ಹಿನ್ನೆಲೆಯಲ್ಲಿ ಜಾರಿಗೊಳಿಸಿದ್ದ ಲಾಕ್‌ಡೌನ್ ನಿರ್ಬಂಧಗಳನ್ನು ಉಲ್ಲಂಘಿಸಿ ಆಡಳಿತಾರೂಢ ಕನ್ಸರ್ವೇಟಿವ್ ಪಾರ್ಟಿಯ ಕೆಲ ಮುಖಂಡರು ಹಾಗೂ ಸರ್ಕಾರಿ ನೌಕರರು ಔತಣಕೂಟಗಳಲ್ಲಿ ಪಾಲ್ಗೊಂಡಿದ್ದು ಬ್ರಿಟನ್‌ನಲ್ಲಿ ಭಾರಿ ವಿವಾದ, ಚರ್ಚೆಗೆ ಕಾರಣವಾಗಿದೆ. ಇದು 'ಪಾರ್ಟಿಗೇಟ್' ಹಗರಣ ಎಂದೇ ಹೆಸರಾಗಿದೆ. ತಮ್ಮ ನಿಷ್ಠ ಹಾಗೂ ಮುಖ್ಯ ಸಲಹೆಗಾರ್ತಿ ಮುನಿರಾ ಮಿರ್ಜಾ ಅವರು ಗುರುವಾರ ತಮ್ಮ ಸ್ಥಾನ ತ್ಯಜಿಸಿರುವುದು ಪ್ರಧಾನಿ ಜಾನ್ಸನ್ ಅವರಿಗೆ ಆಘಾತ ತಂದಿದೆ.

ಜಾನ್ಸನ್ ಅವರ ನಿಷ್ಠರಾದ, ಸಿಬ್ಬಂದಿ ಮುಖ್ಯಸ್ಥ ಡ್ಯಾನ್ ರಾಸೆನ್‌ಫೀಲ್ಡ್, ಹಿರಿಯ ಅಧಿಕಾರಿ ಮಾರ್ಟಿನ್ ರೇನಾಲ್ಡ್ಸ್ ಈಗಾಗಲೇ ತಮ್ಮ ಸ್ಥಾನಗಳನ್ನು ತ್ಯಜಿಸಿದ್ದು, ಇನ್ನೂ ಹಲವರು ಇವರನ್ನು ಹಿಂಬಾಲಿಸುವ ಸಾಧ್ಯತೆಗಳಿವೆ ಎಂದು ಬ್ರಿಟನ್ ಮಾಧ್ಯಮಗಳು ವರದಿ ಮಾಡಿವೆ.

'ಪಾರ್ಟಿಗೇಟ್' ಭಾರಿ ಸದ್ದು ಮಾಡಿದ ಸಂದರ್ಭದಲ್ಲಿ, ಹಣಕಾಸು ಸಚಿವ ರಿಷಿ ಸುನಕ್ ಅವರು ಸಹ ಜಾನ್ಸನ್ ಅವರನ್ನು ಸಮರ್ಥಿಸುವ ಗೊಡವೆ ಹೋಗಲಿಲ್ಲ. ಈ ಎಲ್ಲ ಬೆಳವಣಿಗೆಗಳು ಅವರ ಜಾನ್ಸನ್ ಅವರ ಸ್ಥಾನಕ್ಕೆ ಸಂಚಕಾರ ಬಂದೊದಗಿದೆ ಎಂಬುದನ್ನು ಸೂಚಿಸುತ್ತವೆ ಎಂದೂ ಮಾಧ್ಯಮಗಳು ವರದಿ ಮಾಡಿವೆ.



'ಎಂಎಸ್‌ಪಿ: ಐದು ರಾಜ್ಯಗಳ ಚುನಾವಣೆ ಬಳಿಕ ಸಮಿತಿ ರಚನೆ'

ನವದೆಹಲಿ (ಪಿಟಿಐ): ಐದು ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆಗಳು ಮುಗಿದ ನಂತರ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಕುರಿತ ಸಮಿತಿಯನ್ನು ರಚಿಸಲಾಗುವುದು ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ರಾಜ್ಯಸಭೆಯಲ್ಲಿ ಶುಕ್ರವಾರ ಹೇಳಿದರು.

ಪ್ರಶ್ನೋತ್ತರ ವೇಳೆಯಲ್ಲಿ ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸಚಿವ ತೋಮರ್, 'ಚುನಾವಣೆಗಳು ಮುಗಿದ ನಂತರ ಸಮಿತಿಯನ್ನು ರಚಿಸಬಹುದು ಎಂಬುದಾಗಿ ಚುನಾವಣಾ ಆಯೋಗ ಹೇಳಿದೆ. ಈ ಬಗ್ಗೆ ಆಯೋಗಕ್ಕೆ ಸರ್ಕಾರ ಪತ್ರ ಬರೆದು ಮಾಹಿತಿ ಕೇಳಿತ್ತು' ಎಂದು ಮಾಹಿತಿ ನೀಡಿದರು.

'ಎಂಎಸ್‌ಪಿಗೆ ಸಂಬಂಧಿಸಿ ಸಮಿತಿಯೊಂದರನ್ನು ರಚಿಸುವುದಾಗಿ ಪ್ರಧಾನಿ ಘೋಷಣೆ ಮಾಡಿರುವುದು ದೇಶಕ್ಕೇ ಗೊತ್ತಿದೆ. ಬೆಳೆಗಳಲ್ಲಿ ವೈವಿಧ್ಯ, ನೈಸರ್ಗಿಕ ಕೃಷಿಗೆ ಉತ್ತೇಜನ ಹಾಗೂ ಎಂಎಸ್‌ಪಿ ನಿರ್ಧರಿಸುವಲ್ಲಿ ಪಾರದರ್ಶಕತೆ ತರುವ ಉದ್ದೇಶವನ್ನು ಅವರು ವಿವರಿಸಿದ್ದರು. ಪ್ರಧಾನಿಗಳ ಈ ಘೋಷಣೆಯನ್ನು ಕಾರ್ಯರೂಪಕ್ಕೆ ತರಲು ಸರ್ಕಾರ ಬದ್ಧ ಇದೆ' ಎಂದು ಅವರು ರಾಜ್ಯಸಭೆಗೆ ತಿಳಿಸಿದರು.

'ಚುನಾವಣೆಗಳು ಘೋಷಣೆಯಾಗಿರುವ ಕಾರಣ, ಸಮಿತಿ ರಚನೆಗೆ ಸಂಬಂಧಿಸಿ ಸ್ಪಷ್ಟೀಕರಣ ಕೋರಿ ಚುನಾವಣೆ ಆಯೋಗಕ್ಕೆ ಪತ್ರ ಬರೆಯಲಾಗಿತ್ತು. ಆಯೋಗವು ಉತ್ತರ ನೀಡಿದ್ದು, ಚುನಾವಣೆ ಪ್ರಕ್ರಿಯೆ ಮುಗಿದ ನಂತರ ಸಮಿತಿ ರಚಿಸಬಹುದು ಎಂಬುದಾಗಿ ತಿಳಿಸಿದೆ' ಎಂದು ಅವರು ಹೇಳಿದರು.

'4,984 ಪ್ರಕರಣಗಳು ವಿಚಾರಣೆಗೆ ಬಾಕಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ/ ಹಾಲಿ ಸಂಸದರು ಹಾಗೂ ಶಾಸಕರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ಪೈಕಿ ವಿಚಾರಣೆಗೆ ಬಾಕಿ ಉಳಿಯುತ್ತಿರುವ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬರುತ್ತಿದೆ. ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಸತ್ ಹಾಗೂ ವಿಧಾನಸಭೆಗಳಿಗೆ ಆಯ್ಕೆಯಾಗುತ್ತಿರುವುದನ್ನು ಇದು ಸೂಚಿಸುತ್ತದೆ ಎಂದು ಸುಪ್ರೀಂಕೋರ್ಟ್‌ಗೆ ಮಾಹಿತಿ ನೀಡಲಾಗಿದೆ.

ನ್ಯಾಯಾಲಯಕ್ಕೆ ನೆರವಾಗಲು ನೇಮಕವಾಗಿರುವ ಹಿರಿಯ ವಕೀಲ (ಅಮಿಕಸ್ ಕ್ಯೂರಿ) ವಿಜಯ್ ಹನ್ಸಾರಿಯಾ ಅವರು ಸಿದ್ಧಪಡಿಸಿರುವ ವರದಿಯಲ್ಲಿ ಈ ವಿಷಯ ಕುರಿತು ವಿವರಿಸಲಾಗಿದೆ. ಹನ್ಸಾರಿಯಾ ಪರವಾಗಿ ವಕೀಲೆ ಸ್ನೇಹಾ ಕಲಿಟಾ ಅವರು ಸುಪ್ರೀಂಕೋರ್ಟ್‌ಗೆ ಈ ವರದಿಯನ್ನು ಸಲ್ಲಿಸಿದ್ದಾರೆ.

ಜನಪ್ರತಿನಿಧಿಗಳ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಅಪರಾಧ ಪ್ರಕರಣಗಳ ವಿಚಾರಣೆಗೆ ವಿಶೇಷ ಕೋರ್ಟ್‌ಗಳನ್ನು ಸ್ಥಾಪಿಸುವಂತೆ ಕೋರಿ ಬಿಜೆಪಿ ನಾಯಕ ಹಾಗೂ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಗೆ ಸಂಬಂಧಿಸಿ, ವರದಿಯನ್ನು ಸಲ್ಲಿಸಲಾಗಿದೆ.

2021ರ ಡಿಸೆಂಬರ್ 1ರಂತೆ, ಮಾಜಿ ಹಾಗೂ ಹಾಲಿ ಸಂಸದರು/ ಶಾಸಕರ ವಿರುದ್ಧ ದಾಖಲಾಗಿರುವ 4,984 ಪ್ರಕರಣಗಳ ವಿಚಾರಣೆ ದೇಶದ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

2018ರ ಡಿಸೆಂಬರ್‌ನಿಂದ 4,122 ಪ್ರಕರಣಗಳು ವಿಚಾರಣೆಗೆ ಬಾಕಿ ಇದ್ದವು. ಈಗ 862 ಪ್ರಕರಣಗಳು ಹೆಚ್ಚಿವೆ ಎಂದೂ ವಿವರಿಸಲಾಗಿದೆ.

'ಸುಪ್ರೀಂಕೋರ್ಟ್‌ನಿಂದ ಮೇಲಿಂದ ಮೇಲೆ ನಿರ್ದೇಶನಗಳನ್ನು ನೀಡಲಾಗುತ್ತಿದೆ. ನಿರಂತರ ಮೇಲ್ವಿಚಾರಣೆಯ ಹೊರತಾಗಿಯೂ 4,984 ಪ್ರಕರಣಗಳ ವಿಚಾರಣೆ ಬಾಕಿ ಉಳಿದಿದೆ. ಈ ಪೈಕಿ 1,899 ಪ್ರಕರಣಗಳು ಐದು ವರ್ಷಗಳಿಗಿಂತಲೂ ಹಳೆಯವು' ಎಂದು ಸುಪ್ರೀಂಕೋರ್ಟ್‌ಗೆ ತಿಳಿಸಲಾಗಿದೆ.

ಅಂಬೇಡ್ಕರ್ ಭಾವಚಿತ್ರಕ್ಕೆ ಹೈಕೋರ್ಟ್ ಅಸ್ತು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಗಸ್ಟ್ 15ರ ಸ್ವಾತಂತ್ರ್ಯ ದಿನ, ನವೆಂಬರ್ 26ರ ಸಂವಿಧಾನ ದಿನ ಹಾಗೂ ಜನವರಿ 26ರ ಗಣರಾಜ್ಯೋತ್ಸವ ಆಚರಣೆಯ ದಿನಗಳಂದು ಸಂವಿಧಾನ ಶಿಲ್ಪಿ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಭಾವಚಿತ್ರವನ್ನು ಎಲ್ಲ ಕೋರ್ಟ್‌ಗಳಲ್ಲಿ ಇರಿಸುವ ನಿರ್ಧಾರವನ್ನು ಹೈಕೋರ್ಟ್ ಕೈಗೊಂಡಿದೆ ಎಂದು ತಿಳಿದು ಬಂದಿದೆ.

'ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದಲ್ಲಿ ಬೆಂಗಳೂರಿನ ಪ್ರಧಾನ ಪೀಠದಲ್ಲಿ ಶುಕ್ರವಾರ ನಡೆದ ಆಡಳಿತಾತ್ಮಕ 'ಫುಲ್ ಕೋರ್ಟ್' ಸಭೆಯಲ್ಲಿ ಈ ಕುರಿತಂತೆ ನಿರ್ಣಯ ಕೈಗೊಳ್ಳಲಾಗಿದೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಶೀಘ್ರವೇ ಈ ಕುರಿತಂತೆ ಅಧಿಕೃತ ಮಾಹಿತಿ ಬಿಡುಗಡೆಯಾಗಲಿದೆ' ಎಂದು ಮೂಲಗಳು ಹೇಳಿವೆ.


'ಕಾನೂನು ಆಯೋಗದ ತೆಕ್ಕೆಗೆ ಏಕರೂಪ ನಾಗರಿಕ ಸಂಹಿತೆ'

ನವದೆಹಲಿ: 'ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಹೊಸ ಕಾನೂನು ಆಯೋಗವು ಕೈಗೆತ್ತಿಕೊಳ್ಳಲಿದೆ' ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಬಿಜೆಪಿ ಸಂಸದರಿಗೆ ಮಾಹಿತಿ ನೀಡಿದ್ದಾರೆ.

ಲೋಕಸಭೆಯಲ್ಲಿ ಶೂನ್ಯವೇಳೆಯಲ್ಲಿ ಮಾತನಾಡಿದ್ದ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು, ಏಕರೂಪ ನಾಗರಿಕ ಸಂಹಿತೆಯ ವಿಷಯವನ್ನು ಪ್ರಸ್ತಾಪಿಸಿದ್ದರು. ಈ ವಿಷಯಕ್ಕೆ ರಿಜಿಜು ಪ್ರತಿಕ್ರಿಯೆ ನೀಡಿದ್ದಾರೆ.

ಷೇರುಪೇಟೆ ವಹಿವಾಟು

143 ▼



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,560
ಇಂದಿನ ಅಂತ್ಯ	17,516
▼	44
ದಿನದ ಕನಿಷ್ಠ	17,462

ವಿನಿಮಯ ದರ

$ ಡಾಲರ್	74.69
£ ಪೌಂಡ್	101.37
€ ಯುರೊ	85.65
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1295 (1280)
ಸೂರ್ಯಕಾಂತಿ (ರಿಫೈನ್ಡ್)	₹1300 (1290)
ಪಾಮೋಲಿನ್	₹1245 (1230)

ಐಟಿಸಿ ಲಾಭ ಶೇ 15ರಷ್ಟು ಏರಿಕೆ

ನವದೆಹಲಿ (ಪಿಟಿಐ): ಐಟಿಸಿ ಲಿಮಿಟೆಡ್ ಕಂಪನಿಯು ಡಿಸೆಂಬರ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದ ನಿವ್ವಳ ಲಾಭದಲ್ಲಿ ಶೇಕಡ 15ರಷ್ಟು ಏರಿಕೆ ದಾಖಲಿಸಿದೆ. ಕಂಪನಿಯ ಎಲ್ಲ ಉತ್ಪನ್ನಗಳು, ಸೇವೆಗಳಿಗೆ ಬೇಡಿಕೆ ಉತ್ತಮವಾಗಿದ್ದ ಕಾರಣ, ₹ 4,118 ಕೋಟಿ ನಿವ್ವಳ ಲಾಭ ಬಂದಿದೆ.

ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹ 3,587 ಕೋಟಿ ನಿವ್ವಳ ಲಾಭ ಕಂಡಿತ್ತು. ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ಆದಾಯವು ₹ 14,670 ಕೋಟಿ ಇತ್ತು. ಇದು ಈ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹ 18,787 ಕೋಟಿಗೆ ಏರಿಕೆಯಾಗಿದೆ ಎಂದು ಷೇರುಪೇಟೆಗೆ ಕಂಪನಿ ಮಾಹಿತಿ ನೀಡಿದೆ.

ಮಾರ್ಚ್ 31ಕ್ಕೆ ಕೊನೆಗೊಳ್ಳುವ ಹಣಕಾಸು ವರ್ಷಕ್ಕೆ ಅನ್ವಯ ಆಗುವಂತೆ ಕಂಪನಿಯ ಆಡಳಿತ ಮಂಡಳಿಯು, ಷೇರುದಾರರಿಗೆ ಪ್ರತಿ ಷೇರಿಗೆ ₹ 5.25ರಷ್ಟು ಮಧ್ಯಂತರ ಲಾಭಾಂಶ ನೀಡಲು ಒಪ್ಪಿಗೆ ಸೂಚಿಸಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ಸಿಗರೇಟು ವಹಿವಾಟಿನಿಂದ ಒಟ್ಟು ₹ 6,958 ಕೋಟಿ ಆದಾಯ ಗಳಿಸಿದೆ. ಹಿಂದಿನ ವರ್ಷದಲ್ಲಿ ಇದು ₹ 6.091 ಕೋಟಿ ಆಗಿತ್ತು. ಕಂಪನಿಯು ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳ ಮಾರಾಟದಿಂದ ₹ 4,099 ಕೋಟಿ ಆದಾಯ ಗಳಿಸಿದೆ.

ಕಂಪನಿಯ ಹೋಟೆಲ್ ವಹಿವಾಟುಗಳಲ್ಲಿನ ಆದಾಯ ಕೂಡ ₹ 495 ಕೋಟಿಗೆ ಹೆಚ್ಚಳವಾಗಿದೆ. ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಇದು ₹ 248 ಕೋಟಿ ಆಗಿತ್ತು. ಹೋಟೆಲ್ ಬಳಕೆ ಪ್ರಮಾಣವು ಕೋವಿಡ್ ಪೂರ್ವದ ಸ್ಥಿತಿ ತಲುಪಿದೆ ಎಂದು ಕಂಪನಿ ಹೇಳಿದೆ. ಕಂಪನಿಯ ಕೃಷಿ ಉದ್ದಿಮೆಯಿಂದ ಬರುವ ಆದಾಯವು ₹ 5,157 ಕೋಟಿಗೆ ಹೆಚ್ಚಳ ಕಂಡಿದೆ.

'ತ್ವರಿತವಾಗಿ ತಯಾರಿಕಾ ಘಟಕ ಸ್ಥಾಪನೆಗಾಗಿ ತೆರಿಗೆ ರಿಯಾಯಿತಿ'

ನವದೆಹಲಿ (ಪಿಟಿಐ): ದೇಶದ ಹೊಸ ಹೊಸ ಕಂಪನಿಗಳು ಭಾರತದಲ್ಲಿಯೇ ತಮ್ಮ ತಯಾರಿಕಾ ಘಟಕಗಳನ್ನು ತ್ವರಿತವಾಗಿ ಸ್ಥಾಪಿಸಬೇಕು ಎಂದು ಸರ್ಕಾರ ಬಯಸುತ್ತದೆ. ಆ ಕಾರಣಕ್ಕಾಗಿಯೇ ಶೇಕಡ 15ರಷ್ಟು ರಿಯಾಯಿತಿಯ ಕಾರ್ಪೊರೇಟ್ ತೆರಿಗೆ ದರವನ್ನು 2024ರ ಮಾರ್ಚ್‌ವರೆಗೆ ವಿಸ್ತರಿಸಲಾಗಿದೆ ಎಂದು ರೆವಿನ್ಯು ಕಾರ್ಯದರ್ಶಿ ತರುಣ್ ಬಜಾಜ್ ಹೇಳಿದ್ದಾರೆ.

2022–23ನೇ ಸಾಲಿನ ಬಜೆಟ್‌ನಲ್ಲಿ ಹೊಸ ತಯಾರಿಕಾ ಘಟಕಗಳಿಗೆ ಶೇ 15ರ ರಿಯಾಯಿತಿ ದರದ ಕಾರ್ಪೊರೇಟ್ ತೆರಿಗೆಯನ್ನು ಒಂದು ವರ್ಷದವರೆಗೆ ವಿಸ್ತರಿಸುವ ಪ್ರಸ್ತಾವ ಮಾಡಲಾಗಿದೆ.

2019ರ ಸೆಪ್ಟೆಂಬರ್‌ನಲ್ಲಿ ಕಾರ್ಪೊರೇಟ್ ತೆರಿಗೆ ದರವನ್ನು ಕಡಿಮೆ ಮಾಡುವಾಗ, 2019ರ ಅಕ್ಟೋಬರ್ 1ರಂದು ಅಥವಾ ನಂತರ ಯಾವುದೇ ಹೊಸ ದೇಶಿ ಕಂಪನಿಯು ತಯಾರಿಕಾ ಘಟಕ ಸ್ಥಾಪನೆಗೆ ಹೊಸ ಹೂಡಿಕೆ ಮಾಡುವಲ್ಲಿ, ಶೇ 15ರ ದರದಲ್ಲಿ ತೆರಿಗೆಯನ್ನು ಪಾವತಿಸುವ ಆಯ್ಕೆಯನ್ನು ಹೊಂದಿರುತ್ತದೆ ಎಂದು ಸರ್ಕಾರ ಹೇಳಿದೆ. ಆದರೆ, 2023ರ ಮಾರ್ಚ್ 31ರಂದು ಅಥವಾ ಅದಕ್ಕೂ ಮೊದಲು ತಯಾರಿಕೆ ಆರಂಭಿಸಬೇಕು ಎಂದು ತಿಳಿಸಿತ್ತು. ಈ ಬಾರಿಯ ಬಜೆಟ್‌ನಲ್ಲಿ ಅವಧಿಯನ್ನು 2024ರ ಮಾರ್ಚ್‌ವರೆಗೂ ವಿಸ್ತರಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

4-2-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8700-8750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1235 (1227)
ಪಾಮ್ ವಾರದ ಡೆಲಿವರಿ	1243 (1228)
ಸೂರ್ಯಕಾಂತಿ ಎಣ್ಣೆ ಕಚ್ಚಾ	1240 (1230)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,150 (48,000)
ಬೆಳ್ಳಿ ಕೆ.ಜಿ	60,950 (60,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	460
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	45299-45299
ಹಳತು	46000-53000
ಕುಮಟ	
ಚಿಪ್ಪು	24019-28869
ಕೋಕ	16509-27019
ಹಳೆಚಾಲಿ	47019-49299
ಹೊಸಚಾಲಿ	36019-40599
ಫ್ಯಾಕ್ಟರಿ	13019-19699
ಪುತ್ತೂರು	
ಹೊಸತು	27500-43000
ಸಿದ್ದಾಪುರ	
ಬಿಳಿಗೋಟು	20999-29089
ಚಾಲಿ	43099-47509
ಕೋಕ	20899-27092
ಹೊಸಚಾಲಿ	33899-40099
ಕೆಂಪುಗೋಟು	26499-35099
ರಾಶಿ	42059-47509
ತಟ್ಟಿಬೆಟ್ಟೆ	35099-45699
ಶಿರಸಿ	
ಬೆಟ್ಟೆ	38099-46011
ಬಿಳಿಗೋಟು	16099-31099
ಚಾಲಿ	31099-40799
ರಾಶಿ	26639-47919
ಯಲ್ಲಾಪುರ	
ಬಿಳಿಗೋಟು	24899-30099
ಕೋಕ	20199-30520
ಹಳೆಚಾಲಿ	44551-47331
ಹೊಸಚಾಲಿ	35650-40389
ಕೆಂಪುಗೋಟು	30119-36019
ರಾಶಿ	45899-50929
ರಾಮನಗರ ರೇಷ್ಮೆ	
ಮಿಶ್ರತಳಿ	381-650
ದ್ವಿತಳಿ	291-879

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15900	16050	243.90 ಸೆಂಟ್ಸ್
ಎಸಿ	---	7250	7400	
ಆರ್‌ಪಿ	---	7200	7500	ಲಂಡನ್
ಆರ್‌ಸಿ	---	3900	4000	2234 ಡಾಲರ್ಸ್

ಎಲ್‌ಐಸಿ: ಎರಡು ಯೋಜನೆಗಳ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ತನ್ನ ಆ್ಯನ್ಯುಟಿ ಯೋಜನೆಗಳಾದ ಜೀವನ್ ಅಕ್ಷಯ್ –7 ಹಾಗೂ ನ್ಯೂ ಜೀವನ್ ಶಾಂತಿಯ ಆ್ಯನ್ಯುಟಿ ದರಗಳನ್ನು ಫೆಬ್ರುವರಿ 1ರಿಂದ ಜಾರಿಗೆ ಬರುವಂತೆ ಬದಲಾಯಿಸಿದೆ.

ಈ ಯೋಜನೆಗಳು ಪರಿಷ್ಕೃತ ರೂಪದಲ್ಲಿ ಫೆ. 1ರಿಂದಲೇ ಖರೀದಿಗೆ ಲಭ್ಯವಿವೆ. ಈ ಯೋಜನೆಗಳ ಅಡಿಯಲ್ಲಿ ದೊರೆಯುವ ಆ್ಯನ್ಯುಟಿ ಮೊತ್ತ ಎಷ್ಟು ಎಂಬುದನ್ನು ಎಲ್‌ಐಸಿ ವೆಬ್‌ಸೈಟ್‌ನಲ್ಲಿ ಇರುವ ಕ್ಯಾಲ್ಕುಲೇಟರ್ ಬಳಸಿ ಅಥವಾ ಎಲ್‌ಐಸಿ ಆ್ಯಪ್ ಬಳಸಿ ತಿಳಿದುಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಕರೂರ್ ವೈಶ್ಯ ಬ್ಯಾಂಕ್ ನಿವ್ವಳ ಲಾಭ ಹೆಚ್ಚಳ

ಬೆಂಗಳೂರು: ಕರೂರ್ ವೈಶ್ಯ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ₹ 185 ಕೋಟಿಗಳಷ್ಟಾಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹ 35 ಕೋಟಿ ಲಾಭ ಗಳಿಸಿತ್ತು. ವರಮಾನವು ₹ 1,614 ಕೋಟಿಯಿಂದ ₹ 1,600 ಕೋಟಿಗೆ ಇಳಿಕೆ ಕಂಡಿದೆ.


ವಸೂಲಾಗದ ಸಾಲದ ಸರಾಸರಿ ಪ್ರಮಾಣವು ಶೇ 7.37ರಿಂದ ಶೇ 6.97ಕ್ಕೆ ಇಳಿಕೆ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಷೇರುಪೇಟೆ: ಎರಡನೇ ದಿನವೂ ವಹಿವಾಟು ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳ ವಹಿವಾಟು ಸತತ ಎರಡನೇ ದಿನವೂ ಇಳಿಕೆ ಕಂಡಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 143 ಅಂಶ ಇಳಿಕೆ ಕಂಡು 58,645 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 44 ಅಂಶ ಇಳಿಕೆ ಕಂಡು 17,516 ಅಂಶಗಳಿಗೆ ತಲುಪಿತು.

ಸೆನ್ಸೆಕ್ಸ್‌ನಲ್ಲಿ ಎಸ್‌ಬಿಐ ಷೇರು ಮೌಲ್ಯ ಶೇ 1.83ರಷ್ಟು ಗರಿಷ್ಠ ನಷ್ಟ ಕಂಡಿತು.



ಎಫ್‌ಎಂಸಿಜಿ ಮತ್ತು ಲೋಹ ಹೊರತುಪಡಿಸಿ ಉಳಿದೆಲ್ಲ ವಲಯಗಳು ಮಾರಾಟದ ಒತ್ತಡಕ್ಕೆ ಒಳಗಾದವು. ಇದರಿಂದಾಗಿ ಶುಕ್ರವಾರವೂ ನಕಾರಾತ್ಮಕ ವಹಿವಾಟು ಮುಂದುವರಿಯಿತು. ಬ್ಯಾಂಕ್ ಆಫ್ ಇಂಗ್ಲೆಂಡ್ ಬಡ್ಡಿದರ ಏರಿಕೆ ಮಾಡಿರುವುದು ಹಾಗೂ ಹಣದುಬ್ಬರವು ಹೆಚ್ಚಾಗುತ್ತಿರುವುದರಿಂದ ಭವಿಷ್ಯದಲ್ಲಿ ಬಡ್ಡಿದರ ಹೆಚ್ಚಿಸುವುದಾಗಿ ಯುರೋಪ್‌ನ ಕೇಂದ್ರೀಯ ಬ್ಯಾಂಕ್ ಹೇಳಿರುವುದು ಜಾಗತಿಕ ಮಾರುಕಟ್ಟೆಗಳ ಮೇಲೆ ಪರಿಣಾಮ ಉಂಟುಮಾಡಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 1 ಪೈಸೆ ಹೆಚ್ಚಾಗಿ ₹ 74.69ರಂತೆ ವಿನಿಮಯಗೊಂಡಿತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600 -62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 8123884588, 8123884788

ಬೇಕಾಗಿದ್ದಾರೆ: ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಗ್ರಿ, ಡಿಪ್ಲೋಮಾದವರು 18,000- 56,000/- ವಸತಿಯೂಟದೊಂದಿಗೆ 8197650569, 7204396011

Teachers/ Professors

NEWLEARNING LADDERS International School. (Near Ramamurthy Nagar Flyover) Requires Staff (Nurto Grade12) NTT, Eng, Kan, Hin, Sanskrit, Math, Sci, SSc,Com, PET, Art & Craft, Music, Lib, Dance, Karate, Admin Good Communication. Bed must & Exp:2-5yrs. Freshers with relevant qualifications can apply. Salary 10k To 30k Per Month Post your resume to: nllis.jobs@gmail.com Ph:080-41158722/622 Mob:9148336658 Walk-ins :-12/02/22

General

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High end Luxury Flats in Mysore, Zoo Road, near Mysore-Mall, Rera-003588, www.govianu.com. 8103990990

Sites

Tumkur

30X42 SOUTH Facing, DC Convertion Site For Sale, Yellapura, Tumkur City, 3,000/- PSqft. Negotiable. 9886375580.

ಭವಿಷ್ಯ

Astrology

"ಶ್ರೀಆದಿಶಕ್ತಿ ಜ್ಯೋತಿಷ್ಯಂ" ಎಲ್ಲಿಯೂ ಪರಿಹಾರವಾಗದ ಕಠಿಣ ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

'ನಂ.1 ಸ್ತ್ರೀಪುರುಷ ವಶೀಕರಣ' ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ.ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

ಪ್ರವಾಸ

Travel

19.2.2022 ಮಧ್ಯಪ್ರದೇಶ, ಗುಜರಾಜ್ 10.3.2022 ನೇಪಾಳ, ಮುಕ್ತಿನಾಥ್ 15.3.2022 ಕಾಶಿ, ಗಯಾ, ಅಲಹಾಬಾದ್ 1.5.2022 ಗಂಗೋತ್ರಿ, ಯಮುನೋತ್ರಿ, ಕೇದಾರ್ನಾಥ್, ಬದರಿನಾಥ್, ಕರ್ನಾಟಕ ಹೆರಿಟೇಜ್ ಟೂರ್‌ಸ್ (ಹನುಮಂತನಗರ) 9845035349, 9482435755

29.03.2022 10 ದಿನಗಳು ಆಗ್ರಾ, ಮಥುರಾ, ಅಲಹಾಬಾದ್, ಗಯ,ಕಾಶಿ,ಸೀತಾಮಡಿ, ವಿಂದ್ಯಾಚಲಂ ಪ್ರವಾಸ. ರೂ.13,500 ಒಬ್ಬರಿಗೆ. ಆರ್.ಗಾಂಧಿ ಟೂರ್ಸ್.(ರಿ) 9945445809/ 9902433500

Classifieds



Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement



ಬೀಜಿಂಗ್‌ನ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭಗೊಂಡ ಚಳಿಗಾಲದ ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭದಲ್ಲಿ ಬೆಳಕಿನ ಚಿತ್ತಾರ –ಎಎಫ್‌ಪಿ ಚಿತ್ರ



ಸಮಾರಂಭದಲ್ಲಿ ಭಾರತದ ಧ್ವಜದೊಂದಿಗೆ ಆರಿಫ್ ಮೊಹಮ್ಮದ್ ಖಾನ್ ಮುನ್ನಡೆದರು –ಪಿಟಿಐ ಚಿತ್ರ

ಚಳಿಗಾಲದ ಒಲಿಂಪಿಕ್ಸ್: ಬೆಚ್ಚನೆ ಆರಂಭ

ಬೀಜಿಂಗ್ (ರಾಯಿಟರ್ಸ್): ಇಲ್ಲಿ ಹಕ್ಕಿಗೂಡಿನಂತಹ ವಿನ್ಯಾಸದಲ್ಲಿರುವ ಕ್ರೀಡಾಗ್ರಾಮದಲ್ಲಿ ಶುಕ್ರವಾರ ಚಳಿಗಾಲದ ಒಲಿಂಪಿಕ್ಸ್‌ಗೆ ಸಂಭ್ರಮದ ಆರಂಭ ದೊರೆಯಿತು.

ಉದ್ಘಾಟನೆ ಮತ್ತು ಸಮಾರೋಪ ಸಮಾರಂಭಗಳಿಗೆ ರಾಜತಾಂತ್ರಿಕ ಬಹಿಷ್ಕಾರ ಘೋಷಿಸಿರುವ ಭಾರತದ ಅಥ್ಲೀಟ್ ಅರೀಫ್ ಮೊಹಮ್ಮದ್ ಖಾನ್ ಅವರು ನೆರವು ಸಿಬ್ಬಂದಿಯೊಂದಿಗೆ ಪಥಸಂಚಲನದಲ್ಲಿ ಭಾಗವಹಿಸಿದ್ದರು. ಭಾರತ ಸರ್ಕಾರದ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ದೂರ ಉಳಿದರು.

2008ರ ಒಲಿಂಪಿಕ್ಸ್ ಆಯೋಜಿತವಾಗಿದ್ದ ಹಕ್ಕಿಗೂಡು ಕ್ರೀಡಾಂಗಣದಲ್ಲಿಯೇ ಚಳಿಗಾಲದ ಒಲಿಂಪಿಕ್ಸ್ ಗರಿಗೆದರಿತು.

84 ದೇಶಗಳ ತಂಡಗಳು ಪಥಸಂಚಲನದಲ್ಲಿ ಭಾಗವಹಿಸಿದ್ದವು. ಅದರಲ್ಲಿ ಭಾರತ ತಂಡವು 23ನೇಯದ್ದಾಗಿ ಕಾಲಿಟ್ಟಿತು.

ಅಮೆರಿಕ, ಬ್ರಿಟನ್ ಸೇರಿದಂತೆ ಕೆಲವು ಬಲಿಷ್ಠ ರಾಷ್ಟ್ರಗಳು ಒಲಿಂಪಿಕ್ಸ್‌ಗೆ ಬಹಿಷ್ಕಾರ ಹಾಕಿವೆ. ಚೀನಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯನ್ನು ವಿರೋಧಿಸಿರುವ ಆ ದೇಶಗಳು ಈ ಕ್ರಮ ಕೈಗೊಂಡಿವೆ.

ಗಾಲ್ವನ್ ಕಣಿವೆಯಲ್ಲಿ ಭಾರತದ ಸೇನೆಯೊಂದಿಗೆ ಸಂಘರ್ಷ ನಡೆಸಿದ್ದ ಚೀನಾದ ಸೇನಾಪಡೆಯಲ್ಲಿದ್ದ ಕೀ ಫ್ಯಾಬಿಯೊಗೆ ಕ್ರೀಡಾಜ್ಯೋತಿಯನ್ನು ಹಿಡಿಯುವ ಅವಕಾಶ ಕೊಟ್ಟಿದ್ದನ್ನು ವಿರೋಧಿಸಿ ಭಾರತವೂ ರಾಜತಾಂತ್ರಿಕ ಬಹಿಷ್ಕಾರ ಹಾಕಿತ್ತು.

ಜಮ್ಮು ಮತ್ತು ಕಾಶ್ಮೀರದವರಾದ 31 ವರ್ಷದ ಆರಿಫ್ ಖಾನ್ ಈ ಬಾರಿ ಅರ್ಹತೆ ಗಿಟ್ಟಿಸಿದ ಏಕೈಕ ಕ್ರೀಡಾಪಟುವಾಗಿದ್ದಾರೆ.

ಅವರು ಸ್ಲೆಲಂ ಮತ್ತು ಜೈಂಟ್ ಸ್ಲೆಲಮ್ ವಿಭಾಗಗಳಲ್ಲಿ ಅರ್ಹತೆ ಗಿಟ್ಟಿಸಿದ್ದಾರೆ. ಕೋವಿಡ್ –19 ಪ್ರಸರಣದ ಆತಂಕದ ನಡುವೆ ನಡೆಯುತ್ತಿರುವ ಕೂಟದ ಉದ್ಘಾಟನೆ ಸಮಾರಂಭಕ್ಕೆ ಪ್ರೇಕ್ಷಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಿಟ್ಟಿರಲಿಲ್ಲ. ಸುಮಾರು ಮೂರು ಸಾವಿರ ಕಲಾವಿದರು ಭಾಗವಹಿಸಿದ್ದ ವಿವಿಧ ರಂಗುರಂಗಿನ ಕಾರ್ಯಕ್ರಮಗಳು ನಡೆದವು.

ಸುಶೀಲ್ ಕುಮಾರ್ ಜಾಮೀನು: ಸ್ಪಷ್ಟನೆ ಕೇಳಿದ ಹೈಕೋರ್ಟ್

ನವದೆಹಲಿ (ಪಿಟಿಐ): ಕೊಲೆ ಪ್ರಕರಣದಲ್ಲಿ ಜೈಲು ಸೇರಿರುವ ಒಲಿಂಪಿಯನ್ ಕುಸ್ತಿಪಟು ಸುಶೀಲ್ ಕುಮಾರ್ ಅವರ ಜಾಮೀನು ಅರ್ಜಿಯ ಕುರಿತು ದೆಹಲಿ ಪೊಲೀಸರು ತಮ್ಮ ನಿಲುವು ಸ್ಪಷ್ಟಪಡಿಸಬೇಕೆಂದು ಹೈಕೋರ್ಟ್ ಸೂಚಿಸಿದೆ.

ಛತ್ರಸಾಲಾ ಕ್ರೀಡಾಂಗಣದಲ್ಲಿ ನಡೆದ ಕುಸ್ತಿಪಟುವಿನ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದಲ್ಲಿ ಹೋದ ವರ್ಷ ಮೇ 23ರಂದು ಸುಶೀಲ್ ಅವರನ್ನು ಪೊಲೀಸರು ಬಂಧಿಸಿದ್ದರು.

ಈ ಪ್ರಕರಣದ ಕುರಿತು ಮಾರ್ಚ್ 28ರಂದು ವಿಚಾರಣೆ ನಡೆಯಲಿದೆ.

ಜೂನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಆಗಿದ್ದ ಸಾಗರ್ ಧನಕರ್ ಎಂಬುವವರ ಮೇಲೆ ಸುಶೀಲ್ ಮತ್ತು ಸಂಗಡಿಗರು ಹಲ್ಲೆ ನಡೆಸಿದ್ದರೆಂದು ವರದಿಯಾಗಿತ್ತು. ಹಲ್ಲೆಗೊಳಗಾಗಿದ್ದ ಕುಸ್ತಿಪಟು ಮೃತಪಟ್ಟಿದ್ದರು.

ಮಹಿಳಾ ಐಪಿಎಲ್‌ಗೆ ಚಿಂತನೆ: ಗಂಗೂಲಿ

ನವದೆಹಲಿ (ಪಿಟಿಐ): ಮಹಿಳೆಯರ ಪೂರ್ಣಪ್ರಮಾಣದ ಐಪಿಎಲ್ ಟೂರ್ನಿಯನ್ನು ಆಯೋಜಿಸುವ ಚಿಂತನೆ ನಡೆದಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಅಧ್ಯಕ್ಷ ಸೌರವ್ ಗಂಗೂಲಿ ತಿಳಿಸಿದ್ದಾರೆ.

ಶುಕ್ರವಾರ ಮಾತನಾಡಿದ ಅವರು ಮುಂದಿನ ವರ್ಷವೇ ಇದನ್ನು ಜಾರಿಗೆ ತರಲು ಪ್ರಯತ್ನಿಸಲಾಗುವುದು ಎಂದರು.

ಅಧ್ಯಕ್ಷನಾಗಿ ಮಾಡಬೇಕಿರುವ ಕೆಲಸಗಳನ್ನು ತಾವು ಅಚ್ಚುಕಟ್ಟಾಗಿ ಮಾಡುತ್ತಿರುವುದಾಗಿಯೂ ಅವರು ಹೇಳಿದ್ದಾರೆ.

ಮಂಡಳಿಯ ಕಾರ್ಯದರ್ಶಿ ಜಯ್ ಶಾ, ಜಂಟಿ ಕಾರ್ಯದರ್ಶಿ ಜಯೇಶ್ ಜಾರ್ಜ್ ಮತ್ತು ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರೊಂದಿಗೆ ಇರುವ ಚಿತ್ರವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ನೋಡಿದೆ. ಅದರಲ್ಲಿ ನಾನು ಆಯ್ಕೆ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದ ಚಿತ್ರ ಎಂದು ಹೇಳಲಾಗಿದೆ. ಆದರೆ ಅದು ತಪ್ಪು. ಆಯ್ಕೆ ಸಭೆ ಅದಾಗಿರಲಿಲ್ಲ. ಜಾರ್ಜ್ ಸಮಿತಿಯ ಸದಸ್ಯನೂ ಅಲ್ಲ' ಎಂದು ಗಂಗೂಲಿ ಸ್ಪಷ್ಟಪಡಿಸಿದ್ದಾರೆ.

ಮಂಡಳಿಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು 26 ತಿಂಗಳುಗಳು ಪೂರೈಸಿರುವ ಸಂದರ್ಭದಲ್ಲಿ ಸುದ್ದಿ ಸಂಸ್ಥೆಗೆ ಅವರು ಶುಕ್ರವಾರ ಸಂದರ್ಶನ ನೀಡಿದ್ದಾರೆ.



ಸೌರವ್ ಗಂಗೂಲಿ

'ಅಧ್ಯಕ್ಷನಾಗುವ ಮುನ್ನ ಭಾರತ ತಂಡದ ಆಟಗಾರನಾಗಿ, ನಾಯಕನಾಗಿ ಆಡಿದ್ದೇನೆ. 424 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದೇನೆ ಎಂಬುದನ್ನು ಇಲ್ಲಿ ಎಲ್ಲರಿಗೂ ನೆನಪಿಸಲು ಇಚ್ಛಿಸುತ್ತೇನೆ. ನಾಯಕತ್ವದ ಹೊಣೆಗಾರಿಗೆ ಅರಿತಿರುವೆ' ಎಂದು ಟೀಕಾಕಾರರಿಗೆ ತಿರುಗೇಟು ನೀಡಿದ್ದಾರೆ.

'ಜಯ್ ಶಾ, ಅರುಣ್ ಧುಮಾಲ್ ಮತ್ತು ಜಯೇಶ್ ಅವರು ವಿಶ್ವಾಸಾರ್ಹರು. ಅವರೊಂದಿಗೆ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವೆ. ಅದರಲ್ಲೂ ಎರಡು ವರ್ಷ ಕೋವಿಡ್ ಸಂಕಷ್ಟದ ಕಾಲದಲ್ಲಿಯೂ ಕ್ರಿಕೆಟ್ ಆಡಳಿತ ಕುಸಿಯದಂತೆ ನೋಡಿಕೊಂಡಿದ್ದು ಹೆಗ್ಗಳಿಕೆ' ಎಂದು ವಿವರಿಸಿದರು.

'ಭಾರತ ಟೆಸ್ಟ್ ತಂಡಕ್ಕೆ ಹೊಸ ನಾಯಕನ ಆಯ್ಕೆಯಲ್ಲಿ ಕೆಲವು ಮಾನದಂಡಗಳನ್ನು ನೋಡಲಾಗುತ್ತಿದೆ. ಆಯ್ಕೆ ಸಮಿತಿಯ ಸದಸ್ಯರ ಮನದಲ್ಲಿ ಸಂಭವನೀಯ ಆಟಗಾರನ ಬಗ್ಗೆ ಕಲ್ಪನೆ ಇರಬಹುದೆಂಬ ವಿಶ್ವಾಸವಿದೆ. ಅವರು ಮಂಡಳಿಯ ಪದಾಧಿಕಾರಿಗಳೊಂದಿಗೆ ಚರ್ಚೆ ಮಾಡಬಹುದು' ಎಂದರು.

'ಶ್ರೀಲಂಕಾ ಎದುರಿನ ಟೆಸ್ಟ್ ಸರಣಿ ಆರಂಭಕ್ಕೂ ಮುನ್ನವೇ ರಣಜಿ ಟ್ರೋಫಿ ಟೂರ್ನಿ ಆರಂಭವಾಗಲಿದೆ. ಅದರಲ್ಲಿ ಆಡಲು ಅಜಿಂಕ್ಯ ರಹಾನೆ ಮತ್ತು ಚೇತೇಶ್ವರ್ ಪೂಜಾರ ಅವರಿಗೆ ರಣಜಿಯಲ್ಲಿ ಆಡಲು ಸಲಹೆ ನೀಡಿದ್ದೇನೆ. ಅದರಿಂದ ಅವರು ತಮ್ಮ ಲಯವನ್ನು ಕಂಡುಕೊಳ್ಳಲು ಅನುಕೂಲವಾಗಬಹುದು' ಎಂದರು.

19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್ ಫೈನಲ್: ಇಂಗ್ಲೆಂಡ್ ತಂಡದ ಸವಾಲು

ಭಾರತ ತಂಡಕ್ಕೆ 5ನೇ ಪ್ರಶಸ್ತಿ ಕನಸು

ನಾರ್ತ್ ಸೌಂಡ್, ಆ್ಯಂಟಿಗಾ (ಪಿಟಿಐ): ನಾಲ್ಕು ಬಾರಿಯ ವಿಶ್ವ ಚಾಂಪಿಯನ್ ಭಾರತದ ಯುವಪಡೆಯು ಮತ್ತೊಂದು ಬಾರಿ ಕಿರೀಟ ಧರಿಸುವ ಛಲದಲ್ಲಿದೆ.

ಇಲ್ಲಿಯ ವಿವಿಯನ್ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಯಶ್ ಧುಳ್ ನಾಯಕತ್ವದ ಭಾರತ ತಂಡವು ಇಂಗ್ಲೆಂಡ್ ಎದುರು ಸೆಣಸಲಿದೆ. ಸತತ ನಾಲ್ಕನೇ ಬಾರಿ ಭಾರತವು ಫೈನಲ್ ಪ್ರವೇಶಿಸಿದೆ.

ಭಾರತಕ್ಕೆ ಫೈನಲ್ ಹಾದಿಯು ಸುಗಮವಾಗಿರಲಿಲ್ಲ. ಗುಂಪು ಹಂತದ ಟೂರ್ನಿ ನಡೆದಾಗ ನಾಯಕ ಯಶ್ ಧುಳ್ ಮತ್ತು ನಾಲ್ವರು ಆಟಗಾರರು ಕೋವಿಡ್‌ಗೆ ತುತ್ತಾಗಿದ್ದರು. ಚೇತರಿಸಿಕೊಂಡ ನಂತರ ಮರಳಿದ ಅವರು ಗೆಲುವಿನ ರೂವಾರಿಗಳಾಗಿದ್ದಾರೆ.

ಸೆಮಿಫೈನಲ್‌ನಲ್ಲಿ ಶತಕ ಬಾರಿಸಿದ ಯಶ್ ಮತ್ತು 94 ರನ್ ಗಳಿಸಿದ ಶೇಖ್ ರಶೀದ್ ಜಯದ ಕಾಣಿಕೆ ನೀಡಿದ್ದರು.

ಅವರಲ್ಲದೇ ಆರಂಭಿಕ ಜೋಡಿ ಅಂಗಕ್ರಿಷ್ ರಘುವಂಶಿ ಮತ್ತು ಹರ್ನೂರ್ ಸಿಂಗ್ ಅವರು ಸೆಮಿಫೈನಲ್‌ನಲ್ಲಿ ವೈಫಲ್ಯ ಅನುಭವಿಸಿದ್ದರು.

ಆದರೆ ಟೂರ್ನಿಯಲ್ಲಿ ಅವರು ಉತ್ತಮವಾಗಿ ಆಡಿದ್ದಾರೆ. ಫೈನಲ್‌ನಲ್ಲಿ ತಮ್ಮ ಲಯಕ್ಕೆ ಮರಳುವ ವಿಶ್ವಾಸವಿದೆ.

ಬೌಲಿಂಗ್‌ನಲ್ಲಿ ಮಧ್ಯಮವೇಗಿ ರಾಜವರ್ಧನ್ ಹಂಗರಗೇಕರ್, ಎಡಗೈ ಬೌಲರ್ ರವಿಕುಮಾರ್ ಮತ್ತು ಸ್ಪಿನ್ನರ್ ವಿಕಿ ಓಸ್ವಾಲ್ ಅಮೋಘ ಲಯದಲ್ಲಿದ್ದಾರೆ. ಎದುರಾಳಿ ತಂಡಗಳ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡುವ ಸಾಮರ್ಥ್ಯ ಹೊಂದಿದ್ದಾರೆ. ಅದರಲ್ಲೂ ವಿಕಿ ಓಸ್ವಾಲ್ 12 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಭಾರತ ತಂಡದ ನಿಕಟಪೂರ್ವ ನಾಯಕ ವಿರಾಟ್ ಕೊಹ್ಲಿ ಅವರೂ ತಂಡ ಆಟಗಾರರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಆಟಗಾರರ ಆತ್ಮವಿಶ್ವಾಸ ದುಪ್ಪಟ್ಟಾಗಿದೆ.



ಯಶ್ ಧುಳ್

2008ರಲ್ಲಿ ಭಾರತ ತಂಡವು 19 ವರ್ಷದೊಳಗಿನವರ ವಿಶ್ವಕಪ್ ಗೆದ್ದಾಗ ವಿರಾಟ್ ನಾಯಕರಾಗಿದ್ದರು.ಇಂಗ್ಲೆಂಡ್ ತಂಡವೂ ಇತಿಹಾಸ ಬರೆಯುವ ಛಲದಲ್ಲಿದೆ. 24 ವರ್ಷಗಳ ಪ್ರಶಸ್ತಿ ಬರವನ್ನು ನೀಗಿಸುವತ್ತ ಚಿತ್ತ ನೆಟ್ಟಿದೆ.

ನಾಯಕ ಟಾಮ್ ತಂಡವನ್ನು ಉತ್ತಮವಾಗಿ ಮುನ್ನಡೆಸಿದ್ದಾರೆ. ಅಲ್ಲದೇ 292 ರನ್‌ಗಳನ್ನೂ ಗಳಿಸಿದ್ದಾರೆ. ತಂಡದ ಎಡಗೈ ಮಧ್ಯಮವೇಗಿ ಜೊಶುವಾ ಬಾಯ್ಡೆನ್ 13 ವಿಕೆಟ್‌ಗಳನ್ನು ಗಳಿಸಿದ್ದಾರೆ.

ತಂಡಗಳು

ಭಾರತ: ಯಶ್ ಧುಳ್ (ನಾಯಕ), ಹರ್ನೂರ್ ಸಿಂಗ್, ಅಂಗಕ್ರಿಷ್ ರಘುವಂಶಿ, ಶೇಖ್ ರಶೀದ್, ನಿಶಾಂತ್ ಸಿಂಧು, ಸಿದ್ಧಾರ್ಥ್ ಯಾದವ್, ಅನೀಶ್ವರ್ ಗೌತಮ್, ಮಾನವ್ ಪರಖ್, ಕೌಶಲ್ ತಾಂಬೆ, ರಾಜವರ್ಧನ ಹಂಗರಗೇಕರ್, ವಿಕಿ ಓಸ್ವಾಲ್, ಗರ್ವ್ ಸಂಗ್ವಾನ್, ದಿನೇಶ್ ಬಾನಾ, ಆರಾಧ್ಯ ಯಾದವ್, ರಾಜ್ ಬಾವಾ, ವಾಸು ವತ್ಸ, ರವೀಕುಮಾರ್.

ಇಂಗ್ಲೆಂಡ್: ಟಾಮ್ ಪ್ರಿಸ್ಟ್ (ನಾಯಕ), ಜಾರ್ಜ್ ಬೆಲ್, ಜೊಶುವಾ ಬಾಯ್ಡನ್, ಅಲೆಕ್ಸ್ ಹಾರ್ಟನ್, ರೆಹಾನ್ ಅಹಮದ್, ಜೇಮ್ಸ್ ಸೇಲ್ಸ್, ಜಾರ್ಜ್ ಥಾಮಸ್, ಥಾಮಸ್ ಆಸ್ಪಿನ್‌ವಾಲ್, ನೇಥನ್ ಬಾರ್ನ್‌ವೆಲ್, ಜೇಕಬ್ ಬೆಥೆಲ್, ಜೇಮ್ಸ್ ಕೋಲ್ಸ್, ವಿಲಿಯಮ್ ಲಕ್ಸಟನ್, ಜೇಮ್ಸ್ ರೆವ್, ಫತೇ ಸಿಂಗ್, ಬೆಂಜಮಿನ್ ಕ್ಲಿಫ್



ಟಾಮ್ ಪ್ರಿಸ್ಟ್

ಪಂದ್ಯ ಆರಂಭ: ಸಂಜೆ 6.30

ಈ ಟೂರ್ನಿಯಲ್ಲಿ ನಾಯಕರ ಬಲಾಬಲ

	ಯಶ್ ಧುಳ್ (ಭಾರತ)	ಟಾಮ್ ಪ್ರಿಸ್ಟ್
ಪಂದ್ಯ	3	5
ರನ್	212	292
ಶತಕ	1	1
ಶ್ರೇಷ್ಠ	110	154
ಅರ್ಧಶತಕ	1	1

ವಿಜೇತರು

ದೇಶ	ವರ್ಷ
ಭಾರತ	2000, 2008, 2012, 2018
ಆಸ್ಟ್ರೇಲಿಯಾ	1988, 2002, 2010
ಪಾಕಿಸ್ತಾನ	2004, 2006
ಇಂಗ್ಲೆಂಡ್	1998
ದಕ್ಷಿಣ ಆಫ್ರಿಕಾ	2014
ವೆಸ್ಟ್ ಇಂಡೀಸ್	2016
ಬಾಂಗ್ಲಾದೇಶ	2020

ಹೊನಲು ಬೆಳಕಿನಲ್ಲಿ ರೋಹಿತ್ ಬಳಗದ ಅಭ್ಯಾಸ

ಅಹಮದಾಬಾದ್ (ಪಿಟಿಐ): ಕೊರೊನಾ ಸೋಂಕಿಗೆ ಪ್ರಮುಖ ಆಟಗಾರರು ಒಳಗಾಗಿರುವ ನಡುವೆಯೂ ಭಾರತ ಕ್ರಿಕೆಟ್ ತಂಡವು ಐತಿಹಾಸಿಕ ಏಕದಿನ ಪಂದ್ಯವನ್ನು ಆಡಲು ಸಿದ್ಧವಾಗಿದೆ.

ಭಾನುವಾರ ವೆಸ್ಟ್ ಇಂಡೀಸ್ ವಿರುದ್ಧ ನಡೆಯಲಿರುವ ಏಕದಿನ ಕ್ರಿಕೆಟ್ ಪಂದ್ಯವು ಭಾರತಕ್ಕೆ ಐತಿಹಾಸಿಕ ಒಂದು ಸಾವಿರನೇ ಪಂದ್ಯವಾಗಿದೆ. ಈ ಸಾಧನೆ ಮಾಡಿದ ಮೊದಲ ಕ್ರಿಕೆಟ್ ತಂಡವೆಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ರೋಹಿತ್ ಸರ್ಮಾ ನಾಯಕತ್ವದ ತಂಡದ ಎಲ್ಲ ಆಟಗಾರರೂ ಶುಕ್ರವಾರ ನೆಟ್ಸ್‌ನಲ್ಲಿ ಅಭ್ಯಾಸ ಮಾಡಿದರು.

ಆದರೆ, ಮೂರು ದಿನಗಳ ಹಿಂದೆ ಕೋವಿಡ್ ಸೋಂಕಿಗೊಳಗಾಗಿರುವ ಆರಂಭಿಕ ಬ್ಯಾಟರ್ ಶಿಖರ್ ಧವನ್, ಶ್ರೇಯಸ್ ಅಯ್ಯರ್ ಮತ್ತು ಋತುರಾಜ್ ಗಾಯಕವಾಡ್ ಅವರು ಪ್ರತ್ಯೇಕವಾಸದಲ್ಲಿದ್ದಾರೆ. ಅವರೊಂದಿಗೆ ಕೊರೊನ ಸೋಂಕಿಗೊಳಗಾಗಿರುವ ನೆರವು ಸಿಬ್ಬಂದಿಯೂ ಐಸೋಲೇಷನ್‌ನಲ್ಲಿದ್ದಾರೆ. ನಂತರ ಮೀಸಲು ಆಟಗಾರ ನವದೀಪ್ ಸೈನಿ ಕೂಡ ಸೋಂಕಿಗೊಳಗಾಗಿರುವುದು ಪತ್ತೆಯಾಯಿತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಹೊನಲು ಬೆಳಕಿನಲ್ಲಿ ತಂಡದ ಆಟಗಾರರು ಅಭ್ಯಾಸ ನಡೆಸಿದರು. ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರು ಯುವಸ್ಪಿನ್ನರ್ ರವಿ ಬಿಷ್ಣೋಯಿ ಅವರನ್ನು ತಂಡದ ಉಳಿದ ಆಟಗಾರರಿಗೆ ಪರಿಚಯಿಸಿದರು.

ವಿರಾಟ್ ಕೊಹ್ಲಿ, ರಿಷಭ್ ಪಂತ್ ಮತ್ತಿತರರು ನೆಟ್ಸ್‌ನಲ್ಲಿ ಬ್ಯಾಟಿಂಗ್ ಮಾಡಿದರು. ಚೈನಾಮನ್ ಬೌಲರ್ ಕುಲದೀಪ್ ಯಾದವ್ ಮತ್ತು ಯಜುವೇಂದ್ರ ಚಾಹಲ್ ಬೌಲಿಂಗ್ ಮಾಡಿದರು.



ರೋಹಿತ್ ಶರ್ಮಾ –ಪಿಟಿಐ ಚಿತ್ರ

ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿ

ಖುಷಿ, ಪ್ರಜ್ವಲ್‌ಗೆ ವೈಲ್ಡ್ ಕಾರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಯುವ ಆಟಗಾರರಾದ ಖುಷಿ ರೆಡ್ಡಿ ಮತ್ತು ಎಸ್.ಡಿ ಪ್ರಜ್ವಲ್ ದೇವ್ ಅವರಿಗೆ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಗೆ ವೈಲ್ಡ್ ಕಾರ್ಡ್ ಪ್ರವೇಶ ನೀಡಲಾಗಿದೆ.

ಒಟ್ಟು ಮೂರು ವೈಲ್ಡ್ ಕಾರ್ಡ್‌ಗಳ ಪೈಕಿ ಮೊದಲನೆಯದು ಸಾಕೇತ್ ಮೈನೇನಿ ಅವರ ಪಾಲಾಗಿತ್ತು. ಉಳಿದೆರಡರ ಕುರಿತು ಶುಕ್ರವಾರ ಆಯೋಜಕರು ಮಾಹಿತಿ ನೀಡಿದ್ದಾರೆ. ಕರ್ನಾಟಕ ರಾಜ್ಯ ಲಾನ್ ಟೆನಿಸ್ ಅಂಗಣದಲ್ಲಿ ಸೋಮವಾರದಿಂದ ಟೂರ್ನಿ ನಡೆಯಲಿದೆ.

ಕೆಲವು ತಿಂಗಳ ಹಿಂದೆ ಇದೇ ಅಂಗಣದಲ್ಲಿ ನಡೆದ ಕರ್ನಾಟಕ ಓಪನ್ ಟೂರ್ನಿಯ ₹ 1 ಲಕ್ಷ ಬಹುಮಾನ ಮೊತ್ತವನ್ನು ತಮ್ಮದಾಗಿಸಿಕೊಂಡಿರುವ ಖುಷಿ ಡಿಸೆಂಬರ್‌ನಲ್ಲಿ ಕೊನೆಯದಾಗಿ ಅಂತರರಾಷ್ಟ್ರೀಯ ಪಂದ್ಯದಲ್ಲಿ ಕಣಕ್ಕೆ ಇಳಿದಿದ್ದರು. ಐಟಿಎಫ್ ಎಂ–15 ದೋಹಾ ಟೂರ್ನಿಯಲ್ಲಿ ಅವರು ಆಡಿದ್ದರು.

ಮೈಸೂರಿನವರಾದ ಪ್ರಜ್ವಲ್ ಅವರು ರೋಹನ್ ಬೋಪಣ್ಣ ಟೆನಿಸ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ. 25 ವರ್ಷದ ಆಟಗಾರ 2019ರಲ್ಲಿ ಹರಾರೆಯಲ್ಲಿ ನಡೆದ ಐಟಿಎಫ್ ಟೂರ್ನಿಯ ಡಬಲ್ಸ್ ಪ್ರಶಸ್ತಿ ಗಳಿಸಿದ್ದರು. ಆ ಟೂರ್ನಿಯಲ್ಲಿ ಖುಷಿ, ಅವರ ಜೊತೆಗಾರ ಆಗಿದ್ದರು.



ಪ್ರಜ್ವಲ್ ದೇವ್ –ಪ್ರಜಾವಾಣಿ ಚಿತ್ರ

ನಿಕ್ಕಿ ಪೂಣಚ್ಚ, ಕರಣ್ ಸಿಂಗ್, ಆದಿಲ್ ಕಲ್ಯಾಣಪುರ್ ಮತ್ತು ಅರ್ಜುನ್ ಖಾಡೆ ಅವರಿಗೆ ಅರ್ಹತಾ ಸುತ್ತಿನಲ್ಲಿ ಆಡಲು ವೈಲ್ಡ್ ಕಾರ್ಡ್ ಪ್ರವೇಶ ನೀಡಲಾಗಿದೆ. ಅರ್ಹತಾ ಸುತ್ತಿನ ಪಂದ್ಯಗಳು ಭಾನುವಾರ ಆರಂಭವಾಗಲಿವೆ. ಒಟ್ಟು 24 ಆಟಗಾರರು ಈ ಸುತ್ತಿನಲ್ಲಿ ಆಡಲಿದ್ದು ಈ ಪೈಕಿ ಆರು ಮಂದಿ ಮುಖ್ಯ ಸುತ್ತಿಗೆ ಲಗ್ಗೆ ಇರಲಿಸಲಿದ್ದಾರೆ.

'ವೈಲ್ಡ್ ಕಾರ್ಡ್ ಪ್ರವೇಶ ಪಡೆದಿರುವುದು ರೋಮಾಂಚನವುಂಟುಮಾಡಿದೆ. ಆಯೋಜಕರು ನನ್ನ ಮೇಲೆ ಭರವಸೆ ಇರಿಸಿದ್ದಾರೆ. ಅದಕ್ಕೆ ತಕ್ಕಂತೆ ಸಾಮರ್ಥ್ಯ ಪ್ರದರ್ಶಿಸಲು ಪ್ರಯತ್ನಿಸುವೆ' ಎಂದು ಬಿಬಿಎ ವಿದ್ಯಾರ್ಥಿಯಾಗಿರುವ 23 ವರ್ಷದ ಖುಷಿ ಹೇಳಿದರು.

ವೈಲ್ಡ್ ಕಾರ್ಡ್ ಪ್ರವೇಶ ಪಡೆದಿರುವುದಕ್ಕೆ ಪ್ರಜ್ವಲ್ ಕೂಡ ಖುಷಿ ವ್ಯಕ್ತಪಡಿಸಿದ್ದಾರೆ 'ಇಂಥ ಟೂರ್ನಿಯೊಂದರಲ್ಲಿ ಆಡಲು ಅವಕಾಶ ಲಭಿಸಿರುವುದು ಸಂತಸದ ವಿಷಯ. ನನ್ನ ಸಾಮರ್ಥ್ಯದ ಮೇಲೆ ಭರವಸೆ ಇರಿಸಿಕೊಂಡಿರುವುದಕ್ಕೆ ಆಯೋಜಕರಿಗೆ ಧನ್ಯವಾದ ಹೇಳಲೇಬೇಕು. ನಾನು ಫಿಟ್‌ನೆಸ್ ಕಡೆಗೆ ಹೆಚ್ಚು ಗಮನ ನೀಡುತ್ತಿದ್ದೇನೆ. ಬೆಂಗಳೂರು ಓಪನ್‌ನಲ್ಲಿ ಪ್ರಬಲ ಪೈಪೋಟಿ ಎದುರಾಗಲಿದೆ. ಆದರೂ ಸಹಜ ಶೈಲಿಯಲ್ಲಿ ಆಡಿ ಯಶಸ್ವಿಯಾಗಲು ಪ್ರಯತ್ನಿಸುವೆ' ಎಂದು ತಿಳಿಸಿದ್ದಾರೆ.

ಪ್ರೊ ಕಬಡ್ಡಿ: ಟೈ ಪಂದ್ಯದಲ್ಲಿ ದಬಂಗ್ ಡೆಲ್ಲಿ ತಂಡ

ಸೋಲು ತಪ್ಪಿಸಿಕೊಂಡ ಬುಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಬಂಗ್ ಡೆಲ್ಲಿ ಮತ್ತು ಬೆಂಗಳೂರು ಬುಲ್ಸ್ ತಂಡದ ನಾಯಕರ ಜಿದ್ದಾಜಿದ್ದಿಯ ಆಟದ ಫಲವಾಗಿ ಪ್ರೊ ಕಬಡ್ಡಿ ಪಂದ್ಯವು 36–36ರ ಟೈನಲ್ಲಿ ಮುಕ್ತಾಯವಾಯಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡದ ನಾಯಕ ಪವನ್ ಶೆರಾವತ್ 17 ಮತ್ತು ಡೆಲ್ಲಿ ತಂಡದ ನಾಯಕ ನವೀನ್ ಕುಮಾರ್ 13 ಅಂಕಗಳನ್ನು ಗಳಿಸಿದರು.

ಅರ್ಧವಿರಾಮದ ವೇಳೆ ಡೆಲ್ಲಿ ತಂಡವು 18–14ರಿಂದ ಮುನ್ನಡೆಯಲ್ಲಿತ್ತು. ಆದರೆ ವಿರಾಮದ ನಂತರ ಪವನ್ ಮಿಂಚಿದರು.

ಇದರಿಂದಾಗಿ ಎರಡನೇ ಅವಧಿಯಲ್ಲಿ ಬುಲ್ಸ್ ತಂಡವು 22 ಅಂಕಗಳನ್ನು ಗಳಿಸಿದರೆ,

ಇನ್ನೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 46–29ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಜಯಿಸಿತು. ಹರಿಯಾಣ ತಂಡದ ನಾಯಕ ವಿಕಾಶ್ ಖಂಡಾಲ 10 ಮತ್ತು ಬೆಂಗಾಲ್ ತಂಡದ ನಾಯಕ ಮಣಿಂದರ್ ಸಿಂಗ್ 13 ಅಂಕಗಳನ್ನು ಗಳಿಸಿದ್ದಾರೆ. ಮೂರನೇ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ 43–23ರಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ ಗೆದ್ದಿತು.

ಇಂದಿನ ಪಂದ್ಯಗಳು

ಯು ಮುಂಬಾ–ತಮಿಳ್ ತಲೈವಾಸ್
ಆರಂಭ: ರಾತ್ರಿ 7.30

ಯು.ಪಿ.ಯೋಧಾ–ತೆಲುಗು ಟೈಟನ್ಸ್ ಆರಂಭ: ರಾತ್ರಿ 8.30

ಜೈಪುರ್ ಪಿಂಕ್ ಪ್ಯಾಂಥರ್ಸ್–ಹರಿಯಾಣ ಸ್ಟೀಲರ್ಸ್
ಆರಂಭ: ರಾತ್ರಿ 9.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಪಾಯಿಂಟ್ಸ್ ಪಟ್ಟಿ


ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	17	9	5	3	57
ಪಟ್ನಾ ಪೈರೇಟ್ಸ್	15	10	4	1	55
ಬೆಂಗಳೂರು ಬುಲ್ಸ್	18	9	7	2	54
ಹರಿಯಾಣ ಸ್ಟೀಲರ್ಸ್	16	7	6	3	48
ಜೈಪುರ ಪಿಂಕ್ ಪ್ಯಾಂಥರ್ಸ್	15	7	6	2	45
ತಮಿಳ್ ತಲೈವಾಸ್	15	5	4	6	44
ಯು. ಮುಂಬಾ	15	5	5	5	43
ಯುಪಿ ಯೋಧಾ	16	5	8	3	42
ಪುಣೇರಿ ಪಲ್ಟನ್	15	8	7	-	42
ಬೆಂಗಾಲ್ ವಾರಿಯರ್ಸ್	16	7	8	1	41
ಗುಜರಾತ್ ಜೈಂಟ್ಸ್	15	5	7	3	38
ತೆಲುಗು ಟೈಟನ್ಸ್	15	1	11	3	22

(ಶುಕ್ರವಾರದ ಪಂದ್ಯಗಳ ಅಂತ್ಯಕ್ಕೆ)

ಕೋವಿಡ್: ದೇಶದಲ್ಲಿ 5 ಲಕ್ಷ ದಾಟಿದ ಮೃತರ ಸಂಖ್ಯೆ

ನವದೆಹಲಿ (ಪಿಟಿಐ): ಭಾರತದಲ್ಲಿ ಕೋವಿಡ್ ಪಿಡುಗಿನಿಂದ ಮೃತಪಟ್ಟವರ ಸಂಖ್ಯೆ ಗುರುವಾರ 5 ಲಕ್ಷ ದಾಟಿದೆ. ವಿಶ್ವದಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆಯನ್ನು ಹೋಲಿಸಿದರೆ ಭಾರತ ಮೂರನೇ ಸ್ಥಾನದಲ್ಲಿದೆ. ಅಮೆರಿಕ ಮತ್ತು ಬ್ರೆಜಿಲ್ ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನದಲ್ಲಿವೆ.

ಕಳೆದ ವರ್ಷ ಜುಲೈ 1ರಂದು ದೇಶದಲ್ಲಿ ಕೋವಿಡ್ ಪಿಡುಗಿನಿಂದ ಮೃತಪಟ್ಟವರ ಸಂಖ್ಯೆ 4 ಲಕ್ಷ ದಾಟಿತ್ತು. ನಂತರದ 217 ದಿನಗಳಲ್ಲಿ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 5 ಲಕ್ಷ ಮೀರಿದೆ.



ಕಳೆದ ವರ್ಷದ ಏಪ್ರಿಲ್- ಮೇ ತಿಂಗಳಲ್ಲಿ ಭಾರತವು ಕೋವಿಡ್‌ನ ಎರಡನೇ ಅಲೆ ಎದುರಿಸಿತ್ತು. ಏಪ್ರಿಲ್‌ನಲ್ಲಿ 2 ಲಕ್ಷದಷ್ಟಿದ್ದ ಮೃತರ ಸಂಖ್ಯೆ, ಮೇ ತಿಂಗಳಿನಲ್ಲಿ 3 ಲಕ್ಷ ದಾಟಿತ್ತು. 2020ರ ಅಕ್ಟೋಬರ್ 2ರಂದು ಸಾವಿನ ಸಂಖ್ಯೆ ಒಂದು ಲಕ್ಷದಷ್ಟಿತ್ತು.

ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ದೇಶದಲ್ಲಿ 1,072 ಜನರು ಸೋಂಕಿನಿಂದ ಮೃತಪಟ್ಟದ್ದಾರೆ. ಈ ಮೂಲಕ ಒಟ್ಟಾರೆ ಮೃತರ ಸಂಖ್ಯೆ 5,00,055ಕ್ಕೆ ಏರಿಕೆ ಆದಂತಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ಅಮೆರಿಕದಲ್ಲಿ ಅತ್ಯಧಿಕವಾಗಿ ಅಂದರೆ 9.2 ಲಕ್ಷಕ್ಕೂ ಹೆಚ್ಚು ಜನರು ಸೋಂಕಿನಿಂದ ಮೃತಪಟ್ಟಿದ್ದಾರೆ. ನಂತರದ ಸ್ಥಾನದಲ್ಲಿ ಬ್ರೆಜಿಲ್ (6.3 ಲಕ್ಷ ಜನರ ಸಾವು) ಇದೆ.

ಪರಿಹಾರ: ಆಫ್‌ಲೈನ್ ಅರ್ಜಿಯನ್ನೂ ಪರಿಗಣಿಸಲು ಸೂಚನೆ

ನವದೆಹಲಿ (ಪಿಟಿಐ): ಕೋವಿಡ್‌ನಿಂದಾಗಿ ಮೃತಪಟ್ಟವರ ಕುಟುಂಬಗಳ ಸದಸ್ಯರು ಪರಿಹಾರ ಕೋರಿ ಆಫ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳನ್ನು ಸಹ ಪರಿಗಣಿಸಬೇಕು ಎಂದು ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ಅರ್ಜಿ ಸ್ವೀಕೃತಗೊಂಡ ನಂತರ, ಗರಿಷ್ಠ 10 ದಿನಗಳ ಒಳಗಾಗಿ ಪರಿಹಾರ ಪಾವತಿಗೆ ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವಂತೆ ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಬಿ.ವಿ.ನಾಗರತ್ನಾ ಅವರಿದ್ದ ನ್ಯಾಯಪೀಠ ಸೂಚಿಸಿತು. ಆಫ್‌ಲೈನ್ ಮೂಲಕ ಸಲ್ಲಿಸಲಾಗಿದ್ದ ಅರ್ಜಿಗಳನ್ನು ತಿರಸ್ಕರಿಸಿದ್ದ ಮಹಾರಾಷ್ಟ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, 'ನೀವು ಸಮಾಜ ಸೇವೆ ಮಾಡುತ್ತಿಲ್ಲ. ಒಂದು ಕಲ್ಯಾಣರಾಜ್ಯವಾಗಿ ಪರಿಹಾರ ನೀಡುವುದು ನಿಮ್ಮ ಕರ್ತವ್ಯ. ಸಂತ್ರಸ್ತರನ್ನು ಕಚೇರಿಯಿಂದ ಕಚೇರಿಗೆ ಏಲೆ ಅಲೆದಾಡಿಸುತ್ತೀರಿ' ಎಂದು ಚಾಟಿ ಬೀಸಿತು.

'ಕೆಲ ಪ್ರಕರಣಗಳಲ್ಲಿ ಕೋವಿಡ್–19 ಸಂತ್ರಸ್ತರ ಕುಟುಂಬಗಳಿಗೆ ನೀಡಿರುವ ಚೆಕ್‌ಗಳು ನಗದೀಕರಣಗೊಳ್ಳುತ್ತಿಲ್ಲ' ಎಂಬ ವಿಷಯವಾಗಿ ಕರ್ನಾಟಕ ಸರ್ಕಾರವನ್ನೂ ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, ಚೆಕ್‌ಗಳು ತಿರಸ್ಕೃತಗೊಳ್ಳುತ್ತಿರುವುದಕ್ಕೆ ಕಾರಣ ಪತ್ತೆ ಹಚ್ಚುವಂತೆ ಸೂಚಿಸಿತು.

ಪರಿಹಾರ ವಿತರಣೆಗೆ ನೆರವಾಗಲು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ (ಎಸ್‌ಎಲ್‌ಎಸ್‌ಎ) ಸದಸ್ಯ ಕಾರ್ಯದರ್ಶಿಯೊಂದಿಗೆ ಸಮನ್ವಯ ಸಾಧಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸುವಂತೆ ಎಲ್ಲ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿತು.

ವಾರದೊಳಗೆ ಎಲ್ಲ ರಾಜ್ಯ ಸರ್ಕಾರಗಳು ಮೃತರ ಹೆಸರು, ವಿಳಾಸ, ಮರಣ ಪ್ರಮಾಣಪತ್ರ ಸೇರಿದಂತೆ ಎಲ್ಲ ವಿವರಗಳನ್ನು, ಅನಾಥರಾದವರ ಪೂರ್ಣ ಮಾಹಿತಿಯನ್ನು ಎಸ್‌ಎಲ್‌ಎಸ್‌ಎಗೆ ನೀಡಬೇಕು. ತಪ್ಪಿದಲ್ಲಿ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿತು.

ರಾಜ್ಯ ಕೋವಿಡ್ ಅಂಕಿ–ಅಂಶ

38,75,724 ▲ ಒಟ್ಟು ಸೋಂಕಿತರು (38,60,774 ನಿನ್ನೆಯ ವಿವರ)

1,23,098 ▼ ಸಕ್ರಿಯ ಪ್ರಕರಣಗಳು

37,13,343 ▲ ಗುಣಮುಖರಾದವರು

39,250 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	14,950	▼
ಗುಣಮುಖ	40,599	▼
ಸಾವು	53	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸಕ್ರಿಯ ಪ್ರಕರಣ 1.23 ಲಕ್ಷಕ್ಕೆ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, ಸದ್ಯ 1.23 ಲಕ್ಷ ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಒಂದು ದಿನದ ಅವಧಿಯಲ್ಲಿ 1.36 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಹೊಸದಾಗಿ 14,950 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಶೇ 10.93ಕ್ಕೆ ಇಳಿಕೆಯಾಗಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 38.75 ಲಕ್ಷಕ್ಕೆ ಏರಿಕೆಯಾಗಿದೆ. 24 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರು ಅಂಕಿಯಲ್ಲಿ ಇದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, 6,039 ಮಂದಿ ಸೋಂಕಿತರಾಗಿದ್ದಾರೆ. ಬೆಳಗಾವಿಯಲ್ಲಿ 1,018, ಮೈಸೂರಿನಲ್ಲಿ 944, ತುಮಕೂರಿನಲ್ಲಿ 656, ಹಾಸನದಲ್ಲಿ 560 ಹಾಗೂ ಶಿವಮೊಗ್ಗದಲ್ಲಿ 543 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ಇವೆ.ಸೋಂಕಿತರಲ್ಲಿ ಬೆಂಗಳೂರಿನಲ್ಲಿ 25,904 ಮಂದಿ ಚೇತರಿಸಿಕೊಂಡಿದ್ದಾರೆ.

ದೆಹಲಿ: ಫೆ.7ರಿಂದ ಕಾಲೇಜು ಆರಂಭ

ನವದೆಹಲಿ: ಕೋವಿಡ್ ಪ್ರಕರಣಗಳಲ್ಲಿ ಇಳಿಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಫೆಬ್ರುವರಿ 7ರಿಂದ (ಸೋಮವಾರ) ಶಾಲಾ– ಕಾಲೇಜುಗಳಲ್ಲಿ ಭೌತಿಕ ತರಗತಿಗಳು ಪುನರಾರಂಭಿಸಲು ಹಾಗೂ ಕಚೇರಿಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಲು ದೆಹಲಿ ಸರ್ಕಾರ ಅನುಮತಿ ನೀಡಿದೆ. ಮುಂದಿನ ವಾರದಿಂದ ಜಿಮ್, ಈಜುಕೊಳ ಮತ್ತು ಸ್ಪಾಗಳನ್ನು ತೆರೆಯಲು ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರ (ಡಿಡಿಎಂಎ) ಒಪ್ಪಿಗೆ ನೀಡಿದೆ. 9ರಿಂದ 12ನೇ ವರೆಗಿನ ತರಗತಿಗಳನ್ನು ಫೆಬ್ರುವರಿ 7ರಿಂದ ತೆರೆಯಲಾಗುವುದು. ನರ್ಸರಿಯಿಂದ 8ರವರೆಗಿನ ತರಗತಿಗಳು ಫೆ. 14ರಿಂದ ತೆರೆಯಲಿವೆ ಎಂದು ದೆಹಲಿಯ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ತಿಳಿಸಿದ್ದಾರೆ.

1.49 ಲಕ್ಷ ಜನರಿಗೆ ಕೋವಿಡ್ ದೃಢ (ನವದೆಹಲಿ): ದೇಶದಾದ್ಯಂತ ಶುಕ್ರವಾರ ಬೆಳಿಗ್ಗೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಹೊಸದಾಗಿ 1,49,394 ಕೋವಿಡ್ ಪ್ರಕರಣಗಳು ದೃಢಪಡಟ್ಟಿವೆ. ಈ ಅವಧಿಯಲ್ಲಿ 1,072 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಸದ್ಯ ದೇಶದ ಪಾಸಿಟಿವಿಟಿ ದರ ಶೇ 9.27ರಷ್ಟಿದೆ. ದೇಶದಲ್ಲಿ ಒಟ್ಟಾರೆ 14,35,569 ಸಕ್ರಿಯ ಪ್ರಕರಣಗಳಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ನಿಯಮ ಉಲ್ಲಂಘನೆ: ಭಾರತೀಯ ಮಹಿಳೆಗೆ ಜೈಲು

ಸಿಂಗಪುರ (ಪಿಟಿಐ): ಸಿಂಗಪುರದಲ್ಲಿ ಕೋವಿಡ್ ವ್ಯಾಪಕವಾಗಿದ್ದ ಸಂದರ್ಭದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ವಿಧಿಸಿದ್ದ ನಿಯಮಗಳನ್ನು ಉಲ್ಲಂಘಿಸಿ ಮದ್ಯಪಾನ ಮಾಡಲು ತನ್ನ ಸ್ನೇಹಿತರ ಭೇಟಿಗಾಗಿ ಹಲವು ಬಾರಿ ಮನೆಯಿಂದ ಹೊರಗೆ ಹೋಗಿದ್ದ ಭಾರತೀಯ ಮೂಲದ ಮಹಿಳೆಯೊಬ್ಬರಿಗೆ 10 ವಾರಗಳ ಸೆರೆವಾಸ ವಿಧಿಸಲಾಗಿದೆ.

ಕೋವಿಡ್ ನಿಯಮ ಉಲ್ಲಂಘನೆಯ ಆರೋಪ ಸಾಬೀತಾದ ಕಾರಣ 37 ವರ್ಷದ ಲೆಚಿಮಿ ಅವರಿಗೆ ಶಿಕ್ಷೆ ವಿಧಿಸಲಾಗಿದೆ. ಅವರು ತಪ್ಪನ್ನು ಒಪ್ಪಿಕೊಂಡಿದ್ದಾರೆ ಎಂದು ಸ್ಟ್ರೈಟ್ಸ್ ಟೈಮ್ಸ್ ಪತ್ರಿಕೆಯ ವರದಿಯೊಂದು ಹೇಳಿದೆ.

ನೀಲಿ ಚಿತ್ರ ಪ್ರಕರಣ: ಶೆರ್ಲಿನ್‌ಗೆ 'ಸುಪ್ರೀಂ' ರಕ್ಷಣೆ

ನವದೆಹಲಿ(ಪಿಟಿಐ): ಅಶ್ಲೀಲ ಚಿತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ನಟಿ ಶೆರ್ಲಿನ್ ಚೋಪ್ರಾ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಬಂಧನದಿಂದ ರಕ್ಷಣೆ ನೀಡಿದೆ.

ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿದ ಬಾಂಬೆ ಹೈಕೋರ್ಟ್ ಆದೇಶದ ವಿರುದ್ಧ ಶೆರ್ಲಿನ್ ಚೋಪ್ರಾ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿನೀತ್ ಸರನ್ ಮತ್ತು ಅನಿರುದ್ಧ ಬೋಸ್ ಅವರಿದ್ದ ಪೀಠ, ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ತೆಗೆದುಕೊಳ್ಳಬಾರದು ಎಂದು ಮಹಾರಾಷ್ಟ್ರದ ಸರ್ಕಾರಕ್ಕೆ ಸೂಚಿಸಿದೆ. ಚೋಪ್ರಾ ಪರ ವಕೀಲ ಸುನೀಲ್ ಫರ್ನಾಂಡಿಸ್ ವಾದ ಮಂಡಿಸಿದರು.

ನೀಲಿ ಚಿತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್‌ನಲ್ಲಿ ನಟಿ ಪೂನಂ ಪಾಂಡೆ ಅವರೊಂದಿಗೆ ಶೆರ್ಲಿನ್ ಚೋಪ್ರಾ ಅವರನ್ನು ಆರೋಪಿಯನ್ನಾಗಿ ಮಾಡಲಾಗಿತ್ತು. ಪೂನಂ ಪಾಂಡೆ ಅವರಿಗೆ ಸುಪ್ರೀಂ ಕೋರ್ಟ್ ಬಂಧನದಿಂದ ರಕ್ಷಣೆ ನೀಡಿತ್ತು.

'ಸೇವೆಯ ದಾಖಲೆಗಳ ಆಧಾರದಲ್ಲಿ ಅಕಾಲಿಕ ನಿವೃತ್ತಿ ಆದೇಶ'

ನವದೆಹಲಿ: ಉದ್ಯೋಗಿಯೊಬ್ಬರು ಸಲ್ಲಿಸಿದ ಸೇವೆಗೆ ಸಂಬಂಧಿಸಿದ ದಾಖಲೆಗಳ ಆಧಾರದಲ್ಲಿಯೇ ಅವರ ಅಕಾಲಿಕ ನಿವೃತ್ತಿ ಕುರಿತ ಆದೇಶ ಹೊರಡಿಸಬೇಕು ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ವಿ.ರಾಮಸುಬ್ರಮಣಿಯನ್ ಅವರಿದ್ದ ನ್ಯಾಯಪೀಠ ಈ ತೀರ್ಪು ನೀಡಿದೆ.

ಕಾನ್‌ಸ್ಟೆಬಲ್‌ವೊಬ್ಬರಿಗೆ ಸಿಐಎಸ್‌ಎಫ್ ಅಕಾಲಿಕ ನಿವೃತ್ತಿ ನೀಡಿದ್ದನ್ನು ರದ್ದುಪಡಿಸಿ ದೆಹಲಿ ಹೈಕೋರ್ಟ್ ಆದೇಶಿಸಿತ್ತು. ಹೈಕೋರ್ಟ್‌ನ ಈ ಆದೇಶವನ್ನು ಪ್ರಶ್ನಿಸಿ ಸಿಐಎಸ್‌ಎಫ್ ಮೇಲ್ಮನವಿ ಸಲ್ಲಿಸಿತ್ತು.

ದೆಹಲಿ ಹೈಕೋರ್ಟ್‌ನ ಆದೇಶವನ್ನು ರದ್ದು ಮಾಡಿದ ನ್ಯಾಯಪೀಠ, 'ಉದ್ಯೋಗಿಯ ಸೇವಾ ದಾಖಲೆಗಳನ್ನು ಆಧರಿಸಿ ಕಡ್ಡಾಯ ನಿವೃತ್ತಿ ನೀಡುವ ಅಧಿಕಾರದ ವಿಷಯದಲ್ಲಿ ನ್ಯಾಯಾಲಯಗಳು ಹಸ್ತಕ್ಷೇಪ ಮಾಡಬಾರದು' ಎಂದು ಅಭಿಪ್ರಾಯಪಟ್ಟಿತು.

ಸಿಐಎಸ್‌ಸಿಇ: ಮೊದಲ ಸೆಮಿಸ್ಟರ್ ಫಲಿತಾಂಶ 7ಕ್ಕೆ ಪ್ರಕಟ

ನವದೆಹಲಿ (ಪಿಟಿಐ): ಕೌನ್ಸಿಲ್ ಫಾರ್ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ (ಸಿಐಎಸ್‌ಸಿಇ) 10 ಮತ್ತು 12ನೇ ತರಗತಿಯ ಮೊದಲ ಹಂತದ (ಸೆಮಿಸ್ಟರ್) ಬೋರ್ಡ್ ಪರೀಕ್ಷೆಯ ಫಲಿತಾಂಶವನ್ನು ಇದೇ 7ರಂದು ಪ್ರಕಟಿಸಲಿದೆ ಎಂದು ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಗೆರ್ರಿ ಅರಾಥೂನ್ ಶುಕ್ರವಾರ ತಿಳಿಸಿದ್ದಾರೆ. ಕಳೆದ ವರ್ಷ ನವೆಂಬರ್ 29ರಿಂದ ಡಿಸೆಂಬರ್ 16ರವರೆಗೆ 10ನೇ ತರಗತಿಯ (ಐಸಿಎಸ್‌ಇ) ಹಾಗೂ ನವೆಂಬರ್ 22ರಿಂದ ಡಿಸೆಂಬರ್ 20ರವರೆಗೆ 12ನೇ ತರಗತಿಯ (ಐಎಸ್‌ಸಿ) ಸೆಮಿಸ್ಟರ್ ಪರೀಕ್ಷೆಗಳು ಜರುಗಿದ್ದವು.

ಏಳು ತಂಡಗಳ ಹಣಾಹಣಿ: ಒಟ್ಟು 24 ಪಂದ್ಯಗಳಲ್ಲಿ ಅಂತರರಾಷ್ಟ್ರೀಯ ಆಟಗಾರರೂ ಭಾಗಿ

ಇಂದಿನಿಂದ ವಾಲಿಬಾಲ್ ರೋಮಾಂಚನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಭಾವಂತ ಯುವ ಆಟಗಾರರನ್ನು ಹೊಂದಿರುವ ತಂಡಗಳು ಪ್ರೈಮ್ ವಾಲಿಬಾಲ್ ಲೀಗ್‌ನ ಪ್ರಶಸ್ತಿ ಮೇಲೆ ಕಣ್ಣಿಟ್ಟಿವೆ. ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಲೀಗ್‌ನ ಪಂದ್ಯಗಳು ಶನಿವಾರ ಆರಂಭವಾಗಲಿವೆ.

ಲೀಗ್‌ನಲ್ಲಿ ಏಳು ತಂಡಗಳಾದ ಅಹಮದಾಬಾದ್ ಡಿಫೆಂಡರ್ಸ್, ಬೆಂಗಳೂರು ಟಾರ್ಪೆಡೊಸ್, ಕ್ಯಾಲಿಕಟ್ ಹೀರೋಸ್, ಚೆನ್ನೈ ಬ್ಲಿಟ್ಸ್, ಹೈದರಾಬಾದ್ ಬ್ಲ್ಯಾಕ್ ಹಾಕ್ಸ್, ಕೊಚ್ಚಿ ಬ್ಲೂ ಸ್ಪೈಕರ್ಸ್ ಮತ್ತು ಕೋಲ್ಕತ್ತ ಥಂಡರ್ ಬೋಲ್ಟ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯಗಳು ಬಯೊಬಬಲ್‌ನಲ್ಲಿ, ಕೋವಿಡ್-19ರ ನಿಯಮಗಳನ್ನು ಪಾಲಿಸಿಕೊಂಡು ಫೆಬ್ರವರಿ 27ರ ವರೆಗೆ ನಡೆಯಲಿವೆ ಎಂದು ಆಯೋಜಕರು ತಿಳಿಸಿದ್ದಾರೆ.

ಒಟ್ಟು 24 ಪಂದ್ಯಗಳು ನಡೆಯಲಿದ್ದು ಮೊದಲ ಪಂದ್ಯದಲ್ಲಿ ಹೈದರಾಬಾದ್ ಬ್ಲ್ಯಾಕ್ ಹಾಕ್ಸ್ ಮತ್ತು ಕೊಚ್ಚಿ ಬ್ಲೂ ಸ್ಪೈಕರ್ಸ್ ಸೆಣಸಲಿವೆ. ಎಲ್ಲ ತಂಡಗಳು ಪರಸ್ಪರ ಒಮ್ಮೆ ಮುಖಾಮುಖಿಯಾಗಲಿವೆ. ನಾಕೌಟ್ ಹಣಾಹಣಿ ಫೆಬ್ರುವರಿ 24 ಮತ್ತು 25ರಂದು ನಡೆಯಲಿವೆ.

ಬೆಂಗಳೂರಿಗೆ ರಂಜಿತ್–ಪಂಕಜ್ ಬಲ

ಬೆಂಗಳೂರು ಟಾರ್ಪೆಡೊಸ್ ತಂಡವು ಅನುಭವಿ ಆಟಗಾರರಾದ ರಂಜಿತ್ ಸಿಂಗ್ (ನಾಯಕ ಮತ್ತು ಸೆಟ್ಟರ್) ಹಾಗೂ ಪಂಕಜ್ ಶರ್ಮಾ (ಅಟ್ಯಾಕರ್) ಅವರನ್ನು ಹೊಂದಿದ್ದು ಅಮೆರಿಕದ ನೋಹ್ ಟೈಟಾನೊ ಮತ್ತು ಕೇಯ್ಲ್ ಫ್ರೆಂಡ್ (ಅಟ್ಯಾಕರ್) ಅವರ ಬೆಂಬಲವಿದೆ. ರೋಹಿತ್ ಪಿ, ವರುಣ್ ಜಿ.ಎಸ್, ಬಿ.ಮಿಥುನ್ ಕುಮಾರ್, ಸಾರಂಗ್ ಶಾಂತಿಲಾಲ್, ಲವಮೀತ್ ಕಟಾರಿಯಾ, ಸೃಜನ್ ಯು ಶೆಟ್ಟಿ, ರಂಜಿತ್ ಸಿಂಗ್, ವಿನಾಯಕ ರೋಖಡೆ ಮತ್ತು ಗಣೇಶ್ ಕೆ ತಂಡಕ್ಕೆ ಬಲ ತುಂಬಿದ್ದಾರೆ.

ಹೈದರಾಬಾದ್ –ಕೊಚ್ಚಿ ಮುಖಾಮುಖಿ

ಆತಿಥೇಯ ಹೈದರಾಬಾದ್ ಬ್ಲ್ಯಾಕ್ ಹಾಕ್ಸ್ ತಂಡದಲ್ಲಿ ಅಟ್ಯಾಕರ್ ಅಮಿತ್ ಗುಲಿಯಾ ಪ್ರಮುಖ ಆಕರ್ಷಣೆ. ಅವರಿಗೆ ಸೆಟ್ಟರ್‌ಗಳಾದ ಹರಿಹರನ್ ವಿ ಮತ್ತು ವಿಪುಲ್ ಕುಮಾರ್ ಅವರ ಬೆಂಬಲವಿದೆ.

ಅಂತರರಾಷ್ಟ್ರೀಯ ಆಟಗಾರರಾದ ವೆನಿಜುವೆಲಾದ ಆ್ಯಂಟೊನಿಯೊ ಎರಿಯಾಸ್ ಗಜ್ಮಾನ್ ಮತ್ತು ಕ್ಯೂಬಾದ ಹೆನ್ರಿ ಬೆಲ್ (ಅಟ್ಯಾಕರ್) ತಂಡದ ಪ್ರಮುಖ ಶಕ್ತಿ. ರೋಹಿತ್ ಕುಮಾರ್, ಜಾರ್ಜ್ ಆ್ಯಂಟನಿ, ಆನಂದ್ ಕೆ, ಸುಧೀರ್ ಶೆಟ್ಟಿ, ಜಾನ್ ಜೋಸೆಫ್ ಇಜೆ, ಜಿಷ್ಣು ಪಿ.ವಿ, ಪ್ರಫುಲ್ ಎಸ್ ಮತ್ತು ಎಸ್‌ವಿ ಗುರುಪ್ರಶಾಂತ್ ಈ ತಂಡದ ಪ್ರಮುಖ ಆಟಗಾರರು.

ಭಾರತ ತಂಡದ ನಾಯಕರಾಗಿದ್ದ ಕರ್ನಾಟಕದ ಕಾರ್ತಿಕ್ ಮಧು (ಮಿಡ್ಲ್ ಬ್ಲಾಕರ್) ಕೊಚ್ಚಿ ಬ್ಲೂ ಸ್ಪೈಕರ್ಸ್ ತಂಡವನ್ನು ಮುನ್ನಡೆಸಲಿದ್ದಾರೆ. ಅವರಿಗೆ ಮಿಡ್ಲ್ ಬ್ಲಾಕರ್, ಅನುಭವಿ ದೀಪಕ್ ಕುಮಾರ್ ಸಿನ್ಹಾ ಸಾಥ್ ಅವರ ಸಹಕಾರವಿದೆ. ಅಮೆರಿಕದ ಕಾಲ್ಟನ್ ಕೊವೆಲ್ (ಅಟ್ಯಾಕರ್) ಮತ್ತು ಕೊಡಿ ಕಾಲ್ಡ್‌ವೆಲ್ (ಅಟ್ಯಾಕರ್) ತಂಡವನ್ನು ಬಲಿಷ್ಠಗೊಳಿಸಿದ್ದಾರೆ. ರೈಸನ್ ಬೆನೆಟ್ ರೆಬೆಲ್ಲೊ, ಸೇತು ಟಿ.ಆರ್, ಎರಿನ್ ವರ್ಗೀಸ್, ದರ್ಶನ್ ಎಸ್ ಗೌಡ, ಸಿ.ವೇಣು, ಅಭಿನವ್ ಬಿ.ಎಸ್, ದುಷ್ಯಂತ್ ಜಿ.ಎಸ್, ಪ್ರಶಾಂತ್ ಕುಮಾರ್ ಸರೋಹ, ಅಶಾಮ್ ಎ ಮತ್ತು ಅಬ್ದುಲ್ ರಹೀಮ್ ಕೂಡ ತಂಡದಲ್ಲಿದ್ದಾರೆ.

ಆರಂಭ: ರಾತ್ರಿ 7.00; ನೇರ ಪ್ರಸಾರ: ಸೋನಿ ನೆಟ್‌ವರ್ಕ್

ಬಿಎಫ್‌ಸಿಗೆ ಹ್ಯಾಟ್ರಿಕ್ ನಿರೀಕ್ಷೆ

ಇಂಡಿಯನ್ ಸೂಪರ್ ಲೀಗ್ ಟೂರ್ನಿ: ಜೆಎಫ್‌ಸಿ ಎದುರಾಳಿ

ಬ್ಯಾಂಬೊಲಿಮ್ (ಪಿಟಿಐ): ಅಗ್ರ ನಾಲ್ಕರ ಘಟ್ಟದಲ್ಲಿ ಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಳ್ಳುವ ಪ್ರಯತ್ನದಲ್ಲಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಮತ್ತು ಜೆಮ್ಶೆಡ್‌ಪುರ ಎಫ್‌ಸಿ (ಜೆಎಫ್‌ಸಿ) ತಂಡಗಳು ಶನಿವಾರ ಮುಖಾಮುಖಿಯಾಗಲಿವೆ.

ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆಯಲಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಗೆದ್ದ ಜೆಮ್ಶೆಡ್‌ಪುರದ ನಾಗಾಲೋಟಕ್ಕೆ ಅಂತ್ಯ ಹಾಡುವುದು ಬಿಎಫ್‌ಸಿಯ ಗುರಿಯಾಗಲಿದೆ.

ಹಿಂದಿನ ಎರಡು ವಾರಗಳಲ್ಲಿ ನಡೆದ ಮೂರು ಪಂದ್ಯಗಳಲ್ಲಿ ಜೆಮ್ಶೆಡ್‌ಪುರ ಜಯ ಗಳಿಸಿದೆ. ಆದರೆ ಬೆಂಗಳೂರು ವಿರುದ್ಧ ಜಯ ಗಳಿಸುವುದು ಸುಲಭದ ಮಾತಲ್ಲ. ಆರಂಭದಲ್ಲಿ ನೀರಸ ಆಟವಾಡಿರುವ ಬೆಂಗಳೂರು ಎಫ್‌ಸಿ ನಂತರ ಚೇತರಿಸಿಕೊಂಡಿದ್ದು ಜಯದ ಹಾದಿಗೆ ಮರಳಿದೆ. 14 ಪಂದ್ಯಗಳ ಪೈಕಿ ತಲಾ ಐದು ಗೆಲುವು ಮತ್ತು ಐದು ಡ್ರಾ ಸಾಧಿಸಿದೆ. ತಂಡದ ಖಾತೆಯಲ್ಲಿ ಜೆಮ್ಶೆಡ್‌ಪುರಕ್ಕಿಂತ ಎರಡು ಪಾಯಿಂಟ್‌ಗಳು ಕಡಿಮೆ ಇವೆ. ಈ ಬಾರಿ ಇದೇ ಮೊದಲ ಸಲ ತಂಡ ಸತತ ಎರಡು ಪಂದ್ಯಗಳನ್ನು ಗೆದ್ದುಕೊಂಡಿದ್ದು ಹ್ಯಾಟ್ರಿಕ್ ಮೇಲೆ ನೋಟವಿಟ್ಟು ಜೆಮ್ಶೆಡ್‌ಪುರ ವಿರುದ್ಧ ಆಡಲಿದೆ. ಚೆನ್ನೈ ವಿರುದ್ಧ 3–0ಯಿಂದ ಮತ್ತು ಕೇರಳ ಬ್ಲಾಸ್ಟರ್ಸ್ ಎದುರು 1–0ಯಿಂದ ಗೆಲುವು ಸಾಧಿಸಿರುವುದು ತಂಡಕ್ಕೆ ಭರವಸೆ ತುಂಬಿದೆ.



ಬಿಎಫ್‌ಸಿ ತಂಡದ ಪ್ರಿನ್ಸ್ ಇಬಾರ

ಗುರುವಾರ ಜನ್ಮದಿನ ಆಚರಿಸಿಕೊಂಡಿರುವ ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಬೆಂಗಳೂರು ತಂಡದ ಆಧಾರಸ್ತಂಭದಂತಿದ್ದಾರೆ. ತಾವು ಗೋಲ್‌ಕೀಪಿಂಗ್ ಮಾಡಿರುವ ಹಿಂದಿನ ಏಳು ಪಂದ್ಯಗಳ ಪೈಕಿ ನಾಲ್ಕರಲ್ಲಿ ಅವರು ಕ್ಲೀನ್ ಶೀಟ್ ಹೊಂದಿದ್ದಾರೆ. ಈ ಪೈಕಿ ಮೂರು ಕ್ಲೀನ್‌ಶೀಟ್‌ಗಳು ಹಿಂದಿನ ನಾಲ್ಕು ಪಂದ್ಯಗಳಲ್ಲಿ ಮೂಡಿವೆ.

ಹಿಂದಿನ ಪಂದ್ಯದಲ್ಲಿ ರೋಷನ್ ಸಿಂಗ್ ನೈರೆಮ್ ಅವರು ಐಎಸ್‌ಎಲ್‌ನಲ್ಲಿ ವೈಯಕ್ತಿಕವಾಗಿ ಚೊಚ್ಚಲ ಗೋಲು ಗಳಿಸಿದ್ದರು. ಇದು, ರಕ್ಷಣಾ ವಿಭಾಗದ ಆಟಗಾರನ ಮೇಲೆ ತಂಡ ಭರವಸೆ ಇರಿಸಿಕೊಳ್ಳಲು ಕಾರಣವಾಗಿದೆ.

ರಕ್ಷಣೆಯೇ ಬಲ: ಜೆಮ್ಶೆಡ್‌ಪುರ ತಂಡಕ್ಕೆ ಅದರ ರಕ್ಷಣಾ ವಿಭಾಗವೇ ದೊಡ್ಡ ಬಲ. ಹಲವು ಪಂದ್ಯಗಳಲ್ಲಿ ರಕ್ಷಣಾ ವಿಭಾಗ ತಂಡದ ಕೈ ಹಿಡಿದಿದೆ. ಹಿಂದಿನ ಎರಡು ಪಂದ್ಯಗಳಲ್ಲಿ ಕ್ಲೀನ್ ಶೀಟ್ ಹೊಂದಿರುವ ತಂಡ ಕಳೆದ ಆರು ಪಂದ್ಯಗಳಲ್ಲಿ ನಾಲ್ಕು ಗೋಲು ಮಾತ್ರ ಬಿಟ್ಟುಕೊಟ್ಟಿದೆ.

ಬ್ಲಾಸ್ಟರ್ಸ್ ಜಯಭೇರಿ

ಶುಕ್ರವಾರದ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ವಿರುದ್ಧ ಕೇರಳ ಬ್ಲಾಸ್ಟರ್ಸ್ 2–1ರಲ್ಲಿ ಜಯ ಗಳಿಸಿತು. ಡಯಾಜ್ ಪೆರೇರ (62ನೇ ನಿ) ಮತ್ತು 8 ಅಲ್ವಾರೊ (2ನೇ ನಿ) ಕೇರಳ ಪರ ಗೋಲು ಗಳಿಸಿದರು. ನಾರ್ತ್ ಈಸ್ಟ್ ತಂಡದ ಗೋಲು ಮೊಹಮ್ಮದ್ ಇರ್ಷಾದ್ (90ನೇ ನಿ) ಅವರಿಂದ ಮೂಡಿಬಂತು.





ರೇಸ್: ಅನೀಶ್‌ಗೆ ಗೆಲುವು

ಬೆಂಗಳೂರು: ಟಿವಿಎಸ್ ರೇಸಿಂಗ್ ಸಂಸ್ಥೆಯ ಜಗನ್ ಕುಮರ್, ಪ್ರೀಮಿಯರ್ ಪ್ರೊ-ಸ್ಟಾಕ್ 165 ಸಿಸಿ ರೇಸ್‌ನಲ್ಲಿ ಮೂರನೇ ಸ್ಥಾನ ಗಳಿಸಿದರು. ಇದರಿಂದ ಗಳಿಸಿದ 15 ಪಾಯಿಂಟ್ ಎಂಆರ್‌ಎಫ್ ಎಂಎಂಎಸ್‌ಸಿ ಇಂಡಿ ಯನ್ ನ್ಯಾಷನಲ್ ಮೋಟರ್ ಸೈಕಲ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಅವರಿಗೆ ಪ್ರಶಸ್ತಿ ಗೆದ್ದುಕೊಟ್ಟವು.

ಬೆಂಗಳೂರಿನ ಅನೀಶ್ ಶೆಟ್ಟಿ ಪ್ರೊ ಸ್ಟಾಕ್ 301–400 ಸಿಸಿ ವಿಭಾಗದಲ್ಲಿ ಗೆಲುವು ಸಾಧಿಸಿದರು.



ಅನೀಶ್ ಶೆಟ್ಟಿ



ಮನ್‌ಪ್ರೀತ್ ಸಿಂಗ್

ಜೋಹಾನ್ಸ್‌ಬರ್ಗ್‌ಗೆ ಭಾರತ ಹಾಕಿ ತಂಡ

ಬೆಂಗಳೂರು: ಭಾರತ ಪುರುಷರ ಹಾಕಿ ತಂಡವು ದಕ್ಷಿಣ ಆಫ್ರಿಕಾದಲ್ಲಿ ಇದೇ 8ರಿಂದ ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಆಡಲು ಜೋಹಾನ್ಸ್‌ಬರ್ಗ್‌ಗೆ ತೆರಳಿತು.

ಆದರೆ ಅನಾರೋಗ್ಯದ ಕಾರಣದಿಂದಾಗಿ ಫಾರ್ವರ್ಡ್ ಆಟಗಾರ ಲಲಿತ್ ಕುಮಾರ್ ಉಪಾಧ್ಯಾಯ ಮತ್ತು ಮಿಡ್‌ಫೀಲ್ಡರ್ ಜಸ್ಕರಣ್ ಸಿಂಗ್ ಅವರನ್ನು ಕೊನೆಯ ಕ್ಷಣದಲ್ಲಿ ತಂಡದಲ್ಲಿ ಕೈಬಿಡಲಾಗಿದೆ. ಅವರು ಬೆಂಗಳೂರಿನಲ್ಲಿಯೇ ಉಳಿದಿದ್ದಾರೆ.

ಮನ್‌ಪ್ರೀತ್ ಸಿಂಗ್ ನಾಯಕತ್ವದ ತಂಡವು ಟೂರ್ನಿಯಲ್ಲಿ ಫೆ 8ರಂದು ಫ್ರಾನ್ಸ್ ಮತ್ತು 9ರಂದು ಆತಿಥೇಯ ದಕ್ಷಿಣ ಆಫ್ರಿಕಾ ಎದುರು ಆಡಲಿದೆ. ಎರಡನೇ ಸುತ್ತಿನಲ್ಲಿ 12ರಂದು ಫ್ರಾನ್ಸ್ ಮತ್ತು 13ರಂದು ದಕ್ಷಿಣ ಆಫ್ರಿಕಾದೆದುರು ಭಾರತ ಆಡುವುದು.

‘ಆಟಗಾರ ಲಲಿತಕುಮಾರ್ ಉಪಾಧ್ಯಾಯ ಮತ್ತು ಜಸ್ಕರಣ್ ಸಿಂಗ್ ಅವರು ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳುತ್ತಿಲ್ಲ. ಅವರಿಬ್ಬರ ಬದಲಿಗೆ ಗುರುಸಾಹೀಬ್‌ಜೀತ್ ಸಿಂಗ್ ಮತ್ತು ಸುಮಿತ್ ಅವರು ತಂಡ ಸೇರಿಕೊಂಡಿದ್ದಾರೆ’ ಎಂದು ಮುಖ್ಯ ಕೋಚ್ ಗ್ರಹಾಂ ರೀಡ್ ಹಾಕಿ ಇಂಡಿಯಾ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ದಕ್ಷಿಣ ಆಫ್ರಿಕಾ ಮತ್ತು ಫ್ರಾನ್ಸ್ ತಂಡಗಳು ಉತ್ತಮ ಆಟಗಾರರನ್ನು ಹೊಂದಿವೆ. ವಿಶ್ವದ ಶ್ರೇಷ್ಠ ತಂಡಗಳನ್ನು ಮಣಿಸುವುದು ಹೆಮ್ಮೆಯ ವಿಷಯ. ಈ ಸವಾಲು ಸ್ವೀಕರಿಸಲು ನಾವು ಸಿದ್ಧರಾಗಿದ್ದೇವೆ’ ಎಂದು ರೀಡ್ ಹೇಳಿದ್ದಾರೆ.

ತಂಡ ಇಂತಿದೆ: ಗೋಲ್‌ಕೀಪರ್ಸ್: ಪಿ.ಆರ್. ಶ್ರೀಜೇಶ್, ಕೃಷ್ಣ ಪಾಠಕ್; ಡಿಫೆಂಡರ್ಸ್: ಹರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಸುರೇಂದರ್ ಕುಮಾರ್, ವರುಣಕುಮಾರ್, ಜರ್ಮನ್‌ಪ್ರೀತ್ ಸಿಂಗ್, ಜುಗರಾಜ್ ಸಿಂಗ್.

ಮಿಡ್‌ಫೀಲ್ಡರ್: ಮನಪ್ರೀತ್ ಸಿಂಗ್, ನೀಲಕಂಠ ಶರ್ಮಾ, ಹಾರ್ದಿಕ್ ಸಿಂಗ್, ಸುಮಿತ್, ಶಂಶೇರ್ ಸಿಂಗ್, ವಿವೇಕಸಾಗರ್ ಪ್ರಸಾದ್.

ಫಾರ್ವರ್ಡ್ಸ್: ಮನದೀಪ್ ಸಿಂಗ್, ಗುರುಸಾಬ್‌ಜೀತ್ ಸಿಂಗ್, ಆಕಾಶದೀಪ್ ಸಿಂಗ್, ಶೀಲಾನಂದ ಲಾಕ್ರ, ದಿಲ್‌ಪ್ರೀತ್ ಸಿಂಗ್, ಅಭಿಷೇಕ್.



